ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

17 ಫೆಬ್ರವರಿ 2016 ಪುಟ 20 ರೂ. 15/-

ಸಹಬಾಳ್ವೆ ಸಾಗರ
ಬರಗೂರು ಮತ್ತು ಚಂಪಾ ಹೇಳಿದ್ದು



377 ರದ್ದಾಗಬೇಕು



ಮರ್ಡರ್ ನಾಟಕ

ದುರಂತ ನಾಯಕ



ಮಂಡ್ಯ: ಎಸ್ಪಿ ಹೊಡೆತಕ್ಕೆ ದಂಧೆಗಳು ಥಂಡಾ

ಜಿ.ಪಂ-ತಾ.ಪಂ ಚುನಾವಣಾ ಸಮೀಕ್ಷೆ


ಉಡುಪಿ

ದಾವಣಗೆರೆ ?

ಕೊಡಗು

ರೈತ-ಕಾರ್ಮಿಕರ ಮಧ್ಯೆ ಹಿತಾಸಕ್ತಿಯ ಸಂಘರ್ಷವಿದೆಯೇ

ಅಂಚಿನಿಂದ....



ಡಾ.ವಾಸು ಎಚ್.ವಿ.

ಅಧಿಕಾರಿಯೊಬ್ಬರು ಇಂಥದೊಂದು ಪ್ರಶ್ನೆಯನ್ನು ತಾವೇ ಹಾಕಿಕೊಂಡು, ತಾವೇ ಉತ್ತರಿಸಿದರು. 'ಇವರಿಬ್ಬರ ಮಧ್ಯೆ ಹಿತಾಸಕ್ತಿಯ ಸಂಘರ್ಷವಿದೆ' ಎಂದು. ಈ ಮಾತನ್ನು ಅವರು ಹೇಳಿದ್ದು, ಸಕ್ಕರೆ ಕಾರ್ಖಾನೆಯ ಕಾರ್ಮಿಕರು ಮತ್ತು ಕಬ್ಬು ಬೆಳೆಗಾರರ ವಿಚಾರವನ್ನು ಉದ್ದೇಶಿಸಿ. ಈ ಎರಡೂ ಬಗೆಯ ದುಡಿವ ಸಮುದಾಯವು ಪರಸ್ಪರ ಕತ್ತಿ ಮಸೆದುಕೊಂಡಿದ್ದರೆ, ಅದರ ಲಾಭವನ್ನು ಕಾರ್ಖಾನೆಗಳ ಮಾಲೀಕರು ಮತ್ತು ಅಧಿಕಾರಸ್ಥರು ಪಡೆದುಕೊಳ್ಳುವುದು ಸುಲಭವಾಗುತ್ತದೆ. ಹಾಗಾಗಿ ಎರಡೂ ವರ್ಗಗಳು ಒಂದಾಗಬೇಕೆಂದು ಬಯಸಿ, ಜೊತೆಗೂಡಿ ಹೋರಾಟ ಮಾಡಲು ಹೊರಟಾಗ ಎದುರಾದ ಪ್ರಶ್ನೆಯಿದು. ಹಾಗಾದರೆ, ಈ ಎರಡೂ ವರ್ಗಗಳ ನಡುವೆ ಹಿತಾಸಕ್ತಿಯ ಸಂಘರ್ಷ ಇದೆಯೇ, ಇಲ್ಲವೇ? ಇದ್ದರೆ ಯಾವ ಬಗೆಯದು?

ವಾಸ್ತವದಲ್ಲಿ ಒಂದು ವೈರುಧ್ಯ ಇದೆ. ಅದನ್ನು ಅರ್ಥಮಾಡಿಕೊಳ್ಳಲು ಕಾರ್ಖಾನೆಯ ಲಾಭದ ಮಾರ್ಗವನ್ನು ಪರಿಶೀಲಿಸಬೇಕು. ಸರಳವಾಗಿ ಹೇಳುವುದೆಂದರೆ, ಕಾರ್ಖಾನೆ ಲಾಭ ಮಾಡಲು ಮೂರು ಅಂಶಗಳಿವೆ. ಸರಬರಾಜಾಗುವ ಕಚ್ಚಾವಸ್ತುವನ್ನು ಇನ್ನೂ ಕಡಿಮೆ ಬೆಲೆಗೆ ಖರೀದಿಸುವುದು, ಉತ್ಪಾದನೆಯ ಪ್ರಕ್ರಿಯೆಯಲ್ಲಿ ದುಡಿವ ಕಾರ್ಮಿಕರ ವೇತನ ಹಾಗೂ ಇನ್ನೂ ಹಲವು ಸೌಲಭ್ಯಗಳನ್ನು ಕಡಿತಗೊಳಿಸುವುದು, ಉತ್ಪಾದನೆಯಾದ ಸರಕನ್ನು ಹೆಚ್ಚಿನ ಬೆಲೆಗೆ ಮಾರುವುದು. ಇದರಲ್ಲಿ ಸರಕಿನ ಬೆಲೆಯನ್ನು ನಿರ್ದಿಷ್ಟ ಕಾರ್ಖಾನೆಯಷ್ಟೇ ನಿರ್ಧರಿಸುವುದು ಸಾಧ್ಯವಿಲ್ಲ, ಒಟ್ಟಾರೆ ಮಾರುಕಟ್ಟೆಗೆ ಬಂದು ಬೀಳುವ ಸರಕಿನ ಪ್ರಮಾಣವು ಬೇಡಿಕೆಗಿಂತ ಹೆಚ್ಚಿದ್ದರೆ ಬೆಲೆ ಕಡಿಮೆಯಾಗುತ್ತದೆ; ಬೇಡಿಕೆಗಿಂತ ಕಡಿಮೆ ಇದ್ದರೆ ಬೆಲೆ ಹೆಚ್ಚಾಗುತ್ತದೆ ಎಂಬುದು ಸರಳ ಅರ್ಥಶಾಸ್ತ್ರೀಯ ಸೂತ್ರ. ಆದರೆ, ಅದರಿಂದ ಆಚೆಗೆ ಇನ್ನೂ ಹಲವು ಲಾಬಿಗಳು ಸೇರಿ ಸರಕಿನ ಬೆಲೆ ನಿರ್ಧರಿಸುತ್ತವೆ.


ಜೊತೆಗೆ, ದೇಶದಲ್ಲಿ ಉತ್ಪತ್ತಿ ಕಡಿಮೆ ಇದ್ದರೂ, ಜಾಗತೀಕರಣ ನೀತಿಗಳ ಕಾರಣಕ್ಕೆ ವಿದೇಶದಿಂದ ಆಮದು ದೊಡ್ಡ ಪ್ರಮಾಣದಲ್ಲಿ ಆಗುವ ಸಾಧ್ಯತೆಯಿರುತ್ತದೆ. ಆ ರೀತಿ ಆಮದು ಮಾಡಿಕೊಳ್ಳುವುದು ಇನ್ನಾವುದೋ ದೊಡ್ಡ ಕಂಪೆನಿಗಳಿಗೆ ಭಾರೀ ಆದಾಯವನ್ನು ತಂದುಕೊಡುತ್ತಿರುತ್ತದೆ. ಆಗಲೂ ಬೆಲೆ ಕಡಿಮೆಯಾಗುತ್ತದೆ. ಈ ರೀತಿಯಲ್ಲಿ ಹತ್ತು ಹಲವು ಸಂಗತಿಗಳು ಸೇರಿಕೊಂಡು ಬೆಲೆಯನ್ನು ನಿರ್ಧರಿಸುತ್ತವೆ. ಯಾವುದೇ ಸಕ್ಕರೆ ಕಾರ್ಖಾನೆಯ ಮಾಲೀಕನೂ ಇದರ ಮೇಲೆಯೂ ನಿಯಂತ್ರಣ ಹೊಂದಲು ಪ್ರಯತ್ನಿಸುತ್ತಾನಾದರೂ, ಅದು ಎಲ್ಲರ ಹಿಡಿತಕ್ಕೆ ಸಿಗುವುದಿಲ್ಲ.

ಆದರೆ ಕಾರ್ಖಾನೆಯ ಮಾಲೀಕನು ಇನ್ನೆರಡು ಅಂಶಗಳ ಮೇಲೆ ಹಿಡಿತ ಸಾಧಿಸಲು ಯತ್ನಿಸುತ್ತಿರುತ್ತಾನೆ ಮತ್ತು ಹಲವು ಸಾರಿ ಅದರಲ್ಲಿ ಯಶಸ್ವಿಯಾಗುತ್ತಾನೆ. ಅದೇನೆಂದರೆ, ತಾನು ಕೊಳ್ಳುವ ಕಚ್ಚಾವಸ್ತು ಕಬ್ಬಿನ ಬೆಲೆಯನ್ನು ಕಡಿಮೆ ಮಾಡುವುದು. ಇದು ರೈತರಿಗೆ ನಷ್ಟವನ್ನುಂಟುಮಾಡುತ್ತದೆ. ಎರಡನೆಯದ್ದು, ಕಾರ್ಖಾನೆಯ ಕಾರ್ಮಿಕರಿಗೆ ನೀಡುವ ವೇತನ ಮತ್ತು ಇತರೆ ಸೌಲಭ್ಯಗಳನ್ನು ಕಡಿಮೆ ಮಾಡುವುದು, ಕಾಯಂ ಕಾರ್ಮಿಕರ ಸಂಖ್ಯೆಯನ್ನೇ ಕಡಿಮೆ ಮಾಡಿ ಗುತ್ತಿಗೆ ಕಾರ್ಮಿಕರನ್ನು ನೇಮಿಸಿಕೊಳ್ಳುವುದು. ಈ ಗುತ್ತಿಗೆ ಕಾರ್ಮಿಕರಿಗೆ ವೇತನವೂ ಕಡಿಮೆ, ಇತರ ಸೌಲಭ್ಯಗಳನ್ನೂ ಕೇಳುವಂತಿಲ್ಲ.

ಇದಲ್ಲದೇ ಇನ್ನೂ ಒಂದು ಮುಖ್ಯವಾದ ಸಂಗತಿಯಿದೆ. ಸಕ್ಕರೆ ಕಾರ್ಖಾನೆಯ ಜೊತೆಗಿನ ರೈತರ ಸಂಬಂಧ ಕೇವಲ ಕಬ್ಬನ್ನು ಸರಬರಾಜು ಮಾಡಿ ಹಣ ತೆಗೆದುಕೊಂಡು ಹೋಗುವಷ್ಟು ಮಾತ್ರವಲ್ಲ, ಸರಬರಾಜು ಯಾವಾಗ ಮಾಡಬೇಕು, ಎಷ್ಟು ಮಾಡಬೇಕು, ತಾನು ತನ್ನ ಜಮೀನಿನಿಂದ ಕಾರ್ಖಾನೆಯ ಬಾಗಿಲಿನವರೆಗೆ ಸಾಗಿಸಿಕೊಂಡು ಬಂದ ಕಬ್ಬು ಎಷ್ಟು ಗಂಟೆ (ಅಥವಾ ದಿನ)ಗಳಲ್ಲಿ ಕ್ರಷ್ ಆಗುತ್ತದೆ ಇತ್ಯಾದಿ ಸಂಗತಿಗಳೂ ಆತನ ಜೀವ ಹಿಂಡಿ ಬಿಡುತ್ತವೆ. ಇದರಲ್ಲಿ ಆಗುವ ಏರುಪೇರು, ಕಬ್ಬನ್ನು ಒಣಗಿಸುತ್ತದೆ. ಹಾಗಾಗಿ ತೂಕ ಕಡಿಮೆಯಾಗುತ್ತದೆ.

ರೈತರಿಗೆ ನಷ್ಟವಾಗುತ್ತದೆ. ಕಾರ್ಖಾನೆಯ ಒಳಗೆ ಸಹಜವಾಗಿಯೇ ಆಗುವ ಹಲವು ಏರುಪೇರುಗಳಿಂದ, ಕೆಲವೊಮ್ಮೆ ತಪ್ಪು ನಿರ್ಧಾರಗಳಿಂದ ಈ ರೀತಿ ಸಮಸ್ಯೆ ಉಂಟಾಗುತ್ತದೆ. ಸಾಮಾನ್ಯವಾಗಿ ಮೇಲಿನ ಹಂತದವರು ಸರಿಯಾಗಿ ನಿರ್ವಹಿಸದ, ಉಸ್ತುವಾರಿ ನಡೆಸದ ಕಾರಣದಿಂದ ಈ ಸಮಸ್ಯೆಗಳು ಆಗಿರುತ್ತವೆ; ಆದರೆ ರೈತರ ಕೈಗೆ ಸುಲಭವಾಗಿ ಸಿಗುವವರು ಕಾರ್ಮಿಕರಾಗಿರುತ್ತಾರೆ. ಕೈಗೆ ಮಾತ್ರವಲ್ಲ, ಬಾಯಿಗೂ.

ಇದರ ಜೊತೆಗೆ ಗಮನಿಸಬೇಕಾದ ಇನ್ನೂ ಒಂದು ಸಂಗತಿಯಿದೆ. ತಿಂಗಳ ಸಂಬಳದ ಮೇಲೆ ಅವಲಂಬಿತವಾಗಿರುವ ಕಾರ್ಮಿಕರಿಗೆ ನಿಗದಿತ ವೇಳೆಯಲ್ಲಿ ವೇತನ ಪಾವತಿಯಾಗುತ್ತದೆ. ಇದು ಕಾನೂನಿನ ಪ್ರಕಾರವೂ ಕಡ್ಡಾಯವಾದುದು. (ನಷ್ಟದಲ್ಲಿರುವ ಸಾರ್ವಜನಿಕ ಉದ್ದಿಮೆಗಳು ಹಲವು ಸಾರಿ 4-5 ತಿಂಗಳಾದರೂ ವೇತನ ಪಾವತಿ ಮಾಡುವುದಿಲ್ಲ, ಆ ಮಾತು ಬೇರೆ). ಆದರೆ, ವರ್ಷಪೂರ್ತಿ ದುಡಿವ ರೈತರಿಗೆ ಕೈಗೆ ಹಣ ಸಿಗುವುದು ವರ್ಷದ ನಂತರ. ಏಕೆಂದರೆ ಕಬ್ಬು ವಾರ್ಷಿಕ ಬೆಳೆ. ತನ್ನ ಲಾಭ ಸ್ವಲ್ಪ ಏರುಪೇರಾದರೂ ಸಾಕು, ಕಾರ್ಖಾನೆಯು ರೈತರಿಗೆ ನೀಡುವ ಹಣವನ್ನು ವಿಳಂಬಿಸುತ್ತದೆ. ತನ್ನ ಕೈಯ್ಯಿಂದ ಹಣ ಖರ್ಚು ಮಾಡಿ, ಅದಕ್ಕಾಗಿ ಸಾಲವನ್ನೂ ಮಾಡಿಕೊಂಡು ಬೆಳೆ ಬೆಳೆದಿರುವ ರೈತರು ಆದಷ್ಟು ಬೇಗ ಕಬ್ಬಿನ ಬಾಕಿ ಪಡೆದುಕೊಳ್ಳುವ ಆತುರದಲ್ಲಿರುತ್ತಾರೆ. ಆದರೆ, ಅದು ಬೇಗ ಲಭ್ಯವಾಗುವುದಿಲ್ಲ, ಕಾರ್ಖಾನೆಯಲ್ಲಿ ದುಡಿವ ಕಾರ್ಮಿಕರು ಮಾತ್ರ ತನ್ನ ಕಣ್ಣ ಮುಂದೆಯೇ ನಿಯಮಿತವಾಗಿ ವೇತನ ಪಡೆದುಕೊಳ್ಳುವುದು ಅವರಿಗೆ ಕಂಡು ಸಿಟ್ಟು ಉಕ್ಕುತ್ತದೆ.



ಇದೇ ಕಾರ್ಮಿಕರು ಎಷ್ಟೇ ಮನವಿ ಕೊಟ್ಟರೂ, ಕಾರ್ಖಾನೆಯ ಆಡಳಿತ ಮಂಡಳಿ ಸ್ಪಂದಿಸಿರುವುದಿಲ್ಲ; ಕಾನೂನಿನ ಪ್ರಕಾರ ಕಡ್ಡಾಯವಾದ ಕನಿಷ್ಠ ಸೌಲಭ್ಯಗಳನ್ನೂ ನೀಡಿರುವುದಿಲ್ಲ, ಹಾಗಾಗಿ ಕಾರ್ಮಿಕರು ಮುಷ್ಕರ ಹೂಡುವ ಅನಿವಾರ್ಯತೆ ಉಂಟಾಗಿರುತ್ತದೆ. ಮುಷ್ಕರ ಘೋಷಿಸುತ್ತಾರೆ. ಆದರೆ, ಕಾರ್ಖಾನೆಗೆ ಒಣಗುವ ಮುನ್ನ ಕಬ್ಬನ್ನು ಸರಬರಾಜು ಮಾಡಬೇಕಾದ ಸಂಕಟದಲ್ಲಿರುವ ರೈತರಿಗೆ, ಇಂತಹ ಸ್ಥಿತಿಯನ್ನು ತಂದಿಟ್ಟಿರುವ ಆಡಳಿತವರ್ಗಕ್ಕಿಂತ ಕಾರ್ಮಿಕರ ಮೇಲೆಯೇ ಹೆಚ್ಚಿನ ಸಿಟ್ಟು ಬರುತ್ತದೆ. ತನ್ನ ಬೆವರಿಗೆ ತಕ್ಕ ಫಲ ಬೇಕೆಂದು ಕೇಳಿ ಹೋರಾಟ ನಡೆಸುವಂತೆಯೇ, ಕಾರ್ಮಿಕರೂ ಸಹ ತಮ್ಮ ಬೆವರಿಗೆ ತಕ್ಕ ಫಲ ಕೇಳುತ್ತಿದ್ದಾರೆ ಎನಿಸುವುದಿಲ್ಲ.

ಇಂತಹ ಹಲವು ಕಾರಣಗಳಿಂದ ರೈತ-ಕಾರ್ಮಿಕರ ನಡುವೆ ಒಂದು ವೈರುಧ್ಯ ಏರ್ಪಟ್ಟಿರುತ್ತದೆ. ತನ್ನ ಲಾಭ ಹೆಚ್ಚಿಸಿಕೊಳ್ಳಲು ಒಂದೋ ರೈತರಿಗೆ ಕಡಿಮೆ ಬೆಲೆ ಕೊಡಬೇಕು, ಇಲ್ಲವೇ ಕಾರ್ಮಿಕರಿಗೆ ವೇತನ ಕಡಿಮೆ ಮಾಡಬೇಕು ಎಂಬ ಆಯ್ಕೆಗಳನ್ನು ಹೊಂದಿರುವ ಕಾರ್ಖಾನೆಗಳು ಈ ವೈರುಧ್ಯವನ್ನು ಬಳಸಿಕೊಳ್ಳುತ್ತವೆ. 'ಏನ್ರೀ ಮಾಡೋದು. ಈ ಕಾರ್ಮಿಕರು ಸರಿಯಾಗಿ ಕೆಲಸ ಮಾಡುವುದಿಲ್ಲ, ಪಾಪ, ನೀವು ವರ್ಷ ಪೂರಾ ಕಷ್ಟಪಟ್ಟು ದುಡಿದು ತಂದ ಕಬ್ಬನ್ನು ಕೂಡಲೇ ಕ್ರಷ್ ಮಾಡಿ ಪೇಮೆಂಟ್ ಮಾಡದೇ ಇರುವುದಕ್ಕೆ ಏನ್ರೀ ರೋಗ?' ಎಂದು ಯಾರಾದರೂ ಹೇಳಿದರೆ, ಮೊದಲೇ ಸಂಕಷ್ಟದಲ್ಲಿರುವ ರೈತರಿಗೆ ಹೌದೌದು ಅನ್ನಿಸುತ್ತದೆ.

ಹಳ್ಳಿಯಲ್ಲೇ ಉಳಿದು, ಕೆಸರಿನಲ್ಲಿ ಇಳಿದು, ವರ್ಷಪೂರ್ತಿ ತಾಳ್ಮೆಯಿಂದ ಕಾದು, ಹಗಲು-ರಾತ್ರಿಯೆನ್ನದೇ ಶ್ರಮಹಾಕಿ ನೀರು ಕಟ್ಟಿ ಬೆಳೆ ಬೆಳೆಯುವ ತಾನು ಮಾತ್ರ ಶ್ರಮಜೀವಿ, ಶಿಸ್ತಾಗಿ ಪ್ಯಾಂಟ್ ಹಾಕಿಕೊಂಡು ಹೋಗಿ 8 ಗಂಟೆಗಳ ಕೆಲಸ ಮುಗಿಸಿಕೊಂಡು ಶಿಸ್ತಾಗಿ ವಾಪಸ್ಸು ಬರುವ ಕಾರ್ಮಿಕರು ಸೋಮಾರಿಗಳು ಎಂಬ ಮನಸ್ಥಿತಿಯೂ ನಮ್ಮಲ್ಲಿ ರೂಪುಗೊಂಡಿರುತ್ತದೆ. ರೈತರು ಮತ್ತು ಕಾರ್ಮಿಕರು ಇಬ್ಬರೂ ಶ್ರಮಜೀವಿಗಳೇ. ಅವರ ಶ್ರಮದ ಮೇಲೆಯೇ ಇಡೀ ಜಗತ್ತು ನಡೆಯುತ್ತಿದೆ; ಈ ಜಗತ್ತಿನಲ್ಲಿ ಎಲ್ಲಾ ಬಗೆಯ ಸಂಪತ್ತೂ ಸೃಷ್ಟಿಯಾಗಿರುವುದು ಇವರೀರ್ವರ ದುಡಿಮೆಯಿಂದಲೇ ಎಂಬುದು ಮನಸ್ಸಿಗೆ ಹೋಗುವುದಿಲ್ಲ. ಆತ್ಮಹತ್ಯೆ ಮತ್ತು ವಲಸೆಗಳೇ ಕೃಷಿ ಕ್ಷೇತ್ರದ ಪ್ರಧಾನ ಲಕ್ಷಣಗಳಾಗುವ ಮಟ್ಟಿಗೆ ನಮ್ಮ ರೈತಾಪಿಯನ್ನು ಶೋಷಿಸಲಾಗಿದೆ. ಹೀಗಿರುವಾಗ ಸಹಜವಾಗಿಯೇ ಎಲ್ಲರ ಬಗ್ಗೆಯೂ ಒಂದು ಬಗೆಯ ಸಿಟ್ಟು ಮನೆ ಮಾಡಿರುತ್ತದೆ. ಈ ಸಿಟ್ಟು ಆಕ್ರೋಶವಾಗಿ ಹೊರಹೊಮ್ಮುವಾಗ ತಮ್ಮ ಶತ್ರು ಯಾರು ಎಂಬ ತಿಳಿವಳಿಕೆಯೊಂದಿಗೆ ಬೆರೆತುಕೊಳ್ಳಬೇಕು. ತಮ್ಮಂತೆಯೇ ದುಡಿದು, ಶ್ರಮಕ್ಕೆ ತಕ್ಕ ಫಲ ಪಡೆದುಕೊಳ್ಳದಿರುವ ಕಾರ್ಮಿಕರನ್ನೂ ಹೋರಾಟದ ಸಂಗಾತಿಗಳನ್ನಾಗಿ ಮಾಡಿಕೊಳ್ಳಬೇಕು. ಆದರೆ, ಅದು ಆಗಲು ಪಟ್ಟಭದ್ರ ಹಿತಾಸಕ್ತಿಗಳು ಬಿಡುವುದಿಲ್ಲ, ಬದಲಿಗೆ, ಅವರಿಗೆ ಕಾರ್ಮಿಕರೇ ಮೋಸ ಮಾಡುತ್ತಿದ್ದಾರೆ ಎಂಬ ಅಭಿಪ್ರಾಯ ಮೂಡಿಸಲಾಗಿರುತ್ತದೆ. ಸ್ವತಃ ಮಾಜಿ ರೈತರಾಗಿರುವ ಕಾರಣಕ್ಕೋ ಅಥವಾ ಅರೆ ರೈತರಾಗಿರುವ ಕಾರಣಕ್ಕೋ ಕಾರ್ಮಿಕರು, ರೈತರ ಕುರಿತು ಇಂತಹ ನಕಾರಾತ್ಮಕ ಭಾವನೆ ಹೊಂದಿಲ್ಲ.

ಒಂದು ಉದಾಹರಣೆಯಾಗಿ, ರೈತ-ಕಾರ್ಮಿಕರು ನೇರ ಸಂಬಂಧ ಹೊಂದಿರುವ ಸಕ್ಕರೆ ಕಾರ್ಖಾನೆಯ ಮೂಲಕ ಇದನ್ನು ಮೇಲೆ ಹೇಳಲಾಗಿದೆ. ಆದರೆ, ಇದು ಎಲ್ಲಾ ರೈತರು ಮತ್ತು ಎಲ್ಲಾ ಕಾರ್ಮಿಕರಿಗೂ ಅನ್ವಯಿಸುವ ಸಂಗತಿ. ಹತ್ತಿಯನ್ನು ಆಧರಿಸಿದ ಉದ್ದಿಮೆಯು ನಮ್ಮ ದೇಶದ ಅತೀದೊಡ್ಡ ಕೃಷಿ ಆಧಾರಿತ ಕೈಗಾರಿಕೆಯಾಗಿದೆ. ಅದನ್ನು ಬಿಟ್ಟರೆ ಸಕ್ಕರೆ ಉದ್ದಿಮೆ ಎರಡನೇ ಸ್ಥಾನದಲ್ಲಿದೆ. ತಂಬಾಕು, ಕಾಫಿ ಒಳಗೊಂಡಂತೆ ಇನ್ನೂ ಹಲವು ಉದ್ದಿಮೆಗಳು ಕೃಷಿಯನ್ನು ನೇರವಾಗಿ ಅವಲಂಬಿಸಿವೆ. ಕೆಲವು ಕಡೆ ನೇರವಾಗಿ ಮತ್ತು ಇನ್ನೂ ಕೆಲವು ಕಡೆ ಪರೋಕ್ಷವಾಗಿ ರೈತ-ಕಾರ್ಮಿಕರ ನಡುವೆ ಸಂಘರ್ಷವನ್ನು ಬಿತ್ತುವ ಪರಿಸ್ಥಿತಿ ಇದೆ.

ವಾಸ್ತವದಲ್ಲಿ ಎರಡೂ ವಿಭಾಗಗಳು ಜೊತೆಗೂಡಬೇಕಾದ, ಆದರೆ ಪರಸ್ಪರ ವಿರುದ್ಧ ಹಿತಾಸಕ್ತಿಗಳೆಂಬಂತೆ ಬಿಂಬಿತವಾಗುವ ಇನ್ನೂ ಕೆಲವು ಅಂಶಗಳು ಇವೆ. ಉದಾಹರಣೆಗೆ ರೈತರ ವೈಜ್ಞಾನಿಕ ಬೆಲೆಯ ಬೇಡಿಕೆ. 'ನೀವು ನಮಗೆ ಯಾವ ಸಬ್ಸಿಡಿಯನ್ನೂ ನೀಡಬೇಡಿ. ಗೊಬ್ಬರ, ಕ್ರಿಮಿನಾಶಕ, ಕೃಷಿ ಯಂತ್ರೋಪಕರಣಗಳು, ಬೀಜದ ಬೆಲೆ ಎಷ್ಟೇ ಆಗಲಿ, ನಮಗೆ ವೈಜ್ಞಾನಿಕ ಬೆಲೆ ಕೊಡಿ ಸಾಕು' ಎಂಬುದು ರೈತ ಚಳವಳಿಯ ಒಂದು ಬೇಡಿಕೆಯಾಗಿದೆ. ವೈಜ್ಞಾನಿಕ ಬೆಲೆ ಎಂದರೆ, ರೈತರು ಒಳಸುರಿಗಳಿಗೆ ಮಾಡುವ ಖರ್ಚು, ಅವರು ಕೂಲಿಕಾರರಿಗೆ ಕೊಡುವ ಹಣ ಮತ್ತು ಸ್ವತಃ ಆ ಕುಟುಂಬವೇ ಮಾಡುವ ದುಡಿಮೆಯ ಕೂಲಿ ಹಾಗೂ ಆರಂಭದ ಹೂಡಿಕೆಗೆ ಕೊಡಬೇಕಾದ ಬಡ್ಡಿ - ಇವೆಲ್ಲವನ್ನೂ ಕೂಡಿ, ಅದರ ಮೇಲೆ ಇಂತಿಷ್ಟು ಪ್ರಮಾಣದ ಲಾಭವನ್ನು ಸೇರಿಸಿ ಕೊಡುವ ಬೆಲೆ. ಸರ್ಕಾರವು ಯಾವ ಸಬ್ಸಿಡಿಯನ್ನೂ ಕೊಡದೇ, ಈ ರೀತಿ ವೈಜ್ಞಾನಿಕ ಬೆಲೆಯನ್ನು ನಿಗದಿಪಡಿಸಿದರೆ ಬಹುಶಃ ಅಕ್ಕಿಯ ಬೆಲೆ ಒಂದು ಕೆ.ಜಿ.ಗೆ 150 ರೂ. ಆಗಬಹುದು. ಸಕ್ಕರೆ 175 ರೂ. ಆಗಬಹುದು. ಬೇಳೆಯು 350 ರೂ. ಆಗಿಬಿಡಬಹುದು.

ದೇಶದ ಬಹುಸಂಖ್ಯಾತರು ಬಡತನ ರೇಖೆಯ ಕೆಳಗಿರುವ ದೇಶದಲ್ಲಿ ಇದು ಸಾಧುವೇ? ಇಷ್ಟು ಹಣ ನೀಡಿ ಆಹಾರ ಪದಾರ್ಥಗಳನ್ನು ಬೆಳೆದುಕೊಳ್ಳಲಾಗದ... ಸ್ವತಃ ರೈತರೂ ಇರುತ್ತಾರೆ. ಅದರಲ್ಲೂ ಅತ್ಯಂತ ... ಪ್ರಮಾಣದ ಭೂಮಿಯನ್ನು ಹೊಂದಿರುವ ಸಣ್ಣ ... ಅತೀಸಣ್ಣ ರೈತರೇ ಇಂದು ದೇಶದಲ್ಲಿ ದೊಡ್ಡ ಪ್ರಮಾಣ... ಇದ್ದಾರೆ. ನಮ್ಮ ದೇಶ ಮಾತ್ರವಲ್ಲ, ಪ್ರಪಂಚ... ಸಬ್ಸಿಡಿಯನ್ನೇ ನೀಡದೇ ಕೃಷಿ ನಡೆಸುತ್ತಿರುವ ... ದೇಶವೂ ಇಲ್ಲ, ಏಕೆಂದರೆ, ದೇಶದಲ್ಲಿ ಪ್ರತಿಯೊಬ್ಬ ವ್ಯಕ್ತಿ... ಬದುಕಲು ಬೇಕಾದ ಅತ್ಯಂತ ಕನಿಷ್ಠ ಅವಶ್ಯಕತೆಯ... ಆಹಾರ ಪದಾರ್ಥಗಳ ಬೆಲೆಯನ್ನು ಒಂದು ... ಪ್ರಮಾಣದಲ್ಲಿ ಇಡಲೇಬೇಕು. ಹಾಗಾಗಿ ಸಬ್ಸಿಡಿ ... ವೈಜ್ಞಾನಿಕ ಬೆಲೆ ಕೊಡಿ ಎನ್ನುವುದು ವಾದಕ್ಕೆ ... ಸರಿಯಾದ ಬೇಡಿಕೆಯಾಗಿದೆ. ಒಂದು ಬೆಳೆಗೆ ವೈಜ್ಞಾ... ಬೆಲೆ ಪಡೆದುಕೊಳ್ಳುವ ರೈತರು ಮಿಕ್ಕ ಜೀವನಾ... ಆಹಾರ ಪದಾರ್ಥಗಳನ್ನಾಗಲೀ, ಇತರ ಕೈಗಾರಿಕಾ ಉತ್ಪ... ನ್ನಾಗಲೀ, ಖಾಸಗೀಕರಣಗೊಳ್ಳುತ್ತಿರುವ ದುಬಾರಿ ವೈದ್ಯಕೀ... ಮತ್ತು ಶಿಕ್ಷಣ ಸೇವೆಗಳನ್ನಾಗಲೀ ಪಡೆದುಕೊಳ್ಳಲಾಗುವು...


ಆದರೆ, ಸಾಮಾನ್ಯವಾಗಿ ಹೇಗೆ ಬಿಂಬಿಸಲಾಗು... ಎಂದರೆ, ರೈತರು ತಮ್ಮ ಜೀವನಕ್ಕೆ ಬೇಕಾದ ... ವಸ್ತುಗಳನ್ನೂ ತಾವೇ ಬೆಳೆದುಕೊಳ್ಳುತ್ತಾರಾದ್ದರಿಂದ ವೈಜ್ಞಾ... ಬೆಲೆ ನೀಡುವುದರಿಂದ ಏನೂ ಸಮಸ್ಯೆಯಿಲ್ಲವೆಂ... ಬೆಳೆಯುವುದು ಹತ್ತಿಯನ್ನೇ ಹೊರತು, ಬಟ್ಟೆಯನ್ನ... ಉಪ್ಪಿನಿಂದ ಹಿಡಿದು ನಿತ್ಯಜೀವನಕ್ಕೆ ಅಗತ್ಯವಾದ ಎಷ್ಟೋ... ವಸ್ತುಗಳಿವೆ. ಆಧುನಿಕ ಕಾಲದ ಅಗತ್ಯಗಳು ಇನ್ನೂ ಹೆಚ್ಚಾಗಿ... ಅವೆಲ್ಲವನ್ನೂ ಸರ್ಕಾರವು ಪಡಿತರ ವಿತರಕ ವ್ಯವಸ್ಥೆಯ... ವಿತರಿಸುವುದೂ ಸುಲಭವಲ್ಲ, ಆದ್ದರಿಂದ ವೈಜ್ಞಾನಿ... ಬೆಲೆಯು ಎಲ್ಲಾ ಸಮಸ್ಯೆಗಳನ್ನು ಪರಿಹರಿಸುವುದಿಲ್ಲ.

ಹಾಗೆ ನೋಡಿದರೆ, ರೈತರಿಗೆ ನೀಡುತ್ತಿರುವ ಸಬ್ಸಿ... ರೈತರಿಗೆ ನೀಡುತ್ತಿರುವುದಲ್ಲ, ಒಂದೋ, ಅವರಿ... ಬೀಜ-ಗೊಬ್ಬರಗಳನ್ನು ಮಾರುತ್ತಿರುವ ಕಂಪೆನಿಗಳಿ... ಮಾರುಕಟ್ಟೆ ಸೃಷ್ಟಿಸಲು ನೀಡಲಾಗುತ್ತಿದೆ ಮತ್ತು ದೇಶ... ಎಲ್ಲರಿಗೂ ಕೈಗೆಟಕುವ ದರದಲ್ಲಿ ಆಹಾರ ಪದಾರ್ಥಗ... ಸಿಗಲೆಂದು ನೀಡುತ್ತಿರುವ ಸಬ್ಸಿಡಿಯಾಗಿದೆ. ಆ ಅರ್ಥದ... ರೈತರಿಗೆ ನೀಡುವ ಸಬ್ಸಿಡಿ, ಎಂದೋ ಒಮ್ಮೆ ಮಾಡು... ಸಾಲಮನ್ನಾ ಇವೆಲ್ಲವೂ ಹೊಟ್ಟೆಗೆ ಅನ್ನ (ಅಥವಾ ಮುದ್ದೆ... ರೊಟ್ಟಿ) ತಿನ್ನುವ ಎಲ್ಲರಿಗೂ ನೀಡುವ ಸಬ್ಸಿಡಿಯಾಗಿದೆ... ಆದರೆ, ಅನ್ನ ತಿನ್ನುವ ಮಧ್ಯಮವರ್ಗ, ರೈತರ ಕುರಿತು... ಕುಚೇಷ್ಟೆಯ ಮಾತುಗಳನ್ನಾಡುತ್ತದೆ.

ಅದೇನೇ ಇರಲಿ, ಮಧ್ಯಮವರ್ಗದ್ದು ಎರಡನೆಯ... ಪ್ರಶ್ನೆ. ಮೊದಲನೆಯದಾಗಿ ರೈತ-ಕಾರ್ಮಿಕರ... ಒಗ್ಗಟ್ಟಾಗುವುದು ಅತ್ಯಂತ ಅಗತ್ಯವಾದ ಸಂಗತಿಯಾಗಿದೆ... ತಮ್ಮ ಮಧ್ಯೆ ಇರುವುದು ಹಿತಾಸಕ್ತಿಯ ಸಂಘರ್ಷವಲ್ಲ... ಬದಲಿಗೆ ಸಮಾನ ಹಿತಾಸಕ್ತಿ ಎಂಬುದು ಪ್ರಜ್ಞೆಯೊಳಗೆ... ಸಹಜವಾಗಿ ಇಳಿಯಬೇಕಿದೆ. ದಿನೇದಿನೇ ಗ್ರಾಮೀಣ ಭಾಗದ... ಜನಸಂಖ್ಯೆಯ ಪ್ರಮಾಣ ಕಡಿಮೆಯಾಗುತ್ತಿದೆ. ಭಾರೀ ದೊಡ್ಡ... ಸಂಖ್ಯೆಯಲ್ಲಿ ವಲಸೆ ಹೋಗುತ್ತಿರುವ ಸಣ್ಣ ಮತ್ತು ಅತೀಸಣ್ಣ... ರೈತಾಪಿಯು ನಗರಗಳಲ್ಲಿ ಅಸಂಘಟಿತ ಕಾರ್ಮಿಕ... ವಲಯದಲ್ಲಿ ಸೇರಿಕೊಳ್ಳುತ್ತಿದೆ. ಅರ್ಧ ಕಾಲ ನಗರದಲ್ಲಿ... ಕಾರ್ಮಿಕರಾಗಿ ದುಡಿದು, ಇನ್ನರ್ಧ ಕಾಲ ಹಳ್ಳಿಗೆ ಹೋಗಿ... ಬೇಸಾಯ ಮಾಡುವ ಜನರ ಸಂಖ್ಯೆಯೂ ದೊಡ್ಡದಾಗಿದೆ... ಆ ಅರ್ಥದಲ್ಲಿ ಇವೆರಡು ಸಮುದಾಯದ ನಡುವಿನ... ಗೆರೆಯೂ ತೆಳುವಾಗುತ್ತಿದೆ. ರೈತ-ಕಾರ್ಮಿಕರ ನಡುವಿನ... ಐಕ್ಯತೆಯನ್ನು ಹೆಚ್ಚಿಸುವಲ್ಲಿ ಈ ಸಂಗತಿಯೂ... ನೆರವಾಗಬಹುದು.

ಗಾಂಧಿ ಪ್ರಶ್ನಾತೀತರಲ್ಲ, ಆದರೆ ಗೋಡ್ಸೆ ಹೇಗೆ ಹೀರೋ?

ಜನವರಿ 26, ಗಣರಾಜ್ಯೋತ್ಸವ ದಿನದಂದು ಅಖಿಲ ಭಾರತೀಯ ಹಿಂದೂ ಮಹಾಸಭಾ ಎಂಬ ಸಂಘಟನೆ ಮೀರತ್‌ನಲ್ಲಿ ಕಪ್ಪು ಧ್ವಜಗಳನ್ನು ಪ್ರದರ್ಶಿಸಿದೆ. "ನಮ್ಮದು ಜಾತ್ಯತೀತ ದೇಶವಲ್ಲ, ಬದಲಾಗಿ ಇದನ್ನು ಮನುಧರ್ಮದ ದೇಶವಾಗಿಸಬೇಕು" ಎಂದು ಆ ಸಂಘಟನೆಯ ಸದಸ್ಯರು ಬೊಬ್ಬೆ ಹಾಕಿದ್ದಾರೆ. ಅದೂ ಸಾಲದೆಂಬಂತೆ ಜನವರಿ 30ರಂದು, ಅಂದರೆ ಮಹಾತ್ಮಾ ಗಾಂಧಿ ಹುತಾತ್ಮರಾದ ದಿನ, ಗೋಡ್ಸೆಯನ್ನು ವೈಭವೀಕರಿಸಿ, ಆತ ಗಾಂಧಿಯನ್ನು ಕೊಲ್ಲುವ ಮೂಲಕ ಸರಿಯಾದದ್ದನ್ನೇ ಮಾಡಿದ ಎಂದು ಸಂಭ್ರಮಿಸಿದ್ದಾರೆ; ಸಿಹಿ ಹಂಚಿದ್ದಾರೆ, ಬಾಲಿವುಡ್ ಸಿನಿಮಾಗಳ ಹಾಡುಗಳಿಗೆ ಹೆಜ್ಜೆ ಹಾಕಿದ್ದಾರೆ. "ನಮಗೆ ಜಾತ್ಯತೀತ ಸಂವಿಧಾನದಲ್ಲಿ ನಂಬಿಕೆ ಇಲ್ಲ, ಗಾಂಧಿ ಬಗ್ಗೆ ನಮಗೆ ಗೌರವವಿಲ್ಲ, ಭಾರತವನ್ನು ಹಿಂದೂ ರಾಷ್ಟ್ರವಾಗಿ ಘೋಷಿಸಬೇಕು" ಎಂದಿದ್ದಾರೆ.



ಪ್ರಜಾತಂತ್ರದಲ್ಲಿ ಎಲ್ಲರಿಗೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯವಿದೆ. ಹಾಗೆಯೇ ಅಖಿಲ ಭಾರತೀಯ ಹಿಂದೂ ಮಹಾಸಭಾದವರಿಗೂ ಗಾಂಧಿಯನ್ನು ಟೀಕಿಸುವ ಸ್ವಾತಂತ್ರ್ಯ ಇದೆ. ಅವರು ಹಾಗೆ ಟೀಕಿಸಕೂಡದು ಎಂದು ಯಾವ ಪ್ರಜಾತಂತ್ರವಾದಿಯೂ ಹೇಳುವುದಿಲ್ಲ. ಅಷ್ಟೇ ಅಲ್ಲದೆ, ಗಾಂಧಿ ಕೂಡ ಪ್ರಶ್ನಾತೀತರೇನಲ್ಲ. ಗಾಂಧಿ ಅಂಬೇಡ್ಕರ್ ಅವರ ಮೇಲೆ ಒತ್ತಡ ತಂದು 'ಪೂನಾ ಪ್ಯಾಕ್ಟ್'ಗೆ ಸಹಿ ಹಾಕುವಂತೆ ಮಾಡಿದ್ದರಿಂದ ಇವತ್ತಿಗೂ ದಲಿತರು ದಬ್ಬಾಳಿಕೆಗೆ, ದಮನಕ್ಕೆ ಗುರಿಯಾಗುತ್ತಿದ್ದಾರೆ. ದಲಿತರನ್ನು 'ಹರಿಜನರು' ಎಂದು ಕರೆಯುತ್ತಲೇ ಗಾಂಧಿ ಆ ಸಮುದಾಯಕ್ಕೆ ಮಾಡಿದ ಮಹಾದ್ರೋಹ ಅದು. ಹಾಗೆಯೇ ಅಹಿಂಸಾವಾದಿ ಗಾಂಧಿ ಭಗತ್ ಸಿಂಗ್ ಗಲ್ಲಿಗೇರದಂತೆ ತಡೆಯದೆ ಇದ್ದದ್ದೂ ಅವರು ಮಾಡಿದ ಇನ್ನೊಂದು ವಂಚನೆ. ಹೀಗೆ ಗಾಂಧಿ ಬಗ್ಗೆ ಪ್ರಗತಿಪರರಲ್ಲಿ, ಎಡಪಂಥೀಯರಲ್ಲಿ ಮತ್ತು ಬಿಜೆಪಿಯ ವಿರೋಧಿಗಳಲ್ಲಿ ಪ್ರಶ್ನೆಗಳಿವೆ, ವಿಮರ್ಶೆಗಳಿವೆ. ಆದರೆ ಅದಕ್ಕಿಂತ ಮುಖ್ಯವಾದ ಇತರೆ ಅಂಶಗಳೂ ಇವೆ.

ಅದರಲ್ಲಿ ಪ್ರಮುಖವಾದದ್ದು ಯಾರದೇ ಸಾವನ್ನು ಸಂಭ್ರಮಿಸುವ ಜನರ ಮಾನಸಿಕ ಅಸೂಕ್ಷ್ಮತೆಗೆ ಸಂಬಂಧಿಸಿದ್ದು. ಅಂತವರಿಗೆ ಒಂದು ಜೀವದ ಮೌಲ್ಯವೇ ಗೊತ್ತಿರುವುದಿಲ್ಲ. ಅಂತಹ ಜನರೇ ಗಾಂಧಿ ಸತ್ತಾಗಲೂ ಸಿಹಿ ಹಂಚಿದ್ದರು, ಯು.ಆರ್.ಅನಂತಮೂರ್ತಿಯವರು ಹೋದಾಗಲೂ ಪಟಾಕಿ ಸಿಡಿಸಿದ್ದರು. ಅಫ್ಜಲ್ ಗುರುವನ್ನು ಗಲ್ಲಿಗೇರಿಸಿದಾಗಲೂ ಸಂಭ್ರಮಿಸಿದ್ದರು. ಯಾಕೂಬ್ ಮೆಮನ್‌ಗೆ ವಿಧಿಸಿದ ಮರಣದಂಡನೆಯನ್ನು ವಿರೋಧಿಸಿದ ದಲಿತ ವಿದ್ಯಾರ್ಥಿ ರೋಹಿತ್ ವೇಮುಲನ ವಿರುದ್ಧ ದೂರು ಕೊಡುವ ಮೂಲಕ ಆತನನ್ನೂ ಸಾವಿಗೆ ದೂಡಿದರು.

ಇಂತಹ ಜನರೇ ಗೋಹತ್ಯೆ ಮಾಡಿದ್ದಾರೆಂದು ಹರಿಯಾಣದಲ್ಲಿ ಐವರು ದಲಿತರನ್ನು ಕೊಂದುಹಾಕುತ್ತಾರೆ, ಕರ್ನಾಟಕದಲ್ಲಿ ಗೋಸಾಗಣೆ ನೆಪದಲ್ಲಿ ಹಾಜಬ್ಬ ಮತ್ತು ಹಸನಬ್ಬರನ್ನು ಬೆತ್ತಲೆಗೊಳಿಸುತ್ತಾರೆ, ದಾದ್ರಿಯಲ್ಲಿ ಗೋಮಾಂಸ ತಿಂದರು ಎಂಬ ಸಂಶಯದ ಆಧಾರದ ಮೇಲೆಯೇ ಮುಸಲ್ಮಾನನನ್ನು ಕೊಲ್ಲುತ್ತಾರೆ. ಮತಾಂತರ ಮಾಡುತ್ತಿದ್ದಾರೆಂದು ಗ್ರಹಾಮ್ ಸ್ಟೈನ್ಸ್ ಎಂಬ ಪಾದ್ರಿಯನ್ನು ಮತ್ತು ಆತನ ಇಬ್ಬರು ಅಮಾಯಕ ಮಕ್ಕಳನ್ನು ಬೆಂಕಿ ಹಚ್ಚಿ ಸಾಯಿಸುತ್ತಾರೆ. ನಮ್ಮ ರಾಜ್ಯದಲ್ಲಿ ಚರ್ಚ್‌ಗಳ ಮೇಲೆ ದಾಳಿ ಮಾಡುತ್ತಾರೆ. ಒರಿಸ್ಸಾದಲ್ಲಿ ಕ್ರಿಶ್ಚಿಯನ್ ನನ್‌ಗಳ ಮೇಲೆ ಅತ್ಯಾಚಾರವೆಸಗುತ್ತಾರೆ.

ಜೀವದ ಮೌಲ್ಯ ಗೊತ್ತಿಲ್ಲದವರು ಮಾತ್ರ ಹೀಗೆ ಪೈಶಾಚಿಕವಾಗಿ ವರ್ತಿಸಲು ಸಾಧ್ಯ.

ಇನ್ನೊಂದು ಮುಖ್ಯ ಅಂಶ ಕೊಲೆಗಡುಕನನ್ನು ಸಮರ್ಥಿಸುವ ಜನರ ರಾಜಕೀಯ ಧೋರಣೆ. ಗಾಂಧಿಗೆ ಹೇಗೆ ತಮ್ಮದೇ ಆತ ರಾಜಕೀಯ ನಿಲುವುಗಳಿದ್ದವೋ ಹಾಗೆ ಗೋಡ್ಸೆಗೂ ಇದ್ದವು. ಎಲ್ಲರೂ ಗಾಂಧಿವಾದವನ್ನು ಒಪ್ಪಬೇಕು ಎನ್ನುವುದು ದಡ್ಡತನವಾಗುತ್ತದೆ. ಹಾಗೆಯೇ ಗಾಂಧಿ ಹಾಗೂ ಗೋಡ್ಸೆ ಇಬ್ಬರಿಗೂ ಹಿಂದೂ ಧರ್ಮ ಮುಖ್ಯವಾಗಿತ್ತು, ಆದರೆ ಅವರಿಬ್ಬರ ಹಿಂದೂ ಧರ್ಮದ ಬಗೆಗಿನ ನಿಷ್ಠೆ ಎಂತಹದ್ದಾಗಿತ್ತು ಎಂಬುದು ಮುಖ್ಯವಾಗುತ್ತದೆ.

ಗಾಂಧಿಗೆ ಹಿಂದೂ ಧರ್ಮ ಸನಾತನ ಧರ್ಮವಾಗಿತ್ತು, ಅದು ಎಲ್ಲರನ್ನೂ ಒಳಗೊಳ್ಳುವ; ಯಾರನ್ನೂ ದ್ವೇಷಿಸದ ಸಿದ್ಧಾಂತವಾಗಿತ್ತು. ಆದ್ದರಿಂದಲೇ ಅವರಿಗೆ "ಈಶ್ವರ ಅಲ್ಲಾ ತೇರೋ ನಾಮ್, ಸಬ್ಕೋ ಸನ್ಮತಿ ದೇ ಭಗವಾನ್" ಎಂದು ಪ್ರಾರ್ಥಿಸಲು ಸಾಧ್ಯವಾಯಿತು. ಅವರಿಗೆ ಹಿಂದೂ ಧರ್ಮ ಖಾಸಗಿ ನಂಬಿಕೆಯಾಗಿತ್ತೆ ಹೊರತು ರಾಜಕೀಯ ಅಸ್ತ್ರವಾಗಿರಲಿಲ್ಲ.


ಆದರೆ ಗೋಡ್ಸೆಗೆ ಪ್ರಿಯವಾಗಿದ್ದ ಹಿಂದೂ ಧರ್ಮ ವಿ.ಡಿ. ಸಾವರ್ಕರ್ ಮತ್ತು ಗೋಲ್ವಾಲ್ಕರ್ ರೂಪಿಸಿದ ಧರ್ಮವಾಗಿತ್ತು. ಅದು ಅನ್ಯ ಧರ್ಮೀಯರ ವಿರುದ್ಧ ದ್ವೇಷ ಕಾರುವ ಧರ್ಮವಾಗಿತ್ತು, ಸಮಾನತೆಯ ವಿರೋಧಿಯಾಗಿತ್ತು. ಕೊನೆಗೆ ಅದು ಕೊಲೆಯನ್ನು ಮಾಡಲು ಪ್ರೋತ್ಸಾಹಿಸಿದ ಮನುಷ್ಯ ವಿರೋಧಿ ಧರ್ಮವಾಗಿತ್ತು.

ಗಾಂಧಿ ಮತ್ತು ಗೋಡ್ಸೆ ನಡುವಿನ ವ್ಯತ್ಯಾಸ ಇರುವುದು ಇಲ್ಲಿಯೇ. ಗಾಂಧಿ ತಮ್ಮ ಧಾರ್ಮಿಕ ನಂಬಿಕೆಯನ್ನು, ರಾಜಕೀಯ ಸಿದ್ಧಾಂತವನ್ನು ಕೋಮು ಸೌಹಾರ್ದತೆಗೆ, ಪ್ರಾಣಗಳನ್ನು ಉಳಿಸುವ ಕಾರ್ಯಕ್ಕೆ ವಿನಿಯೋಗಿಸಿದರು. ಆದರೆ ಗೋಡ್ಸೆ ಅದಕ್ಕೆ ವಿರುದ್ಧವಾಗಿ ತನ್ನ ಧಾರ್ಮಿಕ ನಂಬಿಕೆಯನ್ನು ಮತ್ತು ರಾಜಕೀಯ ಸಿದ್ಧಾಂತವನ್ನು ಕೋಮುದ್ವೇಷಕ್ಕೆ ಮತ್ತು ಪ್ರಾಣ ತೆಗೆಯುವುದಕ್ಕೆ ಉಪಯೋಗಿಸಿದ.

ಗಾಂಧಿ ಬಗ್ಗೆ ಪ್ರೀತಿ ಇಲ್ಲದಿದ್ದರೇನು. ಆದರೆ ಗಾಂಧಿಯನ್ನು ಕೊಂದ ಗೋಡ್ಸೆಯನ್ನು ಮೆಚ್ಚಿ ಆತನ ಹೀನಕೃತ್ಯವನ್ನು ಸಂಭ್ರಮಿಸುವ ಜನರನ್ನು ನಾಗರಿಕ ಮನುಷ್ಯರು ಎನ್ನಲಾದೀತೆ.

ಅಂದಹಾಗೆ ಗೋಡ್ಸೆಯನ್ನು ಕೊಂಡಾಡಿರುವವರ ಸರ್ವೋಚ್ಚ ನಾಯಕನಾದ ನರೇಂದ್ರ ಮೋದಿ ಅದೇ ಜನವರಿ 30ರಂದು ತನ್ನ 'ಮನ್ ಕಿ ಬಾತ್'ನಲ್ಲಿ ಗಾಂಧಿಯನ್ನು ಸ್ಮರಿಸಿಕೊಂಡು ಎಲ್ಲರೂ ಖಾದಿಗೆ ಪ್ರಾಮುಖ್ಯತೆ ಕೊಡಬೇಕು, ಹಾಗೆ ಮಾಡಬೇಕು, ಹೀಗೆ ಮಾಡಬೇಕು ಎಂದೆಲ್ಲ ಉಪದೇಶಗಳನ್ನು ಕೊಟ್ಟಿದ್ದಾನೆ. ಆದರೆ ಅಪ್ಪಿತಪ್ಪಿಯೂ ಗಾಂಧಿಯನ್ನು ಕೊಂದ ಗೋಡ್ಸೆಯನ್ನು ಖಂಡಿಸುವುದಿರಲಿ, ಗೋಡ್ಸೆ ದೇವಸ್ಥಾನವನ್ನು ಕಟ್ಟೇ ತೀರುತ್ತೇವೆ ಎಂದು ಹೋದ ವರ್ಷವೇ ಘೋಷಿಸಿದ್ದ ಅಖಿಲ ಭಾರತೀಯ ಹಿಂದೂ ಮಹಾಸಭಾದವರಿಗೆ 'ಸ್ವಲ್ಪ ಬಾಯಿ ಮುಚ್ಚಿಕೊಂಡು ಇರುತ್ತೀರಾ' ಎಂಬ ಎಚ್ಚರಿಕೆಯನ್ನೇನೂ ಕೊಟ್ಟಿಲ್ಲ.

ಇವತ್ತು ಗಾಂಧಿ ಇದ್ದಿದ್ದರೆ ಇವರೆಲ್ಲರನ್ನು ಕಂಡೂ "ಸಬ್ಕೊ ಸನ್ಮತಿ ದೇ ಭಗವಾನ್" ಎಂದು ಪ್ರಾರ್ಥಿಸುತ್ತಿದ್ದರು ಎಂಬುದರ ಬಗ್ಗೆ ಸಂಶಯವಿಲ್ಲ. ■



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಪ್ರಗತಿಪರರು ಎಂದಿಗೂ ದಲಿತಪರರು

ಪೇಜಾವರ ಸ್ವಾಮೀಜಿಗಳು 'ಬ್ರಾಹ್ಮಣರು ಮತ್ತು ದಲಿತರು ಒಂದಾಗುವುದು ಪ್ರಗತಿಪರರಿಗೆ ಇಷ್ಟವಿಲ್ಲ' ಎಂಬ ಹೇಳಿಕೆಯನ್ನು ನೀಡಿದ್ದಾರೆ. ನಾನು ದಲಿತನಾಗಿದ್ದೂ ಪ್ರಗತಿಪರರೊಂದಿಗೆ ಸ್ನೇಹ ಉಳ್ಳವನಾಗಿರುವುದರಿಂದ ಪೇಜಾವರ ಶ್ರೀಗಳ ಹೇಳಿಕೆಗೆ ಪ್ರತಿಕ್ರಿಯಿಸುವ ಅಧಿಕೃತ ಹಕ್ಕುಳ್ಳವನಾಗಿ ಇದನ್ನು ಬರೆಯುತ್ತಿದ್ದೇನೆ.

ಆರಂಭದಲ್ಲಿಯೇ ದಶಕಗಳ ಹಿಂದೆ ಸಿ.ಎಸ್. ದ್ವಾರಕನಾಥ್ ಮತ್ತು ಪೇಜಾವರ ಶ್ರೀಗಳ ನಡುವೆ ಒಂದು ವೇದಿಕೆಯಲ್ಲಿ ನಡೆದ ಸಂಭಾಷಣೆಯನ್ನು ನಿಮಗೆ ತಿಳಿಸಬಯಸುತ್ತೇನೆ. ಅದು ಇಂತಿದೆ:

ದ್ವಾರಕಾನಾಥ್: ನಿಮ್ಮ ಶಿಷ್ಯ ಕೋಟಿಗಳಲ್ಲಿ ದಲಿತನು ಯಾಕಿಲ್ಲ?

ಪೇಜಾವರ ಸ್ವಾಮೀಜಿಗಳು: ನೋಡಿ ನೀವು ಮಾಂಸ ತಿಂತೀರಿ, ಮದ್ಯ ಕುಡಿತೀರಿ. ಅದು ಹೇಗೆ ನಾವು ದೀಕ್ಷೆ ಕೊಡೋದು?

ದ್ವಾ: ಮಾಂಸ ಮದ್ಯ ಮುಟ್ಟದೇ ಇರೋರ್ನ ಕೊಡ್ತೀವಿ ಸ್ವಾಮಿ, ನೀವು ಅವರನ್ನೇ ತಗೊಳ್ಳಿ.

ಪೇ: ಇಲ್ಲಿಲ್ಲ, ಅದು ಹಾಗಾಗಲ್ಲ, ಅವರ ಪೂರ್ವಜರು ತಿಂದಿರ್ತಾರೆ?

ದ್ವಾ: ನಿಮ್ಮ ಪೂರ್ವಜರೂ ಗೋಮಾಂಸ ತಿಂತಾ ಇರ್ಲಿಲ್ವಾ?

ಪೇ: (ಉತ್ತರವಿಲ್ಲ, ಮೌನ)


ದ್ವಾ: ಹೋಗಲಿ ಬಿಡಿ ನಿಮ್ಮಲ್ಲೇ ಒಬ್ಬ ಬ್ರಾಹ್ಮಣ ಹೆಣ್ಣು ಮಗಳನ್ನ ನಿಮ್ಮ ಶಿಷ್ಯೆಯನ್ನಾಗಿ ಸ್ವೀಕರಿಸಿ.

ಪೇ: ಹ್ಾಂ.. ಹ್ಾಂ? ಅದು ಹೇಗೆ ಆಗತ್ತೆ? ಮುಟ್ಟು ಮೈಲಿಗೆ ಇರುತ್ತಲ್ವಾ?

ದ್ವಾ: ಮುಟ್ಟು ಮೈಲಿಗೆ ಇಲ್ಲದೇ ಇದ್ದಿದ್ದರೆ ನಾವು ನೀವು ಹುಟ್ಟಾನೆ ಇರ್ತಿರ್ಲಿಲ್ಲ, ನಿಮ್ಗೆ ನಿಮ್ಮ ಹಡೆದ ತಾಯಿಯ ಬಗ್ಗೆ ಗೌರವ ಇಲ್ಲದೆ ಹೋದ ಮೇಲೆ ಅಂತ ಧರ್ಮದಲ್ಲಿ ನಾವು ಯಾಕಿರಬೇಕು?

ಪೇ: (ಮತ್ತೆ ಮೌನ)

ಅಂದಿನಿಂದ ಇಂದಿನವರೆಗೂ ಪೇಜಾವರರ ನಿಲುವಿನಲ್ಲಿ ಏನಾದರೂ ಬದಲಾಗಿದೆಯೇ? ದಲಿತ ಸ್ವಾಮೀಜಿಗೆ ದೀಕ್ಷೆ ಕೊಟ್ಟು ಜಾತಿಯ ಶ್ರೇಣಿಯಲ್ಲಿ ಕಡೆಯ ಸ್ಥಾನದಲ್ಲಿಯೇ ಇಟ್ಟಿರಬಹುದಷ್ಟೆ. ಅದನ್ನು ಬಿಟ್ಟು ಇನ್ನೇನು ಬದಲಾವಣೆಗಳೂ ಅವರಲ್ಲಿ ಕಂಡುಬಂದಿಲ್ಲ, ಸನಾತನಿಗಳೇ ಅಷ್ಟು, ಅವರಿಗೆ ಹಿಂದಿನದ್ದನ್ನು ಉಳಿಸಿಕೊಂಡುಹೋಗುವ ತವಕವಿದೆಯೇ ಹೊರತು ಹಿಂದಿನ ತಪ್ಪುಗಳನ್ನು



ತಿದ್ದಿಕೊಳ್ಳಲಲ್ಲ. ಏಕೆಂದರೆ ತಪ್ಪು ತಿದ್ದುಕೊಂಡ ತಕ್ಷಣ ಅವರ ಪದವಿ, ಶ್ರೇಷ್ಠತೆ ಎಲ್ಲವೂ ಕಳಚಿಬಿದ್ದು ಸಾಮಾನ್ಯ ಮನುಷ್ಯರಾಗಿ ಸಾಮ್ರಾಟ್ ಅಶೋಕನ ಕಾಲದ ಬ್ರಾಹ್ಮಣರಾಗಿ ಬಿಡುತ್ತೀವಿ ಎಂಬ ಭಯ. ಅದೇನೇ ಇರಲಿ, ದಲಿತರನ್ನು ಬಲೆಗೆ ಹಾಕಿಕೊಳ್ಳಲು ಪ್ರಗತಿಪರರನ್ನು ಕಟಕಟೆಯಲ್ಲಿ ನಿಲ್ಲಿಸುವ ಅವರ ಪ್ರವೃತ್ತಿ ಬಾಲಿಷತನದ್ದು.

ಪ್ರಗತಿಪರರಿಗೆ ಬ್ರಾಹ್ಮಣರೊಂದಿಗೆ ಯಾವುದೇ ದ್ವೇಷವಿಲ್ಲ. ಅವರ ತಕರಾರು ಏನಿದ್ದರೂ ಬ್ರಾಹ್ಮಣರೇ ಶ್ರೇಷ್ಠರಲ್ಲಿ ಅಗ್ರಗಣ್ಯರು ಎಂದು ಸಾರುವ ಬ್ರಾಹ್ಮಣ್ಯದಲ್ಲಿ. ಅಂಬೇಡ್ಕರರೂ ಅದನ್ನೇ ಹೇಳಿದ್ದರು. ನಾನು ಬ್ರಾಹ್ಮಣರ ವಿರೋಧಿಯಲ್ಲ; ಬ್ರಾಹ್ಮಣ್ಯದ ವಿರೋಧಿ ಎಂದು. ಈ ವಿಚಾರದಲ್ಲಿ ಪ್ರಗತಿಪರರು ಮತ್ತು ಅಂಬೇಡ್ಕರ್‌ವಾದಿ ದಲಿತರದ್ದು ಒಂದೇ ನಿಲುವು. ಇವರಿಬ್ಬರಿಗೂ 'ನನ್ನೂರಿನ ದಲಿತ ಕಾರಿನಲ್ಲಿ ಕುಳಿತು ಹೊರಟಾಗ ಆ ಧೂಳು ನನ್ನ ತಲೆಯನ್ನು ಸ್ಪರ್ಶಿಸಿದಾಗ ನನ್ನ ಜೀವನ ಪಾವನವಾಗುತ್ತದೆ' ಎಂದ ಕುದ್ಮುಲ್ ರಂಗರಾಯರ ಬಗ್ಗೆ, ಅಂಬೇಡ್ಕರರ ಜೊತೆ ಸೇರಿ ಮನುಸ್ಮೃತಿಯನ್ನು ಸಾರ್ವಜನಿಕವಾಗಿ ಸುಟ್ಟ ಬ್ರಾಹ್ಮಣರ ಬಗ್ಗೆ ಅತಿಯಾದ ಗೌರವವಿದೆ. ಹಾಗೆಯೇ ಬಾಬರಿ ಮಸೀದಿ ಕೆಡವಲು 'ಹಿಂದೂ ನಾವೆಲ್ಲ ಒಂದೂ' ಎನ್ನುತ್ತಾ 'ನಿಮ್ಮ ಮಠದಲ್ಲಿ ದಲಿತರೊಬ್ಬರನ್ನು ಉತ್ತರಾಧಿಕಾರಿಯಾಗಿಸಿ' ಎಂಬ ಪ್ರಶ್ನೆಗೆ 'ಬೇರೆ ಬೇರೆ ಜಾತಿಗಳ ಮಠಗಳೂ ಇವೆಯಲ್ಲ, ಅವುಗಳನ್ನು ಬಿಟ್ಟು ನಮಗೆ ಮಾತ್ರ ಈ ಸವಾಲೇಕೆ?' ಎಂದು ಅಧಿಕಾರದ ವಿಷಯದಲ್ಲಿ 'ಹಿಂದೂ ನಾವೆಲ್ಲ ಒಂದಲ್ಲ' ಎಂಬ ಭಾವನೆ ಇಟ್ಟುಕೊಂಡಿರುವವರ ಬಗ್ಗೆ ಅತಿಯಾದ ಅಸಮಾಧಾನವಿದೆ. ಹೀಗಿರುವಾಗ ಪ್ರಗತಿಪರರು ಹಿಂದೂ ಧರ್ಮದಲ್ಲಿನ ಜಾತಿಗಳನ್ನು ನಾಶ ಮಾಡಲು ಬಯಸುತ್ತಾರೆ ವಿನಃ ಕೇವಲ ಬ್ರಾಹ್ಮಣ, ದಲಿತ ಒಂದಾಗುವುದನ್ನಲ್ಲ. ಅದಕ್ಕಾಗಿ ಬ್ರಾಹ್ಮಣರೇ ತಮಗಂಟಿಸಿಕೊಂಡಿರುವ ಶ್ರೇಷ್ಠತೆಯನ್ನು ಕಿತ್ತೊಗೆದು ಮುನ್ನುಡಿ ಬರೆಯಲೆಂದು ಪೇಜಾವರ ಮಠಕ್ಕೆ ದಲಿತನೊಬ್ಬನನ್ನು ಉತ್ತರಾಧಿಕಾರಿಯಾಗಿಸಿ ಎಂದು ಆಗ್ರಹಿಸುತ್ತಾರೆ. ಆದರೆ ಪೇಜಾವರರಿಗೆ ದಲಿತರಿಂದ ಪಾದಪೂಜೆ ಬೇಕೇ ಹೊರತು ಪಾವಿತ್ಯ ನಾಶವಲ್ಲ.

ಇನ್ನು ದಲಿತನಾಗಿ ನನ್ನವೂ ಅಭಿಪ್ರಾಯಗಳಿವೆ. ಇಂದು ಬ್ರಾಹ್ಮಣರು ಮತ್ತು ದಲಿತರನ್ನು ಒಂದು ಮಾಡಲು ಹೊರಟಿರುವ ಪೇಜಾವರ ಶ್ರೀಗಳ ಬಳಿ ಪಾದ ಪೂಜೆ ಬಿಟ್ಟು ಬೇರಾವ ಅಸ್ತ್ರಗಳಿವೆಯೋ ಅದನ್ನವರು ಸ್ಪಷ್ಟವಾಗಿ ಹೇಳಿಲ್ಲ, ಆದರೆ ದಲಿತರಿಗೆ ಅಂಬೇಡ್ಕರರು ಸ್ಪಷ್ಟವಾದ ಅಸ್ತ್ರಗಳನ್ನು ಕೊಟ್ಟು ಹೋಗಿದ್ದಾರೆ. ಅವೇ ಸಹಪಂಕ್ತಿ ಭೋಜನ ಮತ್ತು ಅಂತರ್ಜಾತಿ ವಿವಾಹ.


ಸಹಪಂಕ್ತಿ ಭೋಜನದ ವಿಷಯಕ್ಕೆ ಬಂದರೆ ಪೇಜಾವರ ಶ್ರೀಗಳ ಬಳಿ ಅದಕ್ಕೆ ವಿರುದ್ಧವಾದ 'ಸಾಂಪ್ರದಾಯಿಕ ಭೋಜನ'ವೆಂಬ ಪದ್ಧತಿ ಇದೆ. ಅದಕ್ಕೆ ಅವರು ನೀಡುವ ಕಾರಣ ಮಾಂಸಾಹಾರಿಗಳದ್ದು. ಮಾಂಸಾಹಾರಿಗಳೊಂದಿಗೆ ಊಟ ಮಾಡಲೂ ಇಚ್ಛಿಸದ ಬ್ರಾಹ್ಮಣರು ದಲಿತರೊಂದಿಗೆ ಒಂದಾಗುವುದಾದರೂ ಹೇಗೆ? ಅದೂ ಗೋಮಾಂಸ ಸೇವಿಸುವ ದಲಿತರೊಂದಿಗೆ! ಪೇಜಾವರರು ಏನಾದರು ಪವಾಡ ಮಾಡುತ್ತಾರಾ ನೋಡಬೇಕು. ಇನ್ನು ಕರ್ನಾಟಕದಲ್ಲಿಯೇ ಮಾಂಸ ತಿನ್ನದ ಲಿಂಗಾಯತರು, ಕೆಲವು ಒಕ್ಕಲಿಗ ಜಾತಿಗಳು, ವಿಶ್ವಕರ್ಮ ಜಾತಿಯವರು ಇದ್ದಾರೆ ಅವರನ್ನೂ ಬ್ರಾಹ್ಮಣರ ಪಂಕ್ತಿಯಲ್ಲಿ ಕೂರಿಸಲಾಗುತ್ತಿದೆಯೇ? ಬಹಿರಂಗವಾಗಿಯೇ ಮೀನು ತಿನ್ನುವ ಬ್ರಾಹ್ಮಣ ಜಾತಿಗಳಿವೆ. ಅವರನ್ನು ಶೂದ್ರರೊಟ್ಟಿಗೆ ಕೂರಿಸಲಾಗುತ್ತಿದೆಯೇ? ಪೇಜಾವರರಿಗೆ ಮಾಂಸ ತಿನ್ನುವವರ ಮೇಲೆ ಗೌರವವೇ ಇಲ್ಲ. ಹೀಗಿರುವಾಗ 'ಹಿಂದೂ ನಾವೆಲ್ಲ ಒಂದು' ಎನ್ನುವುದು ನಾಟಕವಷ್ಟೇ ಎಂಬುದು ಪದೇಪದೇ ಸಾಬೀತಾಗಿದೆ.

ದಲಿತರ ಬಗ್ಗೆ ಇನ್ನಿಲ್ಲದ ಕಾಳಜಿ ಇರುವಂತೆ ತೋರಿಸಿಕೊಳ್ಳುತ್ತಿರುವ ಪೇಜಾವರ ಶ್ರೀಗಳು ಎಂದಾದರೂ ದಲಿತರ ಮೇಲೆ ನಡೆದ ದೌರ್ಜನ್ಯದ ವಿರುದ್ಧ ಮಾತನಾಡಿರುವರೇ? ದಲಿತರ ಮೇಲೆ ದೌರ್ಜನ್ಯವನ್ನು ಬ್ರಾಹ್ಮಣರು ಮಾಡುತ್ತಿಲ್ಲವೆಂದು ನುಣುಚಿಕೊಳ್ಳಲು ಬಯಸುವ ಅವರು ತಮ್ಮ ಧರ್ಮದ ಸಹ ಬಾಂಧವರಿಗೆ ಬುದ್ಧಿ ಮಾತು ಹೇಳಿದ್ದುಂಟೆ? ಕರ್ನಾಟಕದ ಹಲವು ಕಡೆ ದಲಿತರಿಗೆ ಇಂದಿಗೂ ದೇವಸ್ಥಾನ, ಕ್ಷೌರದಂಗಡಿ, ಹೋಟೆಲ್ಲು, ಸಾರ್ವಜನಿಕ ನಲ್ಲಿ, ಮೇಲ್ಜಾತಿ ಮನೆಗಳಿಗೆ ಪ್ರವೇಶವಿಲ್ಲ. ಇದರ ವಿರುದ್ಧ ಯಾತ್ರೆಗಳನ್ನು ಕೈಗೊಂಡಿರುವರೇ? ಆದರೆ ಪ್ರಗತಿಪರರು ಹಾಗಲ್ಲ. ಅವರಲ್ಲಿ ಬ್ರಾಹ್ಮಣರಾಗಿದ್ದವರು ಮತ್ತು ಮೇಲ್ಜಾತಿಯಲ್ಲಿದ್ದವರು ಜುಟ್ಟು, ಜನಿವಾರಗಳನ್ನು ಕಿತ್ತೆಸೆದು ಶ್ರೇಷ್ಠತೆಯನ್ನು ಕುಟ್ಟಿ ಪುಡಿ ಮಾಡಿ ಕೇವಲ ಮನುಷ್ಯರಾಗಿದ್ದಾರೆ. ನಿಮ್ಮಂತೆ ಅವರಿವರ ಕಡೆ ಬೊಟ್ಟು ಮಾಡದೆ ತಾವೇ ಮೊದಲು ಬದಲಾಗಿ ಖುಷಿಯಿಂದ ನಮ್ಮೊಟ್ಟಿಗೆ ಬಾಂಧವ್ಯ ಬೆಸೆದಿದ್ದಾರೆ. 'ಸಾಂಪ್ರದಾಯಿಕ ಭೋಜನ'ವೆಂದು ಕಾರಣ ನೀಡದೆ ನಾವು ತಿನ್ನುವ ಅನ್ನ, ಮಾಂಸವನ್ನೇ ತಿಂದು ನಮ್ಮವರಾಗಿದ್ದಾರೆ. ನಮ್ಮೊಂದಿಗೆ ವಿವಾಹ ಸಂಬಂಧ ಬೆಳೆಸಿ ನಮ್ಮ ರಕ್ತದಲ್ಲಿ ಬೆರೆತುಹೋಗಿದ್ದಾರೆ. ನನ್ನವರ ತಲೆ ಕಡಿದಾಗ, ಸುಟ್ಟಾಗ, ಅತ್ಯಾಚಾರಗೈದಾಗ ನಮ್ಮೊಂದಿಗೆ ಬೀದಿಗಿಳಿದು ಧಿಕ್ಕಾರ ಕೂಗಿ ನಮ್ಮ ಹೆಗಲಿಗೆ ಹೆಗಲು ಕೊಟ್ಟಿದ್ದಾರೆ. ನಮ್ಮೊಂದಿಗೆ ಹೊಟ್ಟೆ ಹುಣ್ಣಾಗುವಷ್ಟು ನಕ್ಕಿದ್ದಾರೆ, ಎದೆ ತೇವವಾಗುವಷ್ಟು ಅತ್ತಿದ್ದಾರೆ, ಗಂಟಲರಿಯುವಷ್ಟು ಅರಚಿದ್ದಾರೆ. ಈಗ ಹೇಳಿ ಪೇಜಾವರ ಶ್ರೀಗಳೇ. ನೀವು ಮತ್ತು ನಿಮ್ಮ ಅನುಯಾಯಿಗಳು ಇದರಲ್ಲಿ ಒಂದಣುವಷ್ಟನ್ನಾದರೂ ಮಾಡಿರುವಿರಾ? ಒಂದುಕ್ಷಣವಾದರೂ ನೀವೂ ನನ್ನವರೇ ಎಂಬ ಭಾವನೆ ಮೂಡಿಸುವಂತೆ ನಡೆದುಕೊಂಡಿದ್ದೀರಾ? ನನ್ನ ತಾತನ ವಯಸ್ಸಿನವರು ನೀವು. ನನ್ನ ತಾತನೋ ನನ್ನ ತಬ್ಬಿ ಮುದ್ದಾಡಿ ಎದೆಗವುಚಿಕೊಂಡು ಮಲಗುತ್ತಿದ್ದ. ತಾನು ತಿನ್ನುವ ತಿಂಡಿಯಲ್ಲಿ ಒಂದಷ್ಟು ಉಳಿಸಿ ನನಗೆ ಕೊಡುತ್ತಿದ್ದ. ನನ್ನ ಕೈಕಾಲು ಮುಖ ತೊಳೆದು ಶಾಲೆಗೆ ಕಳುಹಿಸುತ್ತಿದ್ದ. ನೀವಾದರೋ ನನ್ನ ಜನರ ಬಳಿ ನಿಮ್ಮ ಕಾಲು ತೊಳೆಸಿಕೊಳ್ಳುತ್ತಿದ್ದೀರಿ. ಈ ಮೂಲಕ ನನ್ನವರೇ 'ನೀವು ಮೇಲು ನಾವು ಕೀಳು' ಎಂದು ಭಾವಿಸುವಂತೆ ಮಾಡುತ್ತಿದ್ದೀರಿ. ಹೀಗಿದ್ದ ಮೇಲೆ ಬ್ರಾಹ್ಮಣರು ಮತ್ತು ದಲಿತರು ಒಂದಾಗುವ ಮಾತೆಲ್ಲಿ?

ನಿಮ್ಮದೇನಿದ್ದರೂ ರಾಜಕಾರಣ ಪೇಜಾವರ ಶ್ರೀಗಳೇ. ನೀವು ನಂಬಿರುವ ಸಿದ್ಧಾಂತವನ್ನು ಉಳಿಸಲು ನಿಮಗೊಂದು ಕಾಲ್ದಳ ಬೇಕಿದೆ. ಆ ಕಾಲ್ದಳಕ್ಕೆ ದಲಿತರ ಅವಶ್ಯಕತೆಯಿದೆ. ಅದರಲ್ಲಿ ಕೆಲವು ಮುಗ್ಧ ದಲಿತರನ್ನು ಸೇರಿಸಿಕೊಳ್ಳುವಲ್ಲಿ ಸಫಲರೂ ಆಗಿದ್ದೀರಿ. ಆದರೆ ಮುಂದಿನ ದಿನಗಳು ನೀವಂದುಕೊಂಡಷ್ಟು ಸುಲಭವಾಗಿಲ್ಲ. ಅಂಬೇಡ್ಕರರು ನೀಡಿದ ಬೆಳಕು ಸೂರ್ಯನಷ್ಟೇ ಪ್ರಕಾಶಮಾನವಾಗುವ ದಿನಗಳು ಬಹಳ ಹತ್ತಿರದಲ್ಲಿವೆ. ಆ ಬೆಳಕಿನಲ್ಲಿ ನನ್ನ ಜನ ಸತ್ಯವನ್ನು ಕಾಣುತ್ತಾರೆ. ಆ ಸತ್ಯ ಅರಿವಾದಾಗ ನಿಮ್ಮಂತಹವರ 'ಪಾದ ಪೂಜೆ' ಮಾಡಲು ಯಾವ ದಲಿತನ ಕೈಗಳೂ ನಿಮಗೆ ಸಿಗುವುದಿಲ್ಲ.

■ ವಿಕಾಸ ಆರ್ ಮೌರ್ಯ, ಬೆಂಗಳೂರು

ದಾವಣಗೆರೆ ಪಂಚಾಯತಿ ಫೈಟ್ ಕೈ ದರ್ಬಾರ್ ಮುಂದೆ ಬಿಜೆಪಿ ಡಲ್!


ಶಾಮನೂರು

ಮೊನ್ನೆಯಷ್ಟೇ ವಿಧಾನ ಪರಿಷತ್ ಚುನಾವಣೆಯಿಂದ ರಂಗೇರಿದ್ದ ದಾವಣಗೆರೆ ಪೊಲಿಟಿಕ್ಸ್ ಈಗ ಮತ್ತೊಮ್ಮೆ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಚುನಾವಣೆಗಳ ನೆಪದಲ್ಲಿ ಗಿಜಿಗಿಡಲು ಶುರು ಮಾಡಿದೆ. ಪರಿಷತ್ ಚುನಾವಣೆಯಲ್ಲಿ ಗೆದ್ದ ಕೈಪಡೆ ಅದಮ್ಯ ಉತ್ಸಾಹದಲ್ಲಿದೆ. ಅದಕ್ಕೂ ಮೊದಲು ನಡೆದಿದ್ದ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಕೈ ಪಕ್ಷವೇ ಮೇಲುಗೈ ಸಾಧಿಸಿತ್ತು, ಅಸಲಿಗೆ ದಾವಣಗೆರೆ ಜಿಲ್ಲೆಯ 8 ವಿಧಾನಸಭಾ ಕ್ಷೇತ್ರಗಳ ಪೈಕಿ ಹರಿಹರ ಬಿಟ್ಟು ಉಳಿದ 7 ಕ್ಷೇತ್ರಗಳೂ ಕೈ ಪಾಲಾಗಿವೆ.

ಸದ್ಯ ದಾವಣಗೆರೆ ಜಿಲ್ಲಾ ಪಂಚಾಯತಿಯ 33 ಕ್ಷೇತ್ರಗಳಲ್ಲಿ ಬಿಜೆಪಿ 17 ಮತ್ತು ಕಾಂಗ್ರೆಸ್ 16 ಸ್ಥಾನಗಳನ್ನು ಹೊಂದಿವೆ. ಕೇವಲ 1 ಸ್ಥಾನ ಹೆಚ್ಚು ಗೆದ್ದಿದ್ದ ಬಿಜೆಪಿ ಕಳೆದ ಐದು ವರ್ಷದಿಂದ ಜಿ.ಪಂ. ಅಧಿಕಾರ ನಡೆಸಿದೆಯಾದರೂ ಹೇಳಿಕೊಳ್ಳುವಂತಹ ಒಂದೇ ಒಂದು ಸಾಧನೆಯನ್ನೂ ಮಾಡಿಲ್ಲ. ಬದಲಿಗೆ ರಾಶಿರಾಶಿ ಹಗರಣಗಳು, ಬೋಗಸ್ ಬಿಲ್ ಪ್ರಕರಣಗಳು ಬಿಜೆಪಿ ಕ್ಯಾಂಡಿಡೇಟುಗಳನ್ನು ಮೆತ್ತಗಾಗಿಸಲು ಕಾದುಕುಳಿತಿವೆ. ಕಳೆದ ಸಲ ಜಿ.ಪಂ. ಚುನಾವಣೆ ನಡೆದಾಗ ಪರಿಸ್ಥಿತಿಯೇ ಬೇರೆ ಇತ್ತು. ಅನುಕಂಪದ ಅಲೆಯಲ್ಲಿ ಗೆದ್ದಿದ್ದ ಯಡ್ಡಿ ಮುಖ್ಯಮಂತ್ರಿ ಗಾದಿಯಲ್ಲಿದ್ದ, ಸಾಲದ್ದಕ್ಕೆ ದಾವಣಗೆರೆಯ ಎಂಟು ವಿಧಾನಸಭೆಗಳ ಪೈಕಿ ಏಳರಲ್ಲಿ ಬಿಜೆಪಿ ಶಾಸಕರೇ ವಿಜೃಂಭಿಸಿದ್ದರು; ಕರುಣಾಕರ ರೆಡ್ಡಿ, ರವೀಂದ್ರನಾಥನಂತಹ ಮಂತ್ರಿಗಳಿದ್ದರು; ಯಡ್ಡಿಯ ಮಾನಸಪುತ್ರ ರೇಣುಕಾಚಾರಿಯ ಹವಾ ಜೋರು ಬೀಸುತ್ತಿತ್ತು; ಜೊತೆಗೆ ಜಿ.ಎಂ. ಸಿದ್ದೇಶ್ವರ ಸಂಸದನಾಗಿದ್ದ. ಅಷ್ಟೆಲ್ಲ ಅನುಕೂಲಗಳಿದ್ದಾಗ್ಯೂ ಬಿಜೆಪಿ ಗೆದ್ದಿದ್ದು ಕಾಂಗ್ರೆಸ್‌ಗಿಂತ 1 ಹೆಚ್ಚುವರಿ ಸ್ಥಾನವನ್ನು ಮಾತ್ರ.


ಆದರೆ ಈ ಬಾರಿ ಸಂಪೂರ್ಣ ಚಿತ್ರಣವೇ ಬದಲಾಗಿಹೋಗಿದೆ. ಕಳೆದ ಬಾರಿ ಕೇಸರಿ ಪಡೆಗಿದ್ದ ಅನುಕೂಲಗಳ ಪೈಕಿ ಉಳಿದುಕೊಂಡಿರೋದು ಜಿ.ಎಂ. ಸಿದ್ದೇಶ್ವರನೇ ಸಂಸದ ಎನ್ನುವ ಬಲ ಮಾತ್ರ. ಕೆಲಸಕ್ಕೆ ಬಾರದ ಕೇಂದ್ರ ಮಂತ್ರಿ ಪಟ್ಟವಿದ್ದರೂ ಸಿದ್ದೇಶ್ವರ ಮೆತ್ತಗಾಗಿರೋದು ವಿಧಾನಪರಿಷತ್ ಫಲಿತಾಂಶದಲ್ಲೇ ಪ್ರಕಟವಾಗಿದೆ. ಹಾಗಾಗಿ ಎದುರಾಗಿರುವ ಜಿ.ಪಂ. ಎಲೆಕ್ಷನ್‌ನಲ್ಲಿ ಗೆಲ್ಲುವ ಮಾತಿರಲಿ, ಮುಖಭಂಗವನ್ನು ತಪ್ಪಿಸಿಕೊಳ್ಳೋದು ಹೇಗೆ ಎಂಬ ತರ್ಕದಲ್ಲೇ ಬಿಜೆಪಿ ತಲೆಗಳು ಬ್ಯುಸಿಯಾಗಿ ಕೂತಿವೆ.


ಇದುವರೆಗೂ ಬಿಜೆಪಿಯೇ ಜಿಲ್ಲಾ ಪಂಚಾಯತಿಯಲ್ಲಿ ದರಬಾರು ಮಾಡಿದೆ. ಅಧಿಕಾರಕ್ಕೆ ಬಂದಾಗಿನಿಂದ ಜಿಲ್ಲಾ ಪಂಚಾಯತಿಯಲ್ಲಿ ಮಾಡಿದ ಹಗರಣ, ಬೋಗಸ್ ಬಿಲ್, ಕಳಪೆ ಕಾಮಗಾರಿಗಳ ಬುಡಕ್ಕೆ ಕೈ ಹಾಕಿದರೆ ಜಿಲ್ಲಾದ್ಯಂತ ಬಿಜೆಪಿ ಕ್ಯಾಂಡಿಕೇಟ್‌ಗಳಿಗೆ ಮತದಾರ ಕ್ಯಾಕರಿಸಿ ಮನೆಗಟ್ಟುವುದು ಗ್ಯಾರಂಟಿ. ಇನ್ನು ಮಾಜಿಮಂತ್ರಿ ರವಿಂದ್ರನಾಥನ ಮಗಳು ಜೆಡ್‌ಪಿ ಸದಸ್ಯಳಾಗಿ ಗಂಡನ ಜೊತೆ ಸೇರಿ ಮುಕ್ಕಿದ್ದನ್ನು ಜನ ಕಣ್ಣಾರೆ ಕಂಡಿದ್ದಾರೆ.

ಸದ್ಯದ ಮಟ್ಟಿಗೆ ದಾವಣಗೆರೆಯಲ್ಲಿ ಬಿಜೆಪಿಗೆ ಅಸ್ತಿತ್ವವೇ ಇಲ್ಲದಂತಾಗಿದೆ. ಎಂ.ಪಿ. ಸಿದ್ದೇಶ್ವರ ಏಕಾಂಗಿಯಾಗಿದ್ದಲ್ಲದೆ ಅಸಹಾಯಕನಂತೆ ಕಂಡುಬರುತ್ತಿದ್ದಾನೆ. ಜೆಡ್‌ಪಿಯ 33 ಕ್ಷೇತ್ರಗಳನ್ನು ಸುತ್ತುವುದಕ್ಕೆ ಅವರ ಆರೋಗ್ಯ ಸ್ಪಂದಿಸುತ್ತಿಲ್ಲ, ಜಿಲ್ಲೆಯ ಮತ್ತೊಬ್ಬ ನಾಯಕ ರವೀಂದ್ರನಾಥನದ್ದೂ ಇದೇ ಸಮಸ್ಯೆ. ಹೊನ್ನಾಳಿಯಲ್ಲಿ ರೇಣುಕಾಚಾರ್ಯ ಬಿಜೆಪಿಯ ಅಸ್ತಿತ್ವ ಉಳಿಸುವುದಿರಲಿ, ತನ್ನ ತಮ್ಮಂದಿರೊಂದಿಗೆ ಸೇರಿ ತುಂಗಭದ್ರಾನದಿ ದಂಡೆಯಲ್ಲಿ ನಡೆಸಿರುವ ಮರಳು ದಂಧೆ ಬಯಲಿಗೆ ಬಂದು ಜೈಲಿಗೆ ಹೋಗದಿದ್ದರೆ ಸಾಕು ಎನ್ನುವಂತಾಗಿದೆ. ಆಗಾಗ ಮಾಜಿ ಮುಖ್ಯಮಂತ್ರಿ ಯಡ್ಡಿಯ ಚೆಡ್ಡಿಯಂತೆ ಪೋಸು ಕೊಡುವುದು ಬಿಟ್ಟರೆ ಬೇರೇನೂ ಕಾಯಕವೂ ಅವನಿಗೆ ಉಳಿದಿಲ್ಲ, ಇನ್ನು ಮಾಜಿ ಮಂತ್ರಿ ರವೀಂದ್ರನಾಥ ಜಿಲ್ಲಾ ರಾಜಕಾರಣದಿಂದಲೇ ಭೂಗತನಾಗಿದ್ದಾನೆ. ಅನಾರೋಗ್ಯದ ಕಾರಣದಿಂದಾಗಿ ಕಾಣಿಸಿಕೊಳ್ಳುತ್ತಿಲ್ಲ ಅಂತ ಆಪ್ತರು ಹೇಳಿಕೊಳ್ಳುತ್ತಾರಾದರೂ 2013ರಲ್ಲಿ ಮತದಾರ ನೀಡಿದ ಭರ್ಜರಿ ಏಟಿನಿಂದ ಸುಧಾರಿಸಿಕೊಳ್ಳಲು ರವೀಂದ್ರನಾಥನಿಗಿನ್ನೂ ಸಾಧ್ಯವಾಗಿಲ್ಲ ಅನ್ನೋದೆ ವಾಸ್ತವ.

ಹರಪನಹಳ್ಳಿಯ ಪೊಲಿಟಿಕ್ಸ್ ಕೇಳುವುದೇ ಬೇಡ. 2008ರಲ್ಲಿ ಇಲ್ಲಿಂದ ಗೆದ್ದು ಶಾಸಕನಾಗಿ, ಕಂದಾಯ ಮಂತ್ರಿಯಾಗಿ ಮೆರೆದಾಡಿದ್ದ ಬಳ್ಳಾರಿಯ ಕರುಣಾಕರ ರೆಡ್ಡಿಗಾರು, ಪಾತಾಳ ಗರಡಿಹಾಕಿ ಹುಡುಕಿದರೂ ಸಿಗುತ್ತಿಲ್ಲ. ಬಳ್ಳಾರಿ ರಿಪಬ್ಲಿಕ್‌ನ ಚಕ್ರವರ್ತಿಯಂತಿದ್ದ ತಮ್ಮ ಜನಾರ್ದನ ರೆಡ್ಡಿ ಯಾವಾಗ ಜೈಲು ಸೇರಿದನೊ ಆಗಿನಿಂದ ಕರುಣಾಕರ ರೆಡ್ಡಿಯ ರಾಜಕಾರಣವೂ ಕರುಣಾಜನಕ ಸ್ಥಿತಿ ತಲುಪಿದೆ.

ಯಡ್ಡಿಯ ಸಾಕ್ಷಾತ್ ಮಾಧ್ಯಮ ವಕ್ತಾರನಂತೆ, ಟೀವಿ ಪರದೆಗಳಿಗೆ ಅಪ್ಪಳಿಸಿ ಸುದ್ದಿಯಲ್ಲಿರುತ್ತಿದ್ದ ಹರಿಹರದ ಹರೀಶನ ಬಿಪಿಯೇ ಕುಸಿದುಹೋಗಿದೆ. ಯಡ್ಡಿಯ ಹಿಂದಿಂದೆ ಅಲೆಯುತ್ತ ಶಾಮನೂರು ರಾಜಕಾರಣವನ್ನು ಹೀನಾಮಾನ ಹೀಯಾಳಿಸುತ್ತಿದ್ದ ಹರೀಶ ಇವತ್ತು ಅದೇ ಶಾಮನೂರು ಧಣಿಗಳ ನಿರಾಶ್ರಿತ ಶಿಬಿರದಲ್ಲಿ ಅಕ್ಕಿ ಆಯ್ದುಕೊಳ್ಳುತ್ತಿದ್ದಾನೆ. ಈಗ ಕಾಂಗ್ರೆಸ್‌ಗೂ ಕೈಕೊಟ್ಟು ಮತ್ತೆ ಬಿಜೆಪಿಗೆ ಲಂಘನೆ ಮಾಡಲು ಸಜ್ಜಾಗಿದ್ದಾನೆ ಎನ್ನುವ ಮಾತುಗಳು ಕೇಳಿಬರುತ್ತಿವೆಯಾದರೂ ಅದರಿಂದ ಬಿಜೆಪಿಗೆ ನಯಾಪೈಸೆಯ ಲಾಭವಿಲ್ಲ, ಕಾರಣ, ಹರಿಹರದ ಜನರಿಗೆ ಹರೀಶ ಔಟ್‌ಡೇಟೆಡ್ ಐಟಮ್ಮಿನಂತಾಗಿದ್ದಾನೆ. ಮಾಯಕೊಂಡ ಕ್ಷೇತ್ರದಿಂದ ಇಷ್ಟು ದಿನ ನಾಪತ್ತೆಯಾಗಿದ್ದ ಮಾಜಿ ಶಾಸಕ ಬಸವರಾಜನಾಯ್ಕ ಈಗ ಮೇಕಪ್ ಬಳಿದುಕೊಂಡು ಜನರಿಗೆ ಮುಸುಡಿ ತೋರಿಸಲು ಮುಂದಾಗುತ್ತಿದ್ದಾನೆ. ಆದರೆ ಅವನನ್ನು ನಂಬುವ ಸ್ಥಿತಿಯಲ್ಲಿ ಜನರಿಲ್ಲ, ಚನ್ನಗಿರಿ, ಜಗಳೂರು ಭಾಗಗಳಲ್ಲಂತೂ ಬಿಜೆಪಿ ಕಹಾ ಹೈ ಅಂತ ಲಾಟೀನು ಹತ್ತಿಸಿ ಹುಡುಕಾಡಬೇಕಾಗಿದೆ.


ಜಿ.ಎಂ. ಸಿದ್ದೇಶ್ವರ


ರವೀಂದ್ರನಾಥ್

ಬಿಜೆಪಿಯ ಇವಿಷ್ಟೂ ಮೈನಸ್‌ಗಳು ಕೈ ಪಾರ್ಟಿಗೆ ಪ್ಲಸ್ ಆಗುವುದರಲ್ಲಿ ಸಂಶಯವೇ ಇಲ್ಲ. ಧಣಿ ಶಿವಶಂಕರಪ್ಪ ವೃದ್ಧಾಪ್ಯದಿಂದಾಗಿ ದೂರ ಉಳಿದಿದ್ದರೂ ಮಗ ಎಸ್.ಎಸ್. ಮಲ್ಲಿಕಾರ್ಜುನ್ ಪಕ್ಷವನ್ನು ಭರ್ಜರಿಯಾಗೇ ಸಂಘಟಿಸಿದ್ದಾರೆ. ಜಿ.ಪಂ, ತಾ.ಪಂ. ಪ್ರಚಾರದಲ್ಲಿ ಕೈಪಾರ್ಟಿಯ ಕಸರತ್ತು ಭಲೇ ಜೋರಿದೆ. ಈ ಚುನಾವಣೆಗಳನ್ನು ಗಂಭೀರವಾಗಿ ಸ್ವೀಕರಿಸಿರುವ ಶಾಮನೂರು ಫ್ಯಾಮಿಲಿ ಜೆಡ್‌ಪಿ–ಟಿ.ಪಿಗಳೆರಡನ್ನೂ ಬಹುಮತದಿಂದ ಗೆದ್ದು ಅಧಿಕಾರ ಹಿಡಿಯುವ ಮೂಲಕ ಗಿರಣಿನಾಡು ದಾವಣಗೆರೆಯಲ್ಲಿ ತಮ್ಮ ವೈಭವವನ್ನು ಪುನರ್‌ಸ್ಥಾಪಿಸುವ ಉತ್ಸಾಹದಲ್ಲಿದೆ.

ಇನ್ನು ಜೆಡಿಎಸ್ ಪಾಲಿಗೆ ಕಳೆದ ಜೆಡ್‌ಪಿ ಚುನಾವಣೆಗಿಂತ ವಿಭಿನ್ನ ಫಲಿತಾಂಶದ ನಿರೀಕ್ಷೆಯೇನೂ ಇದ್ದಂತಿಲ್ಲ, ಹರಿಹರದಲ್ಲಿ ಶಾಸಕನಾಗಿರುವ ಎಚ್.ಎಸ್. ಶಿವಶಂಕರನೆಂಬ ನಿಟ್ಟುಸಿರು ಬಿಟ್ಟು ಜೆಡಿಎಸ್‌ಗೆ ಜಿಲ್ಲೆಯಲ್ಲಿ ಯಾವ ಬಲವೂ ಇಲ್ಲ. ಆದರೆ ಶಿವಶಂಕರ್‌ನಿಂದ ಹೆಚ್ಚಿನದೇನನ್ನು ನಿರೀಕ್ಷೆ ಮಾಡುವುದೂ ಜೆಡಿಎಸ್ ಪಾಲಿಗೆ ದುಬಾರಿಯಾದೀತು. ಹಾಗೆ ನೋಡಿದರೆ ಈ ಚುನಾವಣೆಗಳಲ್ಲಿ ಜೆಡಿಎಸ್‌ಗೆ ಕಿಂಚಿತ್ತು ಲಾಭ ಅಂತೇನಾದರೂ ಆದರೆ ಅದು ಶಾಸಕ ಶಿವಶಂಕರ್‌ಗಿಂತ ಹೆಚ್ಚಾಗಿ ಜೆಡಿಎಸ್ ಅಲ್ಪಸಂಖ್ಯಾತ ನಾಯಕ ಸೈಯದ್ ಸೈಫೂಲ್ಲಾನಿಂದ ದಕ್ಕಬಹುದು. ಚನ್ನಗಿರಿ ಭಾಗದ ಕೆರೆಬಿಳಚಿ, ಸೂಳೆಕೆರೆ, ಕೆರೆಕಟ್ಟೆ ಎಂಬ ದೊಡ್ಡ ಗ್ರಾಮಗಳಲ್ಲಿ ಜೆಡಿಎಸ್ ಬಾವುಟ ಹಾರಾಡುತ್ತಿರೋದಕ್ಕೆ ಸೈಫುಲ್ಲಾ ವರ್ಚಸ್ಸೇ ಕಾರಣ. ಈ ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಮುಸ್ಲಿಂ ಮತದಾರರು ಸೈಫೂಲ್ಲಾನ ಪ್ರಭಾವದಿಂದ ಜೆಡಿಎಸ್‌ಗೆ ಮತ ಹಾಕಬಹುದಾದರೂ ಅದು ಜಿಲ್ಲಾ ಪಂಚಾಯತಿಯಲ್ಲಿ ಜೆಡಿಎಸ್‌ನ ಖಾತೆ ತೆರೆಸುವಷ್ಟರ ಮಟ್ಟಿಗೆ ಇರುತ್ತದೆ ಎಂದು ಹೇಳಲಿಕ್ಕೆ ಆಗುವುದಿಲ್ಲ.

ಮೂರೂ ಪಕ್ಷಗಳಲ್ಲಿ ಚುನಾವಣಾ ಕದಲಾಟಗಳು ಕಾಣಿಸುತ್ತಿವೆಯಾದರೂ ರಣೋತ್ಸಾಹದ ಹುಮ್ಮಸ್ಸು ಪುಟದೇಳುತ್ತಿರುವುದು ಕಾಂಗ್ರೆಸ್‌ನಲ್ಲಿ ಮಾತ್ರ. ಬಿಜೆಪಿಯ ಅಂತರ್ಯದಲ್ಲಿ ಕಳೆದುಕೊಳ್ಳುವ ಭೀತಿ ಕಾಣಿಸಿದರೆ ಜೆಡಿಎಸ್ ಅಂಗಳದಲ್ಲಿ ಕಳೆದುಕೊಳ್ಳುವುದಕ್ಕೆ ಏನೂ ಇಲ್ಲವಲ್ಲಾ ಎಂಬ ಸಮಾಧಾನವೇ ಗೋಚರಿಸುತ್ತಿದೆ.

■ ಟಿ.ಎನ್.ಷಣ್ಮುಖ

ನಿವೃತ್ತಿಯಾಗಿ ಏನು ಮಾಡ್ತಿರಿ ಕುಮಾರಣ್ಣ?

ಶನಿ ದೇವಸ್ಥಾನಕ್ಕೆ ಮಹಿಳೆಯರು ಹೋಗಿ ಶನಿ ಪ್ರಭಾವಕ್ಕೆ ತುತ್ತಾಗುವ ಹೋರಾಟಕ್ಕೆ ಸಜ್ಜಾಗುತ್ತಿದ್ದಾಗಲೇ ಕರ್ನಾಟಕದ ಹಲವು ಮಹಿಳಾಮಣಿಗಳು ತಮ್ಮ ಧಾರ್ಮಿಕ ಹಕ್ಕಿನ ಪರ ಹೋರಾಡುತ್ತಿದ್ದಾರಂತಲ್ಲಾ, ಇದಕ್ಕೆ ಶನಿದೇವರ ಪೂಜಾರಿಗಳಂತಹ ಕೆಲವು ವಿದ್ವಾಂಸರು ವಿರೋಧ ವ್ಯಕ್ತಮಾಡಿದ್ದಾರಲ್ಲ, ಬೇಧಿ ನಿಂತರೂ ಬೇಧಿಗೆ ತುತ್ತಾದ ಪ್ರದೇಶ ಹೊಲಸುಬೀರುವಂತೆ ಕುವೆಂಪು ವಿವಿಗೆ ವಕ್ಕರಿಸಿ ಬೆಲ್ಜಿಯಂಗೆ ಹಾರಿಹೋದ ಬಾಲಗಂಗಾಧರನ ಬಾಲಬುಡುಕರು ಈ ವಿಚಾರವಾಗಿ ಅವನದೇ ಅಭಿಪ್ರಾಯವನ್ನ ಮುಂದುವರೆಸಿದ್ದಾರಲ್ಲಾ." ಮಹಿಳೆಯರ ಶನಿಗುಡಿ ಪ್ರವೇಶದ ಬಗ್ಗೆ ಹೋರಾಡಲು ಈ ವಿಚಾರವಾದಿಗಳಿಗೆ ಏನು ಹಕ್ಕಿದೆ" ಎಂದು ಅವು ಕೇಳಿವೆಯಲ್ಲಾ, ಇದಕ್ಕುತ್ತರವಾಗಿ ಶನಿ ಸ್ತ್ರೀಭಕ್ತೆಯರು "ನಮ್ಮ ಸುದ್ದಿ ಕಟ್ಟಿಗಂಡು ನಿನಗೇನೂ ಮೂಳ? ನಾವೇನು ನಿನ್ನ ಪೂಜಾರಿಕೆ ಕಿತ್ತಾಗಳಿಕ್ಕೆ ಬಂದಿದ್ದಿವಾ?" ಎಂದಿಲ್ಲವಂತಲ್ಲಾ, ಥೂತ್ತೇರಿ!

* * * *

ಸದರಿ ಗೊಡ್ಡು ವಿದ್ವಾಂಸರ ಪ್ರಕಾರ ಹಿಂದೂ ಧರ್ಮ, ಮುಸ್ಲಿಂ ಕ್ರಿಶ್ಚಿಯನ್ ಧರ್ಮದಂತಲ್ಲ, "ನಮ್ಮಲ್ಲಿ ಅಸಂಖ್ಯಾತ ಆಚರಣೆಗಳಿವೆ. ಎಡೆಸ್ನಾನವಿದೆ. ಮಡೆಸ್ನಾನವಿದೆ. ಮಲಸ್ನಾನವೂ ಇದೆ. ಮೂತ್ರ ಸ್ನಾನವಂತೂ ದಿನನಿತ್ಯವೂ ಇದೆ. ಇದೆಲ್ಲಕ್ಕಿಂತ ಮುಖ್ಯವಾಗಿ ರಾಮಕಥಾ ಪಾರಾಯಣವಿದೆ. ಆನಂತರ ಶಯನಾಗೃಹದಲ್ಲಿ ಮೈಥುನಾಸನಗಳ ಪೂಜೆಯೂ ಇದೆ. ಆ ಸಮಯದಲ್ಲಿ ಜಗದ್ಗುರುಗಳು ರಾಮಾವತಾರ ತಾಳಿ ಲವಕುಶರನ್ನು ಸೃಷ್ಟಿಸಲು ಹೋರಾಡುತ್ತಾರೆ. ಸಂಭೋಗ ಕೂಡ ದೈವಪೂಜೆಯೆಂದು ಭಾವಿಸಿರುವ ನಾವು ನಮ್ಮ ಜನಾಂಗದ ಜಗದ್ಗುರುಗಳ ಜನನಾಂಗದ ದೇವಪೂಜೆಯನ್ನು ಗೌರವಿಸಿಕೊಂಡು ಬರುತ್ತಿದ್ದೇವೆ. ಈ ಬಗ್ಗೆ ಮಾತನಾಡಲು ವಿಚಾರವಾದಿಗಳಿಗೆ ಯಾವ ಹಕ್ಕೂ ಇಲ್ಲ, ಏಕೆಂದರೆ ದೇವರು, ಧರ್ಮ, ಆಚರಣೆ ಬಗ್ಗೆ ಅಸಡ್ಡೆ ತೋರುವಂತಹ ಅವರ ಹೋರಾಟಕ್ಕೆ ನಾವೆಂದೂ ಬೆಲೆ ಕೊಟ್ಟಿಲ್ಲ, ಏಕೆಂದರೆ ನಮ್ಮ ಸಂವಿಧಾನ ಬೇರೆ, ಧರ್ಮ ಬೇರೆ. ಒಟ್ಟನಲ್ಲಿ ನಾವೇ ಬೇರೆ" ಎಂದು ಕುವೆಂಪು ವಿವಿಯ ಮಾಜಿ ವಿದ್ವಾಂಸರು ಗರ್ಭಗುಡಿಯ ಪೂಜಾರಿಯಂತೆ ಪುಟಗಟ್ಟಲೆ ಕೆರೆದು "ನನ್ನ ಲೇಖನದಲ್ಲಿ ಬೆಲ್ಜಿಯಂ ಬಾಲು ಹೇಳಿದ ವಿಷಯ ಬಂದಿದೆ ಓದಿದ್ದಿರಾ?" ಎಂದು ಕೇಳುತ್ತಿದ್ದಾರಂತಲ್ಲಾ, ಥೂತ್ತೇರಿ!



* * * *

ಮಹಿಳೆಯರ ಧಾರ್ಮಿಕ ಹಕ್ಕಿನ ಬಗ್ಗೆ ಹಟ ತೊಟ್ಟು ವಾದಿಸುತ್ತಿರುವ ವಿದ್ವಾಂಸರು ಡಿಗ್ರಿಗಳನ್ನು ಪಡೆದಾಗಲೇ ಗೊಡ್ಡು ಬಿದ್ದವರು. ಇಂತಹ ಗೊಡ್ಡುಗಳಿಂದ ಪಾಠ ಕೇಳಿದವರೂ ಕೂಡ ಅವರಂತೆಯೇ ಆಗಿಹೋಗಿವೆ. ಅಷ್ಟಕ್ಕೂ ಮಹಿಳೆಯ ಧಾರ್ಮಿಕ ಹಕ್ಕಿನ ಬಗ್ಗೆ ಕುಹಕವಾಡುತ್ತಿರುವ ಈ ಷಂಡ ಜನ ಹುಟ್ಟುವ ಮುನ್ನ ಇವರ ತಾಯಿ ಹೊರಗಾಗಿದ್ದಳು. ಹೆಣ್ಣು ಹೊರಗಾಗುತ್ತಾಳೆಂದರೆ ಜೀವ ಕೊಡಲು ತಯಾರಾಗಿದ್ದಾಳೆ ಎಂದರ್ಥ. ಅದನ್ನೇ ಕೀಳಾಗಿ ಕಂಡು ಮುಟ್ಟು ಚಿಟ್ಟು ಮಾಡುವ ಈ ಪುರೋಹಿತ ಪಿಂಡಗಳು "ಹೆಣ್ಣಿಗೆ ಬದಲು ನಾನೇ ಪೂಜೆ ಮಾಡುತ್ತೇನೆ" ಎಂದು ಹಾಕಿರುವ ವೇಶವೂ ಹೆಣ್ಣಿನದೆ. ಪುಳುಜುಟ್ಟು, ಕೆಟ್ಟ ರಕ್ತಬಣ್ಣದ ಕಚ್ಚೆ, ಕಿವಿಗೆ ಓಲೆ, ಕತ್ತಿನಲ್ಲಿ ಸರ, ಸೊಂಟಕ್ಕೆ ಬಿಗಿದ ಶಲ್ಯ... ಇವನ್ನೆಲ್ಲ ನೋಡಿದರೆ ಹೆಣ್ಣೇ ನಾಚಿಕೊಂಡು "ಆಯ್ತು ನೀವೇ ಪೂಜೆ ಮಾಡಿ". ಎಂದಿರಬೇಕಲ್ಲವೆ? ಥೂತ್ತೇರಿ!!

* * * *

"ನಮ್ಮಂಥವರಿಗೆ ಈಗಿನ ರಾಜಕೀಯ ಅಲ್ಲ, ಹದಿನೆಂಟನೇ ಇಸವಿಯ ನಂತರ ನಿವೃತ್ತನಾಗುತ್ತೇನೆ" ಎಂದು ನಮ್ಮ ಜನಪ್ರಿಯ ಮಾಜಿ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಗಳು ಹೇಳಿಕೆ ನೀಡಿ ಅವರ ಅಭಿಮಾನಿಗಳನ್ನು ಬೆಚ್ಚಿ ಬೀಳಿಸಿದ್ದಾರಲ್ಲಾ, ಈ ಬಗ್ಗೆ ಅವರನ್ನೇ ಮಾತನಾಡಿಸಿ ಅಪರೂಪದ ರಾಜಕಾರಣಿಯನ್ನು ಉಳಿಸಿಕೊಳ್ಳುವುದು ನಮ್ಮ ಧರ್ಮವಲ್ಲವೆ ಎಂದು ಫೋನ್ ಮಾಡಿದಾಗ ರಿಂಗಾಯ್ತು.


ರಿಂಗ್ ಟೋನ್: "ಯಾರಿಗೆ ಬೇಕು ಈ ಲೋಕ ಹ್ವಾಂ ಯಾರಿಗೆ ಬೇ..."

"ಹಲೋ ಯಾರು?"

"ನನ್ನಂಬರ್ ಸೇವ್ ಮಾಡಿಕೊಂಡಿಲ್ಲವ ಸಾರ್? ನಾನು ಯಾತು."

"ಸೇವ್ ಮಾಡಿಕೊಂಡಿದ್ದಿನಿ. ಏನೇಳಿ ಯಾತು."

ಮೈಸೂರು: ಭಟ್ಟನ 'ವಾಣಿ'ಯ 'ವಿಷ'ರೂಪ




ರೋಹಿತ್ ವೇಮುಲ ಹೈದರಾಬಾದ್ ವಿವಿಯ ರಿಜಿಸ್ಟರ್ ಪುಸ್ತಕಕ್ಕೆ ಮಾತ್ರವೇ ಸೀಮಿತವಾಗಿದ್ದ ಈ ಹೆಸರು ಇವತ್ತು ಈ ನೆಲದ ದಲಿತ ಸ್ಥಿತಿಗತಿಗೆ ಹಿಡಿದ ಕನ್ನಡಿಯಂತೆ ಪ್ರತಿಧ್ವನಿಸುತ್ತಿದೆ. ತನ್ನ ಡೆತ್‌ನೋಟ್ ಮೂಲಕ ನಮ್ಮೆಲ್ಲರೊಟ್ಟಿಗೆ ಆತ ಸಂವಹಿಸಿಹೋಗಿರುವ ಮಾತುಗಳು ನಮ್ಮೊಳಗಿನ ಪ್ರಜ್ಞಾವಂತಿಕೆಯನ್ನು ಮುಟ್ಟಿಮುಟ್ಟಿ ಪ್ರಶ್ನಿಸುತ್ತಿವೆ. ಹಾಗಾಗಿಯೇ ಇಡೀ ದೇಶಕ್ಕೆ ದೇಶವೇ ರೋಹಿತ್‌ನ ಆತ್ಮಹತ್ಯೆಯ ನೆಪದ ಮೂಲಕ ಪಟ್ಟಭದ್ರ ಮನುಶಕ್ತಿಗಳ ವಿರುದ್ಧ ಸಿಡಿದುನಿಂತಿದೆ. ಪೊಲೀಸರ ಲಾಠಿ ಏಟುಗಳು ಮತ್ತು ಬಲಪಂಥೀಯ ದೌರ್ಜನ್ಯವನ್ನೂ ಲೆಕ್ಕಿಸದೆ ಸಹಸ್ರಾರು ಪ್ರತಿಭಟನೆಗಳು ನಡೆಯುತ್ತಲೇ ಇವೆ. ಭಾರತದ ಸಂವಿಧಾನ ಮತ್ತು ಈ ಮಣ್ಣಿನ ಸೌಹಾರ್ದತೆಯನ್ನೇ ವಿಷಗಣ್ಣುಗಳಿಂದ ದಿಟ್ಟಿಸುವಂತಹ ರಾಜಕೀಯ ಶಕ್ತಿಗಳು ಸಶಕ್ತಗೊಂಡಿರುವ ಈ ಹೊತ್ತಿನಲ್ಲಿ ಜನಪರ ಧ್ವನಿಗಳು ಹೀಗೆ ಸಂಘಟನೆಗೊಳ್ಳುತ್ತಿರುವುದು ನಿಜಕ್ಕೂ ಆರೋಗ್ಯಕರ ಬೆಳವಣಿಗೆಯೇ ಸರಿ. ಆದರೆ ಇದು ಘಟಿಸಲಿಕ್ಕೆ ರೋಹಿತ್ ವೇಮುಲುವಿನಂತಹ ಒಂದು ಪ್ರತಿಭಾವಂತ ಜೀವ ಬಲಿಯಾಗಬೇಕಾಗಿ ಬಂದಿತಲ್ಲ ಎನ್ನುವುದೇ ಮನಸ್ಸು ಹಿಂಡುವ ಯಾತನೆ.

ಇರಲಿ, ಮೊನ್ನೆ ಅಂದರೆ ಜನವರಿ 28ರಂದು ಮೈಸೂರಿನ ಮಾನಸಗಂಗೋತ್ರಿಯ ಮಾನವಿಕ ಸಭಾಂಗಣದಲ್ಲೂ ಇಂತದ್ದೇ ಒಂದು ಪ್ರತಿಭಟನೆಯನ್ನು ಆಯೋಜಿಸಲಾಗಿತ್ತು. ಅಸಲಿಗೆ ಮೈಸೂರು ವಿವಿ ದಲಿತ ವಿದ್ಯಾರ್ಥಿ ಒಕ್ಕೂಟ, ಸಂಶೋಧಕರ ಸಂಘ ಮತ್ತು ಹಿಂದುಳಿದ ವರ್ಗಗಳ ಒಕ್ಕೂಟಗಳು ಅದನ್ನು ಆಯೋಜಿಸಿದ್ದು 'ರೋಹಿತ್ ಆತ್ಮಹತ್ಯೆಗೆ ನುಡಿನಮನ' ಎಂಬ ಹೆಸರಿನಲ್ಲಾದರೂ ಅಲ್ಲಿ ಉಕ್ಕಿ ಬಂದ ಆಕ್ರೋಶ ಯಾವ ಪ್ರತಿಭಟನೆಗೇನೂ ಕಮ್ಮಿ ಇರಲಿಲ್ಲ. ಖ್ಯಾತ ಚಿಂತಕ ಪ್ರೊ.ಕೆ.ಎಸ್.ಭಗವಾನ್, ಮೈಸೂರು ವಿವಿಯ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಬಿ.ಪಿ.ಮಹೇಶ್‌ಚಂದ್ರ ಗುರು, ಜಾನಪದ ವಿದ್ವಾಂಸ ಪ್ರೊ.ಕಾಳೇಗೌಡ ನಾಗವಾರ, ಪ್ರೊ.ಡಿ.ಆನಂದ್, ಹಿಂದುಳಿದ ವರ್ಗಗಳ ಒಕ್ಕೂಟದ ಅಧ್ಯಕ್ಷ ಕೆ.ಶಿವರಾಮು, ಸಂಶೋಧಕರ ಸಂಘದ ಅಧ್ಯಕ್ಷ ಗೋಪಾಲ್ ಮತ್ತು ದಲಿತ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ಗುರುಮೂರ್ತಿ ಮೊದಲಾದವರು ಆ ಸಭೆಯಲ್ಲಿ ಹಾಜರಿದ್ದರು.


ಅಂದು ಅವರೆಲ್ಲಾ ಆಡಿದ ಒಂದೊಂದು ಮಾತಿನಲ್ಲೂ ದೇಶದ ಬಹುಸಂಸ್ಕೃತಿಯನ್ನು ವಿಕಾರಗೊಳಿಸುತ್ತಿರುವವರ ವಿರುದ್ಧ ಅಪಾರ ಆಕ್ರೋಶ ಹಾಗೂ ದಲಿತ ವೇದನೆಯ ನೋವುಗಳು ತೊಟ್ಟಿಕ್ಕುತ್ತಿದ್ದವು. ನಾಗರಿಕ ಎನಿಸಿಕೊಂಡ ಯಾವೊಂದು ಮನಸ್ಸೂ ಆ ಮಾತುಗಳಲ್ಲಿ ಅಡ್ಡ ಎಸಳುಗಳನ್ನು ಹುಡುಕಲು ಸಾಧ್ಯವೇ ಇಲ್ಲ. ಆದರೆ ವಿಶ್ವೇಶ್ವರ ಭಟ್ಟನ 'ವಿಶ್ವವಾಣಿ' ಪತ್ರಿಕೆ ಅಂತಹದ್ದೊಂದು ಕುಚೋದ್ಯವನ್ನು ಮಾಡಿದೆ. ವಸ್ತುನಿಷ್ಠ ವರದಿಗಾರಿಕೆಯ ಮೂಲಕ ತನ್ನ ವೃತ್ತಿಧರ್ಮಕ್ಕೆ ಬದ್ಧನಾಗಿರಬೇಕಿದ್ದ ಪತ್ರಿಕೋದ್ಯಮವನ್ನು ವಿಶ್ವೇಶ್ವರ ಭಟ್ಟನ 'ವಿಷಕೂಟ' ತಮ್ಮ ಜನವಿರೋಧಿ ಸೈದ್ಧಾಂತಿಕ ವಿಕೃತಿಯ ಮೂಲಕ ಅಡ್ಡದಾರಿಗೆಳೆದಿದೆ.

ಅವತ್ತು ಸಭೆಯಲ್ಲಿ ಮಾತನಾಡಿದ್ದ ಪ್ರೊಫೆಸರ್ ಬಿ.ಪಿ. ಮಹೇಶ್ ಚಂದ್ರಗುರು 'ಪ್ರಧಾನಿ ಮೋದಿಯವರು ಕೇವಲ ಶ್ರೀಮಂತ ಪ್ರಭುತ್ವದ ನಾಯಕರಾಗಿದ್ದು ರೈತರು, ಕಾರ್ಮಿಕರು, ಹಿಂದುಳಿದವರು, ದಲಿತರು, ಆದಿವಾಸಿಗಳು, ಅಲ್ಪಸಂಖ್ಯಾತರು ಮೊದಲಾದವರನ್ನು ಕಡೆಗಣಿಸಿ 'ಬೇವರ್ಸಿ'ಗಳನ್ನಾಗಿ ಮಾಡಿದ್ದಾರೆ' ಅಂದಿದ್ದರು. ಅವರ ಮಾತಿನಲ್ಲಿ ಅರ್ಥ ಇಲ್ಲದಿಲ್ಲ. ಮೋದಿ ಪ್ರಧಾನಿ ಪಟ್ಟಕ್ಕೇರಿದ ನಂತರ ದೇಶದಲ್ಲಿ ಹೆಚ್ಚಾಗುತ್ತಿರುವ ಅಸಹಿಷ್ಣುತೆ, ದಲಿತ ದೌರ್ಜನ್ಯಗಳು, ರೈತ ಮತ್ತು ಕಾರ್ಮಿಕ ವಿರೋಧಿ ನೀತಿಗಳನ್ನು ಕಂಡ ಎಂತವರೇ ಆದರು ಅಂತದ್ದೊಂದು ಮಾತನ್ನು ಸಾರಾಸಗಟಾಗಿ ಒಪ್ಪಿಕೊಳ್ಳುತ್ತಾರೆ. ಬಹುಪಾಲು ಪತ್ರಿಕೆಗಳು ಮಹೇಶ್‌ಚಂದ್ರರ ಮಾತನ್ನು ಅವರ ಉದ್ದೇಶದಿಂದಲೇ ವರದಿ ಮಾಡಿದವು. ಆದರೆ ವಿಶ್ವೇಶ್ವರ ಭಟ್ಟನ ಭಟ್ಟಂಗಿ ಪತ್ರಿಕೆಗೆ ಮೋದಿ ವಿರುದ್ಧ ವಾಸ್ತವವನ್ನು ವರದಿ ಮಾಡಲು ಧೈರ್ಯ ಎಲ್ಲಿಂದ ಬರಬೇಕು. ಅದೂ ಅಲ್ಲದೆ, ಮೋದಿ ಭಜನಾಮಂಡಳಿಯ ಪ್ರಧಾನ ಸಂ'ಪಾದುಕೆ'ನಂತಿರುವ ವಿಶ್ವೇಶ್ವರ ಭಟ್ಟನ ಪಟಾಲಮ್ಮು ಆರಂಭದಿಂದಲೂ ರೋಹಿತ್ ವೇಮುಲುವಿನ ಆತ್ಮಹತ್ಯೆಯನ್ನು 'ಕ್ಷುಲ್ಲಕ' ಎಂಬ ದೃಷ್ಟಿಕೋನದಲ್ಲೇ ನೋಡುತ್ತಾ ಬಂದಿದೆ. ಹಾಗಿರುವಾಗ ಅದೇ ವ್ಯಕ್ತಿಗೆ ನುಡಿನಮನ ಸಲ್ಲಿಸುವ ಕಾರ್ಯಕ್ರಮವನ್ನು ಯಶಸ್ವಿಯಾಗಿಸುವುದು ವಿಭ ಟೀಮಿಗೆ ಕೊಂಚವೂ ಇಷ್ಟವಿರಲಿಲ್ಲ, ಹಾಗಾಗಿ ತಾವು ತಜ್ಞತೆ ಸಂಪಾದಿಸಿಕೊಂಡಿರುವ 'ತಿರುಚು ಪತ್ರಿಕೋದ್ಯಮ'ದ ಅಸ್ತ್ರವನ್ನು ಮಹೇಶ್‌ಚಂದ್ರ ಗುರು ಅವರ ಮಾತುಗಳ ಮೇಲೆಯೂ ಪ್ರಯೋಗಿಸಿದ್ದರು.



ಸಭೆ ನಡೆದ ಮಾರನೇ ದಿನ ವಿಶ್ವವಾಣಿ ಪತ್ರಿಕೆ 'ಮಹೇಶ್‌ಚಂದ್ರ ಗುರು ಅವರು ಪ್ರಧಾನಿ ಮೋದಿಯವರನ್ನು ಬೇವರ್ಸಿ ಎಂದು ಕರೆದಿದ್ದಾರೆ' ಅಂತ ವರದಿ ಮಾಡಿತ್ತು. ಅಸಲಿಗೆ ಮಹೇಶ್‌ಚಂದ್ರರು ಹೇಳಿದ್ದು ಮೋದಿ, ಬಡವರನ್ನು ಬೇವರ್ಸಿ ಮಾಡಿದ್ದಾರೆ ಅಂತ. ಆದರೆ ವಿಶ್ವವಾಣಿ ಸಂಪಾದಕೀಯ ಮಂಡಳಿ ಕೈಗೆ ಸಿಕ್ಕು ಅದು ಮೋದಿಯನ್ನೇ ಬೇವರ್ಸಿಯನ್ನಾಗಿಸಿತ್ತು. ಜನಪರ ದನಿಗಳನ್ನು ಹತ್ತಿಕ್ಕುವ ಮತ್ತು ರೋಹಿತ್ ವೇಮುಲುವಿನ ಪ್ರಕರಣವನ್ನೇ ದಿಕ್ಕುತಪ್ಪಿಸುವ ಹುನ್ನಾರ ಭಟ್ಟನ ವಿಶ್ವವಾಣಿ ಪತ್ರಿಕೆಗಿರುವುದು ಇದರಿಂದ ಸಾಬೀತಾಗಿದೆ.

ಇಡೀ ವರದಿಯನ್ನು ಸಕಾರಾತ್ಮಕ ದಿಕ್ಕಿನಿಂದ ಹೈಜಾಕ್ ಮಾಡಿ ನಕಾರಾತ್ಮಕ ನಿಲುವಿಗೆ ತಂದು ನಿಲ್ಲಿಸುವಲ್ಲಿ ವಿಶ್ವವಾಣಿ ಪತ್ರಿಕೆ ಹರಸಾಹಸ ಪಟ್ಟಿತ್ತು. ಅಸಲಿಗೆ ಅವತ್ತು ಮಾತಿಗಿಳಿದ ಮಹೇಶ್‌ಚಂದ್ರರ ಆಳದಲ್ಲಿ ಆಕ್ರೋಶ ಇದ್ದದ್ದು ನಿಜ. ವೇಮುಲು ಆತ್ಮಹತ್ಯೆ ಮಾಡಿಕೊಳ್ಳಲು ನೇರ ಹೊಣೆಗಾರ್ತಿಯಾದ ಕೇಂದ್ರ ಮಾನವ ಸಂಪನ್ಮೂಲ ಸಚಿವೆ ಸ್ಮೃತಿ ಇರಾನಿಯನ್ನು ಖಾರವಾಗಿ ತರಾಟೆಗೆ ತೆಗೆದುಕೊಂಡದ್ದೂ ಉಂಟು. ಗಮನಿಸಬೇಕಾದ ಅಂಶವೆಂದರೆ ಅವರ ಈ ಆಕ್ರೋಶ ಕೇವಲ ಬಿಜೆಪಿ ವಿಭೂತಿಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ, ಕಾಂಗ್ರೆಸ್ ಪಾರ್ಟಿಯ ಐಕಾನ್ ನಾಯಕನಂತಿರುವ ಜವಾಹರಲಾಲ್ ನೆಹರೂರನ್ನೂ ಅವರು ತರಾಟೆಗೆ ತೆಗೆದುಕೊಂಡಿದ್ದರು. 'ಭಾರತವು ಮೊದಲ ಪ್ರಧಾನಿಯಾಗಿ ಸುಭಾಷ್ ಚಂದ್ರ ಬೋಸ್, ಸರ್ದಾರ್ ವಲ್ಲಭಬಾಯಿ ಪಟೇಲ್, ಅಂಬೇಡ್ಕರ್ ಇವರಲ್ಲಿ ಯಾರಾದರೂ ಒಬ್ಬರನ್ನು ಹೊಂದಿದ್ದಲ್ಲಿ ಪ್ರಪಂಚದ ಶಕ್ತಿಶಾಲಿ ರಾಷ್ಟ್ರವಾಗಿ ಮೂಡಿಬರುತ್ತಿತ್ತು. ಆದರೆ ಶೋಕಿಲಾಲ್ ನೆಹರೂರವರು ಪ್ರಧಾನಿಯಾಗಿ ಪ್ರಬುದ್ಧ ಭಾರತವನ್ನು ರೂಪಿಸುವಲ್ಲಿ ವಿಫಲರಾದರು' ಅಂತ ವಿಶ್ಲೇಷಣಾತ್ಮಕ ಕಿಡಿಕಾರಿದ್ದರು.



ಪಕ್ಷಾತೀತವಾಗಿ ಹರಿಬಿಟ್ಟ ಅವರ ಮಾತುಗಳನ್ನು ಚಿಂತನಾದೃಷ್ಟಿಯಿಂದ, ಪ್ರಸ್ತುತ ವಿದ್ಯಮಾನದ ವಿಶ್ಲೇಷಣೆಯಿಂದ ಅರಿತು ವರದಿ ಮಾಡಬೇಕಿದ್ದ ಭಟ್ಟನ ಪಟಾಲಮ್ಮು 'ಮಹೇಶ್‌ಚಂದ್ರರು ಮೋದಿಯನ್ನು ಬೇವರ್ಸಿ ಎಂದಿದ್ದಾರೆ, ಕೇಂದ್ರ ಸಚಿವೆ ಸ್ಮೃತಿ ಇರಾನಿಯನ್ನು ಕೀಳುಭಾಷೆಯಲ್ಲಿ ನಿಂದಿಸಿದ್ದಾರೆ' ಅಂತೆಲ್ಲಾ ಒನ್‌ಸೈಡೆಡ್ ಕಥೆ ಕಟ್ಟಿತ್ತು.

ಭಟ್ಟ ಮತ್ತು ಭೈರಪ್ಪನಂತವರ ಲೇಖನಿಗಳಿಂದ ಚಿಮ್ಮುವ ವಾಕ್ಯಗಳೆಲ್ಲ ದೈವ ಸಂದೇಶಗಳೇ ಸರಿ ಎಂದು ಭಾವಿಸಿರುವ ಕೇಸರಿ ಬಿಜೆಪಿಗಳು ಸುಮ್ಮನಿರುತ್ತಾರೆಯೇ? ಮೊದಲೇ ವೇಮುಲ ಆತ್ಮಹತ್ಯೆ ಪ್ರಕರಣವನ್ನು ಹಾದಿ ತಪ್ಪಿಸಲು ನಾನಾ ಕಸರತ್ತು ಮಾಡುತ್ತಿರುವ (ಆತ ದಲಿತನೇ ಅಲ್ಲ, ಆತನನ್ನು ವಜಾ ಮಾಡಿದ ಕುಲಪತಿಯೂ ದಲಿತ ಇತ್ಯಾದಿ) ಬಿಜೆಪಿಗಳಿಗೆ ಇಷ್ಟು ಸಿಕ್ಕಿದ್ದೇ ಸಾಕಾಯಿತು. ಮಹೇಶ್‌ಚಂದ್ರ ಗುರು ವಿರುದ್ಧ ಪ್ರತಿಭಟನೆಗಿಳಿದು ಗಲಾಟೆ ಶುರು ಮಾಡಿಕೊಂಡರು. ದಲಿತ ಹೋರಾಟಕ್ಕೆ ಅಪವಾದದಂತಿರುವ ಚೆಡ್ಡಿವಾಲಾ ಚಿ.ನಾ.ರಾಮು ಬೆಂಗಳೂರಿನಲ್ಲಿ ಮಹೇಶ್‌ಚಂದ್ರರ ವಿರುದ್ಧ ದೂರು ನೀಡಿದರೆ, ಅತ್ತ ಮೈಸೂರಿನಲ್ಲಿ ಬಿಜೆಪಿ ಪಾರ್ಟಿಗಳು ಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸಿದ್ದಲ್ಲದೆ 'ಮೋದಿ ಮತ್ತು ಇರಾನಿ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿದ ಮಹೇಶ್‌ಚಂದ್ರರ ವಿರುದ್ಧ ಐಪಿಸಿ ಸೆಕ್ಷನ್ 153, 153/ಎ, 268 ಕಲಂನಡಿ ಸೂಕ್ತ ಕ್ರಮ ಕೈಗೊಳ್ಳುವಂತೆ' ನಗರ ಘಟಕ ಪೊಲೀಸ್ ಆಯುಕ್ತರಿಗೆ ದೂರನ್ನೂ ನೀಡಿದ್ದಾರೆ.

ಭಟ್ಟನ ಪಟಾಲಮ್ಮಿಗೆ ಬೇಕಾದದ್ದೂ ಇಷ್ಟೇ. ತಮಗೆ ಸಲ್ಲದ ಪ್ರತಿಭಟನೆಗೆ ವಿರುದ್ಧವಾಗಿ ಒಂದು ಪ್ರತಿಭಟನೆಯನ್ನು ಹುಟ್ಟುಹಾಕಬೇಕು; ಆ ರಾದ್ಧಾಂತದಲ್ಲಿ ಜನ ಮೂಲಸಂಗತಿಯನ್ನೇ ಮರೆತು ವಿಷಯಾಂತರಗೊಳ್ಳಬೇಕು! ಆ ಮಟ್ಟಿಗೆ ವಿಶ್ವವಾಣಿ 'ವಿಷವಾಣಿ'ಯಾಗಿ ಗೆದ್ದಿದೆ!! ಆದರೆ ಸೋತವರು ಯಾರು...?

■ ವರದಿಗಾರ

ಥೂತ್ತೇರಿ

ಯಾಹೂ ▸

"ಏನು ಸಾರ್ ಇಂಥ ಮಾತಂದಿದ್ದಿರಿ?"

"ಯಾವ ಮಾತು ಅನತಕ್ಕಂತದ್ದು ಜ್ಞಾಪಕಕ್ಕೆ ಬರ್ತಾಯಿಲ್ಲ."

"ಅಕ್ರಮವಾಗಿ ಹಣ ಮಾಡಿ, ಅದನ್ನು ಚುನಾವಣೆಗೆ ಚೆಲ್ಲಿ ರಾಜಕಾರಣ ಮಾಡೋರೆದ್ರಿಗೆ ನಾನೊಬ್ಬನೆ ಹೋರಾಡಕ್ಕಾಗಲ್ಲ. ನಮ್ಮಂಥವರಿಗೆ ರಾಜಕಾರಣ ಅಲ್ಲ ಅಂದಿದ್ದಿರಿ."

"ಆ ಮಾತನ್ನ ಹೇಳತಕ್ಕಂತ ಸಂದರ್ಭ ಬಂದಿದ್ದು ನ್ಯಾಯಮೂರ್ತಿಗಳ ಅಭಿಪ್ರಾಯದಿಂದ."

"ಅವರು ನಿಮ್ಮನ್ನೇ ಕುರಿತು ಹೇಳಿದ್ರು ಸಾರ್?"

"ಹೇಳಿಲ್ಲ."

"ಮತ್ತೆ ನೀವ್ಯಾಕೆ ನಿವೃತ್ತಿ ಘೋಷಣೆ ಮಾಡಿದ್ದಿರಿ?"

"ಇನ್ನು ಘೋಷಣೆ ಮಾಡಿಲ್ಲ, 2018ರ ನಂತರ ಅಂತ ಹೇಳಿದ್ದಿನಿ."

"ಅಂಗಿದ್ರೆ, 2018ಕ್ಕೆ ನೀವು ಪವರ್‌ಗೆ ಬರಲ್ಲ ಅಂದಂಗಾಯ್ತು."

"ಬರದೆ ಹೋದ್ರೆ ಅಂತ ನಾನು ಹೇಳಿದ್ದು."

"ಅಂತ ತೀರ್ಮಾನ ತಗೋಬೇಡಿ ಸಾರ್. ನಿಮ್ಮ ಇಷ್ಟುತ್ತು ತಿಂಗಳ ಆಡಳಿತ ನೋಡಿದ್ರೆ, ನೀವು ಪುನಃ ಮುಖ್ಯಮಂತ್ರಿ ಆಗಬೇಕು."

"ಆಗಬೇಕು ಅನ್ನದು ಕರ್ನಾಟಕದ ಆರು ಕೋಟಿ ಜನಗಳ ಅಭಿಪ್ರಾಯ ಆಗಿದೆ. ಆದ್ರೆ ಹಣಬಲ, ಜಾತಿಬಲ, ತೋಳ್ಬಲದ ಎದುರಿಗೆ ಕಷ್ಟ."

"ಒಂದು ವಿಷಯ ಸಾರ್. ನೀವೇಳಿದ ಆ ತ್ರಿಬಲಗಳ ಜೊತೆಯಿದ್ದೆ ಅಲ್ವ ಸಾರ್ ನೀವು ಮುಖ್ಯಮಂತ್ರಿಯಾಗಿದ್ದು."

"ಆಗಿನ ಪರಿಸ್ಥಿತಿ ಆಗಿಲ್ಲವಲ್ಲ ಹೇಳಿ."

"ನಿಜ ಸಾರ್, ಅವತ್ತಿನಂಗೆ ಕೇಳಿದ ಕೂಡ್ಲೆ ನೂರೈವತ್ತು ಕೋಟಿ ಕೊಡೋರು ಇಲ್ಲ. ಕರದೇಟಿಗೆ ರೆಸಾರ್ಟಿಗೆ ಬಂದು ಮಸಾಜಿಗೆ ಮೈಯೊಡ್ಡಿ ಮಲಗೊ ಶಾಸಕರು ಇಲ್ಲ. ಆತ್ಮೀಯರೂ ಕೂಡ ಅನುಮಾನಾಸ್ಪದವಾಗಿದಾರೆ. ಒಂಥರ ಏಕಾಂಗಿ ಅನ್ಸುತ್ತ ಸಾರ್?"

"ಏಕಾಂಗಿ ಅನ್ಸುತ್ತೆ. ಆದ್ರೆ ಅದನ್ನ ತೋರಿಸಿಕೊಬಾರ್ದು. ಪವರಲ್ಲಿದ್ದಾಗ ಯಾರಿರತರೆ, ಅದು ಇಲ್ದಾಗ ಯಾರು ಇರತರೆ ಅನತಕ್ಕಂತ ಒಂದು ಜ್ಞಾನೋದಯ ಆಗ್ತಾಯಿದೆ."

"ನಿಜ ಸಾರ್. ಜಮೀರ್ ಕಾಂಗ್ರೆಸ್ನೆಲವ್ರುನೆ. ಚೆಲುವಣ್ಣ ಸಿದ್ದರಾಮಯ್ನನ್ನ ಅಣ್ಣಾ ಅಂತನೆ. ಬಾಲಕೃಷ್ಣ ತೊಡೆತಟ್ಟಿ ಭಾಳ ದಿನಾಯ್ತು, ಯಾರವ್ರೆ ಸಾರ್ ನಿಮ್ಮತ್ರ ಈಗ?"

"ಯಾರೂ ಬೇಡಿ, ನನ್ನ ಜೊತೆ ಆರು ಕೋಟಿ ಕನ್ನಡಿಗರವ್ರೆ."

"ಮತ್ತೆ ನಿವೃತ್ತಿ ಮಾತ್ಯಾಕಾಡ್ತಿರಿ?"

"ನಿವೃತ್ತಿ ಆಗಕ್ಕೆ ನಾನೇನು ಸರಕಾರಿ ನೌಕರನಾ? ಆ ಮಾತನ್ನ ಅನತಕ್ಕಂತ ಪರಿಸ್ಥಿತಿ ನಿರ್ಮಾಣ ಆಯ್ತು ಅಷ್ಟೆ."

"ಪರಿಸ್ಥಿತಿ ರಾಜಕಾರಣದಲ್ಲಿ ನಿರ್ಮಾಣ ಆಯ್ತದೆ ಸಾರ್. ಆಗ ಚಾಮುಂಡೇಶ್ವರಿಲಿ ಎಂಥ ಹೋರಾಟ ಕೊಟ್ರಿ."

"ಹೌದು. ಮರಿಯಂಗೇ ಇಲ್ಲ ಆ ಚುನಾವಣೇನ."

"ಹೌದು ಸಾರ್. ಸಿದ್ದರಾಮಯ್ನನ ಜಾತಿಬಲ, ತೋಳ್ಬಲ, ಹಣಬಲದ ಎದುರು ನೀವು ಏಕಾಂಗಿಯಾಗಿ ಅಭಿಮನ್ಯು ತರ ಹೋರಾಡಿದ್ರಿ. ಆಗ ನಿಮ್ಮ ಕೈಲಿ ದುಡ್ಡಿದ್ರೆ ಕನಿಷ್ಠ ಹತ್ತು ಸಾವಿರ ಲೀಡಾದ್ರು ತತ್ತಿದ್ರಿ."

"ಅದನ್ನ ಇವತ್ತು ನಮ್ಮ ಪಾರ್ಟಿಯವರೆ ನೆನೆಸಿಕೊಳ್ತಾಯಿಲ್ಲ. ಆ ಸಿದ್ದರಾಮಯ್ಯನ ಹತ್ರ ಹೋಗ್ತರೆ."

"ರೈವಣ್ಣನೆ ಅರ್ಜಿ ಹಿಡಕಂಡೋಗಿ ಸೈನಾಕಿಸಿಗಂಡು ಬತ್ತನಲ್ಲ ಸಾರ್?"

"ನಮ್ಮಣ್ಣನ ವಿಷಯ ಬಿಡಿ, ಅವ್ರುನೊಂಥರ."

"ಸದನದಲ್ಲೂ ಸಿದ್ದರಾಮಯ್ಯನ ಎದುರು ಜಾಸ್ತಿ ಕೂಗಾಡದಂಗೆ ದೇವೇಗೌಡ್ರಿಂದ ನಿಮಗೆ ಬುದ್ಧಿ ಹೇಳುಸ್ತನಂತೆ."

"ಅದನ್ನೇನು ನಾವು ಕೇಳಕ್ಕೊಗಲ್ಲ, ನಮ್ಮ ತಂದೆ ರಾಷ್ಟ್ರಾಧ್ಯಕ್ಷರಾಗಿ ಅವ್ರುರ ಕೆಲಸ ಮಾಡ್ತರೆ, ರಾಜ್ಯಾಧ್ಯಕ್ಷ ಆಗಿ ನನ್ನ ಕೆಲಸಾ ಮಾಡ್ತೀನಿ ಅಷ್ಟೆ."

"ಮುಖ್ಯಮಂತ್ರಿಯಾದ ನಾಲ್ಕು ಗಂಟೇಲಿ ರೈತರ ಸಾಲಮನ್ನ ಮಾಡ್ತೀನಿ ಅಂದಿದ್ದಿರಲ್ಲಾ, ಅದ್ಯಂಗೆ ಸಾರ್?"

"ಅದು 2018ರ ನಂತರ ಯೋಚನೆ ಮಾಡ್ತಕಂತ ವಿಚಾರ. ಆ ತರದ ಒಂದು ಆಶ್ವಾಸನೆಯನ್ನ ಕೊಡಬೇಕಾದ್ರೆ ತಾಕತ್ತು ಬೇಕು. ತಾಕತ್ತಿದ್ರೆ ಏನಾದ್ರು ಮಾಡಬಹುದು."

"ನಿಜ ಸಾರ್. ನಿಮ್ಮ ತಾಕತ್ತೇನು ಅಂತ ಮುಖ್ಯಮಂತ್ರಿಯಾದ ಒಂಬತ್ತು ತಿಂಗಳಿಗೆ ತೋರಿಸಿದ್ರಿ. ಆದ್ರೆ ನಿವೃತ್ತಿ ಮಾತು ಬೇಡಿ."

"ನನ್ನ ನಿವೃತ್ತಿ ಮಾತು ಜನಗಳ ಕೈಲಿದೆ."

"ಈಗಾಗ್ಲೆ ಎರಡು ಬಾರಿ ಜನಾಭಿಪ್ರಾಯ ಪಡೆದಿದ್ದಿರಿ. ಒಂದು ಸತಿ ಇಪ್ಪತ್ತಾರು ಸೀಟು. ಈಗ ನಲವತ್ತು ಸೀಟು. ಮುಂದು ಕೂಡ ಇದೇ ರಿಸಲ್ಟ್ ಬಂದ್ರೆ ಏನು ಮಾಡ್ತಿರಿ ಸಾರ್?"

"ನಮ್ಮ ರಾಷ್ಟ್ರೀಯ ನಾಯಕರನ್ನ ಕೇಳಿ ಮುಂದುವರಿತಿವಿ."

"ನಿಮ್ಮ ರಾಷ್ಟ್ರೀಯ ನಾಯಕರು ಕಾಂಗ್ರೆಸ್ ವಿಷಯ ಆದ್ರೆ ತಾವೇ ಕೈಗೆ ತಗತರೆ, ಬಿಜೆಪಿ ವಿಷಯ ಆದ್ರೆ ನಿಮಗೆ ಬಿಡ್ತರಲ್ಲವೆ?"

"ಹೌದು. ಆಗ ಈಗಾಗ್ಲೆ ಮುಖ್ಯಮಂತ್ರಿಯಾಗಿದ್ದಂತ ನಾನು ಮತ್ತೆ ಮುಖ್ಯಮಂತ್ರಿ ಆಗ್ತಿನೇ ವರತೂ ಉಪಮುಖ್ಯಮಂತ್ರಿ ಆಗಕ್ಕೆ ಸಾಧ್ಯವಿಲ್ಲ ಅಂತಿನಿ."

"ಆಗ ಬಿಜೆಪಿಲಿ ಉಪಮುಖ್ಯಮಂತ್ರಿ ಯಾರಾಗ್ತರೆ ಸಾರ್?"

"ಆ ವಿಷಯವನ್ನ ತಮ್ಮ ತಂದೆಯವರು ಮೋದಿ ಜೊತೆ ಮಾತನಾಡಿ ತೀರ್ಮಾನ ತಗೋಳ್ತರೆ."

"ಆ ಕಾಲ ನೋಡೋದಕ್ಕೆ ಖುಷಿಯಾಗ್ತಾಯಿದೆ ಸಾರ್."

"ನನಿಗೂ ಖುಷಿಯಾಗತ್ತೆ ಅಂತ ಹೇಳಲಿಕ್ಕೆ ಇಷ್ಟ ಪಡ್ತಿನಿ."

"ಇದ್ಯಾವುದೂ ನಡಿದೆಹೋದ್ರೆ?"


"ನಿಖಿಲನಿಗೆ ಕ್ಷೇತ್ರ ಬಿಟ್ಟು ಕೊಡ್ತೀನಿ, ರಾಧಿಕಾ ಕುಮಾರಿ ಜೊತೆ ಜಾಸ್ತಿ ಇರತಿನಿ."

"ಈಗ್ಯಾಕೆ ಸಾರ್ ದೂರ ಇದ್ದಿರಿ?"

"ನಮ್ಮ ರಾಷ್ಟ್ರೀಯ ನಾಯಕರು ಸ್ವಲ್ಪ ದಿನ ದೂರ ಇರು ಅಂದವ್ರೆ."

"ಥೂತ್ತೇರಿ!!!" ■

ಉಡುಪಿ: ಕೈ-ಕಮಲದ ಸಮಬಲ ಸಮರಾಂಗಣ!


ಆಸ್ಕರ್ ಫರ್ನಾಂಡೀಸ್

ಉಡುಪಿ ಜಿಲ್ಲಾ ಪಂಚಾಯ್ತಿ ರಣರಂಗ ಮತ್ತದೇ ಮಾಮೂಲಿ 'ಧರ್ಮ' ಯುದ್ಧಕ್ಕೆ ಸನ್ನದ್ಧವಾಗುತ್ತಿದೆ. ಅವಿಭಜಿತ ದಕ್ಷಿಣ ಕನ್ನಡದಲ್ಲಿ ಯಾವ ಚುನಾವಣೆಯೇ ನಡೆಯಲಿ, ಅದನ್ನು ಧರ್ಮಕಾರಣದ ಕಾಳಗವನ್ನಾಗಿಸಿ ಅಧಿಕಾರಕ್ಕೆ ಜೊಲ್ಲು ಸುರಿಸೋದು ಸಂಘಪರಿವಾರದ ಜನ್ಮಕ್ಕಂಟಿದ ಕರ್ಮದಂತಾಗಿಹೋಗಿದೆ! ಬಿಜೆಪಿ ಬೆಂಕಿ ನವಾಬರು ಹಿಂದೂ ಗೋವು, ಹಿಂದೂ ಹೆಂಗಸು, ಹಿಂದೂತ್ವದ ಹೆಸರಲ್ಲಿ ಮಾಡಿದ ರಕ್ತಪಿಪಾಸು ಹಾವಳಿಗೆ ತತ್ತರಿಸಿಹೋಗಿದ್ದ ಜನರು 2013ರ ಅಸೆಂಬ್ಲಿ ಚುನಾವಣೆಯಲ್ಲಿ ಬರೋಬ್ಬರಿ ಪಾಠ ಕಲಿಸಿದ್ದರು. ಆದರೆ ಆ ನಂತರದ ಪಾರ್ಲಿಮೆಂಟ್ ಮತ್ತು ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ನಿದ್ದಂಡಿ ಕಾಂಗ್ರೆಸ್ ಕಲಿಗಳ ಪಡೆ ಮಕಾಡೆ ಮಲಗಿಬಿಟ್ಟಿತು.

ಬಿಜೆಪಿಯ ಪಾರ್ಲಿಮೆಂಟ್ ಎಲೆಕ್ಷನ್ ವಿಜಯ ಒಂದು 'ಆಕಸ್ಮಿಕ ಅನಾಹುತ' ಎಂದು ಲೆಕ್ಕಾಚಾರ ಹಾಕಿದರೂ ಬೆನ್ನಿಗೇ ಆದರ ನಡೆದ ಗ್ರಾಪಂ ಸಮರದಲ್ಲಿ ಚೆಡ್ಡಿ ಗ್ಯಾಂಗು ಗೆದ್ದಿರುವುದು, ಆ ಪಕ್ಷ ಗ್ರಾಮಾಂತರದಲ್ಲಿ ಕಮ್ಯುನಲ್ ಬೇರುಗಳನ್ನು ಇಳಿಸಿರುವುದಕ್ಕೆ ಸಾಕ್ಷಿಯಂತಿದೆ. ಅಮಾಯಕರ ಬ್ರೈನ್‌ವಾಶ್ ಮಾಡುವ ಸತ್ಯನಾರಾಯಣ ಕತೆ, ಬ್ರಹ್ಮಕಲಶೋತ್ಸವ ಪವಾಡದಿಂದ ಬಿಜೆಪಿ ಸುಮಾರು 100 ರಷ್ಟು ಗ್ರಾಪಂಗಳ ಗದ್ದುಗೆ ಏರಿದೆ. ಒಟ್ಟು 2236 ಗ್ರಾಪಂ ಸದಸ್ಯರಲ್ಲಿ ಸಾವಿರದಷ್ಟು ಸದಸ್ಯರನ್ನು ಒಬ್ಬ ಕ್ಯಾಬಿನೆಟ್ ದರ್ಜೆಯ ಮಂತ್ರಿ, ಜತೆಗಿಬ್ಬರು ಪ್ರಚಂಡ ಶಾಸಕರನ್ನು ಹೊಂದಿದ್ದ ಕಾಂಗ್ರೆಸ್ ಗೆಲ್ಲಿಸಿಕೊಂಡಿದೆ. ಇದರರ್ಥ ಇಷ್ಟೇ. ಬಿಜೆಪಿ-ಭಜರಂಗಿ ಪರಿವಾರ ಅದೆಷ್ಟೇ ಧರ್ಮದ ಮಂಕುಬೂದಿ ಹಳ್ಳಿ-ಹಳ್ಳಿಗಳಲ್ಲಿ ಎರಚಿದರೂ ಕತ್ತುಕತ್ತಿನ ಕುಸ್ತಿ ನಡೆಸಬೇಕಾದ ಕಷ್ಟದ ಪರಿಸ್ಥಿತಿ ಜಿಲ್ಲೆಯಲ್ಲಿದೆ.

ಮೊನ್ನೆಮೊನ್ನೆಯಷ್ಟೇ ಮುಗಿದಿರುವ ಸ್ಥಳೀಯಾಡಳಿತ ಸದಸ್ಯರ ಕ್ಷೇತ್ರದ ವಿಧಾನ ಪರಿಷತ್ ಎಲೆಕ್ಷನ್‌ನಲ್ಲಿ ಕಾಂಗ್ರೆಸಿಗರು ಸಂಘಟಿತ ಪ್ರಯತ್ನ ನಡೆಸಿ ವೇಸ್ಟ್ ಬಾಡಿ ಪ್ರತಾಪ್‌ಚಂದ್ರಶೆಟ್ಟಿಯನ್ನು ಗೆಲ್ಲಿಸಿಕೊಂಡಿದ್ದಾರೆ. ಬಿಜೆಪಿ ಮತದಾರರನ್ನು ಬಿಡದೆ ಖರೀದಿಸಿ ಬಂಡುಕೋರ ಜಯಪ್ರಕಾಶ್ ಹೆಗ್ಡೆಯನ್ನು ಹಣಿದುಹಾಕಿದ ಆಸ್ಕರ್ ಫರ್ನಾಂಡಿಸ್ ಪಡೆ ಅದೇ ಉಮೇದಿಯಲ್ಲಿ ಜಿಪಂ ಗದ್ದುಗೆಯನ್ನು ಗೆಲ್ಲುವ ಮೂಡಲ್ಲಿದೆ. ಮಜಾ ಎಂದರೆ, ಸೀಮಿತ ಓಟುದಾರರ ಹಿಂಬಾಗಿಲ ಚುನಾವಣೆಗೂ ಅಪರಿಮಿತ ಮತದಾರರ ಮನ ಗೆಲ್ಲಬೇಕಾದ ಮುಂಬಾಗಿಲ ಪಂಚಾಯ್ತಿ ಫೈಟಿಂಗ್‌ಗೂ ಇರುವ ಫರಕಿನ ಅರಿವು ಪೆದ್ದು ಕಾಂಗ್ರೆಸ್ ಕಿಂಗ್‌ಗಳಿಗೆ ಇದ್ದಂತಿಲ್ಲ! ಕುಂದಾಪುರ, ಕಾರ್ಕಳ ಮತ್ತು ಅರ್ಧ ಉಡುಪಿ (ಬ್ರಹ್ಮಾವರ ಭಾಗ)ಯಲ್ಲಿ ನೆಲ ಕಚ್ಚಿರುವ ಕಾಂಗ್ರೆಸ್‌ನ ಕಿಂಗ್‌ಗಳು ಪರಿಷತ್ ಸಂಗ್ರಾಮದಲ್ಲಿ ತೋರಿಸಿದ ಒಗ್ಗಟ್ಟು, ಹಠ, ಪಕ್ಷ ನಿಷ್ಠೆ ತೋರಿಸದಿದ್ದರೆ ಜಿಪಂ ಗೆಲ್ಲುವುದು ಸಾಧ್ಯವೇ ಇಲ್ಲ. ಒಂಚೂರು ಯಾಮಾರಿದರೂ ಕಾಂಗ್ರೆಸ್ ಪಡೆ ಖತಂ!!

ಉಡುಪಿ ಜಿಪಂ ಅಧಿಕಾರ 2005ರಲ್ಲಿ ಕಾಂಗ್ರೆಸ್ ವಶದಲ್ಲಿತ್ತು, ಆಗ ಕಾಂಗ್ರೆಸ್ 13 ಸ್ಥಾನ ಗೆದ್ದರೆ, ಬಿಜೆಪಿ 12 ಸೀಟು ಪಡೆದಿತ್ತು. 2010ರಲ್ಲಿ ಬಿಜೆಪಿ ಬರೋಬ್ಬರಿ 16 ಸ್ಥಾನದಲ್ಲಿ ಕೇಸರಿ ಪತಾಕೆ ಹಾರಿಸಿದರೆ, ಜಗಳಗಂಟರ ಕಾಂಗ್ರೆಸ್ 9 ಕ್ಷೇತ್ರದಲ್ಲಷ್ಟೇ ಗೆದ್ದಿತ್ತು. ಈಗ ಜಿಪಂ ಸ್ಥಾನದಲ್ಲಿ ಒಂದು ಜಾಸ್ತಿಯಾಗಿದೆ. ಹಿಂದಿನ ವಿೀಸಲಾತಿ ಅದಲುಬದಲಾಗಿದೆ. ಮರಿ ಪುಢಾರಿಗಳು ಕಂಚೀ ಕದಲು ಆಟ ಆಡುತ್ತಿದ್ದಾರೆ. ಪಡುಬಿದ್ರಿ ಪ್ರದೇಶದಲ್ಲಿ ಯುಪಿಸಿಎಲ್ (ಥರ್ಮಲ್ ವಿದ್ಯುತ್ ಸ್ಥಾವರ) ಅವಾಂತರ ಚುನಾವಣಾ ವಿಷಯವಾದರೆ, ಉಳಿದೆಡೆ ಪಕ್ಕಾ ಕೇಸರಿ ಧರ್ಮ-ಕರ್ಮ ಸಮರ. ಜಿಲ್ಲೆಯ ಒಟ್ಟು 5 ಶಾಸಕರಲ್ಲಿ ಕಾರ್ಕಳದಲ್ಲಿ ಮಾತ್ರ ಬಿಜೆಪಿ ಎಮ್ಮೆಲ್ಲೆ ಇದ್ದಾರೆ. ಅತ್ತ ಕುಂದಾಪುರದಲ್ಲಿ ಬಿಜೆಪಿಯಲ್ಲಿ ಮನಸ್ಸನ್ನಿಟ್ಟು ತನು ಹೊರಗಿಟ್ಟಿರುವ 'ಕೊಡುಗೈ ದಾನಿ' ಎಂಬ ಆರೋಪದ ಹಾಲಾಡಿ ಶ್ರೀನಿವಾಸ್ ಶೆಟ್ಟಿ ಎಂಬ ಪಕ್ಷೇತರ ಶಾಸಕನ ಪ್ರಭುತ್ವವಿದೆ. ಕಾಪು ಕ್ಷೇತ್ರ ಶಾಸಕ-ಸರ್ವ ಸಮರ್ಥನೆಂಬ ಸೊಕ್ಕಿನ ಸಚಿವ ವಿನಯ ಕುಮಾರ್ ಸೊರಕೆ- ಪಕ್ಕದ ಉಡುಪಿ ಶಾಸಕ ಪ್ರಮೋದ್ ಮಧ್ವರಾಜ್ ಎಂಬ ಸಂಸದೀಯ ಕಾರ್ಯ ದರ್ಶಿಗೆ ಅದ್ಯಾಕೋ ಜನಸಾಮಾನ್ಯರ ನಾಡಿಮಿಡಿತವೇ ಅರ್ಥವಾಗುತ್ತಿಲ್ಲ.


ಇವರಿಗೆಲ್ಲ ಕ್ಯಾಪ್ಟನ್-ಎಐಸಿಸಿ ಮಾಂಡಲೀಕ ಆಸ್ಕರ್ ಫರ್ನಾಂಡಿಸ್ ಎಂಬ ಅಧಿಕಾರ ದಲ್ಲಾಳಿ! ಕಾಂಗ್ರೆಸ್‌ನಲ್ಲಿ ಎತ್ತರೆತ್ತರಕ್ಕೆ ಏರಿರುವ ಆಸ್ಕರ್ ಪಾರ್ಟಿ ಗೆಲ್ಲಿಸುವ ಅಥವಾ ಪಾರ್ಟಿ ಕಟ್ಟುವ ಕೆಲಸ ಶ್ರದ್ಧೆಯಿಂದ ನಿಯತ್ತಿನಿಂದ ಮಾಡಿದ ಒಂದೇ ಒಂದು ಉದಾಹರಣೆ ಕಾಣಿಸದು! ಅಷ್ಟೇ ಅಲ್ಲ, ಸಂಸದನಾಗಿದ್ದಾಗಲೂ ಜನಪರ ಯೋಜನೆ ತಂದದ್ದು ಕಾಣಿಸದು; ತರಲು ತುಡಿದದ್ದೂ ಇಲ್ಲ. ಇಂತಿಪ್ಪ ಬೆಪ್ಪು ತಕ್ಕಡಿ ಆಸ್ಕರ್ ತನ್ನ ರಾಜಕೀಯ ಜೀವಮಾನದಲ್ಲೇ ಮೊಟ್ಟಮೊದಲು ಕಾಂಗ್ರೆಸ್ ಕಾಪಾಡಲು ಹೋರಾಡಿದ್ದೆಂದರೆ ಮೊನ್ನಿನ ಪರಿಷತ್ ಎಲೆಕ್ಷನ್‌ನಲ್ಲಷ್ಟೇ. ಹಿತಶತ್ರು ಜಯಪ್ರಕಾಶ್ ಪಾರ್ಟಿಯಲ್ಲಿ ಬೆಳೆದರೆ ದಿಲ್ಲಿಯಲ್ಲೋ ತನ್ನ ಬಾಲ ಕತ್ತರಿಸುತ್ತಾರೆಂಬ ಭೀತಿಗೆ ಬಿದ್ದ ಆಸ್ಕರಣ್ಣ ತನ್ನ ಸೈನ್ಯವನ್ನು ಸಜ್ಜುಗೊಳಿಸಿದ್ದು ಐತಿಹಾಸಿಕವೆಂದು ಕಾಂಗ್ರೆಸ್ಸಿಗರೇ ಬಿದ್ದು ಬಿದ್ದು ನಗುತ್ತಿದ್ದಾರೆ. ಅದೇ ಸ್ಪಿರಿಟ್ ಜಿಪಂ ಎಲೆಕ್ಷನ್‌ನಲ್ಲಿ ಆಸ್ಕರಣ್ಣ ತೋರಿಸುವ ಉತ್ಸಾಹದಲ್ಲಿದ್ದಾರೆ. ಮಂತ್ರಿ ಸೊರಕೆ, ಎಮ್ಮೆಲ್ಸಿ ಪ್ರತಾಪ್, ಸಂಸದೀಯ ಕಾರ್ಯದರ್ಶಿ ಪ್ರಮೋದ್‌ರಂಥವರನ್ನೆಲ್ಲ ಅಖಾಡಕ್ಕೆ ಬಿಟ್ಟು ಸ್ಟ್ರೇಟಜಿ ಹೆಣೆಯುತ್ತಿದ್ದಾರೆ.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಗೋಪಾಲ ಪೂಜಾರಿ ಬೈಂದೂರಿನ ಶಾಸಕ. ಆತನಿಗೆ ಸ್ವ-ಕ್ಷೇತ್ರದಲ್ಲಿ ಆಜನ್ಮ ವೈರಿ ಸುಕುಮಾರ ಶೆಟ್ಟಿಯ ಚೆಡ್ಡಿಪಡೆ ಎದುರಿಸುವುದೇ ದೊಡ್ಡ ಕಷ್ಟವಾಗಿದೆ. ಹೀಗಾಗಿ ಪೂಜಾರಿಯನ್ನು ಬೈಂದೂರಿಗೆ ಸೀಮಿತ ಮಾಡಿ ಆಸ್ಕರ್ ಉಳಿದೆಡೆ ಜಯಪ್ರಕಾಶ್ ಹೆಗ್ಡೆ ಫ್ಯಾಕ್ಟರ್‌ನಿಂದ ಹಾನಿಯಾಗದಂತೆ ನೋಡಿಕೊಳ್ಳುತ್ತಿದ್ದಾರೆ. ಜೆಪಿ ಬೆಂಬಲಿಗರಿಗೇ ಬ್ರಹ್ಮಾವರ ಭಾಗದಲ್ಲಿ ಕಾಂಗ್ರೆಸ್ ಟಿಕೆಟ್ ಕೊಟ್ಟು ವೈರಿಯನ್ನು ಏಕಾಂಗಿ ಮಾಡುವ ತಂತ್ರ ಆಸ್ಕರ್ ಹೆಣೆದಿದ್ದಾರೆ. ಇದು ನಿಷ್ಠಾವಂತ ಕಾಂಗ್ರೆಸಿಗರನ್ನು ಕೆರಳಿಸಿದೆ. ಜೆಪಿ ಹಿಂಬಾಲಕರು ಪಾರ್ಟಿ ಬಿಟ್ಟುಹೋಗುತ್ತಿದ್ದಾರೆ. ಕಾಂಗ್ರೆಸ್ ಸೋಲಿಸೋದೇ ನನ್ನ ಮೊದಲ ಗುರಿ ಎಂದು ಜೆಪಿ ಶಪಥ ಮಾಡಿರುವುದು ಆಸ್ಕರ್ ಫರ್ನಾಂಡಿಸರ ಪೌರುಷ ಕೆರಳಿಸಿದೆ.


ಹೇಗೆ ಜೆಪಿ ಕಾಂಗ್ರೆಸ್‌ಗೆ ಗಂಡಾಂತರಕಾರಿ ಆಗಿದ್ದಾರೋ ಹಾಗೇ ಕುಂದಾಪುರದ ಅರ್ಧ ಪಕ್ಷೇತರ- ಅರ್ಧ ಬಿಜೆಪಿ ಶಾಸಕ- ಹಾಲಾಡಿ ಶ್ರೀನಿವಾಸ್ ಶೆಟ್ಟಿ ಸಂಘ ಪರಿವಾರಕ್ಕೆ ಸಂಕಟಕಾರಿ ಆಗಿದ್ದಾರೆ! ಕುಂದಾಪುರದ ಎಲ್ಲ ಜಿಪಂ-ತಾಪಂ ಟಿಕೆಟ್ ತಾನು ಹೇಳಿದವರಿಗೆ ಕೊಟ್ಟರಷ್ಟೇ ಬಿಜೆಪಿ ಜತೆ ದೋಸ್ತಿ, ಇಲ್ಲದಿದ್ರೆ ಸ್ವತಂತ್ರ ಸಮರ ಎಂದು ಹಾಲಾಡಿ ಬಿಜೆಪಿ ಭೂಪರಿಗೆ ಸಂದೇಶ ಕಳಿಸಿದ್ದಾರೆ. ಇದು ಕರಾವಳಿ ಬಿಜೆಪಿ ಹೈಕಮಾಂಡ್ ಕಲ್ಲಡ್ಕ ಪ್ರಭಾಕರ್ ಭಟ್ಟರ 'ಡಾನ್‌ಗಿರಿ'ಗೇ ಸವಾಲಾಗಿದೆ. ಹೀಗಾಗಿ ಕಲ್ಲಡ್ಕ ಭಟ್ಟ- "ಅವನ್ಯಾರು ಪಕ್ಷೇತರ ಹಾಲಾಡಿ... ಅಂವ್ನ ದೋಸ್ತಿ ನಮ್ಗೆ ಬೇಡ ಮಾರಾಯ್ರೆ; ನಮ್ಮದು ರಾಷ್ಟ್ರೀಯ ಪಾರ್ಟಿ... ಆರೆಸ್ಸೆಸ್ ಹಾಲಾಡಿ-ಪೀಲಾಡಿಗೆಲ್ಲಾ ಕೇರ್ ಮಾಡ್ತದಾ?" ಎಂದು ಪೂತ್ಕರಿಸುತ್ತಿದ್ದಾನೆ. ಆದರೂ ಹಾಲಾಡಿಗೆ ಬಿಜೆಪಿ ಎಂದರೇನೇ ಮೋಹ ಜಾಸ್ತಿ, ಕಡು ವೈರಿ ಪ್ರತಾಪ್ ಜತೆ ಒಳ ರಾಜಿಯಾದರೂ ಕಾಂಗ್ರೆಸ್‌ಗಿಂತ ಚೆಡ್ಡಿ ಪಡೆಯುತ್ತಲೇ ಹಾಲಾಡಿಗೆ ಸೆಳೆತ.

ಕಲ್ಲಡ್ಕ ಭಟ್ಟನಿಗೆ ಕಾರ್ಕಳದ ಭ್ರಷ್ಟ-ಭಯಾನಕ ಭಜರಂಗಿ ಶಾಸಕ ಸುನಿಲ್‌ಕುಮಾರ್, ಎಮ್ಮೆಲ್ಸಿ ಕೋಟ ಶ್ರೀನಿವಾಸ್ ಪೂಜಾರಿ ಮತ್ತು ಸಂಸದರಾದ ಶೋಭಾ ಕರಂದ್ಲಾಜೆ, ಆಕೆಯ ಪರಮಾಪ್ತ ಯಡ್ಡಿಗಳೇ ಅಸ್ತ್ರ ! ಉಡುಪಿ ಜಿಲ್ಲೆ ಎರಡು ಲೋಕಸಭಾ ವ್ಯಾಪ್ತಿಯಲ್ಲಿದೆ. ಉಡುಪಿ ಸಂಸದೆ ಶೋಬಕ್ಕನಾದರೆ, ಶಿವಮೊಗ್ಗದ ಸಂಸದ ಯಡ್ಡಿ ಮಹಾತ್ಮನಿಗೆ ಬೈಂದೂರಿನ ನಂಟಿದೆ. ಭಟ್ಟನ ಬಣ ತಣ್ಣಗೆ ಹಿಂದೂತ್ವದ ಗ್ರೌಂಡ್ ವರ್ಕ್ ಮಾಡುತ್ತಿದೆ. ಜಿಪಂ ಗೆದ್ದರೆ ಮುಂದಿನ ಅಸೆಂಬ್ಲಿ ಚುನಾವಣೆಯಲ್ಲಿ ತನ್ನ ನಿಷ್ಠಾವಂತ ಗುಲಾಮರನ್ನು ಜಿಲ್ಲೆಯಾದ್ಯಂತ ಶಾಸಕರನ್ನಾಗಿ ಮಾಡಬಹುದೆಂಬ ದೂ(ದು)ರಾಲೋಚನೆ ಭಟ್ಟನದು. ಅಪರೂಪಕ್ಕೆ ಭಟ್ಟನಷ್ಟೇ ಕೆಚ್ಚಿನಿಂದ ಹೋರಾಡಲು ಕಾಂಗ್ರೆಸ್‌ನ ಆಸ್ಕರ್, ಸೊರಕೆ, ಗೋಪಾಲ ಪೂಜಾರಿ.... ವಗೈರೆ ಕಾಂಗ್ರೆಸಿಗರು ಮುಂದಾಗಿರುವುದರಿಂದ ಈ ಬಾರಿಯ ಜಿಪಂ ಎಲೆಕ್ಷನ್ ಕುತೂಹಲ ಕೆರಳಿಸಿದೆ.


ಮೂರು ತಾಲ್ಲೂಕುಗಳ ಉಡುಪಿ ಜಿಲ್ಲೆಯಲ್ಲಿ ಐದು ವಿಧಾನಸಭಾ ಕ್ಷೇತ್ರಗಳಿವೆ. ಕಾರ್ಕಳದಲ್ಲಿ ಕಾಂಗ್ರೆಸ್‌ನ ಸಜ್ಜನ ರಾಜಕಾರಣಿ- ಮಾಜಿ ಶಾಸಕ ಗೋಪಾಲ ಭಂಡಾರಿ ಭಜರಂಗಿ ಶಾಸಕ ಸುನಿಲ್‌ನ 'ಬೆರಕಿ' ಜಾತಿರಾಜಕಾರಣದ ಅಬ್ಬರದಲ್ಲಿ ಮಸುಕಾಗಿದ್ದಾರೆ. ಕಾರ್ಕಳದ ಹಳ್ಳಿಗಳಲ್ಲಿ ಸುನಿಲ್ ವ್ಯವಸ್ಥಿತವಾಗಿ ಕೇಸರಿ ಕಾರಸ್ಥಾನ ನಡೆಸಿದ್ದಾನೆ. ಹೀಗಾಗಿ ಇಲ್ಲಿಯ ಐದು ಕ್ಷೇತ್ರದಲ್ಲಿ ಕಾಂಗ್ರೆಸ್ ಸೊರಗಿದೆ. ಜಿಲ್ಲಾ ಮಂತ್ರಿ ಸೊರಕೆ ಸುನಿಲ್‌ನ ಬಿಲ್ಲವ ರಾಜಕಾರಣ ಎದುರಿಸುವ ತಾಕತ್ತು ತೋರಿಸಿದರೆ ಕಾಂಗ್ರೆಸ್‌ಗೆ ಜೀವ ಬಂದೀತು. ಪಕ್ಕದ ಕಾಪು ಕ್ಷೇತ್ರ ಮಂತ್ರಿ ಸೊರಕೆಯದು. ಇಲ್ಲಿಯ ನಾಲ್ಕು ಕ್ಷೇತ್ರದಲ್ಲಿ ಗೆಲ್ಲಲೇ ಬೇಕಾದ ಜರೂರು ಸೊರಕೆಗಿದೆ. ಜಾತಿವಾದಿ ಎಂಬ ಆರೋಪಕ್ಕೆ ತುತ್ತಾಗಿರುವ ಸೊರಕೆ ಪೂರ್ವಾಗ್ರಹ, ಕಿತಾಪತಿ ಬಿಡದಿದ್ರೆ ಕಷ್ಟ ಖಂಡಿತ.



ಕಲ್ಲಡ್ಕ ಪ್ರಭಾಕರ್ ಭಟ್ಟ

ಉಡುಪಿಯಲ್ಲಿ ಶಾಸಕ ಪ್ರಮೋದ್ ಮಧ್ವರಾಜ್ ಇಮೇಜ್ ಮೊದಲಿನಂತಿಲ್ಲ. ಫಿಶ್‌ಮಿಲ್‌ನಿಂದ ಪ್ರತಿದಿನ ಲಕ್ಷಾಂತರ ದುಡಿಯುತ್ತಿರುವ ಪ್ರಮೋದ್ ಮೊಗೆ-ಮೊಗೆದು ದಾನವೇನೋ ಮಾಡುತ್ತಾರೆ. ಆದರೆ ಜನರೊಂದಿಗೆ ಬೆರೆಯಲು ಆತನಿಗೆ ಬಿಗುಮಾನ. ಜನರಿಗೇಕೋ ಈತ ನಮ್ಮವನಲ್ಲ ಎಂಬ ಭಾವನೆ ಮೂಡುತ್ತಿದೆ. ನಿಷ್ಠಾವಂತ ಕಾರ್ಯಕರ್ತರನ್ನು ದೂರ ಮಾಡಿದ, ಭೋಪರಾಕ್-ಠೋಳಿ ಕಟ್ಟಿಕೊಂಡು ವ್ಯರ್ಥ ಕಾಲಹರಣ ಮಾಡುತ್ತಿದ್ದಾರೆ ಪ್ರಮೋದ್ ಎಂದು ಕಾಂಗ್ರೆಸಿಗರೇ ಬೇಜಾರು ಮಾಡುತ್ತಿದ್ದಾರೆ. ಮೋದಿ ವಸ್ತ್ರ ವಿನ್ಯಾಸಕ-ಭಾಷಣ ಕಲೆ ಗುರುವೇ ಪ್ರಮೋದ್‌ಗೂ ಸಲಹೆಗಾರನಾಗಿರುವುದು ಉಡುಪಿ ಜನರಲ್ಲಿ ಒಂಥರಾ ಅಲರ್ಜಿ ಮೂಡಿಸಿದೆ. ಪ್ರಮೋದ್ ಜನಸಾಮಾನ್ಯರ ಶಾಸಕನಲ್ಲ ಎಂಬ ಭಾವನೆ ದಟ್ಟವಾಗಿ ಕ್ಷೇತ್ರದಲ್ಲಿ ಹೆಪ್ಪುಗಟ್ಟಿದೆ. ಇದರ ಪರಿಣಾಮ ಜಿಪಂ ಎಲೆಕ್ಷನ್‌ನಲ್ಲಿ ಆಗಲಿದೆ. ಬಿಜೆಪಿಯ ಕಚ್ಚೆ ಹರುಕ, 'ರೇವ್ ಪಾರ್ಟಿ' ರೂವಾರಿ, ಸ್ಟಾರ್ ಹೋಟೆಲ್‌ನ ನಂಗಾನಾಚ್ ಕಿಂಗ್, ಹೆಂಡತಿ ಹಂತಕ ಎಂಬೆಲ್ಲ ಬಿರುದು ಪಡೆದಿರುವ ಮಾಜಿ ಶಾಸಕ ರಘುಪತಿ ಭಟ್ಟ ಪ್ರಮೋದ್ 'ಆಟ' ಅಡಗಿಸಲು ಹಣ, ಹಿಂದೂತ್ವ ಎರಡನ್ನೂ ಹದವಾಗಿ ಬೆರೆಸಿ ಪ್ರಯೋಗಿಸುತ್ತಿದ್ದಾನೆ.


ಸೊರಕೆ


ಪ್ರಮೋದ್ ಮಧ್ವರಾಜ್



ಗೋಪಾಲ್ ಪೂಜಾರಿ



ಪ್ರತಾಪ್


ಬೈಂದೂರಲ್ಲಿ ಶಾಸಕ ಗೋಪಾಲ ಪೂಜಾರಿ ಬಗ್ಗೆ ಅಂಥ ಕೆಟ್ಟ ಅಭಿಪ್ರಾಯವೇನಿಲ್ಲ. ದಿನದ ಇಪ್ಪತ್ತನಾಲ್ಕು ತಾಸು ರಾಜಕಾರಣ ಮಾಡುವ ಈ ಹೊಟೇಲು ಉದ್ಯಮಿ ಕ್ಷೇತ್ರದಲ್ಲಿ ಬಿಜೆಪಿಗರ ಎದುರಿಸುತ್ತ ಅಷ್ಟು ಅಸ್ತ್ರ ಹಿಡಿದುಕೊಂಡಿದ್ದಾರೆ. ಹೀಗಾಗಿ ಬೈಂದೂರಲ್ಲಿ ಕಾಂಗ್ರೆಸ್‌ಗೆ ಅನುಕೂಲಗಳು ಜಾಸ್ತಿಯಿದೆ. ಆದರೆ ಪಕ್ಕದ ಕುಂದಾಪುರದಲ್ಲಿ ಕಾಂಗ್ರೆಸ್‌ಗೆ ದಿಕ್ಕೇ ಇಲ್ಲ. ಎಮ್ಮೆಲ್ಸಿ ಪ್ರತಾಪ್‌ನನ್ನು ಯಾರೂ ನಂಬುವುದಿಲ್ಲ. ಜನರ ಸಂಪರ್ಕ ಕಳೆದೊಂದು ದಶಕದಿಂದ ಈ ಪ್ರತಾಪ್ ಕಳೆದುಕೊಂಡಿದ್ದಾರೆ. ಹಾಲಾಡಿ ಹಾರಾಟದೆದುರು ಪ್ರತಾಪನ ಪುಂಗಿ ನಡೆಯುತ್ತಿಲ್ಲ. ಹಾಗೇ ಮುಂದೆ ಬಂದರೆ, ಬ್ರಹ್ಮಾವರ. ಇಲ್ಲಿ ಇನ್ನೂ ಮಾಜಿ ಮಂತ್ರಿ ಜಯಪ್ರಕಾಶ್ ಹೆಗ್ಡೆ ನೆಲೆ-ಬೆಲೆ ಇದೆ. ಅದು ತನ್ನ ಹಿಂಬಾಲಕರನ್ನು ಜಿಪಂ-ತಾಪಂಗೆ ಗೆಲ್ಲಿಸುವಷ್ಟಲ್ಲದಿದ್ದರೂ ಕಾಂಗ್ರೆಸ್ ಸೋಲಿಸುವಷ್ಟಂತೂ ಇದೆ.


ಈ ಸಮೀಕರಣ- ಲೆಕ್ಕಾಚಾರಗಳು ಏನೇ ಇರಲಿ. ಜಿಲ್ಲೆಯಲ್ಲಿ ಕಾಂಗ್ರೆಸ್-ಬಿಜೆಪಿ ಸಮಬಲದಲ್ಲಿದೆ. ಬಿಜೆಪಿಯ ಕೇಸರಿ ಬಣ್ಣದ ಓಕುಳಿಗೆ ಕಾಂಗ್ರೆಸ್ ಅವಕಾಶ ಕೊಡದಿದ್ದರೆ ಜಿಪಂ-ತಾಪಂ ಪೌರುಷತ್ವ ಹಿಡಿಯೋದೇನೂ ಕಷ್ಟವಲ್ಲ. ಕಲ್ಲಡ್ಕ ಮತ್ತು ಆಸ್ಕರ್ ಪಡೆಯ 'ಧರ್ಮ' ಯುದ್ಧ ದಿನಕ್ಕೊಂದು ಆಯಾಮ ಪಡೆಯುತ್ತ ಕುತೂಹಲ ಕೆರಳಿಸುತ್ತಿದೆ!

■ ವರದಿಗಾರ


ಕೋಟ ಶ್ರೀನಿವಾಸ್ ಪೂಜಾರಿ


ಶೋಭಾ ಕರಂದ್ಲಾಜೆ


ಯಡಿಯೂರಪ್ಪ


ಸುನಿಲ್ ಹೆಗ್ಡೆ

ಷರೀಫ್ ಎಂಬ ದುರಂತ ನಾಯಕ!

ಒಂದಲ್ಲ ಮೂರು ಬಾರಿ ಕೇಂದ್ರ ಸಚಿವರಾಗಿ, ರೋಬ್ಬರಿ ಹನ್ನೊಂದು ವರ್ಷಗಳ ಕಾಲ ಕೇಂದ್ರ ಮಂತ್ರಿ ಂಡಲದಲ್ಲಿದ್ದು, ಹೆಚ್ಚೂಕಮ್ಮಿ 33 ವರ್ಷಗಳಷ್ಟು ದೀರ್ಘ ಅವಧಿಗೆ ಲೋಕಸಭೆ ಸದಸ್ಯರಾಗಿದ್ದುಕೊಂಡೂ ಕೆ. ಜಾಫರ್ ಷರೀಫ್ ಸಾಹೇಬರಿಗೆ ತನ್ನ ೂಮ್ಮಗನಿಗೊಂದು 'ಬಿ' ಫಾರ್ಮ್ ಕೊಡಿಸಲು ಣಗಾಡಬೇಕಾದ ದುರ್ಗತಿ!

ಕರ್ನಾಟಕದ ಇವತ್ತಿನ ಮುಸ್ಲಿಂ ರಾಜಕಾರಣಿಗಳ ಪೈಕಿ ಂತ್ರಿ ರೋಷನ್ ಬೇಗ್, ಸಂಸದ ರೆಹಮಾನ್ ಖಾನ್, ಾಜಿ ಮಂತ್ರಿ ನಜೀರ್ ಅಹ್ಮದ್, ಸಗೀರ್ ಅಹ್ಮದ್, ್ರೀಸ್, ಜಮೀರ್, ಸುಡಗಿ, ಇಬ್ರಾಹಿಂ- ಹೀಗೆ ಯಾರನ್ನೇ ಗೆದುಕೊಂಡರೂ ಒಂದಲ್ಲ ಒಂದು ರೂಪದಲ್ಲಿ ಜಾಫರ್ ರೀಫ್ ಸಾಹೇಬರ ನೆರಳಿಲ್ಲದೆ ಬೆಳೆದವರಲ್ಲ ಬೆಳೆಯಲು ಧ್ಯವೂ ಇರಲಿಲ್ಲ. ಮೊಯ್ಲಿ ಆಸ್ಕರ್, ಖರ್ಗೆ, ಮುನಿಯಪ್ಪ ಜಶೇಖರನ್, ಹರಿಪ್ರಸಾದ್, ಕೃಷ್ಣ ಮುಂತಾದ ಕೇಂದ್ರ ಂಗ್ರೆಸ್ ನಾಯಕರಿಗೆ ಹೋಲಿಸಿದರೂ ಷರೀಫ್ ಅರಸು ಲದ ನಾಯಕ. ಈಗ ಅವರ ಉತ್ತರಾಧಿಕಾರಿಯಾಗಿ ಬ್ಬಾಳದ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಮೊಮ್ಮಗ ಹಮಾನ್ ಷರೀಫ್ ಅವರ ತಲೆಮಾರಿಗೆ ಮೂರನೇ ೕಳಿಗೆಯ ಹುಡುಗ. ಈ ಕಾಲದ ಸಿದ್ದರಾಮಯ್ಯ, ರ್ಗೆಯಂಥವರಿರಲಿ ಸ್ವತಃ ಅಧಿನಾಯಕಿ ಸೋನಿಯಾ ಂಧಿಗೇ ತಂದೆ ಸಮಾನರಂತಿರುವ ಷರೀಫ್ ಸಾಹೇಬರಿಗೆ ನ್ನ ಮೊಮ್ಮಗನಿಗೊಂದು ಪಾರ್ಟಿ ಟಿಕೆಟ್ ಕೊಡಿಸಲು ಪಾಟಿ ತಾಪತ್ರಯ ಬಂದೊದಗಲು ಕಾರಣವೇನು?

ಇದನ್ನೇ ರಾಜಕಾರಣದ ವರಸೆಯಲ್ಲಿ 'ನಸೀಬು' ನ್ನೋದು. ಇನ್ನೇನು ಷರೀಫ್ ಕರ್ನಾಟಕದ ಮುಖ್ಯಮಂತ್ರಿ ಾಗೇ ಬಿಟ್ಟರು ಅನ್ನುವ ಕಾಲವೊಂದಿತ್ತು. ನರಸಿಂಹರಾವ್ ಗ ಪ್ರಧಾನಿ. ಬಂಗಾರಪ್ಪ ಮುಖ್ಯಮಂತ್ರಿಯಾಗಿ ಇನ್ನೇನು ೖಕಮಾಂಡ್ ವಿರುದ್ಧವೇ ತೊಡೆತಟ್ಟಿದರೆನ್ನುವಾಗಲೇ ೂಯ್ಲಿಗೂ ಮುನ್ನ ಕರ್ನಾಟಕದ ಮುಖ್ಯಮಂತ್ರಿ ಪದವಿಗೆ ೕಳಿಬಂದದ್ದು ಷರೀಫ್ ಸಾಹೇಬರ ಹೆಸರು. ಧರ್ಮಸಿಂಗ್ ಂಥ ಹೇಳಹೆಸರಿಲ್ಲದ ಸಮೂಹದ ನಾಯಕನೊಬ್ಬ ರ್ನಾಟಕದ ಮುಖ್ಯಮಂತ್ರಿಯಾಗಬಹುದಾದರೆ ಜಾಫರ್ ರೀಫ್ ಏಕೆ ಮುಖ್ಯಮಂತ್ರಿಯಾಗಬಾರದು?


ತಪ್ಪಿದ ಸಿಎಂಗಿರಿ

ಆವತ್ತಿನ ಸಾಂಸ್ಕೃತಿಕ ಪರಿಸ್ಥಿತಿ ಈಗಿನಷ್ಟು ಸೂಕ್ಷ್ಮವಾಗಿ ಲಿಲ್ಲ. ಕೇಂದ್ರ ರೈಲ್ವೇ ಮಂತ್ರಿಯಾಗಿ ಕರ್ನಾಟಕದ ಬೇರೆ ಾರೇ ನಾಯಕನೊಬ್ಬ ಸಾಧಿಸಲಾರದಷ್ಟು ರೈಲ್ವೆ ಭಿವೃದ್ಧಿಯನ್ನು ಕರ್ನಾಟಕಕ್ಕೆ ಕಲ್ಪಿಸಿಕೊಟ್ಟ ಷರೀಫ್ ಪಾಲಿಗೆ ತೀ ದೊಡ್ಡ ಕೊರತೆ ಮತ್ತು ನ್ಯೂನತೆಯೆಂದರೆ; ಅವರೊಬ್ಬ ುಸ್ಲಿಂ ಆಗಿದ್ದು!

ಹುಟ್ಟಿನಿಂದ ಮುಸ್ಲಿಂ ಆದ ತಪ್ಪಿಗೆ ಷರೀಫ್ ಪಟ್ಟಪಾಡು, ದುರಿಸಿದ ಸಂಕಷ್ಟಗಳು ಒಂದೆರಡಲ್ಲ. ಮುಂದೆ ಎಸ್.ಎಂ.




ಅಡ್ವಾಣಿ ಜೊತೆ ಷರೀಫ್



ದೇಗೌ. ಕುಮಾರಸ್ವಾಮಿ ಜತೆ ಷರೀಫ್

ೃಷ್ಣ ಇನ್ನೇನು ಮುಖ್ಯಮಂತ್ರಿ ಎನ್ನುವಾಗಲೂ ಕರ್ನಾಟಕದ ಕಾಲದ ಬುದ್ಧಿಜೀವಿಗಳು ಮತ್ತು ಜಾತ್ಯತೀತರ ಮೊದಲ ಯ್ಕೆಯಂತಿದ್ದದ್ದು ಷರೀಫರೇ. ಲಿಂಗಾಯತ, ಒಕ್ಕಲಿಗ, ದಲಿತ, ಕುರುಬ- ಹೀಗೆ ಕರ್ನಾಟಕದ ಯಾವೊಂದು ಲಾಢ್ಯ ಜಾತಿಗೂ ಸೇರದ ಅಲ್ಪಸಂಖ್ಯಾತ ಸಮೂಹದ ಷರೀಫ್ ಕರ್ನಾಟಕದ ಸಾಂಸ್ಕೃತಿಕ ಸೌಹಾರ್ದಕ್ಕಾದರೂ ಮುಖ್ಯಮಂತ್ರಿಯಾಗಬೇಕಿತ್ತು, ಕೃಷ್ಣ, ಮೊಯ್ಲಿ, ಬಂಗಾರಪ್ಪ ಧರ್ಮಸಿಂಗ್ ಮುಂತಾದವರಿಗೆ ಹೋಲಿಸಿದರೆ ಷರೀಫ್ ಆಡಳಿತದಲ್ಲೂ ಅನುಭವಿ ಮತ್ತು ವ್ಯಕ್ತಿತ್ವದಲ್ಲೂ ಸಮರ್ಥರೆ. ಹಾಗಿದ್ದೂ ಜಾತಿಬಲವಿಲ್ಲ, ಆ ಕಾರಣಕ್ಕೇ ಕೋಮುವಾದಿ ರಾಜಕಾರಣದ ಬಲಿಪಶುವಾಗಿಯೇ ಷರೀಫ್ ದುರಂತ ನಾಯಕನಾಗಿ ನರಳುವಂತಾಯ್ತು.

1993 ರಲ್ಲಿ ಕೇಂದ್ರ ರೈಲ್ವೇ ಮಂತ್ರಿಯಾಗಿ ಷರೀಫ್ ಸಾಧನೆಗಳನ್ನು ಗೌರವಿಸಲೆಂದೇ ಚಿತ್ರದುರ್ಗದ ಪುರಭವನದ ಲ್ಲೊಂದು ಸನ್ಮಾನ ಸಮಾರಂಭವೊಂದನ್ನು ಏರ್ಪಡಿಸಲಾಗಿತ್ತು, ಅದಕ್ಕೆ ಷರೀಫರ ರಾಜಕೀಯ ಗುರು ನಿಜಲಿಂಗಪ್ಪನವರದ್ದೇ ಅಧ್ಯಕ್ಷತೆ. ಚಿತ್ರದುರ್ಗದ ಸಮಸ್ತ ರಾಜಕೀಯ ಪಕ್ಷಗಳೂ



ಸೇರಿ ಹಮ್ಮಿಕೊಂಡಿದ್ದ ಆ ಸಮಾರಂಭದಲ್ಲಿ 'ಕರ್ನಾಟಕ ಏಕೀಕರಣದ ಶಿಲ್ಪಿ' ನಿಜಲಿಂಗಪ್ಪನವರು 'ಸ್ವತಂತ್ರ ಭಾರತದ ಇತಿಹಾಸದಲ್ಲಿ ಅದೆಷ್ಟು ಮಂದಿ ಕೇಂದ್ರ ರೈಲ್ವೇ ಮಂತ್ರಿಗಳಾಗಿ ದ್ದಾರೋ ಗೊತ್ತಿಲ್ಲ; ಆದರೆ ಜಾಫರ್ ಷರೀಫರಂಥ ಮಹತ್ವಾಕಾಂಕ್ಷೆ ಮತ್ತು ದೂರದೃಷ್ಟಿಯ ರೈಲ್ವೇ ಮಂತ್ರಿಯನ್ನು ನಾನು ನೋಡೇ ಇಲ್ಲ...' ಎಂದುಬಿಟ್ಟರು!

ನಿಜಲಿಂಗಪ್ಪನವರ ಈ ಮಾತನ್ನು ಉತ್ಪ್ರೇಕ್ಷೆಯೆಂದೇ ಭಾವಿಸಿಕೊಂಡರೂ ಭಾರತದ ರೈಲ್ವೇ ಇತಿಹಾಸ ಷರೀಫರ ಸಾಧನೆಗಳ ಬೇರೆಯದೇ ಅಧ್ಯಾಯವೊಂದನ್ನು ತೆರೆದಿಡುತ್ತದೆ. 1991 ರಿಂದ 1996ರವರೆಗೆ ಕೇಂದ್ರ ರೈಲ್ವೇ ಮಂತ್ರಿಯಾಗಿ ಷರೀಫ್ ಮಾಡಿದ ಅತೀದೊಡ್ಡ ಚಮತ್ಕಾರವೆಂದರೆ ಆತನಕ ಮೀಟರ್‌ಗೇಜ್ ಆಗಿದ್ದ ದೇಶದ ಬಹುತೇಕ ರೈಲು ಮಾರ್ಗಗಳನ್ನು ಯೂನಿಗೇಜ್‌ಗೆ ಪರಿವರ್ತಿಸಿದ್ದು. ಕೇಂದ್ರ ಸರ್ಕಾರದ ತೀವ್ರ ಹಣಕಾಸಿನ ಮುಗ್ಗಟ್ಟಿನ ನಡುವೆಯೂ ಆ ಕಾಲದಿಂದ ರೈಲ್ವೇ ಗೋದಾಮುಗಳಲ್ಲಿ ತುಕ್ಕು ಹಿಡಿಯುತ್ತಾ ಬಿದ್ದಿದ್ದ ಸ್ಕ್ರಾಪುಗಳನ್ನು ಮಾರಿಯೇ 2000 ಕೋಟಿ ರೂಪಾಯಿಗಳನ್ನು ಕಲೆಹಾಕಿ ಅದೇ ದುಡ್ಡನ್ನು ಗೇಜ್ ಪರಿವರ್ತನಾ ಕಾಮಗಾರಿಗೆಂದು ಮೀಸಲಿಟ್ಟರು. ಅದು ಭಾರತೀಯ ರೈಲ್ವೆಯ ಸ್ವರೂಪವನ್ನೇ ಬದಲಿಸಿತು.

ರೈಲ್ವೇ ಪಿತಾಮಹ

ರೈಲ್ವೇ ನೇಮಕಾತಿಯಲ್ಲಿ ಕನ್ನಡಿಗರಿಗೆ ಅನ್ಯಾಯವಾಗುತ್ತಿದ್ದರ ವಿರುದ್ಧ ರಾಜ್‌ಕುಮಾರ್ ಅಭಿಮಾನಿಗಳ ಸಂಘ ಸೇರಿದಂತೆ ರಾಜ್ಯಾದ್ಯಂತ ಕನ್ನಡ ಪರ ಸಂಘಟನೆಗಳು ಬೀದಿಗಿಳಿದಾಗ ಕನ್ನಡಿಗರಿಗೆಂದೇ ಪ್ರತ್ಯೇಕ ರೈಲ್ವೇ ನೇಮಕಾತಿ ಮಂಡಳಿಯನ್ನು ರಚಿಸಿದ್ದೂ ಷರೀಫರ ಕಾಳಜಿಯ ಫಲವೇ. ಕೊಂಕಣ ರೈಲ್ವೆ, ಚಿತ್ರದುರ್ಗ-ರಾಯದುರ್ಗ ರೈಲ್ವೇ ಮಾರ್ಗದ ಸಂಪರ್ಕ ಜೋಡಣೆ, ಕಾರವಾರ-ಹುಬ್ಬಳ್ಳಿ ರೈಲ್ವೇ ಮಾರ್ಗದ ಪರಿಕಲ್ಪನೆ ಮತ್ತು ಕಾಮಗಾರಿಗಳಿಗೆ ಕಾರಣಪುರುಷರಾದ ಷರೀಫ್ ಕರ್ನಾಟಕದ ಮಟ್ಟಿಗೆ ರೈಲ್ವೇ ಪಿತಾಮಹರೇ. ಆದರೆ ಜಾತಿ ಮತ್ತು ಜನಾಂಗದ ಸಮಸ್ಯೆಯಿಂದಾಗಿಯೇ ಅವರ ಸಾಧನೆಗಳಿಗೂ ಮನ್ನಣೆ ಸಿಗಲಿಲ್ಲ.

ಕನ್ನಡಿಗರ ಪಾಲಿಗೆ ಏನೇನೂ ಪ್ರಯೋಜನವಿಲ್ಲದವರಿಗೆ ಜಾತಿಯ ಬಲ. ಬೇರಾರೂ ಮಾಡದಷ್ಟು ಸಾಧಿಸಿ ತೋರಿಸಿದರೂ ಅಲ್ಪಸಂಖ್ಯಾತ ಹಣೆಪಟ್ಟಿಯಿಂದಾಗಿ ಅದ್ಯಾವುದಕ್ಕೂ ಬೆಲೆಯಿಲ್ಲ. ಮೀಡಿಯಾ ಪಕ್ಷಪಾತ ಮತ್ತು ಸಾಂಸ್ಕೃತಿಯ ಕ್ಷೋಭೆಯಿಂದಾಗಿ ಅನ್ಯಾಯಕ್ಕೀಡಾಗುತ್ತಲೇ ಬಂದ ಷರೀಫ್‌ರ ಬದುಕಿನಲ್ಲಿ ಸಂಭವಿಸಿದ ಮೂರು ದುರಂತಗಳೇ ಅವರ ಇವತ್ತಿನ ದುರ್ಗತಿಗೆ ಕಾರಣವಾದವು. ಈ ಪೈಕಿ ಮೊದಲನೆಯದ್ದು ಅವರಿಗೆ ಮುಖ್ಯಮಂತ್ರಿ ಪದವಿ ತಪ್ಪಿದ್ದು, ಎರಡನೆಯದ್ದು ಅವರ ಸಾಂಸಾರಿಕ ಸಮಸ್ಯೆಗಳು ಮತ್ತು ಮೂರನೆಯದು ಕೋಮುವಾದ ಕರ್ನಾಟಕವನ್ನಾವರಿಸಿದ್ದು!

ಪಟೇಲ್ ಸರ್ಕಾರ ಪತನಗೊಂಡು ಇನ್ನೇನು ಕೃಷ್ಣ ಮುಖ್ಯಮಂತ್ರಿಯಾಗುವುದು ಶತಸ್ಸಿದ್ಧ ಎನ್ನುವಾಗಲೇ ಕೇಳಿಬಂದದ್ದು ಷರೀಫ್ ಹೆಸರು. ಆದರೆ ಹೈಕಮಾಂಡಿಗೆ ಇಚ್ಛಾಶಕ್ತಿ ಬೇಕಲ್ಲ, ಅದು ಸಾಂಸ್ಕೃತಿಕವಾಗಿ ಕೋಮುದ್ವೇಷದ ಕಾಲ. ಆ ಹೊತ್ತಿಗಾಗಲೇ ಮಾಧ್ಯಮಗಳು ಪೂರ್ತಿಯಾಗಿ ಆರೆಸ್ಸೆಸ್ ಹಿಡಿತಕ್ಕೆ ಒಳಪಟ್ಟಾಗಿತ್ತು, ಉತ್ತರ ಭಾರತದ ಬಹುತೇಕ ರಾಜ್ಯಗಳಲ್ಲಾಗಲೇ ಸಂಘಪರಿವಾರದ ಪ್ರಭಾವ ಹಬ್ಬಿತ್ತಾದ್ದರಿಂದ ಅಯೋಧ್ಯೆ, ಕರಸೇವೆ, ರಥಯಾತ್ರೆಗಳ ಆರ್ಭಟದಲ್ಲಿ ಷರೀಫ್ ಮುಖ್ಯಮಂತ್ರಿಗಿರಿಯ ಕನಸು ಮಂಕಾಗಿಹೋಯಿತು. ನಿರೀಕ್ಷೆಯಂತೆಯೇ ಕೃಷ್ಣ ಮುಖ್ಯಮಂತ್ರಿಯಾದರು.


ಅದೇ ಹೊತ್ತಿಗೆ ಷರೀಫ್ ಚಿತ್ರವಿಚಿತ್ರ ಸಾಂಸಾರಿಕ ಕ್ಷೋಭೆಗೆ ಸಿಲುಕಿದ್ದು ಅವರ ಮುದ್ದಿನ ಮಗನ ಸಾವಿನಿಂದಾಗಿ. 1999ರ ಜನವರಿ 29ರಂದು ಕಿರಿಯ ಪುತ್ರ ಖಾದರ್ ನವಾಜ್ ಷರೀಫ್ ಕಿಡ್ನಿ ವೈಫಲ್ಯಕ್ಕೀಡಾಗಿ ತನ್ನ 32ನೇ ವಯಸ್ಸಿಗೇ ಅಕಾಲಮರಣಕ್ಕೀಡಾಗಿದ್ದು ಅವರ ಜಂಘಾಬಲವನ್ನೇ ಉಡುಗಿಸಿಬಿಟ್ಟಿತು. ಇದಾಗಿ ಕೆಲವೇ ವರ್ಷಕ್ಕೆ ಅಂದರೆ 2008ರ ಡಿಸೆಂಬರ್ ಹತ್ತರಂದು ಅವರ ಮಡದಿ ಅಮೀನಾ ಕೊನೆಯುಸಿರೆಳೆದರು. ಅದರ ಬೆನ್ನಲ್ಲೇ 2012ರ ಏಪ್ರಿಲ್ 15ರಂದು ಹಿರಿಯ ಪುತ್ರ ಅಬ್ದುಲ್ ಖದೀಮ್ ಕೂಡ ಇಹಲೋಕ ತ್ಯಜಿಸಿಬಿಟ್ಟ. ಇಬ್ಬರು ಗಂಡುಮಕ್ಕಳ ಪೈಕಿ ಇಬ್ಬರೂ ಇಲ್ಲವಾಗಿ ಮೆಚ್ಚಿನ ಮಡದಿಯೂ ಕಣ್ಣು ಮುಚ್ಚಿದ ಮೇಲೆ ಷರೀಫ್ ಬದುಕೇ ಅತಂತ್ರವಾಯಿತು.

ಕೌಟುಂಬಿಕ ದುರಂತ

ಕಾಂಗ್ರೆಸ್-ಜನತಾದಳಗಳ ಸಾಂಪ್ರದಾಯಿಕ ರಾಜಕಾರಣದ ಮಧ್ಯೆ ಧೂಮಕೇತುವಿನಂತೆ ಬಿಜೆಪಿ ತಲೆ ಎತ್ತಿತ್ತು. ಅದು ಓಟ್‌ಬ್ಯಾಂಕ್ ರಾಜಕಾರಣದ ಸಮೀಕರಣವನ್ನೇ ಬದಲಿಸಿತ್ತು. ಮೊದಲ ಬಾರಿಗೆ ಬೆಂಗಳೂರು ಉತ್ತರದಲ್ಲಿ ಸಿ. ನಾರಾಯಣಸ್ವಾಮಿ ವಿರುದ್ಧ ಷರೀಫ್ ತೀರ ಕಮ್ಮಿ ಅಂತರದಿಂದ ಸೋತಾಗಲೇ ಷರೀಫರ ದುರ್ದೆಸೆಗಳೆಲ್ಲ ಸಾಲುಗಟ್ಟಿ ನಿಂತುಬಿಟ್ಟವು. ಪವರ್ ಪಾಲಿಟಿಕ್ಸ್‌ನಲ್ಲಿ ವಯಸ್ಸಾದಂತೆಲ್ಲ ಮಕ್ಕಳು ಅಪ್ಪನ ರಾಜಕೀಯದ ಜಂಜಾಟಗಳನ್ನು ನಿಭಾಯಿಸುವುದುಂಟು. ಆದರೆ ಷರೀಫರಿಗೆ ಕುಟುಂಬದವರೇ ಸಮಸ್ಯೆಯ ಮೂಲವಾದರು. ಆಸ್ತಿ, ಅಂತಸ್ತು, ಪ್ರತಿಷ್ಠೆ, ಅಧಿಕಾರ ಹೆಚ್ಚಿದಂತೆಲ್ಲ ಸುಖದ ಲಾಲಸೆಗಳೇ ರೋಗವಾಗಿ ಕಾಡುತ್ತವೆಯಂತೆ. ಇದಕ್ಕೆ ಷರೀಫ್ ತಾನೇ ಹೇಗೆ ಹೊರತಾಗಲು ಸಾಧ್ಯ?

2004ರ ಚುನಾವಣೆ ಹೊತ್ತಿಗೆ ಬೆಂಗಳೂರಿನ ಲೋಕಸಭಾ ಕ್ಷೇತ್ರಗಳ ರೂಪುರೇಷೆಯೇ ಬದಲಾಯಿತು. ಆ ನಂತರ ಬಿಜೆಪಿಯ ಡಿ.ಬಿ. ಚಂದ್ರೇಗೌಡರ ವಿರುದ್ಧ ಷರೀಫ್ ಸೋತರಾದರೂ ಜೆಡಿಎಸ್‌ನ ಸಿ.ಎಂ. ಇಬ್ರಾಹಿಂ ಸಾಕಷ್ಟು ಮುಸ್ಲಿಂ ಮತಗಳನ್ನು ಕಿತ್ತಿದ್ದೇ ಮುಳುವಾಗಿತ್ತು, ತದನಂತರ ಬೆಂಗಳೂರು ಸೆಂಟ್ರಲ್‌ಗೆ ಬಿಜೆಪಿಯ ಪಿ.ಸಿ. ಮೋಹನ್ ಅಡ್ಡಗಾಲಾಗಿ ಕಾಡತೊಡಗಿದರು. ಕೇಂದ್ರದಲ್ಲಿ ಬಿಜೆಪಿ ದಿನೇದಿನೇ ಪ್ರಾಬಲ್ಯ ಗಳಿಸಿದ್ದು, ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದದ್ದು, ಕೋಮುವಾದಿ ರಾಜಕಾರಣದ ಕೈಯೇ ಮೇಲಾಗಿದ್ದು, ಮುಸ್ಲಿಂ ಮತ ಬುಟ್ಟಿಗೆ ಕಾಂಗ್ರೆಸ್ ಮತ್ತು ಜೆಡಿಎಸ್‌ಗಳ ಮಧ್ಯೆಯೇ ಸೆಣಸಾಟ ಶುರುವಾಗಿದ್ದು ಷರೀಫರ ಅಳಿದುಳಿದ ಅವಕಾಶಗಳನ್ನೂ ಮುಚ್ಚಿಹಾಕಿತು. ನಿರಂತರ ಹದಿನೈದು ವರ್ಷಗಳಿಂದ ಸೋಲಿನ ಮೇಲೆ ಸೋಲು, ಕೈತಪ್ಪಿದ ಕೇಂದ್ರ ಮಂತ್ರಿಗಿರಿ, ಸಿಬಿಐ ಕುಣಿಕೆ ಬೇರೆ, ಗಂಡುಮಕ್ಕಳ ಅಕಾಲ ಮೃತ್ಯು, ಪತ್ನಿಯ ದುರ್ಮರಣ, ಕೋಮುವಾದದ ಆರ್ಭಟ, ಇತ್ಯಾದಿಗಳೆಲ್ಲದರ ಸಂಕೋಲೆಗೆ ಸಿಲುಕಿದ ಷರೀಫ್ ಹೈರಾಣಾಗಿ ಹೋದರು. 2013ರ ಚುನಾವಣೆಯಲ್ಲಿ ಕಾಂಗ್ರೆಸ್ ಭರ್ಜರಿ ಬಹುಮತದಿಂದ ಅಧಿಕಾರಕ್ಕೆ ಬಂದಾಗ ಷರೀಫ್ 'ತಾವು ಕೂಡ ಮುಖ್ಯಮಂತ್ರಿ ಪದವಿಯ ಆಕಾಂಕ್ಷಿ' ಎಂಬ ಕ್ಷೀಣ ಘರ್ಜನೆ ಮೊಳಗಿಸಿದರಾದರೂ ಮಾಧ್ಯಮಗಳ ಕಣ್ಣಿಗದು ಹಾಸ್ಯಾಸ್ಪದವಾಗಿ ಕಂಡಿತ್ತು.


ಅದೇ ಚುನಾವಣೆಯಲ್ಲಿ ಷರೀಫ್ ತಮ್ಮ ಮೊಮ್ಮಗ ರೆಹಮಾನ್ ಷರೀಫ್‌ಗೆ ಹೆಬ್ಬಾಳದ ಟಿಕೆಟ್ ಕೊಡಿಸುವಲ್ಲಿ ಯಶಸ್ವಿಯಾದರಾದರೂ ಗೆಲ್ಲಿಸಲು ಸಾಧ್ಯವಾಗಲೇ ಇಲ್ಲ. ಷರೀಫ್ ಲೋಕಸಭೆಗೆ ನಿಂತಾಗಲೆಲ್ಲ ಒಬ್ಬನಲ್ಲ, ಒಬ್ಬ



ಮುಸ್ಲಿಂ ಅಭ್ಯರ್ಥಿಯನ್ನು ಜೆಡಿಎಸ್ ಕಣಕ್ಕಿಳಿಸಿ ಅಡ್ಡಗಾಲಿಡುತ್ತಿದ್ದದ್ದು ಈ ಬಾರಿ ಮೊಮ್ಮಗನಿಗೂ ವಂಶವಾಹಿಯೆಂಬಂತೆ ವರ್ಗಾವಣೆಗೊಂಡಿತ್ತು, ಜೆಡಿಎಸ್ ಅಭ್ಯರ್ಥಿ ಅಬ್ದುಲ್ ಅಜಿಂ ಬರೋಬ್ಬರಿ 23 ಸಾವಿರದಷ್ಟು ಮುಸ್ಲಿಂ ಮತಗಳನ್ನು ಕಿತ್ತರು. ಐದು ಸಾವಿರದಷ್ಟು ಮತಗಳ ಅಂತರದಿಂದ ರೆಹಮಾನ್ ಷರೀಫ್ ಸೋತ. ಕಟ್ಟಾನ ಚೇಲಾ ಜಗದೀಶ್‌ಕುಮಾರ್ ನಿರಾಯಾಸವಾಗಿ ಗೆದ್ದುಬಿಟ್ಟ. ಅಷ್ಟೆಲ್ಲಾ ಹೋರಾಡಿ ಪಡೆದ 'ಬಿ' ಫಾರಂ ಮೊಮ್ಮಗನ ಪಾಲಿಗೆ ಮುಳುವಾಗಿತ್ತು.

ಮತ್ತೆ ಚಿಗುರಿದ ಕನಸು

ಮೊದಲು ಅಳಿಯ 'ಸೈಯದ್ ಯಾಸೀನ್‌ನನ್ನು ರಾಯಚೂರಿನಿಂದ ಗೆಲ್ಲಿಸಿಕೊಳ್ಳುವ ಮೂಲಕ ತನಗೊಬ್ಬ ಉತ್ತರಾಧಿಕಾರಿ ಸಿಕ್ಕ ಖುಷಿಯಲ್ಲಿ ಷರೀಫ್ ಸಂಭ್ರಮಿಸಿದ್ದುಂಟು. ಅಳಿಯ ಎಷ್ಟೆಂದರೂ ಅಳಿಯನೇ ಹೊರತು ಮೊಮ್ಮಗನಲ್ಲವಲ್ಲ, ಅದೃಷ್ಟವೋ ಅಗ್ನಿಪರೀಕ್ಷೆಯೋ ಗೊತ್ತಿಲ್ಲ; ಇದ್ದಕ್ಕಿದ್ದಂತೆ ಹೆಬ್ಬಾಳದ ಬಿಜೆಪಿ ಶಾಸಕ ಜಗದೀಶ್‌ಕುಮಾರ್ ಅಕಾಲ ಮೃತ್ಯುವಿಗೀಡಾದಾಗ ಸಹಜವಾಗೇ ಷರೀಫ್ ಸಾಹೇಬರ ಸುಪ್ತ ಬಯಕೆಗಳಿಗೆ



ರೆಹಮಾನ್ ಷರೀಫ್

ಜೀವ ಬಂದಿತ್ತು, ಆದರೆ ಭೈರತಿ ಸುರೇಶ್ ಎಂಬ ಬಲಾಢ್ಯನ ರೂಪದಲ್ಲಿ ಅದಕ್ಕೆ ಕುತ್ತು ಕಾದು ಕೂತಿತ್ತು, ಸುರೇಶ್ ಮುಖ್ಯಮಂತ್ರಿಯ ಡಾರ್ಕ್‌ಹಾರ್ಸ್. ಬೆನ್ನಿಗೆ ಕೆ.ಆರ್.ಪುರದ ಶಾಸಕ ಮತ್ತೊಬ್ಬ ಭೈರತಿ. ಒಮ್ಮೆ ಸೋತವನಿಗೆ ಮತ್ತೆ ಟಿಕೆಟ್ ಕೊಡುವುದು ತುಂಬಾ ಕಷ್ಟವೇನಾಗಿರಲಿಲ್ಲ, ಹಾಗಂತ ಮುಖ್ಯಮಂತ್ರಿ ಕೇಳಬೇಕಲ್ಲ!


ಈ ಹಂತದಲ್ಲಿ ಷರೀಫ್ ಎದ್ದು ನಿಂತಿದ್ದಾರೆ. ತಮ್ಮೆಲ್ಲಾ ಹಳೆಯ ಕಾಂಗ್ರೆಸ್ ಗೆಳೆಯರನ್ನು ಕಂಡಿದ್ದೇ ಇದು ನನ್ನ ಬದುಕಿನ ಕೊನೆಯ ಎಲೆಕ್ಷನ್ನು. ಮೊಮ್ಮಗನನ್ನು ಗೆಲ್ಲಿಸಲಾಗದೇ ಹೋದರೆ ಇಷ್ಟು ವರ್ಷ ನಾನು ಕಾಂಗ್ರೆಸಿನಲ್ಲಿದ್ದು ಫಲವೇನು? ದೇವೇಗೌಡರ ಕೈಹಿಡಿಯದೇ ನನಗೆ ಬೇರೆ ದಾರಿಯೇ ಇಲ್ಲವೆಂಬುದನ್ನೂ ಹೈಕಮಾಂಡಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಬೆಂಗಳೂರಿನಿಂದ ದೆಹಲಿ, ಅಲ್ಲಿಂದ ಮತ್ತೆ ಬೆಂಗಳೂರು, ಇಲ್ಲಿ ಸಿಎಂ ಸಿದ್ದು ಮನೆಬಾಗಿಲು ಕಾದದ್ದೇನು, ಅಲ್ಲಿಂದ ಖರ್ಗೆ ಮನೆಯೇನು, ಮೊಯ್ಲಿ, ಆಸ್ಕರ್, ರಾಜಶೇಖರನ್- ಹೀಗೆ ತಮಗಿಂತಲೂ ಕಿರಿಯ ತೂಕದಲ್ಲಿ ಹಿರಿಯರಾದ ಕಾಂಗ್ರೆಸ್ ದೈತ್ಯರ ಮನೆಬಾಗಿಲು ತಟ್ಟಿದ್ದೇ ತಟ್ಟಿದ್ದು. ಷರೀಫರಂಥ ಹಿರಿಯ ನಾಯಕನೊಬ್ಬನಿಗೆ ಈ ಗತಿ ಬರಬಾರದಿತ್ತೆಂದು ಕಾಂಗ್ರೆಸ್ ಕಚೇರಿಯಲ್ಲೇ ತಲೆ ಚಚ್ಚಿಕೊಂಡರು. ಮೊಮ್ಮಗ ರೆಹಮಾನ್ ಷರೀಫ್‌ಗೆ ಮುಖ್ಯಮಂತ್ರಿಯ ಮರ್ಜಿಗೆ ವಿರುದ್ಧವಾಗೇ ಹೈಕಮಾಂಡ್ ಕೈಹಿಡಿದಿದೆ. ಅವರದ್ದೇ ಸರ್ಕಾರವಿದೆ. ಅಧಿಕಾರವಿದೆ, ಎಲ್ಲವೂ ಸರಿಯೇ.

ಆದರೆ ಕೊಟ್ಟ ದೇವರೇ ಬರೆಯಿಟ್ಟಂತೆ ಅವರ ಹಳೇಕಾಲದ ಗೆಳೆಯ ದೇವೇಗೌಡರೇ ಬಗಲ್‌ಮೇ ದುಷ್ಮನ್ ರೂಪದಲ್ಲಿ ಗೂಟ ಇಕ್ಕಿದ್ದಾರೆ. ಈ ಬಾರಿಯೂ ಜೆಡಿಎಸ್ ಮುಸ್ಲಿಂ ಅಭ್ಯರ್ಥಿಯನ್ನೇ ಹಾಕಿದೆ. ಅದು ಬಿಜೆಪಿಯ ಲಾಭಕ್ಕಾಗಿ ದೇವೇಗೌಡರು ಇಟ್ಟ ಬತ್ತಿಯೋ, ಸಿದ್ದು ಕತೆ ಮುಗಿಸಲೆಂದು ಜೆಡಿಎಸ್ ಮಸೆದ ಕತ್ತಿಯೋ ಬಲ್ಲವರ್‍ಯಾರು?

ಪಾಪ ಷರೀಫ್ ಪಾಲಿನ ದುರಂತಗಳಿಗೆ ಸದ್ಯಕ್ಕಂತೂ ಮುಕ್ತಿ ಕಾಣಿಸುತ್ತಿಲ್ಲ.

■ ರಾ. ಸೋಮನಾಥ್

ಕೊಡಗು: ಕಾಂಗ್ರೆಸನ್ನು ದೇವರಿಂದಲೂ ರಕ್ಷಿಸಲು ಸಾಧ್ಯವಿಲ್ಲ



ವಿಶ್ವನಾಥ್

ಜಿಲ್ಲಾ ಪಂಚಾಯತಿ ಮತ್ತು ತಾಲೂಕು ಪಂಚಾಯತಿ ಚುನಾವಣೆಗೆ ಅಖಾಡ ಸಿದ್ಧವಾಗುತ್ತಿದ್ದು ಕೊಡಗು ಜಿಲ್ಲೆ 2ನೇ ಹಂತದ ಚುನಾವಣೆಯ ಪಟ್ಟಿಯಲ್ಲಿ ಬರುತ್ತದೆ. ಈಗಾಗಲೇ ನಾಮಪತ್ರ ಸಲ್ಲಿಕೆಯ ಕಾರ್ಯಾರಂಭ ಆಗಿದ್ದರೆ, ಕೊಡಗು ಜಿಲ್ಲೆಯ ಮಟ್ಟಿಗೆ ಸಂಪೂರ್ಣ ಸಿದ್ಧತೆಯನ್ನು ಮಾಡಿಕೊಂಡು, ಅಧಿಕೃತ ಅಭ್ಯರ್ಥಿಗಳು ಯಾರು ಎಂಬುದನ್ನು ಅಂತಿಮಗೊಳಿಸಿರುವುದು ಭಾರತೀಯ ಜನತಾ ಪಕ್ಷ ಮಾತ್ರ. ರಾಷ್ಟ್ರೀಯ ಪಕ್ಷ ಎಂದು ಕರೆಸಿಕೊಳ್ಳುವ ಕಾಂಗ್ರೆಸ್ ಪಕ್ಷ ಇನ್ನೂ ತನ್ನ ಅಭ್ಯರ್ಥಿಗಳನ್ನು ಅಂತಿಮಗೊಳಿಸಲು ಸಾಧ್ಯವಾಗದೇ ಹೆಣಗಾಡುತ್ತಿದೆ. ಜಾತ್ಯತೀತ ಜನತಾದಳಕ್ಕೆ ನೆಲೆ ಇಲ್ಲದಿದ್ದರೂ ಕೂಡ ಪಕ್ಷ ಉತ್ಸಾಹದಿಂದ ಚುನಾವಣೆಗೆ ಸಜ್ಜಾಗುತ್ತಿದೆ. ಈಗ ದಳದಲ್ಲಿ ಬಿ.ಎ. ಜೀವಿಜಯ ಮಾತ್ರ ಗುರುತಿಸಿಕೊಳ್ಳುತ್ತಿದ್ದು ಈಗಷ್ಟೇ ವಿಧಾನ ಪರಿಷತ್ ಚುನಾವಣೆಯಲ್ಲಿ ಹೀನಾಯವಾಗಿ ಸೋತಿದ್ದರೂ, ಪಕ್ಷದ ಕಾರ್ಯಾಧ್ಯಕ್ಷರಾಗಿರುವ ಸಂಕೇತ್ ಪೂವಯ್ಯ ಉತ್ಸಾಹದಿಂದ ಚಟುವಟಿಕೆ ನಡೆಸುತ್ತಿದ್ದಾರೆ. ಇನ್ನುಳಿದಂತೆ ಸಿ.ಪಿ.ಐ.(ಎಂ) ಪಕ್ಷ ಈ ಬಗ್ಗೆ ಅಧಿಕೃತವಾಗಿ ಏನನ್ನೂ ಮಾಡುತ್ತಿಲ್ಲ. ಎಸ್.ಡಿ.ಪಿ.ಐ.ನವರು ವಿಚಿತ್ರವಾದ ಸನ್ನಿವೇಶದಲ್ಲಿ ಸಿಲುಕಿಕೊಂಡಿದ್ದಾರೆ. ತಮ್ಮ ಪಕ್ಷದವರನ್ನು ಟಿಪ್ಪು ಜನ್ಮದಿನಾಚರಣೆಯ ವೇಳೆಯಲ್ಲಿ ಪೊಲೀಸ್ ಇಲಾಖೆಯವರು ಅನಾವಶ್ಯಕವಾಗಿ ಸಿಲುಕಿಸಿದಾಗ ಅವರ ಬೆಂಬಲಕ್ಕೆ ಬಂದದ್ದು ಜಾತ್ಯತೀತ ಒಕ್ಕೂಟವಾಗಿತ್ತು. ಹಾಗಾಗಿ ಅಲ್ಲಿ ಎ.ಕೆ. ಸುಬ್ಬಯ್ಯನವರು ಸಕ್ರಿಯವಾಗಿ ಇರುವುದರಿಂದ ಮತ್ತು ಟಿಪ್ಪು ಗಲಭೆಯ ಸಂದರ್ಭದಲ್ಲಿ ತಮ್ಮ ರಕ್ಷಣೆಗೆ ಸುಬ್ಬಯ್ಯನವರೇ ನಿಂತಿದ್ದರಿಂದ ಯಾವ ನಿಲುವು ತೆಗೆದುಕೊಳ್ಳಬೇಕು ಎಂಬುದನ್ನು ಅವರು ತೀರ್ಮಾನಿಸಿಲ್ಲ.

29 ಸ್ಥಾನಗಳ ಜಿಲ್ಲಾ ಪಂಚಾಯತಿಯಲ್ಲಿ ಒಂದು ಕಾಲದಲ್ಲಿ ಕಾಂಗ್ರೆಸಿನ ಆಡಳಿತವೇ ಇತ್ತು. ದುರ್ಬಲ ನಾಯಕತ್ವದ ಫಲವಾಗಿ ನಿರ್ಗಮಿತ ಸದಸ್ಯರುಗಳಲ್ಲಿ ಕೇವಲ 6 ಮಂದಿ ಕಾಂಗ್ರೆಸಿಗರಿದ್ದು, ಈ ಪೈಕಿ ಕನಿಷ್ಠ 4 ಮಂದಿ ಕಮಲ ಕಾಂಗ್ರೆಸಿಗರಾಗಿದ್ದರು. ಆಡಳಿತ ಪಕ್ಷವಾಗಿ ಇದ್ದ ಬಿಜೆಪಿ ಕಾಂಗ್ರೆಸಿಗರನ್ನು ಕ್ಯಾರೇ ಅನ್ನುತ್ತಿರಲಿಲ್ಲ. ಅಷ್ಟೊಂದು ದೈತ್ಯ ಬಹುಮತ ಅವರಿಗೆ ಇತ್ತು. ಆದರೂ ಅವರಿಗೆ ತಲೆನೋವು ಆಗಿದದ್ದು ಸರಿತಾ ಪೂಣಚ್ಚ ಎಂಬ ಮಹಿಳೆ. ಅವರು ಪ್ರತಿ ಜಿಲ್ಲಾ ಪಂಚಾಯತ್ ಸಭೆಯಲ್ಲಿಯೂ ಆಡಳಿತ ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸುತ್ತಿದ್ದರು. ಜಿಲ್ಲಾ ಪಂಚಾಯತಿಯ ಆಡಳಿತ ನಡೆಸುವವರ ಭ್ರಷ್ಟಾಚಾರ, ದೌರ್ಬಲ್ಯ, ಅಧಿಕಾರ ದುರುಪಯೋಗ ಮುಂತಾದವುಗಳನ್ನು ಎಳೆಎಳೆಯಾಗಿ ಸಭೆಯಲ್ಲಿ ಬಿಚ್ಚಿಡುತ್ತಿದ್ದರು. ಅವಕಾಶ ಸಿಕ್ಕಾಗಲೆಲ್ಲಾ ಬಿಜೆಪಿ ಸದಸ್ಯರನ್ನು ಚುಚ್ಚುವ ಕಾರ್ಯವನ್ನು ಮಾಡುತ್ತಿದ್ದರು. ಶಾಸಕರುಗಳನ್ನು ಏಕಾಂಗಿಯಾಗಿಯೇ ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ಆದರೆ ಅವರಿಗೆ ಸಭೆಯಲ್ಲಿ ಅವರ ಪಕ್ಷದ ಸದಸ್ಯರಾಗಲಿ, ಹೊರಗೆ ಪಕ್ಷವಾಗಲಿ ಬೆಂಬಲಕ್ಕೆ ನಿಲ್ಲುತ್ತಿರಲಿಲ್ಲ. ಹೀಗಾಗಿ ಕೊಡಗಿನಲ್ಲಿ ಕಾಂಗ್ರೆಸ್ ಬೆಳೆಯಲೇ ಇಲ್ಲ, ಬಿಜೆಪಿ ಸೊರಗಲೂ ಇಲ್ಲ.

ಕೆಲವು ದಿನಗಳ ಹಿಂದಷ್ಟೇ ನಡೆದ ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಸುಲಭವಾಗಿ ಗೆಲ್ಲಬಲ್ಲ ಸ್ಥಾನವನ್ನು ಕೈಚೆಲ್ಲಿಕೊಂಡು ಕುಳಿತಿದೆ. ಇದರ ಪರಿಣಾಮವಾಗಿ ಜಿಲ್ಲೆಯಲ್ಲಿ ಸಂಸದರು, ವಿಧಾನ ಪರಿಷತ್ ಸದಸ್ಯರು, ಶಾಸಕರು, ಜಿಲ್ಲಾ ಪಂಚಾಯತಿ ಮತ್ತು ತಾಲೂಕು ಪಂಚಾಯತಿ ಎಲ್ಲವೂ ಬಿಜೆಪಿ ಮಯವಾಗಿದೆ. ಈ ಗೆಲುವಿನ ಉತ್ಸಾಹದಿಂದ ಬಿಜೆಪಿ ಮತ್ತೆ ಜಿಲ್ಲಾ ಪಂಚಾಯತಿ ಮತ್ತು ತಾಲೂಕು ಪಂಚಾಯತಿಯಲ್ಲಿ ಬಹುಮತವನ್ನು ಸಾಧಿಸಿ, ಅಧಿಕಾರದ ಗದ್ದುಗೆಗೆ ಏರುವ ರಣೋತ್ಸಾಹದಲ್ಲಿ ಇದೆ. ಆದರೆ ಕಾಂಗ್ರೆಸ್ ಪಕ್ಷ ಮಾತ್ರ ರಣಹೇಡಿಯಂತೆ ವರ್ತಿಸುತ್ತಿದೆ. ಆಡಳಿತ ಪಕ್ಷವಾಗಿ ಕಾಂಗ್ರೆಸ್ ಪಕ್ಷ ಕೊಡಗು ಜಿಲ್ಲೆಯಲ್ಲಿ ಏನನ್ನೂ ಮಾಡಲಿಲ್ಲ. ಜನಸಾಮಾನ್ಯರು ಸರ್ಕಾರಿ ಕಚೇರಿಗೆ ದಿನನಿತ್ಯ ಅಲೆದಾಡುವ ಪರಿಸ್ಥಿತಿ ಬದಲಾಗಲಿಲ್ಲ. ಆಡಳಿತಕ್ಕೆ ಚುರುಕು ನೀಡುವುದಾಗಲಿ, ಆಡಳಿತದಲ್ಲಿ ಬದಲಾವಣೆ ತರುವುದನ್ನಾಗಲಿ ಕಾಂಗ್ರೆಸ್ ಪಕ್ಷ ಮಾಡಲೇ ಇಲ್ಲ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಬಿ.ಟಿ.ಪ್ರದೀಪ್ ಮತ್ತು ಸೋಮವಾರಪೇಟೆ ಬ್ಲಾಕ್ ಅಧ್ಯಕ್ಷರಾಗಿದ್ದ ಲೋಕೇಶ್‌ರವರು ಕಾಂಗ್ರೆಸ್ ಪಕ್ಷವನ್ನು ತಮ್ಮ ಆಸ್ತಿ ಎನ್ನುವಂತೆ ನಡೆದುಕೊಂಡು, ಅಧಿಕಾರಿಗಳ ವರ್ಗಾವಣೆ ಮತ್ತು ತಮಗೆ ಬೇಕಾದವರನ್ನು ನಾಮಕರಣ ಮಾಡುವುದು, ಜೊತೆಗೆ ತೀರಾ ವಿಚಿತ್ರ ಎನ್ನುವಂತೆ ತಮ್ಮ ಸಂಬಂಧಿಕರಿಗೆ ರಾಜ್ಯೋತ್ಸವ ಪ್ರಶಸ್ತಿಯನ್ನು ಕೊಡಿಸುವುದನ್ನು ಬಿಟ್ಟು ಬೇರೇನೂ ಮಾಡಿಲ್ಲ. ಜಿಲ್ಲೆಯಲ್ಲಿ ಬಿಜೆಪಿ ಶಾಸಕರ ದೌರ್ಬಲ್ಯವನ್ನು ಎತ್ತಿ ತೋರಿಸಲಿಲ್ಲ. ಆಡಳಿತ ಕುಸಿದರೆ ಜನರ ಸಿಟ್ಟು ಆಡಳಿತ ಪಕ್ಷದ ವಿರುದ್ಧ ಇರುತ್ತದೆ ಎಂಬ ಅರಿವು ಅವರು ಬಿಜೆಪಿಗರಿಗೆ ಇದೆ.


ಬಿಜೆಪಿಯಲ್ಲಿ ಪಕ್ಷಕ್ಕೆ ಇಕ್ಕಟ್ಟಿನ ಸ್ಥಿತಿ ಇರುವುದು. ಜಿಲ್ಲಾ ಬಿಜೆಪಿ ಅಧ್ಯಕ್ಷರಾದ ಸುಜಾ ಕುಶಾಲಪ್ಪನವರ ಪುತ್ರ ಶಶಾಂಕ್ ಭೀಮಯ್ಯರವರಿಗೆ ಸ್ಪರ್ಧಿಸಲು ಅವಕಾಶ ನೀಡಿದ್ದು, ಕೊಡಗು ಜಿಲ್ಲೆಯಲ್ಲಿ ಬಿಜೆಪಿ ಕುಟುಂಬ ರಾಜಕಾರಣ ಮಾಡುತ್ತಿದೆ ಎಂಬ ಆರೋಪವನ್ನು ಬಿಜೆಪಿಯ ಕಾರ್ಯಕರ್ತರೇ ಮಾಡುತ್ತಾರೆ. ಏಕೆಂದರೆ ಇಲ್ಲಿ ಜಿಲ್ಲಾಧ್ಯಕ್ಷ, ಮಡಿಕೇರಿ ಶಾಸಕ ಅಪ್ಪಚ್ಚು ರಂಜನ್ ಹಾಗೂ ಈಗಷ್ಟೇ ಆಯ್ಕೆಗೊಂಡ ವಿಧಾನ ಪರಿಷತ್ ಸದಸ್ಯ ಸುನಿಲ್ ಸುಬ್ರಹ್ಮಣಿ ಸಹೋದರರು. ಮತ್ತೆ ಜಿಲ್ಲಾ ಪಂಚಾಯತಿಯ ಸ್ಥಾನವನ್ನೂ ಅವರಿಗೇ ನೀಡುವುದರ ಬಗ್ಗೆ ಆಕ್ಷೇಪಗಳು ಕೇಳಿಬಂದಿದ್ದರೂ ಅವರನ್ನು ಎದುರಿಸಿ ನಿಲ್ಲುವ ಶಕ್ತಿಯಾಗಲಿ, ಸದ್ದು ಹೊಡೆಯಲು ತಾಕತ್ತಾಗಲಿ ವಿರೋಧಿಸುತ್ತಿರುವವರಿಗೆ ಇಲ್ಲ. ಹಾಗಾಗಿ ಇದನ್ನು ಬರೆಯುವ ವೇಳೆಗೆ ಅಂತಿಮ ಚಿತ್ರಣ ಸಿಗದಿದ್ದರೂ, ಬಹುತೇಕ ಉಳಿದ ಎಲ್ಲಾ 28 ಸ್ಥಾನಗಳಿಗೂ ಅಭ್ಯರ್ಥಿಗಳ ಆಯ್ಕೆ ಅನಧಿಕೃತವಾಗಿ ಪ್ರಕಟವಾಗಿ, ಅವರುಗಳು ಪ್ರಚಾರ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ. ಬಿಜೆಪಿ ಅಳೆದುತೂಗಿ ಗೆಲ್ಲುವ ಅಭ್ಯರ್ಥಿಗಳಿಗೆ ಅವಕಾಶ ಮಾಡಿಕೊಟ್ಟಿದೆ.



ಬಿ.ಟಿ. ಪ್ರದೀಪ್


ಇನ್ನು ಕಾಂಗ್ರೆಸಿನದ್ದು ವಿಚಿತ್ರವಾದ ಪರಿಸ್ಥಿತಿ. ಕಾಂಗ್ರೆಸಿಗೆ ಜಿಲ್ಲಾ ಅಧ್ಯಕ್ಷರು ಎಂಬುದೇ ಇಲ್ಲವಾಗಿ, ಅಸಂವಿಧಾನಿಕವಾಗಿ ಟಿ.ಪಿ.ರಮೇಶ್‌ರವರು ಜಿಲ್ಲಾ ಕಾಂಗ್ರೆಸಿನ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದನ್ನು ಯಾರೂ ಪ್ರಶ್ನಿಸದೆ ಇರುವ ಕಾರಣ ಹಾಗೆ ಮುಂದುವರೆದುಕೊಂಡು ಹೋಗುತ್ತಿದೆ. ಟಿಪ್ಪು ಜನ್ಮ ದಿನಾಚರಣೆಯ ವೇಳೆಯಲ್ಲಿ ಸರಿಯಾಗಿ ಕಾರ್ಯ ನಿರ್ವಹಿಸಲಿಲ್ಲ ಎನ್ನುವ ಕಾರಣಕ್ಕೆ ಕೆ.ಪಿ.ಸಿ.ಸಿ. ಅವರನ್ನು ಪದಚ್ಯುತಗೊಳಿಸಿತ್ತು. ಅಧಿಕಾರವನ್ನು ಉಪಾಧ್ಯಕ್ಷರಿಗೆ ನಿಯಮ ಪ್ರಕಾರ ಹಸ್ತಾಂತರಿಸಬೇಕು. ಆದರೆ ಬಿ.ಟಿ.ಪ್ರದೀಪ್ ಕೆ.ಪಿ.ಸಿ.ಸಿ. ಸದಸ್ಯ ಟಿ.ಪಿ.ರಮೇಶ್ ಅವರಿಗೆ ಅಧಿಕಾರವನ್ನು ಹಸ್ತಾಂತರಿಸಿದ್ದಾರೆ. ಟಿಪ್ಪು ಜನ್ಮ ದಿನಾಚರಣೆ ವಿಚಾರವಾಗಿ ಕೊಡಗಿನಲ್ಲಿ ಕಾಂಗ್ರೆಸ್ ಅತ್ಯಂತ ದುರ್ಬಲವಾಗಿ ಇದೆ. ಆಡಳಿತ ಪಕ್ಷದ ಅಧಿಕೃತ ಕಾರ್ಯಕ್ರಮವಾಗಿದ್ದ ಟಿಪ್ಪು ಜನ್ಮ ದಿನಾಚರಣೆಯಲ್ಲಿ ಕಾಂಗ್ರೆಸ್ ಪಕ್ಷ ಭಾಗವಹಿಸದೆ ತಟಸ್ಥವಾಗಿ ಉಳಿದಿದ್ದರಿಂದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಅಲ್ಪಸಂಖ್ಯಾತರ ಆಕ್ರೋಶಕ್ಕೆ ಒಳಗಾಗಿದೆ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಬಿ.ಟಿ. ಪ್ರದೀಪ್‌ರವರು ತಮ್ಮ ಕುಟುಂಬದವರನ್ನು ಟಿಪ್ಪು ಸುಲ್ತಾನ್ ಮತಾಂತರ ಮಾಡಿದ್ದ ಎಂದು ಹೇಳಿಕೊಂಡು ಕಾರ್ಯಕ್ರಮದಲ್ಲಿ ಭಾಗವಹಿಸಲಿಲ್ಲ ಮಾತ್ರವಲ್ಲ ಪಕ್ಷ ಕೂಡ ಭಾಗವಹಿಸದಂತೆ ನೋಡಿಕೊಂಡು ಬಿಜೆಪಿ ಮೇಲುಗೈ ಸಾಧಿಸಲು ಕಾರಣರಾದರು. ಈ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಜಿಲ್ಲಾ ಆಡಳಿತವು ಎಲ್ಲಾ ಜಮಾಯತ್‌ಗಳಿಗೆ ಅಧಿಕೃತ ಪತ್ರವನ್ನು ಬರೆದಿತ್ತು. ಅದೇ ಸಂದರ್ಭದಲ್ಲಿ ಜಿಲ್ಲೆಯ ಬಿಜೆಪಿ ಶಾಸಕರು ಹಾಗೂ ಸಂಸದರು ತಮ್ಮ ಅಭಿಪ್ರಾಯ ವ್ಯತ್ಯಾಸಗಳ ನಡುವೆ ಏಕ ವೇದಿಕೆಯಲ್ಲಿ ಕಾಣಿಸಿಕೊಂಡು, ಟಿಪ್ಪು ಜನ್ಮ ದಿನಾಚರಣೆಯನ್ನು ಆಚರಿಸಲು ಬಿಡುವುದಿಲ್ಲ ಎಂದು ಘೋಷಿಸಿದ್ದರು.


ಸರಕಾರಿ ಕಾರ್ಯಕ್ರಮವನ್ನು ಆಚರಿಸಲು ಬಿಡುವುದಿಲ್ಲ ಎಂದು ಬಿಜೆಪಿ, ಸಂಘ ಪರಿವಾರ ಮತ್ತು ಚುನಾಯಿತ ಪ್ರತಿನಿಧಿಗಳು ಘೋಷಿಸಿದಾಗ, ಆಡಳಿತ ಪಕ್ಷ ಅದನ್ನು ಸವಾಲಾಗಿ ತೆಗೆದುಕೊಂಡು, ಸರಕಾರಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಮುಂದಾಗಬೇಕಾಗಿತ್ತು. ಹಾಗೆ ಮಾಡದೆ ಮನೆಯಲ್ಲೇ ಕುಳಿತುಕೊಳ್ಳುವ ಮೂಲಕ ಪರೋಕ್ಷವಾಗಿ ಬಿಜೆಪಿಗೆ ಬೆಂಬಲ ನೀಡಿದರು. ಜಮಾಯತ್‌ಗಳಿಗೆ ಪತ್ರ ಬಂದಿದ್ದರೂ ಅಲ್ಪಸಂಖ್ಯಾತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ನಿರೀಕ್ಷೆ ಇರಲಿಲ್ಲ. ಇದು ಮತ್ತೊಂದು ಸರಕಾರಿ ಕಾರ್ಯಕ್ರಮವಾಗಿ ಮುಗಿಯುತ್ತಿತ್ತು. ಆದರೆ ಕಾರ್ಯಕ್ರಮ ನಡೆಸಲು ಬಿಡುವುದಿಲ್ಲ ಎಂದು ಹೇಳಿದ್ದರಿಂದ ಎಲ್ಲಾ ಕಡೆಯಿಂದ ಜನರು ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಬಂದಿದ್ದರು. ಅವರ ಮೇಲೆ ಬಿಜೆಪಿ ಕಾರ್ಯಕರ್ತರಿಂದಲೂ, ಪೊಲೀಸರಿಂದಲೂ ಹಲ್ಲೆಗಳು ಆಯಿತು. ಮೊಕದ್ದಮೆಗಳೂ ದಾಖಲಾದವು. ಬಂಧನವೂ ಆಯಿತು. ಎರಡು ಸಾವೂ ಕೂಡ ಎರಡೂ ಕಡೆಯಲ್ಲಿ ಆಯಿತು. ತಮ್ಮನ್ನು ಸರಕಾರವೇ ಕಾರ್ಯಕ್ರಮ ನಡೆಸಲು ಆಹ್ವಾನಿಸಿ, ತಮ್ಮ ಮೇಲೆ ಪೊಲೀಸರು ಹಲ್ಲೆ ಮಾಡಿದರೂ ಮತ್ತು ಮೊಕದ್ದಮೆ ಗಳನ್ನು ದಾಖಲಿಸಿ ಬಂಧನಕ್ಕೆ ಒಳಪಡಿಸಿದರು ಎಂಬ ಆಕ್ರೋಶವನ್ನು ಅಲ್ಪಸಂಖ್ಯಾತ ವರ್ಗದವರು ವ್ಯಕ್ತಪಡಿಸಿ ದರು. ಕಾಂಗ್ರೆಸ್ ಪಕ್ಷ ಅವರ ನೋವನ್ನು ಆಲಿಸಲೇ ಇಲ್ಲ.

ಅವರ ಆಕ್ರಂದನವನ್ನು ಕೇಳುವವರು ಇಲ್ಲ ಎಂದಾದಾಗ ಎ.ಕೆ. ಸುಬ್ಬಯ್ಯನವರು ಅಖಾಡಕ್ಕೆ ಇಳಿದು ಸಮಾನ ಮನಸ್ಕರ ಜಾತ್ಯತೀತ ಒಕ್ಕೂಟವನ್ನು ರಚಿಸಿ, ಅಲ್ಪಸಂಖ್ಯಾತ ವರ್ಗದ ವರನ್ನು ಮತ್ತು ಕಾರ್ಯಕ್ರಮವನ್ನು ಬೆಂಬಲಿಸಿದ ಬಹಳಷ್ಟು ಮಂದಿ ಸಮಾನ ಮನಸ್ಕರನ್ನು ರಕ್ಷಿಸಲು ಮುಂದಾದರು. ಅವರಿಗೆ ಬೆಂಬಲವಾಗಿ ನಿಂತವರು ವಿ.ಪಿ. ಶಶಿಧರ್ ಮತ್ತು ಸರಿತಾ ಪೂಣಚ್ಚ. ಕಾಂಗ್ರೆಸಿಗರು ಮಾಡಬೇಕಾಗಿದ್ದ ಕಾರ್ಯವನ್ನು ಈ ಒಕ್ಕೂಟ ಮಾಡಿತ್ತು. ಹಾಗಾಗಿ ಆ ವರ್ಗದ ಜನರು ಕಾಂಗ್ರೆಸಿನ ಬಗ್ಗೆ ವಿಶ್ವಾಸವನ್ನು ಕಳೆದು ಕೊಂಡು, ಜಾತ್ಯತೀತ ಒಕ್ಕೂಟದ ಬೆಂಬಲಕ್ಕೆ ನಿಂತರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಬಿ.ಟಿ.ಪ್ರದೀಪ್‌ರವರ ವಿರುದ್ಧ ಉಸ್ತುವಾರಿ ಸಚಿವ ಮತ್ತು ಕೆ.ಪಿ.ಸಿ.ಸಿ. ಅಧ್ಯಕ್ಷರ ಮುಂದೆ ದಿಕ್ಕಾರ ಕೂಗಿದರು. ತಮ್ಮನ್ನು ರಕ್ಷಿಸಬಲ್ಲವರನ್ನು ಬೆಂಬಲಿಸಬೇಕು ಎಂಬ ನಿರ್ಧಾರಕ್ಕೆ ಅವರುಗಳು ಬಂದಿದ್ದರು. ಹಾಗಾಗಿ ಸುಬ್ಬಯ್ಯನವರು "ಕಾಂಗ್ರೆಸ್ ಪಕ್ಷವು ಜಾತ್ಯತೀತ ಮೌಲ್ಯಗಳನ್ನು ಎತ್ತಿ ಹಿಡಿಯುವವರಿಗೆ ಸ್ಪರ್ಧಿಸಲು ಅವಕಾಶ ನೀಡಬೇಕು. ಟಿಪ್ಪು ಜನ್ಮ ದಿನಾಚರಣೆಯ ವೇಳೆಯಲ್ಲಿ ಅದನ್ನು ವಿರೋಧಿಸಿದ ಕಾಂಗ್ರೆಸಿಗರಿಗೆ ಟಿಕೆಟು ನೀಡುವ ಬದಲು, ಬೆಂಬಲಿಸಿದ ಕಾಂಗ್ರೆಸಿಗರಿಗೆ ಮಾತ್ರ ಟಿಕೆಟು ನೀಡಬೇಕು. ಹಾಗೆ ಒಂದು ವೇಳೆ ಮಾಡದಿದ್ದರೆ ಸಮಾನ ಮನಸ್ಕರ ಜಾತ್ಯತೀತ ಒಕ್ಕೂಟವು ತನ್ನದೇ ಆದ ತೀರ್ಮಾನಕ್ಕೆ ಬರಬೇಕಾಗುತ್ತದೆ" ಎಂಬ ಎಚ್ಚರಿಕೆಯನ್ನು ಕೂಡ ನೀಡಿದ್ದರು.


ಟಿ.ಪಿ.ರಮೇಶ್



ಸರಿತಾ ಪೂಣಚ್ಚ



ಶಶಾಂಕ್


ವಿ.ಪಿ. ಶಶಿಧರ್

ಇಕ್ಕಟ್ಟಿಗೆ ದಿನೇಶ್ ಗುಂಡೂರಾವ್

ಕೊಡಗು ಕಾಂಗ್ರೆಸಿನ ವಿದ್ಯಮಾನಗಳೆಲ್ಲವನ್ನೂ ನಿಭಾಯಿಸುತ್ತಿದ್ದ ಮಾಜಿ ಸಂಸದ ವಿಶ್ವನಾಥ್‌ರವರು ಅಸೌಖ್ಯದಿಂದ ಇದ್ದ ಕಾರಣ ಹೊಸದಾಗಿ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾಗಿ ನೇಮಕಗೊಂಡ ದಿನೇಶ್ ಗುಂಡೂರಾವ್ ಮೇಲೆ ಪಕ್ಷದ ಜವಾಬ್ದಾರಿ ಬಿದ್ದಿತ್ತು. ಟಿಪ್ಪು ಗಲಭೆ ಮುಗಿಯುತ್ತಿದ್ದಂತೆಯೇ ಅವರು ಉಸ್ತುವಾರಿ ಸಚಿವರಾಗಿ ನೇಮಕಗೊಂಡಿದ್ದರು. ಆರಂಭದಲ್ಲಿ ಅತ್ಯಂತ ಉತ್ಸಾಹದಿಂದ ಪಕ್ಷಕ್ಕೆ ನವಚೈತನ್ಯ ನೀಡುವ ರೀತಿಯಲ್ಲಿ ಅವರು ಚಟುವಟಿಕೆಗಳನ್ನು ನಡೆಸಿದರು. ಅತ್ಯಂತ ಸಾಮಾನ್ಯ ಕಾರ್ಯಕರ್ತನ ಜೊತೆಯಲ್ಲಿಯೂ ಮಾತನಾಡುವ ಸೌಜನ್ಯವನ್ನು ಅವರು ತೋರಿದ್ದರು. ಜನರಲ್ಲೂ ಭರವ ಮೂಡಿಸಿದ್ದರು.


ಎ.ಕೆ. ಸುಬ್ಬಯ್ಯ


ದಿನೇಶ್ ಗುಂಡೂರಾವ್

ಆದರೆ ಕೊಡಗಿನ ಮಟ್ಟಿಗೆ ಕಾಂಗ್ರೆಸ್ ಸಂಸ್ಕೃತಿ ಎಂಬುದು ಇದೆ. ಅದೇನೆಂದರೆ ಯಾವುದೇ ಶಾಸಕರಿರಲಿ, ಸಂಸದರಿರ ಅಥವ ಸಚಿವರೇ ಇರಲಿ. ಅವರು ಸುಲಭವಾ ಜನಸಾಮಾನ್ಯರಿಗೆ ಸಿಗಬಾರದು ಎಂಬುದು ಈ ಸಂಸ್ಕೃ ಗುಂಡೂ ರಾವ್ ಮುಖ್ಯಮಂತ್ರಿಯಾಗಿದ್ದಾಗ ಅವರ ಸು ಒಂದು ಕೋಟೆ ಇತ್ತು, ಆ ಕೋಟೆಯನ್ನು ಬೇಧಿ ಪಕ್ಷದ ಕಾರ್ಯಕರ್ತರಾಗಲಿ, ಸಮಸ್ಯೆಗಳನ್ನು ಹೊತ್ತುಕೊಂಡ ಜನಸಾಮಾನ್ಯರಾಗಲಿ ಅವರನ್ನು ಭೇಟಿಯಾಗಲು ಸಾಧ್ಯವಾಗುತ್ತಿರಲಿಲ್ಲ. ಆದರ ಪರಿಣಾಮವಾಗಿ ಅವರಿ ಹೊರ ಜಗತ್ತಿನಲ್ಲಿ ಏನು ಆಗುತ್ತಿದೆ ಎಂಬುದು ತಿಳಿಯ ಅವರು ಮುಖ್ಯಮಂತ್ರಿಯಾಗಿಯೂ ಚುನಾವಣೆಯಲ್ಲಿ ಸೋಲಬೇಕಾಯಿತು. ಅದೇ ಶಕ್ತಿಗಳು ಈಗಲೂ ದಿನೇಶ್ ಗುಂಡೂರಾವ್ ಸುತ್ತ ಗಿರಕಿ ಹೊಡೆಯುತ್ತಿದ್ದು ಅವರನ್ನು ಮೂಲೆಗುಂಪು ಮಾಡಲು ಹೊರಟಿದೆ. ಇದು ದಿನೇಶ್ ಗುಂಡೂರಾವ್‌ಗೆ ತಿಳಿಯುತ್ತಿಲ್ಲ. ಅವರ ತಾಳಕ್ಕೆ ತಕ್ಕಂ ದಿನೇಶ್ ಗುಂಡೂರಾವ್ ಹೆಜ್ಜೆ ಹಾಕುತ್ತಿದ್ದಾರೆ. ಇವರ ಬಹುತೇಕರು ಹಗಲು ಕಾಂಗ್ರೆಸ್- ರಾತ್ರಿ ಬಿಜೆಪಿ. ಹಾಗಾ ಇವರನ್ನು ಕಮಲ ಕಾಂಗ್ರೆಸಿಗರು ಎಂದು ಕರೆಯುತ್ತಾರೆ.

ಸುಬ್ಬಯ್ಯನವರ ಹೇಳಿಕೆಯನ್ನು ಅರ್ಥೈಸಿಕೊಂಡು ಅವರೊಂದಿಗೆ ಚರ್ಚಿಸುವ ಬದಲು, ಕಾಂಗ್ರೆಸಿನ ವಿಚಾರದಲ್ಲಿ ಸುಬ್ಬಯ್ಯನವರು ಮೂಗುತೂರಿಸುವುದು ಬೇಡ ಎನ್ನುವುದರ ಜೊತೆಗೆ, ಅವರು ತೃತೀಯ ರಂಗವನ್ನು ಕಣಕ್ಕೆ ಇಳಿಸುವ ದಾದರೆ ತನ್ನ ಅಭ್ಯಂತರವಿಲ್ಲ ಎಂದು ಎನ್.ಓ.ಸಿ.ಯನ್ನು ಕೂಡ ನೀಡಿದರು. ಇದು ದಿನೇಶ್ ಗುಂಡೂರಾವ್ ಖಂಡಿತವಾಗಿಯೂ ತನ್ನ ಸ್ವಇಚ್ಛೆಯಿಂದ ನೀಡಿದ ಹೇಳಿಕೆಯಲ್ಲ. ಏಕೆಂದರೆ ಚುನಾವಣೆಯ ಬಗ್ಗೆ ಅಭಿಪ್ರಾಯ ಸಂಗ್ರಹಿಸಲು ವೀಕ್ಷಕರು ಬಂದಿದ್ದ ವೇಳೆಯಲ್ಲಿ ವೀಕ್ಷಕರ ಬಳಿ ಸುಬ್ಬಯ್ಯನವರ ಬಗ್ಗೆ ಪುಕಾರು ನೀಡಲು ವ್ಯವಸ್ಥಿತ ಸಂಚನ್ನು ಮಾಡಲಾಗಿತ್ತು. ಆಗ ಅಲ್ಲಿ ಉಪಸ್ಥಿತರಿದ್ದ ದಿನೇಶ್ ಗುಂಡೂರಾವ್ "ಸುಬ್ಬಯ್ಯನವರ ಬಗ್ಗೆ ಏನೂ ಮಾತನಾಡುವುದು ಬೇಡ. ನಿಮ್ಮ ಅಹವಾಲು ಜಿಲ್ಲಾ ಪಂಚಾಯತಿಗೆ ಮತ್ತು ತಾಲೂಕು ಪಂಚಾಯತಿಗೆ ಇದ್ದರೆ ಮಾತ್ರ ಹೇಳಿ. ಸುಬ್ಬಯ್ಯನವರ ಬಗ್ಗೆ ಮಾತನಾಡುವಷ್ಟು ದೊಡ್ಡವರು ನಾವಲ್ಲ" ಎಂದು ಹಲವರಿಗೆ ಬುದ್ಧಿಮಾತು ಹೇಳಿದ್ದರು. ತನ್ನ ಬೇಜವಾಬ್ದಾರಿ ಮತ್ತು ಅಸಹಾಯಕತೆಯಿಂದ ಕಾಂಗ್ರೆಸನ್ನು ಹೀನಾಯಸ್ಥಿತಿಗೆ ತಲುಪಿಸಿ, ಅಧ್ಯಕ್ಷಗಾದಿಯನ್ನು ಕಳೆದುಕೊಂಡ ಬಿ.ಟಿ. ಪ್ರದೀಪ್ ಕಾಂಗ್ರೆಸನ್ನು ಪ್ರಪಾತಕ್ಕೆ ಇಳಿಸಲು ಸಜ್ಜಾಗಿದ್ದಾರೆ. ತನ್ನ ಅಧ್ಯಕ್ಷಗಾದಿಗೆ ಸಂಚಕಾರ ಬಂದಿದ್ದೇ ಸುಬ್ಬಯ್ಯನವರ ನೇತೃತ್ವದಲ್ಲಿ ರಚನೆಗೊಂಡ ಜಾತ್ಯತೀತ ಒಕ್ಕೂಟದ ಒತ್ತಡದಿಂದ ಎಂಬ ಭ್ರಮೆಯಲ್ಲಿ ಇರುವಂತಹ ಬಿ.ಟಿ.ಪ್ರದೀಪ್ ಮತ್ತು ಅವರ ತಂಡ, ದಿನೇಶ್ ಗುಂಡೂರಾವ್ ಅವರಿಗೆ "ಸುಬ್ಬಯ್ಯನವರ ಹೇಳಿಕೆಯ ವಿರುದ್ಧ ನೀವು ಹೇಳಿಕೆ ನೀಡದಿದ್ದರೆ ನಮಗೆ ಪಕ್ಷದಲ್ಲಿ ಕಷ್ಟವಾಗುತ್ತದೆ" ಎಂದು ಹೇಳಿ, ತಮ್ಮ ಮಾತನ್ನು ದಿನೇಶ್ ಗುಂಡೂರಾವ್ ಬಾಯಿಗೆ ತುರುಕಿದ್ದರು. ಹಾಗಾಗಿ ಅವರು ಇಂತಹ ಹೇಳಿಕೆ ನೀಡಿದ್ದರು.

ಸೋಲುವ ಅಭ್ಯರ್ಥಿಗಳ ಹುಡುಕಾಟದಲ್ಲಿ ಕಾಂಗ್ರೆಸ್

ಬಿಜೆಪಿ 1 ಸ್ಥಾನದ ಗೊಂದಲವನ್ನು ಹೊರತುಪಡಿಸಿ, ಉಳಿದ ಎಲ್ಲಾ ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ, ಗೆಲ್ಲಬಲ್ಲ ಅಥವ ಪೈಪೋಟಿ ನೀಡಬಲ್ಲ ಅಭ್ಯರ್ಥಿಗಳನ್ನು ಗುರುತಿಸಿ, ಅವರಿಗೆ ಅವಕಾಶವನ್ನು ನೀಡಿದೆ. ರಾಜ್ಯದಲ್ಲಿ ಅಧಿಕಾರದಲ್ಲಿ ಕಾಂಗ್ರೆಸ್ ಪಕ್ಷ ಇರುವುದರಿಂದ, ಕಾಂಗ್ರೆಸ್ ಪಕ್ಷ ಚುನಾವಣೆಯನ್ನು ಸವಾಲಾಗಿ ತೆಗೆದುಕೊಳ್ಳಬೇಕಿತ್ತು. ಆದರೆ ಅತ್ಯಂತ ಕೆಟ್ಟ ನಾಯಕತ್ವದ ಕೈಯಲ್ಲಿ ಕಾಂಗ್ರೆಸ್ ಪಕ್ಷ ಇದ್ದ ಮತ್ತು ಇರುವ ಕಾರಣ,

ರವಾಗಿ ಸೋಲುತ್ತಾ ಬಂದಿದೆ.

ಈ ಸೋಲು ಕಾಂಗ್ರೆಸಿಗರಿಗೆ ಪಾಠವನ್ನು ಬೇಕಾಗಿತ್ತು ಆದರೆ ಅವರು ಪಾಠ ಕಲಿಯುವ ಬದಲು ಸ್ ಪಕ್ಷದಲ್ಲಿ ತಮ್ಮ ಎದುರಾಳಿಗಳು ಅಥವ ತಮಗೆ ೋಟಿ ನೀಡಬಲ್ಲವರು ಯಾರು ಎಂಬುದನ್ನು ಪಟ್ಟಿ . ಅವರು ಗೆಲ್ಲುವ ಸಾಮರ್ಥ್ಯ ಉಳ್ಳವರಾಗಿದ್ದರೂ ಗೆ ಟಿಕೆಟು ಸಿಗದಂತೆ ನೋಡಿಕೊಳ್ಳುವ ಪ್ರಯತ್ನವನ್ನು ದ್ದಾರೆ. ಅಧಿಕಾರದ ಗದ್ದುಗೆಯನ್ನು ಹಿಡಿಯುವುದು ರಲಿ, ಹಾಲಿ ಇರುವ 6 ಸ್ಥಾನಗಳನ್ನು ಕೂಡ ಸಿಕೊಳ್ಳಬಲ್ಲ ಸಾಮರ್ಥ್ಯ ಇರುವವರಿಗೆ ಟಿಕೆಟು ಲು ಹಿಂದೇಟು ಹಾಕುತ್ತಿದೆ.

ಇದಕ್ಕೆ ಉದಾಹರಣೆ ಜಿಲ್ಲೆಯ ಸಿದ್ದಾಪುರ ಕ್ಷೇತ್ರ ಾನ್ಯ ಮಹಿಳೆಗೆ ಮೀಸಲಿರುವ ಕ್ಷೇತ್ರ. ಅಲ್ಲಿ ಂಖ್ಯಾತರು ಮತ್ತು ಹಿಂದುಳಿದವರು ಅಧಿಕ ಸಂಖ್ಯೆಯಲ್ಲಿ ದಾರರಾಗಿದ್ದಾರೆ. ಅಲ್ಲಿಯ ಜನತೆ ಹಾಲಿ ಸದಸ್ಯೆಯಾಗಿ ಮತ್ತು ಬಿಜೆಪಿಗೆ ಸಿಂಹಸ್ವಪ್ನವಾಗಿ ಕಾಡುವ ಸರಿತಾ ಾಚ್ಚರವರನ್ನು ಅಭ್ಯರ್ಥಿಯನ್ನಾಗಿಸಬೇಕು ಎಂದು ರಂಗವಾಗಿ ಕಾಂಗ್ರೆಸ್ ನಾಯಕತ್ವಕ್ಕೆ ಒತ್ತಡ ಹೇರಿದರೂ . ವಿಧಾನಸಭಾ ಚುನಾವಣೆಯಲ್ಲಿ ತನ್ನ ಗೆಲುವಿಗೆ ಪೂಣಚ್ಚ ಪ್ರಯತ್ನಿಸಲಿಲ್ಲ ಎಂಬ ಆರೋಪವನ್ನು ಮತ್ತಿದ್ದ ಬಿ.ಟಿ. ಪ್ರದೀಪ್ ಈಗ ಅಡ್ಡಗಾಲು ಹಾಕುತ್ತಿ . ಯಾವುದೇ ಕಾರಣಕ್ಕೂ ಸರಿತಾ ಪೂಣಚ್ಚರವರಿಗೆ ಸ್ಪರ್ಧಿಸಲು ಅವಕಾಶ ನೀಡುವುದಿಲ್ಲ ಎಂದು ಜಿದ್ದಿಗೆ ತೆ ವರ್ತಿಸುತ್ತಾ, ಹಾಲಿ ಆ ಕ್ಷೇತ್ರದ ಸದಸ್ಯರಾಗಿರುವ ಎಸ್. ವೆಂಕಟೇಶ್‌ರವರ ಪತ್ನಿ ಆಶಾ ವೆಂಕಟೇಶ್‌ರವರಿಗೆ, ಟೇಶ್‌ರವರ ಪತ್ನಿ ಎಂಬ ನೆಲೆಯಲ್ಲಿ ಮಾತ್ರ ಅರ್ಹತೆ ವ ಮತ್ತು ಕಾಂಗ್ರೆಸಿನಲ್ಲಿ ಎಂದೂ ಗುರುತಿಸಿಕೊಳ್ಳದ ಳೆಗೆ ಟಿಕೆಟು ನೀಡಬೇಕು ಎಂದು ಒತ್ತಡವನ್ನು ುತ್ತಿದ್ದಾರೆ. ಕಾಂಗ್ರೆಸ್ ಪಕ್ಷ ನಿರ್ನಾಮ ವಾದರೂ ಯಿಲ್ಲ, ತನ್ನ ಹಠ ಮಾತ್ರ ಈಡೇರಬೇಕು ಎನ್ನುವಂತೆ ಪ್ ವರ್ತಿಸುತ್ತಿದ್ದು ಅದಕ್ಕೆ ಡಿಫ್ಯಾಕ್ಟೋ ಅಧ್ಯಕ್ಷ ಟಿ.ಪಿ. ೇಶ್ ಬೆಂಬಲ ನೀಡುತ್ತಿದ್ದಾರೆ.

ಇದು ಅಲ್ಪಸಂಖ್ಯಾತರ ಆಕ್ರೋಶಕ್ಕೆ ಕಾರಣವಾಗಿದೆ. ು ವೇಳೆ ಸರಿತಾರವರಿಗೆ ಟಿಕೆಟು ನೀಡಲು ನಿರಾಕರಿಸಿ ಕೊಡಗಿನಾದ್ಯಂತ ಇರುವ ಅಲ್ಪಸಂಖ್ಯಾತರು ಕಾಂಗ್ರೆಸ್ ದ್ಧ ಮತ ಚಲಾಯಿಸುವ ಅಪಾಯವಿದೆ. ಹೇಗೋ ಶ್ ಗುಂಡೂರಾವ್ ಎ.ಕೆ. ಸುಬ್ಬಯ್ಯನವರ ಬಗ್ಗೆ ತ ಲಘುವಾಗಿ ಮಾತನಾಡಿರುವುದರಿಂದ ಖಂಡಿತವಾಗಿ ಅವರ ಬೆಂಬಲಕ್ಕೆ ಸುಬ್ಬಯ್ಯನವರು ನಿಲ್ಲಲಿಕ್ಕಿಲ್ಲ. ಿಂದಾಗಿ ಬಿಜೆಪಿಗೆ ಗೆಲುವು ಮತ್ತಷ್ಟು ಸುಲಭವಾಗುತ್ತದೆ. ೕ ರೀತಿ ಜಾತ್ಯತೀತ ಮನೋಭಾವದ ಮತ್ತು ಎರಡು ಜಿಲ್ಲಾ ಪಂಚಾಯತ್ ಸದಸ್ಯರಾಗಿ ಆಡಳಿತ ುವವರಿಗೆ ಸಿಂಹ ಸ್ವಪ್ನವಾಗಿ, ಜಿಲ್ಲಾ ಪಂಚಾಯತಿಯಲ್ಲಿ ದೇ ಛಾಪನ್ನು ಬೀರಿದ್ದ ವಿ.ಪಿ. ಶಶಿಧರ್ ಅವರು ುಸಿದ ಸ್ಥಳದಲ್ಲಿ ಸ್ಪರ್ಧಿಸಲು ಅವಕಾಶ ನೀಡದೆ ಾಸಿಯನ್ನು ಮಾಡುತ್ತಿದೆ. ಅವರ ವಿರುದ್ಧ ಕಮಲ ಗ್ರೆಸಿನ ಪ್ರಮುಖರು ಬಂಡಾಯವೆದ್ದು, ಕೊನೆಗಳಿಗೆಯಲ್ಲಿ ು ನೀಡಿದರೂ ಸೋಲಿಸುವ ಎಲ್ಲಾ ತಂತ್ರಗಾರಿಕೆಯನ್ನು ಡುತ್ತಿದ್ದಾರೆ. ಕಾಂಗ್ರೆಸ್ ಪಕ್ಷವನ್ನು ಈ ಚುನಾವಣೆಯಲ್ಲಿ ಗಿಸಲೇಬೇಕು ಎಂದು ಬಿಜೆಪಿಯವರು ಪಣತೊಟ್ಟಿರ ಲ್ಲ, ಆದರೆ ಸ್ವತಃ ಕಾಂಗ್ರೆಸಿಗರು ಇಂತಹ ಪಣವನ್ನು ಟ್ಟಿದ್ದಾರೆ. ಇದರಿಂದಾಗಿ ಯಾವುದೇ ಪ್ರತಿರೋಧವಿಲ್ಲದೆ ಳಿತ ಬಿಜೆಪಿ ಕೈಗೆ ಮತ್ತೆ ಮರಳುತ್ತದೆ. ಕಾಂಗ್ರೆಸಿನ 6ಕ್ಕೆ ಏರಲಿಲ್ಲ, 3ಕ್ಕೆ ಇಳಿಯಲಿಲ್ಲ ಎನ್ನುವಂತಾಗುವ ಾಯವಿದೆ. ಕೋಮುಶಕ್ತಿಗಳು ವಿಜೃಂಭಿಸಲು ಕಾಂಗ್ರೆಸ್ ೇ ಆದ ಕೊಡುಗೆಯನ್ನು ಈ ರೀತಿ ನೀಡುವ ಮೂಲಕ, ಗ್ರೆಸ್ ಪಕ್ಷವನ್ನು ನಿರ್ನಾಮ ಮಾಡಲು ಹೊರಟಿದೆ. ಾಗಿ ಕಾಂಗ್ರೆಸ್ ಪಕ್ಷವನ್ನು ಕೊಡಗಿನ ಮಟ್ಟಿಗೆ ಯಾವ ವರಿಂದಲೂ ರಕ್ಷಿಸಲು ಸಾಧ್ಯವಾಗಲಿಕ್ಕಿಲ್ಲ.

ಈ ವರದಿಯನ್ನು ಅಂತಿಮಗೊಳಿಸುವ ವೇಳೆಗೆ ಜಿಲ್ಲಾ ಗ್ರೆಸಿನಲ್ಲಿರುವ ಅಲ್ಪಸಂಖ್ಯಾತ ವರ್ಗದವರು ತಮ್ಮ ಮಾಧಾನವನ್ನು ವ್ಯಕ್ತಪಡಿಸಿ ಕಾಂಗ್ರೆಸಿಗೆ ರಾಜಿನಾಮೆ , ಪತ್ರಿಕಾಗೋಷ್ಠಿಯನ್ನು ನಡೆಸಿದ್ದಾರೆ. ಕಾಂಗ್ರೆಸಿನ ಯಿಂದ ಅಲ್ಪಸಂಖ್ಯಾತ ವರ್ಗದವರು ಮಾತ್ರವಲ್ಲ, ಳಷ್ಟು ಮಂದಿ ನೊಂದಿದ್ದಾರೆ. ಕಾಂಗ್ರೆಸ್ ಪಕ್ಷವನ್ನು ಪಿತ್ರಾರ್ಜಿತ ಆಸ್ತಿ ಎನ್ನುವಂತೆ ಜಿಲ್ಲೆಯ ಕಾಂಗ್ರೆಸಿನ ವ ಕೆಲವರು ಭಾವಿಸಿರುವುದರಿಂದ ಈ ಪರಿಸ್ಥಿತಿ . ನಾಮಪತ್ರ ಸಲ್ಲಿಸುವುದರೊಳಗೆ ಬದಲಾವಣೆಗಳು ತ್ತದೋ ತಿಳಿಯದು.

ಸುಬ್ಬಯ್ಯನವರ ಬೆಂಬಲ ಬೇಡ ಎಂದು ಕೆಲವರ ಲಕ ಹೇಳಿಕೆಗಳನ್ನು ನೀಡಿಸುವ ಕಾರ್ಯವನ್ನು ಗ್ರೆಸಿಗರು ಮಾಡುತ್ತಿದ್ದು, ಅವರಿಗೆ ಅಗತ್ಯವಿಲ್ಲದ ಮೇಲೆ, ೕಕೆ ತಲೆಕೆಡಿಸಿಕೊಳ್ಳಬೇಕು ಎಂದು ಸುಬ್ಬಯ್ಯ ಸಪಡಿಸಿದ್ದಾರೆ. ಜಿಲ್ಲೆಯ ಕಾಂಗ್ರೆಸ್ ಹಿರಿಯರ ಪ್ರಕಾರ, ಇರುವವರ ಕೈಯಿಂದ ಕಾಂಗ್ರೆಸ್ಸನ್ನು ಪಾರುಮಾಡಬೇಕು ಾದರೆ, ಜಿಲ್ಲಾ ಪಂಚಾಯತಿಯಲ್ಲಿ ಕಾಂಗ್ರೆಸ್ ಸೋತು ಮವಾಗಿ, ಹೊಸದಾಗಿ ಪಕ್ಷ ಕಟ್ಟಬೇಕು. ಇಲ್ಲದಿದ್ದರೆ ು ಕಾಂಗ್ರೆಸಿನ ಸಮಾಧಿಯನ್ನು ಮಾಡುತ್ತಾರೆ.

■ ಬಿ.ಎನ್. ಮನು ಶೆಣೈ

ಮಂಡ್ಯ: ಹೊಸ ಎಸ್ಪಿ ಹೊಡೆತಕ್ಕೆ ದಂಧೆಗಳು ಥಂಡಾ

ಬಂದ ಒಂದು ತಿಂಗಳಲ್ಲೇ ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುಧೀರ್‌ಕುಮಾರ್ ರೆಡ್ಡಿ ಭಾರೀ ಸಂಚಲನವನ್ನೇ ಸೃಷ್ಟಿಸಿದ್ದಾರೆ. ಅವರ ಖಡಕ್ ಹೊಡೆತಕ್ಕೆ ಜಿಲ್ಲೆಯ ಅಕ್ರಮ ಮರಳು ದಂಧೆ ಸಂಪೂರ್ಣ ಗಪ್‌ಚುಪ್ ಆಗಿದೆ. ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ನಾಯಿಕೊಡೆಗಳಂತೆ ತಲೆ ಎತ್ತಿದ್ದ ಇಸ್ಪೀಟ್ ಕ್ಲಬ್‌ಗಳು ಬಾಗಿಲೆಳೆದುಕೊಂಡಿವೆ. ಲೈಸೆನ್ಸ್ ನವೀಕರಣ ಮಾಡಿಲ್ಲದ ಕಾರಣಕ್ಕಾಗಿ ಮಂಡ್ಯದ ಶ್ರೀಮಂತರು ಕಾಲ ಕಳೆಯುವ ಕ್ಲಬ್‌ಗಳನ್ನೇ ಮುಲಾಜಿಲ್ಲದೆ ಮುಚ್ಚಿಸಿದ್ದಾರೆ. ಇನ್ನು ಇಲಾಖೆಯ ಭ್ರಷ್ಟ ಮತ್ತು ಕರ್ತವ್ಯಲೋಪ ಅಧಿಕಾರಿ, ಸಿಬ್ಬಂದಿಗಳನ್ನು ವಜಾ ಮಾಡುವ ಮೂಲಕ ಅವರ ಹಣೆಯಲ್ಲಿ ಬೆವರು ಕಿತ್ತುಕೊಳ್ಳುವಂತೆ ಮಾಡಿದ್ದಾರೆ. "ಠಾಣಾ ವ್ಯಾಪ್ತಿಯಲ್ಲಿ ಅಕ್ರಮವಾಗಿ ಏನೇ ನಡೆದರೂ ಅದನ್ನು ತಡೆಗಟ್ಟುವ ಪ್ರಯತ್ನ ಮಾಡದಿದ್ದರೆ ಅಕ್ರಮ ದಂಧೆಕೋರರ ಜೊತೆ ನೀವೂ ಶಾಮೀಲಾಗಿದ್ದೀರಿ ಅಂತ ಕ್ರಮ ಕೈಗೊಳ್ಳಬೇಕಾಗುತ್ತೆ" ಅಂತ ಅವರು ರವಾನಿಸಿರುವ ಎಚ್ಚರಿಕೆಯೇ ಖಾಕಿ ಅಧಿಕಾರಿಗಳಲ್ಲಿ ಢವಢವ ಶುರು ಮಾಡಿಸಿದೆ.

ಅಕ್ರಮ ಮರಳುಗಾರಿಕೆ ಬಂದ್

ಮದ್ದೂರು, ಕೆ.ಆರ್.ಪೇಟೆ ಸೇರಿದಂತೆ ಇಡೀ ಜಿಲ್ಲೆಯಲ್ಲೇ ಮರಳು ಗಣಿಗಾರಿಕೆಗೆ ಅವಕಾಶವಿಲ್ಲ, ಅದರಲ್ಲೂ ಮದ್ದೂರು ತಾಲ್ಲೂಕಿನಲ್ಲಿ ಶಿಂಷಾ ನದಿ ಪಾತ್ರದಲ್ಲಿ ಮರಳು ತೆಗೆಯದಂತೆ ಸರ್ಕಾರವೇ ನಿರ್ಬಂಧ ವಿಧಿಸಿದೆ. ಆದಾಗ್ಯೂ ಸರ್ಕಾರದ ನಿರ್ಬಂಧವನ್ನೇ ಉಲ್ಲಂಘಿಸಿ ಅಕ್ರಮವಾಗಿ ಮರಳುಗಾರಿಕೆ ನಡೆಯುತ್ತಲೇ ಇತ್ತು. ಇದು ಪೊಲೀಸರಿಗೆ ಗೊತ್ತಿದ್ದರೂ ತಮ್ಮ ಪಾಲಿನ ಪ್ರಸಾದ ಸ್ವೀಕರಿಸಿ ತೆಪ್ಪಗಿರುತ್ತಿದ್ದರು. ಹಾಗಂತ ಹಿಂದಿದ್ದ ಎಸ್ಪಿ ಭೂಷಣ್ ಬೊರಸೆ ಭ್ರಷ್ಟರೇನಲ್ಲ, ಆದರೆ ಇಲಾಖೆ ಅಧಿಕಾರಿಗಳ ಮೇಲೆ ಹಿಡಿತವಿಟ್ಟುಕೊಂಡಿರಲಿಲ್ಲ, ಹಾಗಾಗಿ ಅಧಿಕಾರಿಗಳು ಮರಳು ದಂಧೆಕೋರರೊಟ್ಟಿಗೆ ಶಾಮೀಲಾಗಿದ್ದರು. ಪ್ರತಿ ಮಧ್ಯರಾತ್ರಿ 12 ಗಂಟೆಯಿಂದ ಮುಂಜಾನೆ 4 ಗಂಟೆಯವರೆಗೆ ಹತ್ತಾರು ಲಾರಿಗಳು ಬೆಂಗಳೂರು ತಲುಪುತ್ತಿದ್ದವು.

ಆದರೆ ಸುಧೀರ್ ಕುಮಾರ್‌ರೆಡ್ಡಿಯವರ ಆಗಮನದಿಂದ ಅವರೆಲ್ಲ ಥಂಡಾ ಹೊಡೆದಿದ್ದಾರೆ. ಮದ್ದೂರಿನ ಕೊಪ್ಪ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಅಕ್ರಮ ಮರಳು ಸಾಗಣೆ ನಡೆಯುವ ಬಗ್ಗೆ ಸ್ಥಳೀಯ ನಿವಾಸಿಯೊಬ್ಬ ಎಸ್ಪಿ ಸುಧೀರ್‌ಕುಮಾರ್ ರೆಡ್ಡಿ ಗಮನಕ್ಕೆ ತಂದಿದ್ದರು. ಕೂಡಲೇ ಅಲರ್ಟ್ ಆದ ಎಸ್ಪಿ ಕೊಪ್ಪ ಠಾಣೆಯ ಎಸ್‌ಐ ವೆಂಕಟೇಶ್, ಮದ್ದೂರು ಪಟ್ಟಣ ಠಾಣೆ ಸಿಪಿಐ ಪ್ರಸಾದ್, ಎಸ್‌ಐ ವೆಂಕಟೇಗೌಡ ಗಮನಕ್ಕೂ ತಂದು ಎಚ್ಚರಿಕೆ ರವಾನಿಸಿದ್ದರು. ಆದರೂ ಅಕ್ರಮ ಮರಳುಗಾರಿಕೆ ಅವ್ಯಾಹತವಾಗಿ ಮುಂದುವರಿದೇ ಇತ್ತು.

ಈಗ್ಗೆ ಎರಡು ವಾರದ ಹಿಂದಷ್ಟೆ ಅಕ್ರಮ ಮರಳುಲಾರಿ ಸಾಗುತ್ತಿರುವ ಬಗ್ಗೆ ಸಾರ್ವಜನಿಕರೊಬ್ಬರು ಎಸ್ಪಿಗೆ ಮಾಹಿತಿ ನೀಡಿದ್ದರು. ಆ ಮುಂಜಾನೆ ನಾಲ್ಕು ಗಂಟೆ ವೇಳೆಗೆ ಸ್ವತಃ ಎಸ್ಪಿ ಸುಧೀರ್‌ಕುಮಾರ್ ರೆಡ್ಡಿಯೇ ಮದ್ದೂರಿಗೆ ತೆರಳಿ ಅಕ್ರಮ ಮರಳು ಸಾಗಣೆ ಮಾಡುತ್ತಿದ್ದ ಎರಡು ಲಾರಿಗಳನ್ನು ಹಿಡಿದು ಜಪ್ತಿ ಮಾಡಿದ್ದರು. ಕೂಡಲೇ ಅಕ್ರಮ ಮರಳುಗಾರಿಕೆ ದಂಧೆಯಲ್ಲಿ ನೀವು ಶಾಮಿಲಾಗಿದ್ದೀರೆಂದು ಕೊಪ್ಪ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ವೆಂಕಟೇಶ್ ಮತ್ತು ಪೇದೆ ಸಿದ್ದರಾಜುನನ್ನು ಅಮಾನತು ಮಾಡಿದ್ದರು. ಇಷ್ಟೇ ಅಲ್ಲ, ತಾಲ್ಲೂಕಿನಲ್ಲಿ ವ್ಯಾಪಕವಾಗಿ ಅಕ್ರಮ ಮರಳುದಂಧೆ ನಡೆಯುತ್ತಿದ್ದರೂ ತಡೆಗಟ್ಟುವಲ್ಲಿ ನಿರ್ಲಕ್ಷ್ಯ ವಹಿಸಿದ್ದೀರೆಂದು ಸರ್ಕಲ್ ಇನ್ಸ್‌ಪೆಕ್ಟರ್ ಪ್ರಸಾದ್ ಹಾಗೂ ಸಬ್‌ಇನ್ಸ್‌ಪೆಕ್ಟರ್ ವೆಂಕಟೇಗೌಡರಿಗೂ ಕಾರಣ ಕೇಳಿ ನೋಟಿಸ್ ಜಾರಿ ಮಾಡಿದ್ದಾರೆ.

ಹಾಗೆಯೇ ಕೆ.ಆರ್.ಪೇಟೆ ತಾಲ್ಲೂಕಿನಲ್ಲಿ ಹೇಮಾವತಿ ನದಿ ಪಾತ್ರದಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆ ಮೇಲೆ ಈ ಹಿಂದೆ ಎಸಿ ನಾಗರಾಜು ಖುದ್ದಾಗಿ ರೈಡ್ ಮಾಡಿ ಅಕ್ರಮ ಮರಳನ್ನು ವಶಪಡಿಸಿಕೊಂಡು ದಂಧೆಕೋರರನ್ನು ಪೊಲೀಸರಿಗೆ ಒಪ್ಪಿಸಿದ್ದರು. ಕಾಂಗ್ರೆಸ್ ಪಕ್ಷದ ಪ್ರಭಾವಿ ಮಾಜಿ ಶಾಸಕರೊಬ್ಬರ ಪುತ್ರರತ್ನನೇ ಅಕ್ರಮ ಮರಳು ದಂಧೆಯ ಪಿತಾಮಹನಾಗಿದ್ದಾನೆಂಬ ಮಾತುಗಳು ಕೇಳಿಬರುತ್ತಿದ್ದು, ಹೊಸ ಎಸ್ಪಿ ಸುಧೀರ್‌ಕುಮಾರ್ ರೆಡ್ಡಿಯವರು ಅವನ ಕೈಗೂ ತೋಳ ಬಗಿಯುತ್ತಾರಾ ಅಂತ ಕೆ.ಆರ್.ಪೇಟೆಯ ಮಂದಿ ಕಾಯುತ್ತಿದ್ದಾರೆ.

ಸುಧೀರ್ ಕುಮಾರ್ ಅದೆಂತಹ ಕಟ್ಟುನಿಟ್ಟಿನ ಅಧಿಕಾರಿಯೆಂದರೆ ಮಹಿಳಾ ಪೇದೆಗಳೊಂದಿಗೆ ಅನುಚಿತವಾಗಿ ವರ್ತಿಸಿದರೆಂಬ ಕಾರಣಕ್ಕೆ ಶಿವಳ್ಳಿ ಠಾಣೆಯ ನಂಜುಂಡಸ್ವಾಮಿ ಹಾಗೂ ಬಸರಾಳು ಠಾಣೆಯ ಭರತ್ ಎಂಬ ಪೇದೆಗಳನ್ನು ಅಮಾನತು ಮಾಡಿ ಬಿಸಾಕಿದ್ದಾರೆ. ಅವರ ಖಡಕ್‌ತನಕ್ಕೆ ಮತ್ತೊಂದು ಉದಾಹರಣೆಯಿದೆ.



ಮಂಡ್ಯ ಪೊಲೀಸ್ ವರಿಷ್ಠಾಧಿಕಾರಿ ಸುಧೀರ್‌ಕುಮಾರ್ ರೆಡ್ಡಿ

ಮೊನ್ನೆ ಜನವರಿ 30ರಂದು ಗಾಂಧೀಜಿ ಹುತಾತ್ಮರಾದ ದಿನ. ಮಳವಳ್ಳಿ ಠಾಣೆಯ ಮುಖ್ಯ ಪೇದೆ ಚಿಕ್ಕಪುಟ್ಟಶೆಟ್ಟಿ ಎಂಬಾತ ಆಗಷ್ಟೆ ಸಿಗರೇಟ್ ಸೇದಿ ಎಸ್ಪಿ ಕೊಠಡಿಯೊಳಕ್ಕೆ ದೌಡಾಯಿಸಿದ್ದ. ಅವನ ಬಾಯಿಂದ ಸಿಗರೇಟ್ ವಾಸನೆ ಬಂದದ್ದೇ ತಡ 'ಇಂದು ಗಾಂಧೀಜಿ ಹುತಾತ್ಮರಾದ ದಿನ. ಇಡೀ ದೇಶವೇ ಗಾಂಧೀಜಿಯವರಿಗೆ ಗೌರವ ಸಲ್ಲಿಸುವಂತೆ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ. ಇಂತಹ ದಿನವೇ ಶಿಸ್ತು ಪಾಲಿಸದ ನೀವು ಸಾರ್ವಜನಿಕರ ಕಾರ್ಯನಿರ್ವಹಣೆ ಹೇಗೆ ಮಾಡುತ್ತೀರಿ' ಅಂತ ತರಾಟೆಗೆ ತೆಗೆದುಕೊಂಡ ಎಸ್ಪಿ ಸಾಹೇಬರು ಸ್ಥಳದಲ್ಲಿಯೇ ಅಮಾನತು ಆದೇಶ ಕೈಗಿತ್ತಿದ್ದರು. ಅವರ ಕಾರ್ಯವೈಖರಿ ಸ್ವಲ್ಪ ಅತಿಯಾಯ್ತು ಎನಿಸಿದರೂ ಹದಗೆಟ್ಟು ಹೋಗಿರುವ ಪೊಲೀಸ್ ಇಲಾಖೆಯ ಆಂತರ್ಯವನ್ನು ಶುಚಿಗೊಳಿಸಲು ಇದು ಅನಿವಾರ್ಯವೇನೊ ಅನ್ನಿಸುತ್ತೆ.

ಕ್ಲಬ್‌ಗಳು ಬಂದ್

ಎಸ್ಪಿಯಾಗಿ ಚಾರ್ಜ್ ತೆಗೆದುಕೊಳ್ಳುತ್ತಿದ್ದಂತೆಯೇ ಮಂಡ್ಯದಲ್ಲಿ ನಡೆಯುತ್ತಿರುವ ಇಸ್ಪೀಟ್ ಕ್ಲಬ್‌ಗಳು ಬಗ್ಗೆ ಮಾಹಿತಿ ಪಡೆದು ಅವುಗಳ ಮೇಲೆ ಮುರಕೊಂಡು ಬಿದ್ದಿದ್ದರು. ಪ್ರತಿಷ್ಠಿತ ಕ್ಲಬ್‌ಗಳೆನಿಸಿಕೊಂಡ ಸಿಟಿ ಕ್ಲಬ್, ಸ್ಪೋರ್ಟ್ಸ್ ಕ್ಲಬ್, ಅಗ್ರಿ ಕ್ಲಬ್‌ಗಳನ್ನು ತಡವಿಕೊಂಡ ಸುಧೀರ್ ಕುಮಾರ್ ಲೈಸೆನ್ಸ್ ನವೀಕರಣ ಮಾಡಿಕೊಂಡಿರದ ಅವುಗಳ ಬಾಗಿಲಿಗೆ ಬೀಗ ಜಡಿದಿದ್ದರು. ಕೊನೆಗೆ ಹಲವು ಷರತ್ತುಗಳನ್ನು ವಿಧಿಸಿದ ನಂತರ ಸಿಟಿ ಸ್ಪೋರ್ಟ್ಸ್, ಅಗ್ರಿ ಕ್ಲಬ್‌ಗಳು ತೆರೆದುಕೊಂಡಿವೆ. ಆದರೆ ಜಿಲ್ಲೆಯಾದ್ಯಂತ ಉಳಿದ ಕ್ಲಬ್‌ಗಳೆಲ್ಲಾ ನಮಗೂ ಯಾವಾಗ ಅನುಮತಿ ದೊರೆಯುತ್ತದೋ



ಅಮಾನತುಗೊಂಡ ಪಿಸಿ ಸಿದ್ದರಾಜು–ಎಸ್‌ಐ ವೆಂಕಟೇಶ್

ಎಂದು ಬಕಪಕ್ಷಿಗಳಂತೆ ಕಾಯುತ್ತಿವೆ. ಇನ್ನುಳಿದಂತೆ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ತಲೆಯೆತ್ತಿದ್ದ ಎಲ್ಲಾ ಕ್ರಿಯೇಷನ್ ಕ್ಲಬ್‌ಗಳು ಬಾಗಿಲು ಮುಚ್ಚಿವೆ.

ಜಿಲ್ಲೆಯಲ್ಲಿ ರೈತರ ಆತ್ಮಹತ್ಯೆಗಳು ಹೆಚ್ಚಾಗಿರುವುದಕ್ಕೆ ಹಳ್ಳಿಗಳಲ್ಲಿ ಹುಟ್ಟಿಕೊಂಡಿರುವ ಇಸ್ಪೀಟು ಕ್ಲಬ್‌ಗಳೂ ಒಂದು ಕಾರಣ ಎಂಬುದನ್ನು ಅರ್ಥ ಮಾಡಿಕೊಂಡಿದ್ದ ಡಿಸಿ ಅಜಯ್ ನಾಗಭೂಷಣ್ ಹಾಗೂ ಹಳೇ ಎಸ್ಪಿ ಭೂಷಣ್ ಜಿ.ಬೊರಸೆಯವರು ಯಾವ ಕ್ಲಬ್‌ಗಳಿಗೂ ಲೈಸೆನ್ಸ್ ನವೀಕರಣಕ್ಕೆ ಅನುಮತಿ ನೀಡಿರಲಿಲ್ಲ, ಹಾಗಾಗಿ ಸುಧೀರ್‌ಕುಮಾರ್ ರೆಡ್ಡಿ ಎಲ್ಲಾ ಕ್ಲಬ್‌ಗಳ ಬಾಗಿಲನ್ನು ಮುಚ್ಚಿಸಿದ್ದಾರೆ.

ಅಲ್ಲದೇ ಬಾರ್ ಅಂಡ್ ರೆಸ್ಟೋರೆಂಟ್‌ಗಳು ಬೆಳಗ್ಗೆ 10 ಗಂಟೆಗೆ ತೆರೆಯಬೇಕು ಮತ್ತು ರಾತ್ರಿ 10.30ರೊಳಗೆ ಮುಚ್ಚಬೇಕು ಎಂದು ಕಟ್ಟುನಿಟ್ಟಾಗಿ ಆದೇಶ ಮಾಡಿದ್ದಾರೆ. ಇದುವರೆಗೆ ಪೊಲೀಸರಿಗೆ ಕಪ್ಪ-ಕಾಣಿಕೆ ಸಲ್ಲಿಸುತ್ತಿದ್ದ ಬಾರ್ ಮಾಲೀಕರು ಮಧ್ಯರಾತ್ರಿ ಮುಗಿದರೂ ಬಾಗಿಲು ಹಾಕಿಕೊಂಡು ಒಳಗೊಳಗೇ ವ್ಯಾಪಾರ ನಡೆಸುತ್ತಿದ್ದವು. ರೆಡ್ಡಿಯವರ ಎಚ್ಚರಿಕೆಯಿಂದಾಗಿ ಅವಧಿಯೊಳಗೆ ಬಾರ್‌ಗಳು ಮುಚ್ಚುವಂತಾಗಿದೆ.

ಪೊಲೀಸ್ ಲಂಚಾವತಾರವೂ ಪಂಕ್ಚರ್

ಮಹಿಳೆಯೊಬ್ಬರು ನೀಡಿದ ದೂರಿನ ಆಧಾರದಲ್ಲಿ ಡೇಂಜರ್ ಶಿವ ಎಂಬ ರೌಡಿಶೀಟರ್‌ನ ಅಂಗಡಿಗೆ ಬೀಗ ಜಡಿದು ಅವನ ಮೇಲೆ ಕೇಸು ದಾಖಲಾಗುವಂತೆ ನೋಡಿಕೊಂಡಿದ್ದಾರೆ. ಆ ಮೂಲಕ ರೌಡಿಗಳಿಗೆ ಎಚ್ಚರಿಕೆಯ ಸಂದೇಶ ರವಾನಿಸಿದ್ದಾರೆ. ಇಲಾಖೆಯೊಳಗಿನ ಲಂಚಾವತಾರಕ್ಕೆ ಬ್ರೇಕ್ ಹಾಕಿರುವ ಎಸ್ಪಿ ಬಗ್ಗೆ ಪೊಲೀಸ್ ಸಿಬ್ಬಂದಿಗಳೇ ಹೆಮ್ಮೆಯಿಂದ ಮಾತಾಡಿಕೊಳ್ಳುತ್ತಿದ್ದಾರೆ. ಈ ಮೊದಲು ಲಂಚ ನೀಡಿದರೆ ಮಾತ್ರ ರಜಾ, ಟಿಎ, ಡಿಎಗಳು ದಕ್ಕುತ್ತಿದ್ದವು. ಪೊಲೀಸ್ ಇಲಾಖೆಯ ಸಂಬಳದ ಬಿಲ್ ಮಂಜೂರು ಆಗಲು ಖಜಾನೆಯ ಅಧಿಕಾರಿಗಳಿಗೂ ಲಂಚ ಪಾವತಿಸಬೇಕಿತ್ತು. ಇದನ್ನು ತಿಳಿದ ಎಸ್ಪಿ ತಾವೇ ಖುದ್ದಾಗಿ ಜಿಲ್ಲಾ ಖಜಾನೆಗೆ ಹೋಗಿ ಇಲಾಖೆಯ ಬಿಲ್ ಯಾಕೆ ಪಾಸ್ ಆಗಿಲ್ಲ ಅಂತ ನೇರವಾಗಿ ಪ್ರಶ್ನಿಸಿದ್ದರು. ಆಗ ಯಾವುದೋ ತಾಂತ್ರಿಕ ಕಾರಣ ಕೊಟ್ಟ ಅಧಿಕಾರಿಗಳು ಎಸ್ಪಿ ಸಾಹೇಬರನ್ನು ಸಾಗಹಾಕಲು ನೋಡಿದ್ದರು. ಆದರೆ ಜಗ್ಗದ ರೆಡ್ಡಿಯವರು 'ಅದೇನು ತಾಂತ್ರಿಕ ಕಾರಣ ಹೇಳಿ ನಾವಿಬ್ಬರೂ ಸೇರಿ ಸರಿಪಡಿಸೋಣ' ಅಂತ ಪಟ್ಟು ಹಿಡಿದ ಮಾರನೇ ದಿನವೇ ಸಂಬಳದ ಬಿಲ್ ಪಾಸ್ ಆಗಿತ್ತು!

ಇನ್ನು ಜಿಲ್ಲೆಯಲ್ಲಿ ನಡೆಯುವ ಅಕ್ರಮ ವ್ಯವಹಾರಗಳ ಬಗ್ಗೆ ಸಂಪೂರ್ಣ ಮಾಹಿತಿ ಕಲೆ ಹಾಕಿರುವ ಎಸ್ಪಿ ಅವಕ್ಕೆಲ್ಲಾ ಬ್ರೇಕ್ ಹಾಕಲು ಸನ್ನದ್ಧರಾಗಿ ನಿಂತಿದ್ದಾರೆ. ಮೊನ್ನೆ ಎಲ್ಲಾ ಅಧಿಕಾರಿಗಳ ಸಭೆ ಕರೆದ ಎಸ್ಪಿ ಸಾಹೇಬರು ನಿಮ್ಮನಿಮ್ಮ ಠಾಣಾ ವ್ಯಾಪ್ತಿಯಲ್ಲಿ ಏನೇನು ಅಕ್ರಮ ವ್ಯವಹಾರಗಳು ನಡೆಯುತ್ತಿವೆ ಅಂತ ಪ್ರಶ್ನೆ ಹಾಕಿದಾಗ ಬಹುತೇಕ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಯಾವ ಅಕ್ರಮ ವ್ಯವಹಾರಗಳೂ ನಡೆಯುತ್ತಿಲ್ಲ ಅಂತ ತಿಪ್ಪೆ ಸಾರಿಸಲು ನೋಡಿದ್ದರು. ಮೊದಲೇ ಎಲ್ಲಾ ವಿಷಯಗಳನ್ನು ಸಂಗ್ರಹಿಸಿಟ್ಟುಕೊಂಡಿದ್ದ ಎಸ್ಪಿ ಸಾಹೇಬರು 'ನಿಮ್ಮ ಠಾಣಾ ವ್ಯಾಪ್ತಿಯಲ್ಲಿ ಅಕ್ರಮ ಸೀಮೆಎಣ್ಣೆ ಮಾರುತ್ತಿದ್ದಾರೆ', 'ನಿಮ್ಮ ವ್ಯಾಪ್ತಿಯಲ್ಲಿ ದನದ ಸಾಗಾಣಿಕೆ ನಡೆಯುತ್ತಿದೆ', 'ನಿಮ್ಮ ವ್ಯಾಪ್ತಿಯಲ್ಲಿ ಅಕ್ರಮ ಮರಳುದಂಧೆ ನಡೆಯುತ್ತಿದೆ' ಅಂತೆಲ್ಲಾ ತರಾಟೆಗೆ ತೆಗೆದುಕೊಂಡು ಎಲ್ಲರಿಗೂ ಶಾಕ್ ನೀಡಿದ್ದರು. ಆನಂತರವೇ ತಮ್ಮ ಠಾಣಾ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಅಕ್ರಮಗಳ ಬಗ್ಗೆ ಪುಟಗಟ್ಟಲೇ ಬರೆದು ಎಸ್ಪಿ ಕೈಗಿಟ್ಟು ಬಂದಿದ್ದು, ಅದನ್ನೇ ಆಧರಿಸಿ ಅವುಗಳ ಮೇಲೆ ದಾಳಿ ಮಾಡಲು ಎಸ್ಪಿ ರೆಡ್ಡಿಯವರು ಸಜ್ಜಾಗಿದ್ದಾರೆ.

ಎಸ್ಪಿ ಸುಧೀರ್‌ಕುಮಾರ್ ರೆಡ್ಡಿ ಮಾಹಿತಿ ಪಡೆಯುವ ರೀತಿಯೇ ಸಖತ್ ಇಂಟರೆಸ್ಟಿಂಗ್. ಸಾಮಾನ್ಯ ನಾಗರಿಕನಂತೆ ಸೈಕಲ್, ಸ್ಕೂಟರ್ ಹಾಗೂ ಕಾರ್‌ನಲ್ಲಿ ಸುತ್ತಾಡಿ ಮಾಹಿತಿ ಸಂಗ್ರಹಿಸುತ್ತಾರೆ. ಸೈಕಲ್ ಹೊಡೆದುಕೊಂಡೇ ಮಂಡ್ಯ ನಗರದ ಪ್ರದಕ್ಷಿಣೆ ಹಾಕುತ್ತಾರೆ. ಸಂಚಾರ ನಿಯಮ ಉಲ್ಲಂಘನೆ, ಬಾರ್ ಮತ್ತು ರೆಸ್ಟೋರೆಂಟ್‌ಗಳು ಸರಿಯಾದ ವೇಳೆಗೆ ಬಾಗಿಲು ಹಾಕುತ್ತಿವೆಯೇ ಎಂಬ ಬಗ್ಗೆ ಗಮನ ಹರಿಸುತ್ತಾರೆ. ಮರಳು ಜಾಡು ಹೆಚ್ಚಾಗಿರುವ ಕೆ.ಆರ್.ಪೇಟೆ, ಮದ್ದೂರು ತಾಲ್ಲೂಕಿನಲ್ಲಿ ತಮ್ಮ ಬೊಲೆರೋ ವಾಹನದಲ್ಲಿ ಸಾಮಾನ್ಯನಂತೆ ಸುತ್ತಾಡಿ ಬಂದಿರುವ ಎಸ್ಪಿ ಸಾಹೇಬ್ರು ಊರಿನ ಮುಖಂಡರನ್ನು ಒಂದೆಡೆ ಸೇರಿಸಿ ಮರಳು ತೆಗೆಯುವುದರಿಂದ ಅಂತರ್ಜಲ ಕುಸಿತ, ನೀರಿನ ಹಾಹಾಕಾರ ಸೇರಿದಂತೆ ಹಲವು ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಿದ್ದಾರೆ.

ಅಂದಹಾಗೆ, ಸುಧೀರ್ ಕುಮಾರ್ ರೆಡ್ಡಿಯವರ ಕಾರ್ಯವೈಖರಿ ಎಷ್ಟು ಖಡಕ್ಕೊ, ಅವರ ವ್ಯಕ್ತಿತ್ವ ಅಷ್ಟೆ ಸರಳ. 2010ರ ಬ್ಯಾಚ್‌ನ ಐಪಿಎಸ್ ಅಧಿಕಾರಿಯಾಗಿರುವ ರೆಡ್ಡಿ ಸಾಹೇಬರು ಬಿ. ಟೆಕ್ ಪದವೀಧರರು. ಆಂಧ್ರ ಪ್ರದೇಶದ ಗುಂಟೂರು ಜಿಲ್ಲೆಯ ನರಸರಾಂ ಪೇಟೆಯವರಾದ ಇವರು ಮೊದಲು ದಕ್ಷಿಣ ಕನ್ನಡದಲ್ಲಿ ಎಎಸ್ಪಿಯಾಗಿ ನಂತರ ಬೀದರ್ ಜಿಲ್ಲೆಯ ಎಸ್ಪಿಯಾಗಿ 2 ವರ್ಷ ಕೆಲಸ ಮಾಡಿದ್ದರು. ಬೀದರ್‌ಗೆ ಹೋದ ಒಂದೇ ವರ್ಷದಲ್ಲೇ ಸರ್ಕಾರ ಅವರನ್ನು ಅಲ್ಲಿಂದ ಬೇರೆಡೆಗೆ ವರ್ಗಾವಣೆ ಮಾಡಿತ್ತು, ಅಷ್ಟರಲ್ಲಾಗಲೆ ರೆಡ್ಡಿಯವರ ಕಾರ್ಯವೈಖರಿ ಅದೆಷ್ಟು ಜನಸ್ನೇಹಿಯಾಗಿತ್ತೆಂದರೆ ಜನರೇ ಪ್ರತಿಭಟನೆ ಮಾಡಿ ವರ್ಗಾವಣೆಯನ್ನು ರದ್ದುಪಡಿಸಿದ್ದರು. ಈಗ ಮಂಡ್ಯಕ್ಕೆ ಬರುವ ಮುನ್ನವೂ ಜನ ಪ್ರತಿಭಟನೆ ಮಾಡಿದ್ದುಂಟು.

ಮಂಡ್ಯದಲ್ಲಿ ಹಲವು ಅಕ್ರಮ ವ್ಯವಹಾರಗಳು ಎಗ್ಗಿಲ್ಲದಂತೆ ನಡೆಯುತ್ತಿವೆ. ಕ್ರಿಕೆಟ್ ಬೆಟ್ಟಿಂಗ್ ದಂಧೆಕೋರರ ಹೆಡೆಮುರಿ ಕಟ್ಟಬೇಕಿದೆ. ಬೆಟ್ಟಿಂಗ್ ದಂಧೆಯ ಕರಾಳ ಬಾಹುಗಳು ನಗರಪ್ರದೇಶದಲ್ಲಿ ಮಾತ್ರವಲ್ಲ, ಹಳ್ಳಿಗಳಿಗೂ ಚಾಚಿಕೊಂಡಿವೆ. ಹಲವು ಯುವಕರು ಬೆಟ್ಟಿಂಗ್ ದಂಧೆಗೆ ಬಲಿಯಾಗಿದ್ದಾರೆ. ಜನ ಕೋಟ್ಯಾಂತರ ಹಣ ಕಳೆದುಕೊಂಡು ಭಿಕಾರಿಯಾಗಿದ್ದಾರೆ. ಹಾಗೆಯೇ ಪಕ್ಷ ಗುರುತಿಯರಂತೆ ಸೋಗು ಹಾಕಿರುವ ಕೋಮಲಾಂಗಿಯರು ನಡೆಸುತ್ತಿರುವ ಹೈಟೆಕ್ ವೇಶ್ಯಾವಾಟಿಕೆ ದಂಧೆ ಮಂಡ್ಯದ ಸಭ್ಯತೆಗೇ ಮಸಿ ಬಳಿಯುತ್ತಿದೆ. ಶ್ರೀರಂಗಪಟ್ಟಣ, ಕೆಆರ್‌ಎಸ್‌ನಲ್ಲಿರುವ ಮಾಂಸದ ಅಡ್ಡೆಗಳ ಮೇಲೂ ಎಸ್ಪಿ ಸಾಹೇಬರು ಮುರಕೊಂಡು ಬೀಳಬೇಕಿದೆ. ಇವಿಷ್ಟು ಕೆಲಸಗಳು ಬಾಕಿ ಇವೆ. ರೆಡ್ಡಿ ಸಾಹೇಬರು ಅವಕ್ಕೆಲ್ಲ ಒಂದೊಂದಾಗಿ ಗತಿ ಕಾಣಿಸಲಿ ಎಂಬುದೇ ಜನರ ನಿರೀಕ್ಷೆಯಾಗಿದೆ.

■ ವರದಿಗಾರ

377 ರದ್ದಾಗಬೇಕು

ನಮ್ಮ ಕಾನೂನಿನನ್ವಯ ಸಲಿಂಗಕಾಮ ಪ್ರಕೃತಿಗೆ ವಿರುದ್ಧವಾದ್ದರಿಂದ ಅದು ಅಪರಾಧ. ಇದು ನಾವೇ ರೂಪಿಸಿದ ಕಾನೂನು ಕೂಡ ಅಲ್ಲ, ಬದಲಾಗಿ ಬ್ರಿಟಿಷರು ಇದ್ದಾಗ ಜಾರಿಗೆ ಬಂದ ಕಾನೂನು. ಈಗ ಬ್ರಿಟನ್ ದೇಶದಲ್ಲೇ ಅದೆಷ್ಟೋ ವರ್ಷಗಳ ಹಿಂದೆಯೇ ಕಾನೂನನ್ನು ಬದಲಾಯಿಸಿ ಅಲ್ಲಿ ಸಲಿಂಗಕಾಮಿಗಳಿಗೆ ಮದುವೆಯಾಗುವ ಅವಕಾಶವನ್ನೂ ನೀಡಲಾಗಿದೆ. ಆದರೆ ನಮ್ಮ ದೇಶದಲ್ಲಿ ಮಾತ್ರ ಈಗಲೂ ಬ್ರಿಟಿಷರು ರೂಪಿಸಿದ ಐಪಿಸಿ ಸೆಕ್ಷನ್ 377 ಎಂಬ ಹಳೆ ಕಾನೂನನ್ನು ಜಾರಿಯಲ್ಲಿಟ್ಟು ಇಲ್ಲಿನ ಲಕ್ಷಾಂತರ ಪ್ರಜೆಗಳ ಹಕ್ಕುಗಳನ್ನು ದಮನಿಸಲಾಗುತ್ತಿದೆ.

ಸಲಿಂಗಕಾಮ ಅಪರಾಧವಲ್ಲ ಎಂಬ ಅಭಿಪ್ರಾಯದೊಂದಿಗೆ ಸೆಕ್ಷನ್ 377 ಅನ್ನು ರದ್ದು ಮಾಡಿ ಎಂದು ಕೋರಿ ದೆಹಲಿಯ ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸಲಾಗಿತ್ತು, ದೆಹಲಿ ಹೈಕೋರ್ಟ್ ಇದಕ್ಕೆ ಸಮ್ಮತಿ ಸೂಚಿಸಿದಾಗ ಅದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟಿಗೆ ಅರ್ಜಿ ಸಲ್ಲಿಸಲಾಗಿತ್ತು. ಸುಪ್ರೀಂ ಕೋರ್ಟ್ ಕೂಡ ಸಲಿಂಗಕಾಮ ಅಪರಾಧ ಎಂದಿತ್ತು. ಈ ತೀರ್ಪನ್ನು ಮರು ಪರಿಶೀಲಿಸಬೇಕೆಂದು ಕೋರಿ ಕ್ಯುರೇಟಿವ್ ಅರ್ಜಿಯನ್ನು ನಾಜ್ ಫೌಂಡೇಶನ್ ಎಂಬ ಸಂಸ್ಥೆ ಸಲ್ಲಿಸಿತ್ತು. ಫೆಬ್ರವರಿ 2ರಂದು ಸುಪ್ರೀಂಕೋರ್ಟ್ ಈ ಕುರಿತು ಚರ್ಚೆ ನಡೆಸಿ ಅಂತಿಮ ತೀರ್ಪನ್ನು ಕೊಡುವ ಜವಾಬ್ದಾರಿಯನ್ನು ಐವರು ನ್ಯಾಯಮೂರ್ತಿಗಳನ್ನು ಹೊಂದಿರುವ ಸಂವಿಧಾನ ಪೀಠಕ್ಕೆ ವಹಿಸಿದೆ. ಇದು ಸ್ವಾಗತಾರ್ಹ ಬೆಳವಣಿಗೆ.

ಸಲಿಂಗಕಾಮದ ಸುತ್ತ ನಮ್ಮ ಸಮಾಜದಲ್ಲಿ ಹಲವಾರು ಮೌಢ್ಯಗಳಿವೆ. ಅದರಲ್ಲಿ ಇದು ಪ್ರಕೃತಿಗೆ ವಿರುದ್ಧವಾದದ್ದು ಎಂಬುದು ಪ್ರಮುಖವಾದದ್ದು. ಆದರೆ ಕಾನೂನಿನ ಕಣ್ಣಿಗೆ ಮುಖ್ಯವಾಗಬೇಕಿರುವುದು ಪ್ರಕೃತಿಗೆ ವಿರುದ್ಧವಾದದ್ದೋ ಅಲ್ಲವೋ ಎಂಬುದಲ್ಲ, ಬದಲಾಗಿ ನಮ್ಮ ಸಂವಿಧಾನದಲ್ಲಿ ನೀಡಲಾಗಿರುವ ಹಕ್ಕುಗಳ ಉಲ್ಲಂಘನೆ ಆಗುತ್ತಿದೆಯೋ ಇಲ್ಲವೋ ಎಂಬುದು ಮಾತ್ರ. ಇತರರಿಗೆ ಯಾರನ್ನು ಪ್ರೀತಿಸಬೇಕು, ಮದುವೆಯಾಗಬೇಕು, ಯಾರ ಜೊತೆಗೆ ಲೈಂಗಿಕ ಸಂಬಂಧವನ್ನು ಹೊಂದಿರಬೇಕು ಎಂಬ ವಿಚಾರದಲ್ಲಿ ಹೇಗೆ ಸಂಪೂರ್ಣ ಸ್ವಾತಂತ್ರ್ಯವಿದೆಯೋ ಅದೇ ಸ್ವಾತಂತ್ರ್ಯ ಎಲ್ಲರಿಗೂ ಇರಬೇಕು. ಕೆಲವರಿಗೆ ಮಾತ್ರ 'ನಿಮಗೆ ಯಾರನ್ನು ಪ್ರೀತಿಸಬೇಕು, ಯಾರೊಂದಿಗೆ ದೈಹಿಕ ಸಂಬಂಧ ಹೊಂದಿರಬೇಕು ಎಂದು ನಿರ್ಧರಿಸಲು ಸ್ವಾತಂತ್ರ್ಯ ಇಲ್ಲ' ಎನ್ನುವುದು ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿರುತ್ತದೆ.

ಅಷ್ಟೇ ಮುಖ್ಯವಾಗಿ ವಯಸ್ಕರು ಪರಸ್ಪರರ ಒಪ್ಪಿಗೆ ಮೇರೆಗೆ ಖಾಸಗಿ ಕೊಠಡಿಯಲ್ಲಿ ಏನು ಮಾಡಿದರೂ ಅದು ಅವರ ಖಾಸಗಿ ವಿಚಾರ. ಕಾನೂನಿಗೆ ಆ ಕೊಠಡಿಯೊಳಗೆ ಹೋಗಿ ವಿಚಾರಣೆ ನಡೆಸುವ ಹಕ್ಕು ಇಲ್ಲ, ಹಾಗಿದ್ದಾಗ್ಯೂ ಅದು ಅವರ ಖಾಸಗಿ ವಿಚಾರ ಎಂದು ಕಾನೂನು ಪರಿಗಣಿಸುವುದಿಲ್ಲ, ಬದಲಾಗಿ



ಅವರನ್ನು ತಡೆದು ಅವರ ವಿರುದ್ಧ ಕಾನೂನು ಕ್ರಮ ಜರುಗಿಸಿ ಅವರಿಗೆ ಶಿಕ್ಷೆ ವಿಧಿಸಬೇಕು ಅನ್ನುತ್ತದೆ ನಮ್ಮ ಕಾನೂನು. ಇದು ಕೂಡ ನಮ್ಮ ಸಂವಿಧಾನ ನಮಗೆ ಕೊಟ್ಟಿರುವ ಸಮಾನತೆಯ ಸಿದ್ಧಾಂತಕ್ಕೆ ತದ್ವಿರುದ್ಧವಾದದ್ದು.

ಕೆಲವರ ಪ್ರಕಾರ ಸಲಿಂಗಕಾಮ ಎನ್ನುವುದು ಒಂದು ಮಾನಸಿಕ ರೋಗ. ಇಂತಹ ನಿಲುವನ್ನು ಹೊಂದಿರುವ ಜನರು ರೋಗಿಷ್ಟ ಮನಸ್ಸಿನವರು ಎಂದಷ್ಟೇ ಹೇಳಬಹುದು. ಯಾಕೆಂದರೆ ಸಲಿಂಗಕಾಮ ಎನ್ನುವುದು ರೋಗವಲ್ಲ ಎಂದು ಹಲವಾರು ವರ್ಷಗಳ ಹಿಂದೆಯೇ ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ. ಇನ್ನು 'ಇದು ನಮ್ಮ ಸಂಸ್ಕೃತಿ ಅಲ್ಲ' ಎಂದು ಬೊಬ್ಬೆ ಹಾಕುವವರು ಒಮ್ಮೆ ನಮ್ಮ ದೇವಸ್ಥಾನಗಳಲ್ಲಿ ಕೆತ್ತಿರುವ ಶಿಲೆಗಳನ್ನು ನೋಡಿಬರಲಿ.

ಪ್ರೇಮ ಎಂಬ ವಿಸ್ಮಯ

ಸಲಿಂಗಕಾಮ ಕುರಿತು ಈ ಹಿಂದೆ ಬಿ.ಎಂ.ಬಷೀರ್ ಬರೆದಿದ್ದ 'ಪ್ರೇಮ ಎಂಬ ವಿಸ್ಮಯ' ಲೇಖನ ಈ ಸಂದರ್ಭದಲ್ಲಿ ಮುಖ್ಯವಾಗುತ್ತದೆ. ಆದ್ದರಿಂದ ಇಲ್ಲಿ ಆ ಲೇಖನದ ಹಲವು ಭಾಗಗಳನ್ನು ಉದಾಹರಿಸುತ್ತಿದ್ದೇನೆ.

"ಕೆಲವೊಮ್ಮೆ ಪ್ರಕೃತಿಗೆ ತನಗೆ ಎಲ್ಲವೂ ಗೊತ್ತು ಎನ್ನುವುದನ್ನು ತೋರಿಸುವ ಚಪಲ ಇರುತ್ತದೆ. ಕಣ್ಣನ್ನೇ ತೆಗೆದುಕೊಳ್ಳೋಣ. ಕಣ್ಣಿನ ಅರಿವನ್ನು ಮನುಷ್ಯನಿಗೆ ಅರಿವು ಮಾಡಿಕೊಡಲೋ ಎಂಬಂತೆ ಕೆಲವೊಮ್ಮೆ ಹುಟ್ಟುಕುರುಡರನ್ನು ಪ್ರಕೃತಿ ಸೃಷ್ಟಿಸಿ ಬಿಡುತ್ತೆ. ಮನುಷ್ಯನೆಂದ ಮೇಲೆ ಅವನಿಗೆ ಕಣ್ಣಿರುತ್ತೆ. ಇವನು ಹುಟ್ಟುಕುರುಡ ಎಂದಮೇಲೆ ಮನುಷ್ಯನಿಗೆ ಹೊರತಾದವನು ಎಂದು ಅವನ ಮೇಲೆ ತಪ್ಪನ್ನು ಹೊರಿಸುವಂತಿಲ್ಲ. ಎಲ್ಲರಿಗೂ ಕಾಣುವ ಜಗತ್ತು ಅವನಿಗೆ ಕಾಣುವುದಿಲ್ಲ ಎನ್ನುವುದನ್ನು, ಪ್ರಕೃತಿಗೆ ವಿರೋಧವಾದುದು, ಅವನು ಪ್ರಕೃತಿ ವಿರೋಧಿ ಎಂದು ಜರೆಯುವುದಕ್ಕಾಗುವುದಿಲ್ಲ. ಸಮಾಜದಿಂದ ದೂರವಿಡುವುದಕ್ಕೂ ಸಾಧ್ಯವಿಲ್ಲ. ಯಾಕೆಂದರೆ ಸ್ವತಃ ಪ್ರಕೃತಿಯೇ ಆತನನ್ನು ತನ್ನದೊಂದು ಭಾಗವಾಗಿ ಸೃಷ್ಟಿಸಿದೆ. ಉಳಿದ ಮನುಷ್ಯರೆಲ್ಲರೂ ಅವನನ್ನು ಒಪ್ಪಿಕೊಂಡು ಅವನ ಬದುಕನ್ನು ಗೌರವಿಸಬೇಕಾಗುತ್ತದೆ. ಗೌರವಿಸುತ್ತಾರೆ.

ಮನುಷ್ಯ ಮೂಲತಃ ಒಂದು ತಲೆಯವನು. ಆದರೆ ಪ್ರಕೃತಿ ತನಗೆ ಎರಡು ತಲೆಯವನನ್ನು ಸೃಷ್ಟಿಸಲೂ ಗೊತ್ತು ಎನ್ನುವ ಕಾರಣಕ್ಕಾಗಿ, ಅಪರೂಪಕ್ಕೆ ಸಯಾಮಿಗಳು, ಎರಡು ತಲೆಯ ಜೀವಿಗಳನ್ನು ಸೃಷ್ಟಿಸಿ ಬಿಡುತ್ತದೆ. ಹಿಂದೆ ಹೀಗೆ ಹುಟ್ಟಿದವರನ್ನು ದೆವ್ವ ಎಂಬ ಭೀತಿಯಿಂದ ಕೊಂದು ಬಿಟ್ಟದ್ದೂ ಇದೆ. ಮನುಷ್ಯ ತನಗೆ ಸಾಧ್ಯವಿದ್ದಷ್ಟೂ ಮಿತಿಯಲ್ಲಿ ಆ ಮಗುವಿಗೆ ಬದುಕುವುದಕ್ಕೆ ನೆರವಾಗುತ್ತಾನೆ, ನೆರವಾಗಬೇಕು. ಅದು ಮನುಷ್ಯನ ಕರ್ತವ್ಯ ಕೂಡ.

ಗಂಡು-ಹೆಣ್ಣು ಪ್ರೀತಿಸಿದರಷ್ಟೇ ಪ್ರೇಮವೇ? ಎಂದು ಏಕಾಏಕಿ ಪ್ರಕೃತಿ ಪ್ರಶ್ನಿಸುತ್ತದೆ. ತನ್ನ ಸೃಷ್ಟಿ ಪ್ರಕ್ರಿಯೆಯನ್ನು ಅದು ತಾನೇ ಪ್ರಶ್ನಿಸಿಕೊಳ್ಳುತ್ತದೆ. ಆಗ 'ಗೇ' ಅಥವಾ ಸಲಿಂಗ ಪ್ರೇಮಿ ಹುಟ್ಟುತ್ತಾನೆ. ಪ್ರೇಮವೆನ್ನುವುದು ಸೃಷ್ಟಿಕ್ರಿಯೆಗೆ ಪೂರಕವಾದದ್ದು ಮತ್ತು ಅದು ಆಡಂ ಮತ್ತು ಈವ್ ನಡುವೆ ನಡೆದಾಗಷ್ಟೇ ಅರ್ಥಪೂರ್ಣವಾಗುತ್ತದೆ ಎನ್ನುವುದನ್ನು ಕಲಿಸಿರುವುದು ಪ್ರಕೃತಿಯೇ. ಆದರೆ ಈಗ 'ಗೇ'ಗಳನ್ನು ಸೃಷ್ಟಿಸಿ ಆ ಪ್ರಕ್ರಿಯೆಯನ್ನು ಪರೀಕ್ಷೆಗೊಡ್ಡುತ್ತಿರುವುದೂ ಪ್ರಕೃತಿಯೇ. ಹೇಗೆ ಮನುಷ್ಯ ಕಣ್ಣನ್ನು ಸ್ವಯಂ ಸೃಷ್ಟಿಸಿಕೊಳ್ಳಲಾರನೋ, ಹಾಗೆಯೇ ಪ್ರೇಮವನ್ನು ಕೂಡ ಸ್ವಯಂ ಸೃಷ್ಟಿಸಿಕೊಳ್ಳಲಾರ. ಪ್ರೇಮವೆನ್ನುವುದು ಬೋಧನೆಯಲ್ಲ, ಕಾನೂನು, ಕಾಯ್ದೆಗಳಿಂದ ಹುಟ್ಟುವಂತಹದ್ದಲ್ಲ, ಅದು ದೇಹದೊಳಗಿನ ಸಹಜಾತಿ ಸಹಜ ಅನುಭೂತಿ. ನೀನು ಇಂಥವರನ್ನು ಪ್ರೇಮಿಸಬೇಕು ಎಂದು ಕಲಿಸುವುದು ಮನುಷ್ಯನಲ್ಲ. ಒಬ್ಬ 'ಗೇ' ಆಗಿರುವ ಗಂಡು ಅಥವಾ ಲೆಸ್ಬಿಯನ್ ಆಗಿರುವ ಹೆಣ್ಣು ಪರಸ್ಪರ ಪ್ರೇಮಿಸಲು ಹೊರಡುವುದು ಪ್ರಕೃತಿಯ ಲಯಕ್ಕೆ ಮೀರಿದ್ದಾಗಿರಬಹುದು. ಸೃಷ್ಟಿ ಕ್ರಿಯೆಯನ್ನು ವಿರೋಧಿಸುವಂತಹದ್ದೂ ಆಗಿರಬಹುದು. ಆದರೆ ಆ ಪ್ರಕೃತಿ ವಿರೋಧಿ ಗುಣವನ್ನು ಅವನು ಅಥವಾ ಅವಳಲ್ಲಿ ಬಿತ್ತಿರುವುದು ಪ್ರಕೃತಿಯೇ ಆಗಿದೆ. ಸಲಿಂಗ ಪ್ರೇಮಿಯ ಮುಂದೆ ದೇವತೆಯಂತಹ ತರುಣಿಯೊಬ್ಬಳು ಹಾದುಹೋದರೂ ಅವನು ಅದಕ್ಕೆ ಪ್ರೇಮರೂಪದಲ್ಲಿ ಪ್ರತಿಕ್ರಿಯಿಸಲಾರ. ಇದೇ ಸಂದರ್ಭದಲ್ಲಿ ಒಬ್ಬ ಗಂಡು ಅವನ ಮುಂದೆ ಹಾದುಹೋದಾಕ್ಷಣ ಅವನೆದೆಯಲ್ಲಿ ಬಿರುಗಾಳಿಯೇ ಏಳಬಹುದು. ಅವನ ಬದುಕು ಚಂಡಮಾರುತಕ್ಕೆ ಸಿಕ್ಕ ದೋಣಿಯಂತಾಗಬಹುದು. ಆ ಒಬ್ಬ ಹುಡುಗನನ್ನು ನೋಡಿದಾಕ್ಷಣ ಇನ್ನೊಬ್ಬ ಹುಡುಗನ ಎದೆಯಲ್ಲಿ ಪ್ರೇಮವನ್ನು ಬಿತ್ತಿದ್ದು ಯಾರು? ಈಗ ಅವನೇನು ಮಾಡಬೇಕು? ಒಂದು ವೇಳೆ ಅವನು ಎದುರಾದ ಹುಡುಗನೂ 'ಗೇ' ಆಗಿದ್ದು ಇಬ್ಬರೂ ಪರಸ್ಪರ ಪ್ರೇಮಿಸತೊಡಗಿದರೆ ಅದು ಯಾರ ತಪ್ಪು? ಭಾರತದ ಕಾನೂನು ಅದನ್ನು ತಪ್ಪು ಎಂದು ಹೇಳುತ್ತದೆ. ಅದು

'ಸಲಿಂಗಕಾಮ ಅನ್ನೋದು ಉರಿವ ಕೆಂಡವಿದ್ದಂತೆ'

ಸೆಕ್ಷನ್ 377 ಸುದ್ದಿಯಲ್ಲಿರುವ ಹಿನ್ನೆಲೆಯಲ್ಲಿ ವಿಶ್ವಾಸ್ ಅವರೊಂದಿಗೆ ನಡೆಸಿದ ಸಂದರ್ಶನ ಇಲ್ಲಿದೆ.

** ಗಂಡಸರತ್ತ ನೀವು ಆಕರ್ಷಿತರಾಗುತ್ತಿರುವುದು ಯಾವಾಗ ನಿಮ್ಮ ಗಮನಕ್ಕೆ ಬಂತು?*

ವಿಶ್ವಾಸ್: ನನ್ನ ಗೋಧಿ ಮೈ ಬಣ್ಣವನ್ನು ನಾನು ಆಯ್ಕೆ ಮಾಡಿಕೊಂಡದ್ದಲ್ಲ; ನಾನು ಬೆಂಗಳೂರಿನಲ್ಲಿ ಹುಟ್ಟಿದ್ದೂ ನನ್ನ ಆಯ್ಕೆಯಿಂದಲ್ಲ; ನನ್ನ 5 ಅಡಿ 8 ಇಂಚು ಎತ್ತರವೂ ನನ್ನ ಆಯ್ಕೆಯಲ್ಲ. ಅದೇರೀತಿ ಸಲಿಂಗಕಾಮಿಯಾದದ್ದೂ ನನ್ನ ಇಚ್ಛಿತ ಆಯ್ಕೆಯಲ್ಲ, ನಾನು ಹುಟ್ಟಿದ್ದೇ ಹಾಗೆ. ಆ ಸತ್ಯ ಹದಿನಾಲ್ಕನೇ ವಯಸ್ಸಿನಲ್ಲೇ ನನಗೆ ಅರ್ಥವಾಯಿತು.

** ಈಚೆಗಷ್ಟೆ ಸಲಿಂಗಕಾಮಕ್ಕೆ ಸಂಬಂಧಿಸಿದಂತೆ ಸೆಕ್ಷನ್ 377 ಅನ್ನು ರದ್ದುಗೊಳಿಸಬೇಕೆಂಬ ಅರ್ಜಿಯನ್ನು ಸುಪ್ರೀಂ ಕೋರ್ಟ್ ಪಂಚಸದಸ್ಯರ ನ್ಯಾಯಪೀಠಕ್ಕೆ ವರ್ಗಾಯಿಸಿದೆ. ಸಂತಸವಾಗಿದೆಯೇ?*

ವಿಶ್ವಾಸ್: ನಿಜಹೇಳಬೇಕೆಂದರೆ, ಸಲಿಂಗಕಾಮ ಅನ್ನೋದು ಉರಿವ ಕೆಂಡವಿದ್ದಂತೆ. ಅದನ್ನು ಹಿಡಿದುಕೊಳ್ಳಲು ಯಾರೂ ಬಯಸುವುದಿಲ್ಲ, ತಮ್ಮ ಸುಪರ್ದಿಗೆ ಬರುತ್ತಿದ್ದಂತೆಯೇ 'ಮತ್ತೊಬ್ಬರಿಗೆ' ಅದನ್ನು ಪಾಸ್ ಮಾಡಿ, ಬೇರೆಯವರೇ ತೀರ್ಮಾನ ತೆಗೆದುಕೊಳ್ಳಲಿ ಅಂತ ಬಯಸುತ್ತಾರೆ. ಮೊದಲು ಪಾರ್ಲಿಮೆಂಟ್, ಆಮೇಲೆ ಹೈಕೋರ್ಟ್, ತದನಂತರ ಸುಪ್ರೀಂ ಕೋರ್ಟ್, ಮತ್ತೆ ಪಾರ್ಲಿಮೆಂಟ್, ಈಗ ಪಂಚಸದಸ್ಯರ ಪೀಠಕ್ಕೆ! ಈ ಉರಿವ ಕೆಂಡ ಒಬ್ಬರಿಂದ ಒಬ್ಬರಿಗೆ ಪಾಸ್ ಆಗುತ್ತಲೇ ಬರುತ್ತಿದೆ. ಆದರೆ ಕೋರ್ಟ್‌ನ ಈ ಹೊಸ ತೀರ್ಮಾನದಿಂದಾಗಿ ಸಣ್ಣ ಆಶೆಯ ಮಿಂಚೊಂದು ಮಿಂಚುತ್ತಿದೆ; ಸದ್ಯ ಅರ್ಜಿಯನ್ನೇ ಕೋರ್ಟ್ ತಿರಸ್ಕರಿಸಿಲ್ಲವಲ್ಲ ಎಂಬ ಸಮಾಧಾನವೂ ಇದೆ.

** 377 ಕಾಯ್ದೆಯನ್ನು ರದ್ದುಗೊಳಿಸಬಾರದೆಂದು ಒತ್ತಾಯಿಸುವ ಸಂಪ್ರದಾಯವಾದಿಗಳಿಗೆ ನೀವು ಏನು ಹೇಳಬಯಸುತ್ತೀರಿ?*



ವಿಶ್ವಾಸ್: 377 ಕಾಯ್ದೆಯು ನಿಸರ್ಗಕ್ಕೆ ವಿರುದ್ಧವಾಗಿ ನಡೆಸುವ ಯಾವುದೇ ಬಗೆಯ ಲೈಂಗಿಕಕ್ರಿಯೆ ಶಿಕ್ಷಾರ್ಹ ಅಪರಾಧ ಅಂತ ಹೇಳುತ್ತೆ. ನಿಸರ್ಗಕ್ಕೆ ವಿರುದ್ಧವಾಗಿ ಅಂದರೆ ಏನು? ಈ ಆಯಾಮದಿಂದ ಯೋಚನೆ ಮಾಡುವುದಾದರೆ, ಅನೈಸರ್ಗಿಕವಾದ ಬಟ್ಟೆಗಳು, ಕಾರುಗಳು ಮತ್ತು ಔಷಧಿಯಂತಹ ಎಲ್ಲಾ ಮ್ಯಾನ್‌ಮೇಡ್ ಐಟಮ್ಮುಗಳನ್ನೂ ನಾವು ನಿಷೇಧಿಸಬೇಕಾಗುತ್ತೆ ಮತ್ತು ನೈಸರ್ಗಿಕ ಪ್ರಕ್ರಿಯೆಗಳೇ ಆದ ಅಣುಬಾಂಬ್ ಮತ್ತು ಗನ್‌ಗಳನ್ನೇ ಹೆಚ್ಚೆಚ್ಚು ಉತ್ಪಾದಿಸಬೇಕಾಗುತ್ತೆ, ಅಂದ್ರೆ, ಪ್ರೀತಿಸುವವರನ್ನು ನಿಷೇಧ ಮಾಡಬೇಕು, ಆದ್ರೆ ನಮ್ಮೆಲ್ಲರನ್ನೂ ಕೊಲ್ಲುವ ಶಸ್ತ್ರಾಸ್ತ್ರಗಳನ್ನು ಹೆಚ್ಚೆಚ್ಚು ಉತ್ಪಾದಿಸಬೇಕು. ಇದೆಂತಹ ವಿಪರ್ಯಾಸ!

** ಯಾವ ಧರ್ಮ ಈ ವಿಚಾರದಲ್ಲಿ ಮುಕ್ತವಾಗಿದೆ ಮತ್ತು 377 ಕಾಯ್ದೆಯನ್ನು ಒಪ್ಪಿಕೊಳ್ಳುತ್ತದೆ ಅಂತ ನಿಮಗನ್ನಿಸುತ್ತದೆ?*

ವಿಶ್ವಾಸ್: ಎಲ್ಲಾ ಧರ್ಮದ ಮೂಲಭೂತವಾದಿಗಳು ಒಂದೇ ಘಟದಲ್ಲಿದ್ದಾರೆ. ಈ ವಿಚಾರದಲ್ಲಿ ಮುಸ್ಲಿಂ, ಹಿಂದೂ ಮತ್ತು ಕ್ರಿಶ್ಚಿಯನ್ ಮೂಲಭೂತವಾದಿಗಳು ಹೆಚ್ಚೂಕಮ್ಮಿ ಒಂದೇ ತರನಾಗಿ ಆಲೋಚಿಸುತ್ತಾರೆ. ಮಲಗುವ ಕೋಣೆಯ ಸ್ವಾತಂತ್ರ್ಯದ ಬಗ್ಗೆ ಅವರ್‍ಯಾರಿಗೂ ನಂಬಿಕೆ ಇಲ್ಲ, ನನ್ನ ಮನಸ್ಸಿನ ಮೇಲೆ ಮಾತ್ರವಲ್ಲ, ನನ್ನ ಶಿಶ್ನದ ಮೇಲೂ ಬಿಗಿಯಾದ ತೊಗಲು ಬಿಗಿದುಕೊಂಡಿರಬೇಕೆಂದು ಅವರೆಲ್ಲಾ ಬಯಸುತ್ತಾರೆ. ದ್ವಿಲಿಂಗಿ (ಪುರುಷ ಮತ್ತು ಮಹಿಳೆ) ಕಾಮಿಗಳು ಸಹ ಗುದಮೈಥುನ ಅಥವಾ ಮುಖಮೈಥುನವನ್ನು ಅನುಭವಿಸುತ್ತಾರೆ ಅಂತ ನಿಮಗೆ ಗೊತ್ತಿಲ್ಲವೇ? ಸಂಪ್ರದಾಯಬದ್ಧ 377 ಕಾಯ್ದೆಯ ಪ್ರಕಾರ ಅವರೂ ಶಿಕ್ಷಾರ್ಹ ಅಪರಾಧಿಗಳೆ.

** ಯುವ ಸಲಿಂಗಿಗಳಿಗೆ ನಿಮ್ಮ ಸಂದೇಶವೇನು?*

ವಿಶ್ವಾಸ್: ಹೆದರುವ ಅವಶ್ಯಕತೆಯೇ ಇಲ್ಲ, 25 ವರ್ಷಗಳ ಹಿಂದೆಯೇ, ಅಂದರೆ ನಮ್ಮ ಪೀಳಿಗೆ ಇನ್ನೂ ಕಟ್ಟುನಿಟ್ಟಿನ ಮತ್ತು ಸಂಪ್ರದಾಯವಾದಿ ವಾತಾವರಣದಲ್ಲಿ ಇದ್ದಂತಹ ಸಂದರ್ಭದಲ್ಲೇ, ನಾನು ಕಟ್ಟಳೆಗಳನ್ನು ಮುರಿದುಕೊಂಡು ಹೊರಬಂದಿದ್ದೇನೆ. ನನ್ನ ಹೆತ್ತವರು, ಸೋದರ-ಸೋದರಿಯರು, ಸಂಬಂಧಿಕರು, ಸ್ನೇಹಿತರು, ನೆರೆಹೊರೆಯವರು, ಸಹೋದ್ಯೋಗಿಗಳು, ಒಡನಾಡಿಗಳು ಎಲ್ಲರೂ ನನ್ನನ್ನು ಮುಕ್ತವಾಗಿ ಸ್ವೀಕರಿಸಿದ್ದಾರೆ. ಸಲಿಂಗಿ ಎನ್ನುವ ಕಾರಣಕ್ಕೆ ಯಾರೂ ನನ್ನೊಂದಿಗಿನ ಬಾಂಧವ್ಯವನ್ನು ಕತ್ತರಿಸಿಕೊಂಡು ಹೋಗಿಲ್ಲ. ನಿಮ್ಮ ಜೀವನದಲ್ಲೂ ಇದೇ ಘಟಿಸುತ್ತದೆ. ಮೊದಲು ಆರ್ಥಿಕವಾಗಿ ಸ್ವಾವಲಂಬಿಗಳಾಗಿ. ನಿಮ್ಮ ಕೆಲಸದ ಮೇಲೆ ಗಮನಹರಿಸಿ. ಚೆನ್ನಾಗಿ ಸಂಪಾದನೆ ಮಾಡಿ. ನೀನು ನಿನ್ನ ಸಲಿಂಗಿ ವ್ಯಕ್ತಿತ್ವದೊಳಗೆ ಯಾವಾಗ ಆತ್ಮವಿಶ್ವಾಸದಿಂದ ಮತ್ತು ಆರಾಮದಾಯಕವಾಗಿ ಜೀವಿಸಲಾರಂಭಿಸುವೆಯೋ ಆಗ ಜನ ನಿನ್ನನ್ನು ಒಪ್ಪಿಕೊಳ್ಳುತ್ತಾರೆ, ನಿನ್ನನ್ನು ಅವರು ಹೊಗಳಲೂಬಹುದು. ಇಂತಹ ಸಂಗತಿಗಳನ್ನು ಸ್ವೀಕರಿಸುವಲ್ಲಿ ಧಾರ್ಮಿಕ ಸಂಪ್ರದಾಯವಾದಿಗಳಿಗಿಂತ ಬೀದಿ ಬದಿಯ ಕಾಮನ್ ಮ್ಯಾನ್ ಹೆಚ್ಚು ಮುಕ್ತನಾಗಿರುತ್ತಾನೆ.

ವಿರೋಧಿಯಾದುದು ಎಂದು ವ್ಯಾಖ್ಯಾನಿಸುತ್ತದೆ. ಪರಸ್ಪರ ವ ಕಾರಣಕ್ಕಾಗಿಯೇ ಇಬ್ಬರು ಹುಡುಗರು ಜೈಲು ಕಾದಂತಹ ವಾತಾವರಣ ನಾಗರಿಕತೆಗೆ ಒಪ್ಪುವಂತಹುದೆ? ಎನ್ನುವ ಮಕ್ಕೆ ಒಂದು ಅಗ್ನಿಪರೀಕ್ಷೆಯೇ ಸರಿ.

ಗರಿಕ ಕಾನೂನು ಹೇಳುತ್ತದೆ, ಒಬ್ಬ ಹುಡುಗ ಇನ್ನೊಂದು ಗಿಯನ್ನೇ ಪ್ರೀತಿಸಬೇಕು. ಹುಡುಗ ಇನ್ನೊಬ್ಬ ಹುಡುಗನನ್ನು ವುದು ಅಪರಾಧ. ಸರಿ. ಅದನ್ನು ಒಪ್ಪಿ ಒಬ್ಬ ಹುಡುಗ ದು ಹುಡುಗಿಯನ್ನು ಪ್ರೀತಿಸುವುದಕ್ಕೆ ಸಾಧ್ಯವೋ ಎಂದು ಬಹುದು. ಪ್ರೇಮವೆನ್ನುವುದು ಶ್ರಮದಿಂದ ಹುಟ್ಟುವಂತಹದಲ್ಲ ದು ಗೊತ್ತಿದ್ದೂ ಅದಕ್ಕಾಗಿ ಆತ ಶ್ರಮಿಸಬಹುದು. ಬಾಬಾ ದೇವ್‌ನಂತಹ ನಕಲಿ ಕಂಪನಿಗಳಿಂದ ನಕಲಿ ಔಷಧಿಗಳನ್ನು ಸೇವಿಸಿ ಹೋಗಬಹುದು. ಕಟ್ಟಕಡೆಗೆ ವಿಫಲನಾಗಿ ಹತಾಶನಾಗಬಹುದು. ಹುಡುಗನ ಜೊತೆಗಿನ ತನ್ನ ಪ್ರೀತಿಯನ್ನು ಅದುಮಿಕ್ಕಲು ಅವನು ನುದ್ದಕ್ಕೂ ತನ್ನೊಳಗಿನ ಪ್ರೇಮದ ಅನುಭೂತಿಯ ಜೊತೆಗೆ ಡಬೇಕಾಗಬಹುದು. ಒಬ್ಬ ತನಗೆ ಕುರಿ ಇಷ್ಟ, ಕೋಳಿ ಇಷ್ಟ, ಇಷ್ಟ ಎಂದು ಇಷ್ಟಪಟ್ಟಂತಲ್ಲ ಪ್ರೇಮ ಎನ್ನುವುದು. ತಾನು ಪ್ರೇಮಿ ಎನ್ನುವುದನ್ನು ನಿರ್ಧರಿಸುವುದು ಸ್ವಯಂ ಅವನಲ್ಲ. ನು ರೂಪಿಸುವವರು ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು."

ನಗೆ ಹಲವಾರು 'ಗೇ' ಮಿತ್ರರಿದ್ದಾರೆ. ಅವರಲ್ಲಿ ಕೆಲವರು ಮಾತ್ರ ಲೈಂಗಿಕ ಆಯ್ಕೆಯನ್ನು ಬಹಿರಂಗಪಡಿಸಿದ್ದರೆ ಅದೆಷ್ಟೋ ಜನ ೂ ಅದನ್ನು ಮುಚ್ಚಿಟ್ಟು ಬದುಕುತ್ತಿದ್ದಾರೆ. ಅವರು ಕಾನೂನಿಗೆ ಅಪರಾಧ ಪ್ರಜ್ಞೆಯಲ್ಲಿ, ಸಮಾಜದ ಬಹಿಷ್ಕಾರಕ್ಕೆ ಬೆದರಿ ಾನದಲ್ಲಿ 'ಅಶಾಂತ ಆತ್ಮ'ಗಳಂತೆ ಬದುಕುತ್ತಿದ್ದಾರೆ. ಎಲ್ಲಿಯತನಕ ಸಮಾಜ ಮತ್ತು ಕಾನೂನು ಅವರನ್ನು ಅವರಾಗಿಯೇ ಬದುಕಲು ಡುದಿಲ್ಲವೋ ಅಲ್ಲಿಯತನಕ ಅವರ ಆತ್ಮಗಳಿಗೆ ನೆಮ್ಮದಿ ಎನ್ನುವುದು ಚಿಕೆಯೇ ಆಗಿರುತ್ತದೆ.

ಲಿಂಗಕಾಮಿಗಳ ಬದುಕು ಎಷ್ಟು ಕಷ್ಟಕರವಾದದ್ದು ಎಂದು ಸಲು ಇಲ್ಲಿ ಇಬ್ಬರು 'ಗೇ'ಗಳ ಕತೆಯನ್ನು ನೀಡುತ್ತೇನೆ. ಒಬ್ಬ 'ಗೇ' ೂರಿನ ಶ್ರೀಮಂತ ಲಿಂಗಾಯತ ಕುಟುಂಬದವನು. ಆದರೆ ಆತ ಂದೆ ತಾಯಿಗೆ, ಸಮಾಜಕ್ಕೆ, ಕಾನೂನಿಗೆ ಹೆದರಿ ತಾನು 'ಗೇ' ದನ್ನು ಮುಚ್ಚಿಟ್ಟಿದ್ದ. ನನ್ನ ಗೆಳತಿಯೊಬ್ಬಳನ್ನು ಅವನಿಗೆ ಕೊಟ್ಟು ವೆ ಮಾಡಲಾಯಿತು. ಆಕೆ ಮತ್ತು ಆತ, ಇಬ್ಬರೂ ಆ ದಾಂಪತ್ಯದಲ್ಲಿ ದ್ದು ನರಕಯಾತನೆ ಮಾತ್ರ. ಕೊನೆಗೂ ನನ್ನ ಗೆಳತಿ ಧೈರ್ಯ ಮಾಡಿ ದ ವಿಚ್ಛೇದನ ಪಡೆಯುವ ಮೂಲಕ ತನ್ನ ಬದುಕನ್ನು ಗೊಳಿಸಿಕೊಂಡಳು. ಆದರೆ ಆತನಿಗೆ ತನ್ನ 'ಗೇ'ತನದಿಂದ ಡೆಯೇ ಇಲ್ಲದೆ ಆ ಕೊರಗಿನಲ್ಲೇ ಆತ ಸಾವನ್ನಪ್ಪಿದ.

ದರೆ ಇನ್ನೊಬ್ಬ ಮಿತ್ರ ವಿಶ್ವಾಸ್ ಹಾಗಲ್ಲ. ಆತ ಚಿಕ್ಕವನಾಗಿದ್ದಾಗಲೆ ಗೆ ತಾನು 'ಗೇ' ಎಂದು ಗೊತ್ತಾಗಿತ್ತು. ಅದನ್ನು ತನ್ನ ಹೆತ್ತವರಿಗೆ ು ಆತ ತುಂಬಾ ಪ್ರಯತ್ನಪಟ್ಟ. ಆದರೆ ಅದನ್ನು ಒಪ್ಪಲು ಅವರು ಲಿಲ್ಲ. ಕೊನೆಗೆ ಆತ ಕಾಲೇಜು ಮುಗಿಸಿದನಂತರ "ನಾನು 'ಗೇ' ಹೇಳಿದರೂ ನೀವು ಅದನ್ನು ಒಪ್ಪುತ್ತಿಲ್ಲ. ಇಂತಹ ಕಪಟ ನ್ನು ನಾನು ಸಹಿಸಲಾರೆ. ಆದ್ದರಿಂದ ನಾನು ನಿಮ್ಮನ್ನು ಬಿಟ್ಟು ಟುಹೋಗುತ್ತೇನೆ" ಎಂದು ಪತ್ರ ಬರೆದಿಟ್ಟು ಮುಂಬೈಗೆ ೋದ. ಯಾವುದೇ ತಂದೆತಾಯಿಗೆ ಆದ ಆತಂಕ ವಿಶ್ವಾಸನ ಿಗೂ ಆಯಿತು. ಮಗ ಸಲಿಂಗಿಯೋ ಅಲ್ಲವೋ, ಆತ ತಮ್ಮ ರಿಗಿದ್ದರೆ ಸಾಕು ಎಂದು ಇಬ್ಬರೂ ಕಣ್ಣೀರಿಡಲಾರಂಭಿಸಿದರು. ಹಲವು ನಂತರ ವಿಶ್ವಾಸ್ ಮನೆಗೆ ಹಿಂದಿರುಗಿದ. ಅವನ ಅಪ್ಪ ಮತ್ತು ಗೆ ಸಂತೋಷವಾಯಿತು. ಆದರೆ ಮಗನನ್ನು ವೈದ್ಯರಿಗೆ ಸಿದರೆ ಅವರು ಅವನನ್ನು ಸರಿ ಮಾಡುತ್ತಾರೆಂಬ ಆಶೆ ಅವರಲ್ಲಿ ಇತ್ತು. ಆಗ ವಿಶ್ವಾಸ್ ಒಂದು ಕೆಲಸ ಮಾಡಿದ. ಸಲಿಂಗಕಾಮ ರೋಗವಲ್ಲ ಎಂಬುದನ್ನು ಅರ್ಥ ಮಾಡಿಕೊಂಡಿದ್ದ ವೈದ್ಯರ ಹತ್ತಿರ ತನ್ನ ತಂದೆ ಮತ್ತು ತಾಯಿಯನ್ನು ಕರೆದುಕೊಂಡು ಹೋದ. "ನೋಡಿ, ನಿಮ್ಮ ಮಗನಿಗೆ ಯಾವುದೇ ಕಾಯಿಲೆ ಇಲ್ಲ. ಕಾಮ ಎಂಬುದೂ ಪ್ರಕೃತಿ ಸೃಷ್ಟಿಸಿರುವುದೇ ಆಗಿದೆ. ಅದನ್ನು ಔಷಧ, ಮಂತ್ರಗಳಿಂದ ಸರಿಪಡಿಸಲಾಗುವುದಿಲ್ಲ. ನಿಮ್ಮ ಇತರೆ ಮಕ್ಕಳಂತೆ ಇವನೂ ನಿಮ್ಮ ಕುಡಿಯೇ. ಸ್ವಲ್ಪ ಭಿನ್ನವಾಗಿದ್ದಾನೆ ಆದರೇನಂತೆ ಇವನೂ ಜಾಣ. ಅವನ ಅಭಿಲಾಷೆಯನ್ನು ಂಡು ಸುಮ್ಮನಾದರೆ ನಿಮಗೆ ಮತ್ತು ಅವನಿಗೂ ನೆಮ್ಮದಿ ದೆ" ಎಂದು ವಿವರಿಸಿದರು.

ಶ್ವಾಸ ಬುದ್ಧಿವಂತ, ಸೂಕ್ಷ್ಮವಂತ. ಕೈತುಂಬಾ ದುಡಿಯುತ್ತಾನೆ. ಂಬಿಯಾಗಿ ಸ್ವಾಭಿಮಾನದಿಂದ ಬದುಕುತ್ತಿದ್ದಾನೆ. ಎಲ್ಲರಂತೆ ಮೋಜು ತ್ತಾನೆ. ದಟ್ಟವಾಗಿ ಪ್ರೀತಿಸುತ್ತಾನೆ. ಅಕ್ಕ, ಅಣ್ಣ, ಅಜ್ಜಿ ಟ್ಟಿದವರ ಮಕ್ಕಳಿಗೆ ಪ್ರೀತಿ ಮತ್ತು ಅಕ್ಕರೆಯನ್ನು ತೋರುತ್ತಾನೆ. ವ್ಯಕ್ತಿಗೆ 'ನೀನು ಇನ್ನೊಬ್ಬನನ್ನು ಪ್ರೀತಿಸುವಂತಿಲ್ಲ' ಎಂದು ಹಕ್ಕು, ಸಮಾಜಕ್ಕಾಗಲಿ, ನ್ಯಾಯಾಲಯಕ್ಕಾಗಲಿ ಕೊಟ್ಟವರು ಯಾರು?

ಪ್ರೀಂ ಕೋರ್ಟ್ ಈಗ ಸೆಕ್ಷನ್ 377 ವಿಚಾರಣೆಯನ್ನು ಐವರು ಧೀಶರ ಪೀಠಕ್ಕೆ ಒಪ್ಪಿಸಿರುವುದು ಸೂಕ್ತವಾದ ಕ್ರಮ. ಆ ಪೀಠವು ದೇಶದ ಸಲಿಂಗಕಾಮಿಗಳಿಗೆ ಅನ್ಯಾಯವಾಗದಂತೆ, ಇತರರಿಗೆ ಸ್ವಾತಂತ್ರ್ಯ ಮತ್ತು ಹಕ್ಕುಗಳು ಅವರಿಗೂ ಇರುವಂತೆ ಕೊಳ್ಳುತ್ತದೆ ಎಂಬ ಆಶೆ ಇವತ್ತು ಪ್ರಜ್ಞಾವಂತರದ್ದಾಗಿದೆ.

■ ಗೌರಿ ಲಂಕೇಶ್

ಜೀ ಕನ್ನಡ ವಾಹಿನಿಯೊಳಗೆ 'ಮಹರ್ಷಿವಾಣಿ' ಪುಂಗುತ್ತಾ ಟಿ.ವಿ. ಜ್ಯೋತಿಷಿಗಳಲ್ಲಿಯೇ ನಂಬರ್ ಒನ್ ಕಿಲಾಡಿಯಾಗಿರುವ ಆನಂದ ಗುರೂಜಿಗೆ ಯಾರೋ ಪ್ರಾಣ ಬೆದರಿಕೆಯೊಡ್ಡಿ ಗಡಗಡ ನಡುಗಿಸಿಬಿಟ್ಟಿದ್ದಾರೆ. ಕೆಲವೇ ದಿನಗಳ ಹಿಂದೆ ಆತನ ಕಾರ್ ಮೇಲೆ ಕೊಲ್ಲುವ ಕರಪತ್ರ ಅಂಟಿಸಿದ್ದ ಅನಾಮಿಕರು, ಮೊನ್ನೆ ಭಾನುವಾರ ಮುಂಜಾನೆ ಕತ್ರಿಗುಪ್ಪೆಯಲ್ಲಿರುವ ಆತನ ಮನೆಯ ಮುಂದೆ ಆಟಂಬಾಂಬ್ ಬಾಕ್ಸ್ ಇಟ್ಟು ಪಿಗ್ಗೆ ಬೀಳಿಸಿದ್ದಾರೆ!

ಆನಂದ ಗುರೂಜಿಯ ಮರ್ಡರ್ ನಾಟಕ

ದಿನ ಬೆಳಗಾಗೆದ್ದು ಟಿ.ವಿ. ಚಾನೆಲ್ಲುಗಳಲ್ಲಿ ಬುರುಡೆ ಭವಿಷ್ಯ ನುಡಿದು, ಅಮಾಯಕ ಜನರನ್ನು ಮಾನಸಿಕವಾಗಿ ಕೊಲ್ಲುತ್ತಿರುವ ಕಳ್ಳ ಜ್ಯೋತಿಷಿಗಳನ್ನು ಒದ್ದು ಒಳಗೆ ಹಾಕಬೇಕು ಎಂದು ಸಿ.ಎಂ. ಸಿದ್ದರಾಮಯ್ಯ ನುಡಿದ ಬೆನ್ನಿಗೇ ಒಬ್ಬ ಬುರುಡೆ ಜ್ಯೋತಿಷಿಗೆ ಪ್ರಾಣ ಬೆದರಿಕೆಯೊಡ್ಡಿರುವ ಘಟನೆ ನಡೆದಿದೆ!



ಆತನೇ ಆನಂದ ಗುರೂಜಿ!!

ಈತ ಜೀ ಕನ್ನಡ ವಾಹಿನಿಯಲ್ಲಿ 'ಮಹರ್ಷಿವಾಣಿ' ಪುಂಗುತ್ತಾನೆ. ಈ ಮೊದಲು ಈ ಟೀವಿ, ಪಬ್ಲಿಕ್ ಟೀವಿಗಳಲ್ಲೆಲ್ಲಾ ಅಡ್ಡಾಡಿ, ಕಡೆಗೆ ಜೀ ಕನ್ನಡ ವಾಹಿನಿಗೆ ತೂರಿಕೊಂಡಿದ್ದಾನೆ. ಸದ್ಯಕ್ಕೆ ಟಿ.ವಿ. ಜ್ಯೋತಿಷಿಗಳಲ್ಲಿ ಅತ್ಯಂತ ಪಾಪ್ಯುಲಾರಿಟಿ ಪಡೆದಿರುವಾತ ಈತನೇ. ಈ ಹಿಂದೆ ಗೌರಿಬಿದನೂರಿನಿಂದ ಬಸ್ಸಲ್ಲಿ ಬೆಂಗಳೂರಿಗೆ ಬಂದು, ಬನ್ನೇರುಘಟ್ಟ ನ್ಯಾಷನಲ್ ಪಾರ್ಕ್‌ನಲ್ಲಿ ವಾಚ್‌ಮನ್ ನೌಕರಿ ಮಾಡಿಕೊಂಡಿದ್ದ ಆನಂದ್. ಆಗ ಪಾರ್ಕ್‌ನ ಎಂಟ್ರೆನ್ಸ್‌ನಲ್ಲಿದ್ದ ಗಣಪತಿ ದೇವಾಲಯದಲ್ಲಿ ಗಂಟೆ ಅಲ್ಲಾಡಿಸುತ್ತಾ ಚಿಲ್ಲರೆ ಕಾಸು ಮಾಡಿಕೊಳ್ಳುತ್ತಿದ್ದ. ಅಲ್ಲಿ ಈತ ಅದೇನು ಅವಾಂತರ ಮಾಡಿದನೋ ಏನೋ. ಅವನನ್ನು ನ್ಯಾಷನಲ್ ಪಾರ್ಕ್‌ನವರು ಓಡಿಸಿದರು. ಅಲ್ಲಿಂದ ಬನಶಂಕರಿ ದೇವಸ್ಥಾನಕ್ಕೆ ಬಂದು ವಕ್ಕರಿಸಿದ ಆನಂದ. ಅಲ್ಲಿಯೂ ಸಹ ಅಪರಾತಪರಾ ನಡೆಸಿ ಗೆಟ್‌ಔಟ್ ಆಗಿದ್ದ. ಇಂತಹ ವ್ಯಕ್ತಿ ಈಗ ಅಂಬಾರಿಯ ಮೇಲೇರಿ ಲಕ್ಷಾಂತರ ಅಮಾಯಕ ಭಕ್ತರಿಂದ ಪಾದಪೂಜೆ ಮಾಡಿಸಿಕೊಳ್ಳುತ್ತಾನೆ!

ಇಂತಹ ಅವಿವೇಕಿಯನ್ನು ಅದ್ಯಾವ ಪಾಪಿಗಳು ಟಿ.ವಿ. ಚಾನೆಲ್ಲುಗಳಿಗೆ ಕರೆತಂದರೋ ಗೊತ್ತಿಲ್ಲ. ಆದರೆ ಎಂಟ್ರಿ ಪಡೆದದ್ದೇ ಆತನ ಅದೃಷ್ಟ ಖುಲಾಯಿಸಿಬಿಟ್ಟಿತು. ಈಗ ಇವನು ಟಿ.ವಿ. ಜ್ಯೋತಿಷಿಗಳಲ್ಲಿಯೇ ನಂಬರ್ ಒನ್ ಕಿಲಾಡಿ! ಜೀ ಕನ್ನಡ ವಾಹಿನಿಯಲ್ಲಿ ಪ್ರೋಗ್ರಾಂ ನಡೆಸಿಕೊಡುವುದರ ಜೊತೆಗೆ ಬಾಬಾ ರಾಂದೇವ್ ತರಹ ತಾನೂ ಹಲವಾರು ಆಯುರ್ವೇದದ ಔಷಧಿಗಳನ್ನು ಸಿದ್ಧಪಡಿಸಿ ಮೆಡಿಕಲ್ ಸ್ಟೋರ್‌ಗಳಿಗೆ ರವಾನಿಸುತ್ತಿದ್ದಾನೆ.

ಗೊರವನಹಳ್ಳಿಯ ಲಕ್ಷ್ಮಿ ದೇವಸ್ಥಾನದ ಆವರಣದಲ್ಲಿ ಸಾಕ್ಷಾತ್ ಲಕ್ಷ್ಮಿಯನ್ನು ಅವತರಿಸುತ್ತೇನೆಂದು ಲಕ್ಷಾಂತರ ಭಕ್ತರಿಂದ ವಂತಿಗೆ ವಸೂಲಿ ಮಾಡಿದ್ದ ಭೂಪ ಈ ಆನಂದ! ಆವತ್ತು ಜನಬಿಸಿಲಲ್ಲಿ ಒಣಗಿ, ಕಾಲ್ತುಳಿತಕ್ಕೆ ಸಿಲುಕಿ ಕೈಕಾಲು ಮುರಿದುಕೊಂಡಿದ್ದನ್ನು ಆ ಭಾಗದ ಜನ ಇಂದಿಗೂ ಮರೆತಿಲ್ಲ. ಇಂತಹ ಬೊಗಳೆ ದಾಸನ ಜ್ಯೋತಿಷ್ಯ ಶಾಸ್ತ್ರವನ್ನು ಮತ್ತು ಆಯುರ್ವೇದದ ಔಷಧಿಗಳನ್ನು ಅದ್ಯಾವ ದಡ್ಡಬಡ್ಡೀ ಮಕ್ಕಳು ಖರೀದಿಸುತ್ತಾರೋ ಈ ವಿಚಾರ ಒತ್ತಟ್ಟಿಗಿರಲಿ.



ಹೀಗೆ ತಿಂಗಳ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಟಿ.ವಿ.ಗಳಲ್ಲಿ ಬರುವ ಬುರುಡೆ ಜ್ಯೋತಿಷ್ಯವನ್ನು ನಿಷೇಧಿಸಬೇಕು ಎಂದು ಘರ್ಜಿಸಿದ್ದರು. ಇದಕ್ಕೆ ಕೆಲವು ಜ್ಯೋತಿಷಿಗಳಿಂದ ಹಾಗೂ ಮಠಾಧೀಶರಿಂದ ವಿರೋಧ ವ್ಯಕ್ತವಾಗಿತ್ತು. ಆದರೂ ಪಟ್ಟು ಸಡಿಲಿಸದ ಸಿಎಂ ಸಿದ್ದರಾಮಯ್ಯ ಕಾನೂನುಪಂಡಿತರನ್ನು ಸಂಪರ್ಕಿಸಿ ಈ ಪ್ರಕ್ರಿಯೆಯನ್ನು ಮುಂದುವರೆಸಿದ್ದಾರೆ. ಇಂತಹ ಸಂದರ್ಭದಲ್ಲಿಯೇ ಬುರುಡೆ ಜ್ಯೋತಿಷಿ ಆನಂದ ಗುರೂಜಿಗೆ ಯಾರೋ ಪ್ರಾಣ ಬೆದರಿಕೆಯೊಡ್ಡಿದ್ದಾರೆ!



ಹರಿಶೇಖರನ್

ಕಾರ್ ಮೇಲೆ ಕರಪತ್ರ

ಕೆಲವೇ ದಿವಸಗಳ ಹಿಂದೆ ಆನಂದ ವಿಜಯನಗರದಲ್ಲಿ ತನ್ನ ಕಾರ್ ನಿಲ್ಲಿಸಿ ಯಾರದ್ದೊ ಮನೆಯಲ್ಲಿ ಪೂಜೆ ಹಾಕುತ್ತಿದ್ದಾಗ, ಯಾರೋ ಅನಾಮಿಕರು ಈತನ ಕಾರ್ ಗ್ಲಾಸ್‌ನ ಮೇಲೆ "ಕೊಲ್ತೀವಿ" ಎಂಬ ಕರಪತ್ರವನ್ನು ಅಂಟಿಸಿದ್ದರು. ಆಗ ಈತ ವಿಜಯನಗರ ಪೊಲೀಸ್ ಸ್ಟೇಷನ್‌ನಲ್ಲಿ ಕಂಪ್ಲೇಂಟ್ ಕೊಟ್ಟಿದ್ದ. ಇತ್ತೀಚೆಗೆ ಸಿಎಂ ಸಿದ್ದು ಟಿ.ವಿ. ಜ್ಯೋತಿಷ್ಯವನ್ನು ಬ್ಯಾನ್ ಮಾಡ್ತೀನಿ ಎಂದು ರೇಗಿದ್ದಾಗ, ಈ ಆನಂದ "ಮುಖ್ಯಮಂತ್ರಿಗಳು ಜ್ಯೋತಿಷ್ಯ ಶಾಸ್ತ್ರವನ್ನು ಅವಮಾನಿಸುವ ಬದಲು, ಗೋಹತ್ಯೆಯನ್ನು ನಿಷೇಧಿಸಲಿ" ಎಂದು ಕಿಂಡಲ್ ಮಾಡಿದ್ದ!



ಲೋಕೇಶ್ ಕುಮಾರ್

ಕೋಳಿ, ಕುರಿ, ಮೇಕೆಗಳ ಹಾಗೆ ಪಶು ಕೂಡ ಒಂದು ವರ್ಗದ ಜನರ ಆಹಾರ ಎಂದು ಗೊತ್ತಿದ್ದೂ ಈ ಖದೀಮ ಜ್ಯೋತಿಷಿ ಆನಂದ ಈ ಮಾತು ಆಡಿದ್ದು ಹಲವರಿಗೆ ಕೋಪ ತರಿಸಿದ್ದು ಸುಳ್ಳಲ್ಲ. ಇಂತಹ ಸಂದರ್ಭದಲ್ಲಿಯೇ ಕತ್ರಿಗುಪ್ಪೆಯಲ್ಲಿರುವ ಈತನ ಬಂಗಲೆಯ ಮುಂಭಾಗದಲ್ಲಿ 'ಬಾಂಬ್ ಬಾಕ್ಸ್' ಇಡಲಾಗಿದೆ! ಮೊನ್ನೆ ಜನವರಿ 31, 2016 ಭಾನುವಾರ ಯಾರೋ ಅನಾಮಿಕರು ಆನಂದನ ಮನೆಯ ಮುಂದೆ ಆಟಂಬಾಂಬ್ ತುಂಬಿದ ಬಾಕ್ಸ್ ಇಟ್ಟು, ಅದರ ಜೊತೆಗೆ ಒಂದು ಕರಪತ್ರವನ್ನೂ ಇಟ್ಟಿದ್ದರು. ಆ ಬಾಕ್ಸ್‌ನ ಮೇಲೆ ಆನಂದನ ಭಾವಚಿತ್ರವನ್ನು ಅಂಟಿಸಲಾಗಿತ್ತು. ಅದನ್ನು ವೀಕ್ಷಿಸಿದ ಆನಂದ ಚನ್ನಮ್ಮನಕೆರೆ ಅಚ್ಚುಕಟ್ಟು ಪೊಲೀಸರಿಗೆ ಕರೆ ಮಾಡಿದ್ದಾನೆ. ಅವರು ಬಾಂಬ್ ಸ್ಕ್ವಾಡ್ ಕರೆಸಿ ಪರಿಶೀಲಿಸಿದಾಗ, ಆ ಬಾಕ್ಸ್ ಒಳಗೆ ಒಂದಿಷ್ಟು ಪಟಾಕಿಗಳು, ಆಟಂಬಾಂಬ್‌ಗಳು ಸಿಕ್ಕಿವೆ! ಅವುಗಳ ಜೊತೆಗಿದ್ದ ಕರಪತ್ರದಲ್ಲಿ "ಲೇ ಆನಂದಾ, ನೀನು ಇತ್ತೀಚೆಗೆ ಗೋಹತ್ಯೆ ನಿಷೇಧದ ಬಗ್ಗೆ ಮಾತಾಡುತ್ತಿದ್ದೀಯಾ, ಅದು ನಮ್ಮ ಆಹಾರ ಪದ್ಧತಿ. ಇನ್ನು ಹದಿನೈದು ದಿನಗಳಲ್ಲಿ ನಿನ್ನ ಕತೆ ಮುಗಿಸುತ್ತೇವೆ" ಎಂದು ಬರೆಯಲಾಗಿತ್ತು! ಡಿಸಿಪಿ ಲೋಕೇಶ್ ಕುಮಾರ್ ತನಿಖೆ ನಡೆಸುತ್ತಿದ್ದಾರೆ. ಆಶ್ಚರ್ಯವೇನೆಂದರೆ, ಆನಂದ ಗುರೂಜಿಯ ಮನೆಯ ಮುಂದೆ ನಡೆದಿದೆ ಎನ್ನಲಾದ ಈ ವಿಲಕ್ಷಣ ಘಟನೆಯ ದೃಶ್ಯಾವಳಿ ಆತನ ಮನೆಯ ಮುಂದೆ ಅಳವಡಿಸಿರುವ ಸಿ.ಸಿ. ಕ್ಯಾಮರಾದೊಳಗೆ ರೆಕಾರ್ಡ್ ಆಗಿಲ್ಲ! ಬೊಗಳೆ ದಾಸ ಆನಂದ "ಸಿ.ಸಿ. ಕ್ಯಾಮರಾ ಕೆಟ್ಟಿತ್ತು ರಿಪೇರಿ ಮಾಡಿಸಬೇಕಿದೆ" ಎನ್ನುತ್ತಿದ್ದಾನೆ. ಇದೊಂದೇ ಕಾರಣದಿಂದ ಈತನೇ ಈ ವಿಲಕ್ಷಣ ಕೃತ್ಯವನ್ನು ಸೃಷ್ಟಿಸಿದ್ದು ಎಂಬುದು ಗೊತ್ತಾಗುತ್ತದೆ. ಈತ ಹೆಚ್ಚಿನ ಪ್ರಚಾರ ಗಿಟ್ಟಿಸಲು ಈ ಪ್ರಯತ್ನ ಮಾಡಿದನಾ ಎಂಬ ಅನುಮಾನ ಬರುತ್ತದೆ! ಅಂದಹಾಗೆ ಈತ ತನಗೆ ಗನ್‌ಮ್ಯಾನ್ ಬೇಕೆಂದು ಪೊಲೀಸ್ ಇಲಾಖೆಯ ವಿನಂತಿಸಿದ್ದನಂತೆ. ಜ್ಯೋತಿಷಿಗೇಕೆ ಗನ್‌ಮ್ಯಾನ್ ಎಂದುಕೊಂಡು ಈತನ ಮನವಿಯನ್ನು ಪೆಂಡಿಂಗ್ ನಲ್ಲಿಟ್ಟಿತ್ತು ಪೊಲೀಸ್ ಇಲಾಖೆ! ಖತರ್‌ನಾಕ್ ಕಿಲಾಡಿ ಆನಂದ ಗುರೂಜಿ ಶತಾಗತಾಯ ತಾನು ಪೊಲೀಸ್ ರಕ್ಷಣೆ ಪಡೆದುಕೊಳ್ಳಲೇಬೇಕೆಂದು ನಿರ್ಧರಿಸಿ ಈ ಪಟಾಕಿಬಾಂಬ್ ಡ್ರಾಮಾ ಸೃಷ್ಟಿಸಿರ ಬಹುದೆ?

ಚನ್ನಮ್ಮನಕೆರೆ ಪೊಲೀಸರು ಸರಿಯಾಗಿ ತನಿಖೆ ನಡೆಸಿದರೆ ಸತ್ಯ ಹೊರಬರುತ್ತೆ!

ರಿಯಲ್ ಎಸ್ಟೇಟ್

ಬಲ್ಲ ಮೂಲಗಳ ಪ್ರಕಾರ ಬೊಗಳೆ ದಾಸ ಆನಂದ ಗುರೂಜಿ ಅಮಾಯಕ ಜನರಿಂದ ದೋಚಿರುವ ದುಡ್ಡನ್ನೆಲ್ಲಾ ಭೂಮಿ ಮೇಲೆ ಸುರಿದು ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದಾನೆ! ಮಾಗಡಿ, ಕನಕಪುರದ ಕಡೆ ಹೆಚ್ಚಿನ ವಹಿವಾಟು ನಡೆಸುತ್ತಿದ್ದಾನೆ. ಈ ಹಿನ್ನೆಲೆಯಲ್ಲಿ ಹಲವಾರು ಶತ್ರುಗಳೂ ಹುಟ್ಟಿಕೊಂಡಿದ್ದಾರೆ. ಇವನಿಗೆ ಅರ್ಜೆಂಟಾಗಿ ಪೊಲೀಸ್ ರಕ್ಷಣೆ ಬೇಕಿದೆ. ಹೀಗಾಗಿ 'ಬಾಂಬ್ ಕತೆ' ಸೃಷ್ಟಿಸಿದ್ದಾನೆ ಎಂಬುದೇ ಈಗಿನ ಅನುಮಾನ. ಡಿಸಿಪಿ ಲೋಕೇಶ್ ಕುಮಾರ್ ಆನಂದನನ್ನು ಗುರೂಜಿ [illegible] ಅಂತ ಕರುಣೆ ತೋರಿಸದೆ ಖಡಕ್ಕಾದ ವಿಚಾರಣೆ ನಡೆಸಿದರೆ ಸತ್ಯ ಹೊರಬೀಳಲಿದೆ!

■ ವರದಿಗಾರ

ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ಬಹುಮಾನ ವಿಜೇತ ಕತೆ

ಗಾಂಧಿ ಮೇಷ್ಟ್ರು



1998 ಜನವರಿ 30. ಗಾಂಧೀಜಿ ನಾಥೂರಾಂ ಗೋಡ್ಸೆಯ ಗುಂಡಿಗೆ ಎದೆಯೊಡ್ಡಿ ಹುತಾತ್ಮರಾಗಿ ಅಂದಿಗೆ ಬರೋಬ್ಬರಿ 50 ವರ್ಷಗಳು. ಕಾಲೇಜಿನಲ್ಲಿ ಹುತಾತ್ಮ ದಿನಾಚರಣೆಯ ಪ್ರಯುಕ್ತ ಗಾಂಧಿ ಸಂದೇಶ ಪ್ರಚಾರ ಅಭಿಯಾನ ಎಂಬ ಕಾರ್ಯಕ್ರಮ ಆಯೋಜಿಸಲಾಗಿತ್ತು. ಆದುದರಿಂದ ಎಂದಿಗಿಂತಲೂ ತುಸು ಮುನ್ನವೇ ಕಾಲೇಜಿಗೆ ಹೊರಡಲನುವಾಗುತ್ತಿದ್ದೆ. ಪಕ್ಕದ ಮನೆಯ ಮೇರಿ ಬಾಯಮ್ಮ ಲಗುಬಗನೇ ನಮ್ಮ ಮನೆಯೆಡೆಗೆ ನಡೆದು ಬರುತ್ತಿದ್ದುದನ್ನು ಕಿಟಕಿಯಿಂದ ನೋಡಿದೆ. ಒಂದು ನಿಮಿಷವೂ ಕಳೆದಿರಲಿಲ್ಲ, ಉಮ್ಮನ ಬಾಯಿಂದ ಹೊರಟ ಯಾ ಅಲ್ಲಾಹ್ ಎಂಬ ಚೀತ್ಕಾರ ಕೇಳಿ ಅಡುಗೆ ಮನೆಯೆಡೆಗೆ ಓಡಿದೆ. ಏನುಮ್ಮಾ? ಏನಾಯ್ತು....? ಗಾಂಧಿ ಮೇಷ್ಟ್ರನ್ನು ಕೆರೆಗೆ ದೂಡಿ ಹಾಕಿಕೊಂದರಂತೆ......!!! ಯಾ ಅಲ್ಲಾಹ್!! ಇದೆಂತಹ ಕೆಟ್ಟದಿನ...... ಗಾಂಧಿಯನ್ನು ಕೊಂದು 50 ವರ್ಷ ತುಂಬುವಾಗ ನಮ್ಮೂರಿನ ಗಾಂಧಿಯನ್ನೂ ಕೊಂದರಲ್ಲಾ.......

ಗಾಂಧಿ ಮೇಷ್ಟ್ರ ನಿಜ ನಾಮಧೇಯ ಮಹಾಲಿಂಗ ಭಟ್ಟ. ಸದಾ ಶ್ವೇತವರ್ಣದ ಖಾದಿ ಜುಬ್ಬಾ ಮತ್ತು ಲುಂಗಿ, ಕಣ್ಣಿಗೆ ದಪ್ಪದ ಸೋಡಾ ಕನ್ನಡಕ, ಕೈಯಲ್ಲೊಂದು ಅಜ್ಜ ಕೊಡೆ, ಬಾಯಲ್ಲಿ ವೀಳ್ಯದೆಳೆಯ ಕೆಂಪು ರಸ, ತುಸು ನೀಳಕಾಯದ ಕೋಲು ದೇಹದ ಗಾಂಧಿ? ಮೇಷ್ಟ್ರಿಗೆ ವಯಸ್ಸು ಸರಿಸುಮಾರು ಅರವತ್ತೈದು. ಆದರೂ ಇಪ್ಪತ್ತರ ಹರೆಯದ ಯುವಕರನ್ನೂ ಮೀರಿಸುವ ಜೀವನೋತ್ಸಾಹ.

ಗಾಂಧಿ ಮೇಷ್ಟ್ರು ಕಂಬಳಗುಡ್ಡೆ ಶಾಲೆಯಲ್ಲಿ ನಲ್ವತ್ತು ವರ್ಷ ಮೇಷ್ಟ್ರಾಗಿ ದುಡಿದು ನಿವೃತ್ತಿಯಾದವರು. ಸಾವಿರಕ್ಕೂ ಮಿಕ್ಕಿದ ಮಕ್ಕಳಿಗೆ ವಿದ್ಯೆ ಕಲಿಸಿದವರು. ಗಾಂಧಿ ಮೇಷ್ಟ್ರ ಮೇಲೆ ಬ್ಯಾರಿಗಳಿಗೆ ಮತ್ತು ಹೊಲೆಯರಿಗೆ ಬಹಳ ಆಕ್ಕರೆ ಯಾಕೆಂದರೆ ನಮ್ಮೂರಿನ ಬ್ಯಾರಿಗಳು, ಹೊಲೆಯರು ವಿದ್ಯೆ ಕಲಿತು ಬದುಕಿನಲ್ಲಿ ನೆಲೆಕಂಡುಕೊಂಡದ್ದರ ಹಿಂದೆ ಗಾಂಧಿ ಮೇಷ್ಟ್ರ ಅಪಾರ ಶ್ರಮವಿದೆ. ಬ್ಯಾರಿಗಳ ಮತ್ತು ಹೊಲೆಯರ ಮಕ್ಕಳು ಶಾಲೆಯ ಮೆಟ್ಟಲು ತುಳಿಯದಿದ್ದ ಕಾಲದಲ್ಲಿ ಅವರ ಮನೆಬಾಗಿಲಿಗೆ ತೆರಳಿ ಹೆತ್ತವರಿಗೆ ವಿದ್ಯೆಯ ಅಗತ್ಯವನ್ನು ಮನವರಿಕೆ ಮಾಡಿಕೊಟ್ಟು ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಮಾಡುತ್ತಿದ್ದರು. ಜಾತಿಯಲ್ಲಿ ಬ್ರಾಹ್ಮಣನಾದರೂ ಅವರು ಬ್ಯಾರಿಗಳ ಮತ್ತು ಹೊಲೆಯರ ಮನೆಯಲ್ಲಿ ಯಾವ ಮಡಿ ಮೈಲಿಗೆಯೂ ತೋರದೇ ತಿನ್ನುತ್ತಿದ್ದರು, ಕುಡಿಯುತ್ತಿದ್ದರು. ಆ ಕಾರಣಕ್ಕಾಗಿ ಅವರ ಜಾತಿಯವರು ಅವರಿಗೆ ಬಹಿಷ್ಕಾರ ಹಾಕಿದ್ದರು ಎಂದು ಹಿರಿಯರು ಹೇಳುವುದನ್ನು ಕೇಳಿದ್ದೆ. ಜಾತಿಗೆಟ್ಟ ಗಾಂಧಿ ಮೇಷ್ಟ್ರಿಗೆ ಪೂಜೆಯ ಕಾರ್ಯಕ್ರಮಗಳಿಗೆಲ್ಲಾ ಯಾರೂ ಆಹ್ವಾನ ನೀಡುತ್ತಿರಲಿಲ್ಲವಂತೆ. ಮೇಷ್ಟ್ರು ಅವ್ಯಾವುದಕ್ಕೂ ಸೊಪ್ಪು ಹಾಕದೇ ಜಾತಿ, ಧರ್ಮ, ದೇವರು ಇವ್ಯಾವುವೂ ತಾನು ನಂಬಿದ ಮಾನವತೆಯ ಸಿದ್ಧಾಂತಕ್ಕಿಂತ ಮೇಲಲ್ಲ ಎನ್ನುತ್ತಿದ್ದರಂತೆ.

ಮೇಷ್ಟ್ರು ನಿವೃತ್ತಿಯಾದರೂ ಹಗಲುರಾತ್ರಿಯೆನ್ನದೇ ಶಾಲೆಗಾಗಿ ದುಡಿಯುತ್ತಿದ್ದರು. ಶಾಲೆಯೇ ಅವರ ಪಾಲಿಗೆ ದೇವಾಲಯವಾಗಿತ್ತು. ಶಾಲೆ ಕಲಿಯುವ ಬಡವರ ಮಕ್ಕಳ ಮೇಲೆ ಮೇಷ್ಟ್ರಿಗಿದ್ದ ಮಮಕಾರ ಪದಗಳಿಗೆ ನಿಲುಕದ್ದು. ಯಾರಾದರೂ ಬಡವರ ಮಕ್ಕಳು ಆರ್ಥಿಕ ಕಾರಣಗಳಿಗಾಗಿ ಶಿಕ್ಷಣವನ್ನು ಮೊಟಕುಗೊಳಿಸುತ್ತಿದ್ದಾರೆ ಎಂಬ ಸುದ್ದಿ ಮೇಷ್ಟ್ರ ಕಿವಿಗೆ ಬಿದ್ದರೆ ಯಾರಿಂದಲಾದರೂ ಕಾಡಿಬೇಡಿ ತಂದು ಅವರ ವಿದ್ಯಾಭ್ಯಾಸ ಮುಂದುವರಿಯುವಂತೆ ಮಾಡಿದ ಬೇಕಾದಷ್ಟು ಉದಾಹರಣೆಗಳು ನಮ್ಮೂರಿನಲ್ಲಿವೆ. ವಿದ್ಯಾರ್ಥಿವೇತನಗಳ ಕುರಿತಂತೆ ಮಾಹಿತಿ ನೀಡುವುದು. ಅದರ ಅರ್ಜಿ ನಮೂನೆ ತಂದು ಭರ್ತಿ ಇಂತಹದ್ದೆಲ್ಲಾ ಮೇಷ್ಟ್ರ ಸೇವೆಯ ವ್ಯಾಪ್ತಿಯಲ್ಲಿ ಬರುತ್ತಿತ್ತು.

ಹಳೆ ವಿದ್ಯಾರ್ಥಿ ಸಂಘ ಕಟ್ಟಿ ಅದರ ಮೂಲಕ ದೇಣಿಗೆ ಸಂಗ್ರಹಿಸಿ ಬಡವರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿನಿಯೋಗಿಸುತ್ತಿದ್ದರು. ಮೇಷ್ಟ್ರು ತನ್ನ ಸಮಾಜ ಸೇವೆಯನ್ನು ಕೇವಲ ಶಿಕ್ಷಣ ಕ್ಷೇತ್ರಕ್ಕೆ ಸೀಮಿತವಾಗಿರಿಸಿದವರಲ್ಲ, ಊರಿನ ಒಳಿತಿಗಾಗಿ, ಮತೀಯ ಸಾಮರಸ್ಯತೆ ಸಹಬಾಳ್ವೆಯ ಉಳಿವಿಗಾಗಿ ಮೇಷ್ಟ್ರು ಹಗಲುರಾತ್ರಿಯೆನ್ನದೆ ಒಂದಿಲ್ಲೊಂದು ಚಟುವಟಿಕೆಯಲ್ಲಿ ನಿರತರಾಗಿದ್ದರು.

ನನಗಿನ್ನೂ ಚೆನ್ನಾಗಿ ನೆನಪಿದೆ. 1992ರ ಡಿಸೆಂಬರ್ ಆರರಂದು ಕರಸೇವಕರು ಅಯೋಧ್ಯೆಯಲ್ಲಿ ಬಾಬರಿ ಮಸೀದಿ ನೆಲಸಮಗೊಳಿಸಿದರು. ಆದಾಗಿ ತಿಂಗಳುಗಟ್ಟಲೆ ದೇಶದ ಮೂಲೆಮೂಲೆಗಳಲ್ಲಿ ಕೋಮುಗಲಭೆ ಭುಗಿಲೆದ್ದು ನೂರಾರು ಅಮಾಯಕ ಮನುಷ್ಯ ಜೀವಗಳು ಕೋಮುಬೆಂಕಿಗೆ ಆಹುತಿಯಾಗಿತ್ತು, ಕೆಲ ಊರುಗಳಲ್ಲಿ ಮನುಷ್ಯ ರಕ್ತದ ಕೋಡಿಯೇ ಹರಿದಿತ್ತು, ನಮ್ಮೂರಿನ ಆಕ್ಕ ಪಕ್ಕದ ಊರುಗಳಲ್ಲೆಲ್ಲಾ ಕೋಮು ಬೆಂಕಿ ತನ್ನ ಕೆನ್ನಾಲಗೆಯನ್ನು ಚಾಚಿತ್ತು, ಆದರೆ ಅದರ ತಾಪ ನಮ್ಮೂರಿಗೆ ಸೋಕದಂತೆ ನೋಡಿಕೊಂಡವರಲ್ಲಿ ಗಾಂಧಿ ಮೇಷ್ಟ್ರು ಪ್ರಮುಖರು. ಅಯೋಧ್ಯೆಯಲ್ಲಿ ಬಾಬರಿ ಮಸೀದಿ ಧರಾಶಾಹಿಯಾದ ಮರುದಿನ ಸಂಜೆ ನಮ್ಮೂರಿನ ಮಸೀದಿಗೆ ಬೆಂಕಿ ಹಚ್ಚಲು ಪಕ್ಕದೂರಿನ ಯುವಕರು ಬರುತ್ತಾರೆಂಬ ಗುಸುಗುಸು ಸುದ್ದಿ ಹಬ್ಬಿತ್ತು, ಈ ಸುದ್ದಿ ಕೇಳಿದ್ದೇ ತಡ ಗಾಂಧಿ ಮೇಷ್ಟ್ರು ಹಣೆಗೆ ಮೂರು ನಾಮ ಬಳಿದು ಒಬ್ಬನೇ ಹೋಗಿ ಮಸೀದಿಯ ಗೇಟಿನ ಬಳಿ ಕಾದು ಕೂತರು. ಹೊತ್ತು ಕಂತಲು ಇನ್ನೂ ಕೆಲವು ನಿಮಿಷಗಳುಳಿದಿತ್ತು, ಜೈ ಶ್ರೀರಾಮ್, ಹರಹರ ಮಹಾದೇವಾ ಎಂಬ ಘೋಷಣೆಗಳೊಂದಿಗೆ ಇಪ್ಪತ್ತೈದು-ಮೂವತ್ತು ಯುವಕರು ರಸ್ತೆಯಲ್ಲಿ ನಡೆದುಬರುತ್ತಿದ್ದರು. ಅವರ ಕೈಯಲ್ಲಿ ತಲವಾರು, ದೊಣ್ಣೆ ಕೆಲ ಪೆಟ್ರೋಲು ತುಂಬಿಸಿದ ಬಾಟಲಿಗಳಿತ್ತು. ಅವರ ಘೋಷಣೆ ಕೇಳಿದ್ದೇ ತಡ, ಗಾಂಧಿ ಮೇಷ್ಟ್ರು ಅಂಗಿ ಬಿಚ್ಚಿ ಮಸೀದಿಯ ಗೇಟಿಗೆ ತಗುಲಿಸಿ ರಸ್ತೆಯತ್ತ ಓಡಿ ರಸ್ತೆ ಮಧ್ಯೆ ಮಲಗಿದರು. ಮೇಷ್ಟ್ರ ಬಳಿ ತಲುಪಿದ ಆ ಗುಂಪು ಮೇಷ್ಟ್ರ ಜನಿವಾರ ಕಂಡು "ಎದ್ದೇಳಿ ಭಟ್ರೆ, ರಸ್ತೆಯಿಂದ ಎದ್ದೇಳಿ" ಎಂದು ಅರಚಾಡಿದರು. ಗಾಂಧಿ ಮೇಷ್ಟ್ರು "ಮಸೀದಿ ಹೊತ್ತಿಸಲು ಬಂದಿದ್ದೀರಲ್ವಾ......? ನಮ್ಮ ಈ ಮಸೀದಿಗೆ ಬೆಂಕಿ ಹಚ್ಚಬೇಕೆಂದರೆ ನನ್ನನ್ನು ಕೊಂದು, ನನ್ನ ಹೆಣ ದಾಟಿ ಮುಂದೆ ನಡೆಯಿರಿ. ಇದನ್ನೂ ಮೀರಿ ನೀವು ಮಸೀದಿಗೆ ಬೆಂಕಿ ಹಚ್ಚುವಿರಾದರೆ ನಾನು ಮಸೀದಿಯ ಒಳಗೆ ಹೋಗಿ ಕೂರುವೆ. ಈ ಮಸೀದಿಯೊಂದಿಗೆ ನಾನೂ ಸುಟ್ಟು ಬೂದಿಯಾಗುವೆ. ಒಂದು ವಿಚಾರ ನೆನಪಿಟ್ಟುಕೊಳ್ಳಿ. ನೀವೇನು ಇಂದು ಹಿಂದೂತ್ವದ ಹೆಸರಿನಲ್ಲಿ ಮಸೀದಿಗೆ ಬೆಂಕಿ ಹಚ್ಚಲು ಬಂದಿದ್ದೀರಾ...... ಅದರೊಂದಿಗೆ ಓರ್ವ ಬ್ರಾಹ್ಮಣನನ್ನು ಕೊಂದ ಪಾಪವನ್ನೂ ನೀವು ಹೊತ್ತುಕೊಳ್ಳಬೇಕಗುತ್ತದೆ.. ಬ್ರಹ್ಮಹತ್ಯೆ ಮಹಾಪಾಪ ಎಂಬುವುದನ್ನು ನೆನಪಿಟ್ಟುಕೊಳ್ಳಿ". ಮೇಷ್ಟ್ರ ಕಂಚಿನ ಕಂಠದ ಮಾತಿನ ಏಟಿಗೆ ಅವರ ಕೈಕಾಲುಗಳು ನಡುಗತೊಡಗಿದವು. ಅವರು ಬಂದ ದಾರಿಯಲ್ಲೇ ಹಿಂದಿರುಗಿದರು.

ಅಂದು ಹಿಂದೂಸ್ತಾನ ಪಾಕಿಸ್ತಾನವೆಂಬ ಎರಡು ದೇಶಗಳು ಸೃಷ್ಟಿಯಾಗುವುದಾದರೆ ಅದು ನನ್ನ ಹೆಣದ ಮೇಲೆಯೇ ಸೃಷ್ಟಿಯಾಗಲಿ ಎಂದು ಸವಾಲು ಹಾಕಿಯೂ ಮಹಾತ್ಮ ಗಾಂಧೀಜಿ ಸೋತರು. ಆದರೆ ಇಲ್ಲಿ ಗಾಂಧಿ ಮೇಷ್ಟ್ರು ಮಸೀದಿಗೆ ಬೆಂಕಿ ಹಚ್ಚಬಂದವರಿಗೆ ಸವಾಲು ಹಾಕಿ ಗೆದ್ದರು.

ಗಾಂಧಿ ಮೇಷ್ಟ್ರು ನೆನಪಾಗುವಾಗೆಲ್ಲ ಆ ಮಹಾತ್ಮ ಪೆರ್ನ ಊರಿನ ಸಾಮರಸ್ಯದ, ಸಹಬಾಳ್ವೆಯ ಬದುಕಿಗೆ ಕೊಟ್ಟ ಕೊಡುಗೆ ಕಣ್ಮುಂದೆ ಬರುತ್ತದೆ. ಪೆರ್ನ ಊರಿನಲ್ಲಿ ಅಷ್ಟಮಿಯ ಮರುದಿನ ಆಚರಿಸುವ ಮೊಸರು ಕುಡಿಕೆಯ ಸಂಭ್ರಮವೇ ಬೇರೆ. ಒಂದು ಕಾಲದಲ್ಲಿ ಪೆರ್ನದ ಜನರಿಗೆ ಮೊಸರು ಕುಡಿಕೆ ಹಬ್ಬವೆಂದರೆ ಆದೊಂದು ನಾಡಹಬ್ಬದಂತೆ. ಊರಿನ ಜನ ಜಾತಿ ಮತಗಳಿಗತೀತವಾಗಿ ಸಂಭ್ರಮದಿಂದ ಮೊಸರು ಕುಡಿಕೆ ಆಚರಿಸುತ್ತಿದ್ದರು. ಮೊಸರು ಕುಡಿಕೆಯ ಸಮಾರಂಭಕ್ಕೆ ವೇದಿಕೆ ಕಟ್ಟುವುದು, ಜಾರುಕಂಬ ಸ್ಪರ್ಧೆಗೆ ಕಂಗು ಕಡಿದು ಹೊತ್ತುತರುವುದು, ಅದು ಜಾರಲು ಅದಕ್ಕೆ ಎಣ್ಣೆ ಗ್ರೀಸ್ ಹಚ್ಚುವುದು, ಕಂಬ ಹೂಳುವುದು, ಮೊಸರಿನ ಕುಡಿಕೆ ಕಟ್ಟುವುದು ಇತ್ಯಾದಿ ಕೆಲಸಗಳಲ್ಲಿ ತುಳುವರಿಗಿಂತ ಹೆಚ್ಚಿನ ಉಮೇದಿನಲ್ಲಿ ಬ್ಯಾರಿಗಳು, ಪೊರ್ಬುಗಳು (ಕ್ರೈಸ್ತರು) ತೊಡಗಿಸಿಕೊಳ್ಳುತ್ತಿದ್ದರು. ಮೊಸರು ಕುಡಿಕೆಯ ಅಂಗವಾಗಿ ನಡೆಯುತ್ತಿದ್ದ ಎಲ್ಲ ಸ್ಪರ್ಧೆಗಳಲ್ಲೂ ಬ್ಯಾರಿಗಳು ಮತ್ತು ಪೊರ್ಬುಗಳು ಪಾಲ್ಗೊಳ್ಳುತ್ತಿದ್ದರು. ಹೆಚ್ಚಿನೆಲ್ಲಾ ಸ್ಪರ್ಧೆಗಳಲ್ಲಿ ಬಹುತೇಕ ಬಹುಮಾನಗಳನ್ನು ಬ್ಯಾರಿಗಳು ಬಗಲಿಗೆ ಹಾಕಿಕೊಳ್ಳುತ್ತಿದ್ದರು. ಪೆರ್ನದಲ್ಲಿ ತಲೆತಲಾಂತರಗಳಿಂದ ಬಂದ ಈ ಸಾಮರಸ್ಯ ಸುತ್ತಮುತ್ತಲ ಊರುಗಳಲ್ಲಿ ಮನೆಮಾತಾಗಿತ್ತು, ಇದು ಕೆಲವು ದುಷ್ಟರ ಕಣ್ಣು ಕೆಂಪಾಗುವಂತೆಯೂ ಮಾಡಿತ್ತು.

ಪ್ರತಿವರ್ಷವೂ ಜಾರುಕಂಬ ಏರುವ ಸ್ಪರ್ಧೆಯಲ್ಲಿ ಪೆರ್ನಕೋಡಿಯ ಇದ್ದಿನ್ ಬ್ಯಾರಿಯ ಮಗ ಅದ್ರಾಮನೇ ಬಹುಮಾನ ಗೆಲ್ಲುತ್ತಿದ್ದ. ತೆಂಗು, ಕಂಗುಗಳಿಗೆ ಹತ್ತಿ ಕಾಯಿ ಕೀಳುವ, ಕಂಗುಗಳಿಗೆ ಔಷಧಿ ಸಿಂಪಡಿಸುವ ಕಸುಬಿನ ಅದ್ರಾಮನಿಗೆ ಜಾರುಕಂಬ ಏರುವುದೆಂದರೆ ನೀರು ಕುಡಿದಷ್ಟೇ ಸಲೀಸು.

ಆ ವರ್ಷ ಜಾರುಕಂಬ ಏರಿ ಅರ್ಧದಿಂದಲೇ ಜಾರಿದ ಅದ್ರಾಮನನ್ನು ಕೆಲ ಬ್ಯಾರಿ ಯುವಕರು ದೂರ ಕರೆದು "ಅದ್ರಾಮ, ಈ ಜಾರುಕಂಬ ಜಾರಲು ಅದಕ್ಕೆ ಹಂದಿಯ ಕೊಬ್ಬು ಸವರುತ್ತಾರೆ ಮಾರಾಯ, ನಮ್ಮ ಧರ್ಮ ಕೆಡಿಸಿ ಅವರು ಖುಷಿಪಡುತ್ತಾರೆ. ನಿನಗೇನು ಮಂಡೆ ಸರಿಯಿಲ್ವಾ.....? ನೀನ್ಯಾಕೆ ಇಷ್ಟು ಉತ್ಸಾಹದಿಂದ ಕಂಬ ಏರುವುದು? ಇದು ಕೇಳಿ ಅದ್ರಾಮನಿಗೆ ಸಿಡಿಲು ಬಡಿದಂತಾಯ್ತು. ಅದ್ರಾಮ ಅಲ್ಲಿಂದ ಸೀದಾ ನಡೆದವನೇ ಪೆರ್ನಕೋಡಿ ತೋಡಿಗೆ ಹೋಗಿ ಮಣ್ಣುಕಲಸಿದ ನೀರಿನಲ್ಲಿ ಸ್ನಾನ ಮಾಡಿ ಮನೆಗೆ ತೆರಳಿ ಊಟವೂ ಮಾಡದೇ ಮಲಗಿದ. ಈ ಮಧ್ಯೆ ಹಲವು ತುಳುವರು, ಪೊರ್ಬುಗಳು ಕಂಬ ಏರಲು ಪ್ರಯತ್ನಿಸಿ ಸೋತರು. ಯಾರಿಗೂ ಕಂಬ ಏರಲು ಸಾಧ್ಯವಾಗದಿದ್ದಾಗ ಅದ್ರಾಮನನ್ನು ಕಾಣದೇ ಎಲ್ಲರಿಗೂ ಆಶ್ಚರ್ಯವಾಯಿತು. ರಾತ್ರಿ ಹತ್ತುಗಂಟೆಯಾದರೂ ಕಂಬ ಏರುವ ಸ್ಪರ್ಧೆ ಮುಗಿಯದೇ ಹೋದಾಗ ಕೆಲವರು ಅದ್ರಾಮನಿಗಾಗಿ ಹುಡುಕಾಟ ಆರಂಭಿಸಿದರು. ಅದ್ರಾಮನನ್ನು ಎಲ್ಲೂ ಕಾಣದಾದಾಗ ಅವನನ್ನು ಹುಡುಕಿಕೊಂಡು ಅವನ ಮನೆಗೆ ಹೋದರು. ಅದ್ರಾಮನನ್ನು ಎಷ್ಟೇ ಒತ್ತಾಯಿಸಿದರೂ ಆತ ಬಿಲ್‌ಕುಲ್ ಬರಲೇ ಇಲ್ಲ.

ಕೊನೆಗೆ ಊರಿನ ಕೆಲ ಹಿರಿಯರು ಗಾಂಧಿ ಮೇಷ್ಟ್ರ ನೇತೃತ್ವದಲ್ಲಿ ಅದ್ರಾಮನ ಮನೆಗೆ ಹೋಗಿ ಕರೆದರು. ಅದ್ರಾಮ ಬರಲೊಪ್ಪಲೇ ಇಲ್ಲ. ಗಾಂಧಿ ಮೇಷ್ಟ್ರು ಇದು ಊರಿನ ಮರ್ಯಾದೆಯ ಪ್ರಶ್ನೆ ಎಂದು ಅದ್ರಾಮನನ್ನು ಕರೆದರು. ಇದನ್ನು ಕೇಳಿದ್ದೇ ತಡ ಸಾಧು ಸ್ವಭಾವದ ಅದ್ರಾಮನಿಗೆ ರೊಯ್ಯನೇ ಸಿಟ್ಟು ನೆತ್ತಿಗೇರಿತು. ಬ್ಯಾರಿಗಳ ಧರ್ಮ ಕೆಡಿಸುವುದು ಊರಿನ ಮರ್ಯಾದೆ ಪ್ರಶ್ನೆಯಾ? ಎಂದು ಕೇಳಿಯೇ ಬಿಟ್ಟ. ಅದ್ರಾಮನಿಗೆ ಎಷ್ಟೇ ಸಮಜಾಯಿಷಿ ಕೊಟ್ಟರೂ ಆತ ಜಪ್ಪೆನ್ನಲಿಲ್ಲ. ಮೊಸರು ಕುಡಿಕೆ ಆಚರಣಾ ಸಮಿತಿಯವರು ಕಂಗಾಲಾದರು. ಇತ್ತ ಅನೇಕ ಮಂದಿ ಯುವಕರು ಕಂಬ ಏರುವ ಪ್ರಯತ್ನ ಮಾಡಿದರೂ ಯಾರಿಂದಲೂ ಸಾಧ್ಯವಾಗಲೇ ಇಲ್ಲ. ಜಾರುಕಂಬ ಏರುವ ಸ್ಪರ್ಧೆಯನ್ನು ನಾಳೆಗೆ ಮುಂದೂಡಲಾಗಿದೆ ಎಂದು ಘೋಷಿಸಿದರು. ಕೆಲವು ಬ್ಯಾರಿ ಯುವಕರು ಮುಂಜಾನೆತನಕ ಕಂಬವನ್ನು ಇಳಿಸಿ ಎಲ್ಲಾದರೂ ಎಣ್ಣೆ ಗ್ರೀಸ್ ಒರೆಸಿ ತೆಗೆದು ಮತ್ತೆ ಹೂಳುತ್ತಾರೊ ಎಂದು ನೋಡಲು ಕಾದು ಕೂತರು. ಬಹುಶಃ ಅಂತಹದ್ದೊಂದು ಪ್ರಯತ್ನ ಮಾಡುತ್ತಿದ್ದರೇನೋ........? ಬ್ಯಾರಿ ಯುವಕರು ಕಂಬ ಕಾಯಲು ಅಣತಿ ದೂರ ಕೂತದ್ದರಿಂದ ಅದು ಸಾಧ್ಯವಾಗಲಿಲ್ಲ.

ಪೆರ್ನದಲ್ಲಿ ಈ ಬಾರಿ ಜಾರುಕಂಬ ಏರಲು ಯಾರಿಗೂ ಸಾಧ್ಯವಾಗಲಿಲ್ಲ ಎಂಬ ಸುದ್ದಿ ಸುತ್ತಮುತ್ತಲ ಊರುಗಳಲ್ಲೆಲ್ಲಾ ಹಬ್ಬಿ ನಾಲ್ಕು ಊರುಗಳಿಂದ ಕಂಬ ಏರುವ ಪ್ರವೀಣರು ಮರುದಿನ ಪೆರ್ನಕ್ಕೆ ಬಂದು ಕಂಬ ಏರುವ ಸ್ಪರ್ಧೆಯಲ್ಲಿ ಪಾಲ್ಗೊಂಡರು. ಯಾರೇನೇ ಪ್ರಯತ್ನ ಮಾಡಿದರೂ ಕಂಬ ಏರಲು ಸಾಧ್ಯವಾಗಲೇ ಇಲ್ಲ, ಅನ್ಯದಾರಿಕಾಣದೇ ಮಧ್ಯಾಹ್ನ ಹನ್ನೆರಡು ಗಂಟೆಯ ಹೊತ್ತಿಗೆ ಸ್ಪರ್ಧೆ ಕೈ ಬಿಟ್ಟರು. ಊರಿಡೀ ಬೂದಿ ಮುಚ್ಚಿದ ಕೆಂಡದಂತಾಯ್ತು, ಜಾರುಕಂಬ ಏರದಂತೆ ಯಾರೋ ಕೆಲವು ಬ್ಯಾರಿ ಯುವಕರು ಸುಳ್ಳು ಸುದ್ದಿ ಹಬ್ಬಿಸಿದರೆಂಬ ವಿಷಯ ಊರಿಡೀ ಪ್ರಚಾರವಾಯಿತು. ಎರಡೂ ಕೋಮಿನ ಯುವಕರು ಪರಸ್ಪರ ಮಾತು ಬಿಟ್ಟರು. ಪರಸ್ಪರ ಕಣ್ಣು ಮಸೆಯುವುದು, ಕಾಲು ಕೆರೆಯುವುದು ನಡೆಯುತ್ತಲೇ ಇತ್ತು. ಆದರೆ ಇಂತಹ ಗಾಳಿಸುದ್ದಿ ಹಬ್ಬಿಸಿದವರ್‍ಯಾರು ಎಂಬ ರಹಸ್ಯ ಇನ್ನೂ ಹೊರಬರಲೇ ಇಲ್ಲ. ಕೆಲವರು ಹೇಳುವ ಪ್ರಕಾರ ಪ್ರತೀ ವರ್ಷದ ಎಲ್ಲಾ ಸ್ಪರ್ಧೆಗಳಲ್ಲೂ ಬ್ಯಾರಿಗಳಿಗೇ ಯಾಕೆ ಬಹುಮಾನ ಸಿಗಬೇಕು ಎಂಬ ಅಸೂಯೆಯಿಂದ ಕೆಲವು ದುಷ್ಟಬುದ್ಧಿಯ ತುಳು ಯುವಕರು ಇಂತಹ ಗಾಳಿಸುದ್ದಿ ಹಬ್ಬಿಸಿದ್ದು. ಇನ್ನು ಕೆಲವರು ಹೇಳುವ ಪ್ರಕಾರ ನಾಡಿನ ಸಹಬಾಳ್ವೆ ಕಂಡು ಸಹಿಸಲಾಗದ ಕೆಲವು ದುಷ್ಟ ಬ್ಯಾರಿಗಳು ಇಂತಹ ಗಾಳಿ ಸುದ್ದಿ ಹಬ್ಬಿಸಿದರು. ಸತ್ಯ ಇವೆರಡು ಅಂತೆಕಂತೆಗಳ ಮಧ್ಯೆ ಅಡಗಿದ್ದರೂ ಅದು ಹೊರಬರಲೇ ಇಲ್ಲ, ಗಾಂಧಿ ಮೇಷ್ಟ್ರು, ತುಳುವ ಹಿರಿಯರು, ಮಸೀದಿಯ ಇಮಾಂ, ಜಮಾಅತ್ ಕಮಿಟಿಯ ಮುಖಂಡರು ಕೂತು ಮಾತನಾಡಿ ಕಣ್ಣು ಮಸೆಯುವ, ಕಾಲು ಕೆರೆದು ಜಗಳಕ್ಕೆ ನಿಲ್ಲುವ ಯುವಕರನ್ನು ಕರೆಸಿ ರಾಜಿ ಪಂಚಾಯತಿಕೆ ಮಾಡಿ ವಿಷಯವನ್ನು ಅಲ್ಲಿಂದಲ್ಲಿಗೆ ಮುಗಿಸಿದರು. ಯುವಕರು ಪರಸ್ಪರ ಕಾಲು ಕೆರೆಯುವುದು, ಕಣ್ಣು ಮಸೆಯುವುದು ನಿಂತರೂ ಅವರ ಮಧ್ಯೆ ಮಾತು ಇರಲಿಲ್ಲ.

ಮುಂದಿನ ವರ್ಷ ಮೊಸರು ಕುಡಿಕೆ ಸಮಿತಿಗೆ ಗಾಂಧಿ ಮೇಷ್ಟ್ರನ್ನು ಅಧ್ಯಕ್ಷನನ್ನಾಗಿ ಆರಿಸಲಾಯಿತು. ಹಿಂದಿನ ವರ್ಷದ ಕಹಿ ಇನ್ನೆಂದೂ ಮರುಕಳಿಸಬಾರದು ಎಂದಾದರೆ ಅದಕ್ಕೆ ಗಾಂಧಿ ಮೇಷ್ಟ್ರು ಸೂಕ್ತ ಎಂಬ ಅಭಿಪ್ರಾಯ ಎಲ್ಲೆಡೆಯೂ ಕೇಳಿಬಂದಿದ್ದರಿಂದ ಗಾಂಧಿ ಮೇಷ್ಟ್ರು ಒಪ್ಪಿಕೊಂಡರು. ಗಾಂಧಿ ಮೇಷ್ಟ್ರು ಅಧ್ಯಕ್ಷರಾಗಿ ಮಾಡಿದ ಮೊದಲ ಕೆಲಸ ಬ್ಯಾರಿ ಯುವಕರನ್ನು ಕರೆದು ಅವರಿಗೆ ಬುದ್ಧಿ ಹೇಳಿದ್ದು. ಜಾರುಕಂಬಕ್ಕೆ ಗ್ರೀಸ್ ಎಣ್ಣೆ ಹಚ್ಚುವ ಕೆಲಸ ರಾತ್ರಿ ಹೊತ್ತಿಗೆ ಮಾಡುವಂತಿಲ್ಲ, ಬ್ಯಾರಿಗಳನ್ನೂ ಗ್ರೀಸ್ ಎಣ್ಣೆ ಹಚ್ಚುವ ಕೆಲಸಕ್ಕೆ ಸೇರಿಸಿಕೊಳ್ಳಬೇಕೆಂದೂ ಒಂಥರಾ ಆಜ್ಞೆಯ

ಕತೆ

...ತಿಯಲ್ಲಿಯೇ ಹೇಳಿದರು. ಗಾಂಧಿ ಮೇಷ್ಟ್ರ ಒಳ್ಳೆಯತನಕ್ಕೆ ...ಗ್ಗದ ಬ್ಯಾರಿ ಪಂಗಡದಲ್ಲಿಯೇ ಇಲ್ಲ. ಆ ವರ್ಷ ಹಿಂದಿನೆಲ್ಲ ...ಮರೆತು ಬ್ಯಾರಿಗಳೂ ಮೊಸರು ಕುಡಿಕೆ ಆಚರಣೆಯಲ್ಲಿ ...ಂದಿನಂತೆಯೇ ಸೇರಿಕೊಂಡರು. ಎಲ್ಲಾ ವರ್ಷಗಳಂತೆಯೇ ... ವರ್ಷವೂ ಜಾರುಕಂಬ ಏರುವ ಸ್ಪರ್ಧೆಯಲ್ಲಿ ಮತ್ತೆ ...ದ್ರಾಮನೇ ಗೆದ್ದುಬಿಟ್ಟ. ಒಟ್ಟಿನಲ್ಲಿ ಬೆಟ್ಟದಂತ ಸಮಸ್ಯೆಯನ್ನು ...ೇಷ್ಟ್ರು ಮಂಜಿನಂತೆ ಕರಗಿಸಿದರು.

ಹೀಗೆ ಸಮಾಜದ ಒಳಿತಿಗಾಗಿ ಒಂದಿಲ್ಲೊಂದು ವಿಧ ...ರ್ಯತತ್ಪರರಾಗಿದ್ದ ಗಾಂಧಿ ಮೇಷ್ಟ್ರು ಒಮ್ಮೆ ಮಾಡಿದ ...ೋರಾಟ ಇಡೀ ಆಡಳಿತಶಾಹಿಯ ಎದೆಯಲ್ಲಿ ನಡುಕ ...ುಟ್ಟಿಸಿತ್ತು.

ಕಳೆದ ವರ್ಷ ಉದ್ಯೋಗ ಖಾತರಿ ಯೋಜನೆಯಡಿ ...ಂದಿದ್ದ ದುಡ್ಡನ್ನು ಕೂಲಿ ಮಾಡಿದ್ದಾರೆಂದು ಖೊಟ್ಟಿ ...ಹಿ ಹಾಕಿ ಬಡ ಕಾರ್ಮಿಕರಿಗೆ ಸಲ್ಲಬೇಕಿದ್ದ ದುಡ್ಡನ್ನು ...ಾಮ ಪಂಚಾಯತ್ ಸದಸ್ಯರು ತಿಂದು ತೇಗಿದ್ದರು. ವಿಷಯ ...ಳಿದ ಗಾಂಧಿ ಮೇಷ್ಟ್ರು ಗ್ರಾಮಸಭೆಯಲ್ಲಿ ಉದ್ಯೋಗ ...ಾತರಿ ಯೋಜನೆಗೆ ಪಾಸಾಗಿ ಬಂದಿದ್ದ ದುಡ್ಡಿನ ಲೆಕ್ಕ, ...ೂಲಿ ಮಾಡಿದ ಕಾರ್ಮಿಕರ ವಿವರ, ಅವರಿಗೆ ನೀಡಲಾದ ...ೇತನದ ವಿವರ ಎಲ್ಲವನ್ನೂ ಕೇಳಿದರು. ಗ್ರಾಮ ...ಂಚಾಯತ್‌ನ ಅಧಿನಾಯಕರು ಸಮರ್ಪಕ ಉತ್ತರ ನೀಡದೇ ...ಾತು ತಿರುಗಿಸತೊಡಗಿದರು. ಮೇಷ್ಟ್ರಿಗೆ ಅಷ್ಟರಲ್ಲೇ ...ಅವ್ಯವಹಾರ ನಡೆದ ಬಗ್ಗೆ ಖಾತರಿಯಾಯಿತು. ಮೇಷ್ಟ್ರಿಗೆ ...ತ ಬಂತು. ಅರ್ಜಿಯ ಮೇಲೆ ಅರ್ಜಿ ಬರೆದು ಹಾಕಿದರೂ ...ನೇನೂ ಪ್ರಯೋಜನವಾಗಲಿಲ್ಲ. ಮೇಷ್ಟ್ರು ಜಿಲ್ಲಾ ...ಂಚಾಯತ್‌ಗೆ, ಜಿಲ್ಲಾಧಿಕಾರಿಗೆ, ಗ್ರಾಮೀಣಾಭಿವೃದ್ಧಿ ...ಮಂತ್ರಿಗೆ, ಮುಖ್ಯಮಂತ್ರಿಗೆಲ್ಲ ಪತ್ರ ಬರೆದು ಇದರ ತನಿಖೆ ...ಮಾಡಿಸಬೇಕೆಂದು ಒತ್ತಾಯ ಮಾಡಿದರೂ ಪ್ರಯೋಜನ ...ವಾಗಲಿಲ್ಲ. ಒಂದು ಬೆಳಗ್ಗೆ ಗಾಂಧಿ ಮೇಷ್ಟ್ರು ಪಂಚಾಯತ್ ...ಕಚೇರಿಯ ಮುಂದೆ ಉಪವಾಸ ಸತ್ಯಾಗ್ರಹ ಕೂತರು. ...ಪಂಚಾಯತಿನ ಅಧಿನಾಯಕರು ಅದನ್ನು ಲೆಕ್ಕಕ್ಕೆ ...ತೆಗೆದುಕೊಳ್ಳಲೇ ಇಲ್ಲ. ಸತ್ಯಾಗ್ರಹ ಎರಡನೇ ದಿನಕ್ಕೆ ...ಕಾಲಿಟ್ಟಿತು. ಪತ್ರಕರ್ತರು, ಟಿ.ವಿ ಮಾಧ್ಯಮದವರೂ ಬಂದು ...ಸೇರಿದಾಗ ಪಂಚಾಯತ್ ಅಧಿನಾಯಕರಿಗೆ ಅವರ ಪಕ್ಷದ ಮುಖಂಡರಿಗೆ ತಲೆನೋವು ಪ್ರಾರಂಭವಾಯಿತು. ಎಲ್ಲದರ ಲೆಕ್ಕ ವಿವರ ಕೊಡುವ ಬಗ್ಗೆ ಮೇಷ್ಟ್ರಿಗೆ ಭರವಸೆ ನೀಡಿದರು. ಮೇಷ್ಟ್ರು ಈಗಲೇ ನೀಡಿ ಎಂದು ಪಟ್ಟು ಹಿಡಿದರು. ನೀವು ವೇತನ ನೀಡುವಾಗ ದುಡಿದವರ ಹೆಸರು, ವಿಳಾಸ, ವೇತನ ಇತ್ಯಾದಿಗಳ ವಿವರ ನೋಂದಣಿ ಪುಸ್ತಕದಲ್ಲಿ ಬರೆದಿಡಬೇಕಲ್ಲವೇ ಎಂದು ಸವಾಲು ಹಾಕಿದರು. ದುಡಿದವರ ಸಹಿ ಇಲ್ಲದೇ ವೇತನ ನೀಡುವುದಕ್ಕಾಗುತ್ತದೆಯೇ? ಅದನ್ನು ಈಗಲೇ ತಂದು ತೋರಿಸಬಹುದಲ್ಲವೇ....? ಅದಕ್ಯಾಕೆ ಮೀನು ಮೇಷ ಎಣಿಸುತ್ತೀರಿ.......? ಯಾರಲ್ಲೂ ಉತ್ತರವಿರಲಿಲ್ಲ. ಉಪವಾಸ ಸತ್ಯಾಗ್ರಹ ಮೂರನೇ ದಿನಕ್ಕೂ ಮುಂದುವರಿಯಿತು. ಮೇಷ್ಟ್ರ ಆರೋಗ್ಯ ಹದಗೆಟ್ಟಿತು. ಯುವಕರು ಮೇಷ್ಟ್ರನ್ನು ಆಸ್ಪತ್ರೆಗೆ ದಾಖಲಿಸಿದರು. ಇತ್ತ ಪಂಚಾಯತ್‌ನಲ್ಲಿ ತುರ್ತು ಸಭೆ ನಡೆಯುತ್ತಿದ್ದಾಗ 40-50 ಯುವಕರ ಗುಂಪು ಪಂಚಾಯತ್ ಸಭೆಗೆ ನುಗ್ಗಿ ಅಧ್ಯಕ್ಷ ಮತ್ತು ಸದಸ್ಯರ ಮೇಲೆ ದೈಹಿಕ ಹಲ್ಲೆ ಮಾಡಿದರು.

ಪೊಲೀಸ್ ಮತ್ತು ಮಾಧ್ಯಮಗಳ ಪ್ರತಿನಿಧಿಗಳು ಬಂದರು. ಪೊಲೀಸರಿಗೆ ಜನಪ್ರತಿನಿಧಿಗಳ ಮೇಲೆ ಹಲ್ಲೆಗೈದ ಯುವಕರನ್ನು ಬಂಧಿಸುವ ಧೈರ್ಯ ಸಾಲದಾಯಿತು. ಅವರನ್ನು ಬಂಧಿಸಲು ಊರಿಗೆ ಊರೇ ಬಂಡೇಳುತ್ತದೆ ಎಂಬ ವಿಚಾರ ಪೊಲೀಸರ ಗಮನಕ್ಕೆ ಬಂದಿತ್ತು.

ಜಿಲ್ಲಾ ಪಂಚಾಯತ್ ಪರ್ನ ಗ್ರಾಮ ಪಂಚಾಯತ್ ಅಧ್ಯಕ್ಷ ಸದಸ್ಯರುಗಳು ಮತ್ತು ಸಿಬ್ಬಂದಿಗಳನ್ನು ಕರೆದು ಲೆಕ್ಕಪತ್ರ ಕೇಳಿದಾಗ ಇವರು ಇಂದು ನಾಳೆ ಎಂದು ದಿನದೂಡತೊಡಗಿದರು. ಜಿಲ್ಲಾಧಿಕಾರಿ ಸಮಗ್ರ ತನಿಖೆಗೆ ಆದೇಶ ನೀಡಿದರು.

ಇತ್ತ ಗಾಂಧಿ ಮೇಷ್ಟ್ರು ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಆಗಿ ಬಂದು ಊರಿನ ನಾಗರಿಕರನ್ನೆಲ್ಲಾ ಒಟ್ಟು ಸೇರಿಸಿ ನ್ಯಾಯ ಸಿಗುವವರೆಗೆ ಹೋರಾಟವನ್ನು ಮುಂದಕ್ಕೆ ಕೊಂಡೊಯ್ಯುವ ನಿರ್ಧಾರ ಮಾಡಿದರು. ಜಿಲ್ಲಾ ಪಂಚಾಯತ್ ಪರ್ನ ಗ್ರಾಮ ಪಂಚಾಯತನ್ನು ಬರ್ಖಾಸ್ತುಗೊಳಿಸಿತು. ಅಧಿಕಾರ ಕಳಕೊಂಡ ಸ್ಥಳೀಯ ಪುಢಾರಿಗಳು ಗಾಂಧಿ ಮೇಷ್ಟ್ರ ಮೇಲೆ ಹಗೆ ಸಾಧಿಸತೊಡಗಿದರು.


ಗಾಂಧಿ ಮೇಷ್ಟ್ರ ಕೊಲೆಯಾಗುವ ಹದಿನೈದು ದಿನಗಳ ಹಿಂದಷ್ಟೆ ಕಂಬಳ ಗುಡ್ಡೆ ಸರಕಾರಿ ಶಾಲೆಯ ಮೈದಾನದಲ್ಲಿ ಒಂದು ಆದಿತ್ಯವಾರ ಮುಂಜಾನೆ ಕೆಲವು ಯುವಕರು ಕೈಯಲ್ಲಿ ಲಾಠಿ ಹಿಡಿದು ಚೆಡ್ಡಿ ಹಾಕಿ ಕವಾಯತು ಮಾಡುತ್ತಿದ್ದರು. ವಿಷಯ ತಿಳಿದು ಮೇಷ್ಟ್ರ ಶಾಲೆಯ ಬಳಿ ಹೋದಾಗ ಓರ್ವ ದಪ್ಪಮೀಸೆಯ ಆಸಾಮಿ ತರಬೇತಿ ನೀಡುತ್ತಿದ್ದ. ಮೇಷ್ಟ್ರಿಗೆ ಅದೆಲ್ಲಿಯ ಸಿಟ್ಟು ಬಂತೋ...... ಏನೋ? "ಮರ್ಯಾದಿಗೆ ಶಾಲೆಯ ಮೈದಾನದಿಂದ ಹೊರನಡೆಯಿರಿ. ನಿಮ್ಮ ರಾಜಕೀಯಕ್ಕೆ ಇಲ್ಲಿ ತಳಪಾಯ ಹಾಕುವುದು ಬೇಡ" ಎಂದು ಅಬ್ಬರಿಸಿ ಗಲಾಟೆ ಮಾಡಿದರು. ಅವರು ತಮ್ಮದು ಸಾಂಸ್ಕೃತಿಕ ಸಂಘಟನೆ, ದೇಶಭಕ್ತ ಸಂಘಟನೆ ಎಂದು ಏನೇನೋ ಸಮಜಾಯಿಷಿ ಕೊಡುವ ಪ್ರಯತ್ನ ಮಾಡಿದರು. ಗಾಂಧೀಜಿಯನ್ನು ಕೊಂದವರ ಸಂತಾನಿಗಳಾದ ನಿಮ್ಮ ದೇಶಭಕ್ತಿ ಎಂತಹದ್ದು ಎಂದು ನನಗೂ ಗೊತ್ತು ಎಂದು ಮತ್ತೆ ಅಬ್ಬರಿಸಿದರು. ಅವರು ಅನ್ಯದಾರಿ ಕಾಣದೇ ಜಾಗ ಖಾಲಿ ಮಾಡಿದರು.

ಇಂತಹ ಘಟನೆಗಳು ಗಾಂಧಿ ಮೇಷ್ಟ್ರಿಗೆ ಶತ್ರುಗಳನ್ನು ಹೆಚ್ಚಿಸಿತು. ಆದರೆ ಇದು ಅವರನ್ನು ಕೊಲ್ಲುವಷ್ಟು ಮುಂದೆ ಹೋಗುತ್ತದೆಂದು ಯಾರೂ ಎಣಿಸಿರಲಿಲ್ಲ.

ಜನವರಿ 29ರ ರಾತ್ರಿ ಮುಗುಳಿ ಅಣ್ಣು ಮೇಲಾಂಟರ ಮನೆಯಲ್ಲಿ ಹರಕೆಯ ಯಕ್ಷಗಾನ ನಡೆಯುತ್ತಿತ್ತು. ಹೆಸರಾಂತ ಕಲಾವಿದ ಜಬ್ಬಾರ್ ಸಮೋ ಬಂದಿದ್ದರು. ಯಕ್ಷಗಾನ ಇನ್ನೇನು ಮುಗಿಯಲಿತ್ತು, ಮೇಷ್ಟ್ರು ಮೆಲ್ಲನೆ ಎದ್ದು ಗದ್ದೆ ಹುಣಿಯಲ್ಲಿ ನಡೆಯುತ್ತಾ ಮನೆ ಕಡೆ ಬರುತ್ತಿದ್ದರು. ಗದ್ದೆಯ ಕಡೆಯಿಂದ ಯಾರದ್ದೋ ಬೊಬ್ಬೆ ಕೇಳಿ ಮೋಂತು ಪೂರ್ಬು ಟಾರ್ಚ್ ಹಿಡಿದುಕೊಂಡು ಬೊಬ್ಬೆ ಕೇಳಿದೆಡೆಗೆ ಓಡುತ್ತಾ ಬರುತ್ತಿರಬೇಕಾದರೆ ಇಬ್ಬರು ಕೇಂಕನ್ ಗುಡ್ಡೆಯತ್ತ ಓಡಿದರು. ಪೂರ್ಬುವಿಗೆ ವಿಷಯ ಏನೆಂದು ತಿಳಿಯಲಿಲ್ಲ. ಪೂರ್ಬುವಿನ ನಾಯಿಗಳೆರಡು ಗದ್ದೆ ಹುಣಿಯ ಪಕ್ಕದ ಕೊಳಕ್ಕೆ ಬಗ್ಗಿ ಬೊಗಳುತ್ತಿತ್ತು. ಪೂರ್ಬು ಕೊಳದತ್ತ ಬಂದು ಟಾರ್ಚ್ ಹೊಡೆದು ನೋಡಬೇಕಾದರೆ ನೀರಿನಿಂದ ಗುಳು ಗುಳು ಶಬ್ದ ಕೇಳಿ ಬಂತು. ಅಷ್ಟು ಹೊತ್ತಿಗೆ ಯಕ್ಷಗಾನ ಮುಗಿದು ಜನರೆಲ್ಲ ನಡೆದುಕೊಂಡು ಬರುತ್ತಿದ್ದರು. ಪೂರ್ಬುವನ್ನು ಅಪರಾತ್ರಿ ಕೊಳದ ಬಳಿ ಕಂಡು ಎಲ್ಲರೂ ಬಂದು ಸೇರಿದರು. ಒಂದು ಮೂಲೆಯಲ್ಲಿ ಒಂದು ಅಜ್ಜ ಕೊಡೆ ಅನಾಥವಾಗಿ ಬಿದ್ದಿತ್ತು. ಟಾರ್ಚ್ ಹೊಡೆದು ನೋಡಿದಾಗ ಅದು ಮೇಷ್ಟ್ರ ಕೊಡೆ.

■ ಇಸ್ಮತ್ ಫಜೀರ್

ಎಷ್ಟೇ ಆಗಲಿ ಹೆಂಗಸ್ರು ಬುದ್ಧಿ



ಅದಕ್ಕೇ ಹೆಂಗಸ ಬುದ್ಧಿ ಅನ್ನೋದು. ಎಷ್ಟು ಹೇಳಿದ್ರೂ ಕೇಳಲೇ ಒಲ್ರೊ. ಅಬ್ಬಾ ಹಂಗೆಲ್ಲ ಮಾಡಬ್ಯಾಡಿ ಕಣ್ರವ್ವ ಮಾಡಬಾರದ್ದು ಮಾಡಿದ್ರೆ ಆಗಬಾರದ್ದು ಆಯ್ತದೆ. ಶಬರಿಮಲೈ ಅಯ್ಯಪ್ಪಸ್ವಾಮಿ ಸನ್ನಿಧಿ ಅಂದ್ರೆ ಸಾಮಾನ್ಯವಾ. ಮುಟ್ಟು ಚಟ್ಟು ಆಗೋರು ಹೋಗಬಾರ್ದು ಅಂತ ಆ ಸ್ವಾಮಿ ಕಂಡಿಷನ್ನಾಕವ್ನೆ ಅಂತ ಗಿಣಿಗೆ ಹೇಳಿದಂಗೆ ಹೇಳಿದ್ರೂ ಕೇಳ್ತಿಲ್ರೊ. ಹೋಯ್ತೀವಿ ಅಂತ ಕೋರ್ಟು ಮೆಟ್ಟಿಲೇರವೆ. ಶನಿ ಶಿಂಗ್ನಾಪುರದ ಶನಿಮಹಾತ್ಮನ ಮಹಿಮೆ ನೀವ್ರು ಕಾಣ್ರಿ. ಹೆಂಗಸರು ಹೋಗಿ ಮುಟ್ಟಿದರೆ ಸಾಕು ಅವನ ಮೈಯ್ಯಿಂದ ತರಂಗಗಳೇಳ್ತವೆ. ಅದರ ಪ್ರಭಾವ ನೀವು ತಡ್ಕೊಳ್ಳಲಾರಿರಿ. ಅವನ ಸಾವಾಸ ಬುಡಿ ಅಂದ್ರೂ ಕೇಳದೆ ಅದೇನಾಯ್ತದೊ ಆಗ್ಲಿ ಹೋಗಿ ದೇವರ ವಿಗ್ರಹ ಮುಟ್ಟೆ ಬರ್ತೀವಿ ಅಂತವೆ. ಇವನ್ನೆಲ್ಲ ನೋಡ್ತಾ ಇದ್ದ ಮುಸಲ್ಮಾನ ಹೆಂಗಸರು ಏನ್ಮಾಡವ್ರೆ? ಅದದ್ದಾಗಲಿ ಬೊಂಬಾಯಿಯ ಹಾಜಿ ಅಲಿ ದರ್ಗಾಕ್ಕೆ ಹೋಗಿ ಚಾದರ ಹೊದ್ದಿಸಿಯೇ ತೀರ್ತೀವಿ ಅಂತ ಎಗರಾಡ್ತ ಬಿದ್ದವೆ.

ಮುಟ್ಟುಚಟ್ಟು ಅಂತೆಲ್ಲ ಇರ್ತವಲ್ಲವ, ಅದೇನ್ ಹೇಳಿಕೇಳಿ ಆಯ್ತವಾ. ಸಮಯಸಂದರ್ಭ ನೋಡ್ತವಾ. ಯಾವಾಗ ಅಂದ್ರೆ ಆವಾಗ ಆಗೋ ಕ್ರಿಯೆಗಳಲ್ವೇನ್ರವ್ವಾ. ಅವೆಲ್ಲ ಸೂತಕ ಅಲ್ವೆ. ಅದ ಇಟ್ಕೊಂಡು ದೇವಸ್ಥಾನಕ್ಕೆ ಹೋಗುವುದು ನ್ಯಾಯವೇ ಅಂತ ಪ್ರಶ್ನಿಸಿದರೆ, ಮುಟ್ಟಾಗೋದು ಸೂತಕ ಅಲ್ಲ ಶುಭ ಸೂಚನೆ ಅಂತಾ ಉಲ್ಟಾ ಹೊಡೀತಾವೆ. ಇಂಥ ವಕ್ರಬುದ್ಧಿಯೋವ್ನ ಏನು ಮಾಡನಾ ಹೇಳಿ. ನಮಗೇನು ಮಹಿಳೆಯರ ಮೇಲೆ ದ್ವೇಷ ಇಲ್ಲ. ಸೂತಕದ ಸಮಸ್ಯೆ ಒಂದೇ ಇರೋದು ಕಣ್ರವ್ವ. ಮುಟ್ಟಾಗವ್ರೋ ಇಲ್ಲವ್ರೋ ಕಂಡುಹಿಡಿಯುವ ಮಿಷಿನ್ನಾದರೂ ಇದ್ದಿದ್ದರೆ ಹಂಗಾಗಿರೋರ್ನ ಬಿಟ್ಟು ಬ್ಯಾರೆಯೋರ್ನ ಸೇರಿಸಬಹುದಾಗಿತ್ತು. ಅಂತಹ 'ಮುಟ್ಟುಯಂತ್ರ' ಸದ್ಯಕ್ಕೆ ಇದ್ದಂಗಿಲ್ಲ. ಅದ ಕಂಡುಹಿಡಿ ಯೋತನಕ ವಸಿ ತಡಕೊಳ್ರವ್ವ ಅಂದ್ರೆ ಬಿಲ್‌ಕುಲ್ ಆಗಾಕಿಲ್ಲ ಅಂತಾವೆ.

ಈ ಹಾಳಾದೋವು ಅದುಇದೂ ಅಂತ ಒಂದಷ್ಟು ಓದಿಕೊಂಡು ಬುಟ್ಟವೆ. ಪರಂಪರೆ, ಸಂಪ್ರದಾಯ ಇಂತವೆಲ್ಲ ಅವರ ತಲೆಒಳಕ್ಕೆ ಹೋಗೋದಿಲ್ಲ. ಧಾರ್ಮಿಕ ಸ್ವಾತಂತ್ರ್ಯದ ನಿಂದನೆ ಆಗದೆ ಅಂತಾವ ಸಂವಿಧಾನದ ಪುರಾಣ ಒದರ್ತವೆ. ಅವರ ಭಾಷೇಲೆ ಅವರಿಗೆ ಉತ್ತರ ಕೊಡಬೇಕೂಂತ, ಅಲ್ಲ ಕಣ್ರವ್ವಾ ನಿಮ್ಮ ಧರ್ಮ ಏನು ದೇವಸ್ಥಾನಕ್ಕೆ ಬಂದು ಪೂಜೆ ಮಾಡಿದರೆ ಮಾತ್ರ ಸ್ವರ್ಗಸಿಗ್ತದೆ ಅಂತ ಹೇಳಿದ್ದಿತಾ. ಮನೇಲೆ ಪೂಜೆ ಪುನಸ್ಕಾರ ಮಾಡಿದ್ರೆ ಆಗದಾ ಅಂದ್ರೆ ಏನಂತಾವೆ ಗೊತ್ತಾ? ಅದುಮಿಕೊಂಡು ಕುಂತ್ಕಳಯ್ಯ ನಮಗೂ ಅದು ಗೊತ್ತದೆ ಕನ. ನಾವು ಮಾಡ್ತಿರೋದು ಸತ್ತ ಮೇಲೆ ಸ್ವರ್ಗಕ್ಕೆ ಹೋಗಲು ಅಲ್ಲ, ಸಂವಿಧಾನ ನೀಡಿರುವ ಸಮಾನತೆ ಹಕ್ಕನ್ನು ಚಲಾಯಿಸೋಕೆ ಅಂತಾವಲ್ರೀ....!

ಏನೋ ಅರೆಬರೆ ತಿಳ್ಕಂಡು ಹಿಂಗಾಡ್ತ ಅವೆ. ಗಣರಾಜ್ಯೋತ್ಸವದ ದಿವಸವೇ ಶನಿದೇವರ ವಿಗ್ರಹ ಮುಟ್ತೀವಿ ಅಂದಿದ್ರೊ. ಒಳಕ್ಕೆ ಬಿಡಲ್ಲ ತಡೀತಾರೆ ಅಂತಾನೂ ಗೊತ್ತಿತ್ತೇನೋ ಅವ್ಕೆ. ಅದ್ಕೆ ಹಿಂಗೇನಾದ್ರೂ ಮಾಡಿದ್ರೆ ಹೆಲಿಕಾಪ್ಟರ್‌ನಲ್ಲಿ ದೇವರ ಸನ್ನಿಧೀಲಿ ಇಳೀತೀವಿ ಅನ್ನೊ ಬೆದರಿಕೆನೂ ಹಾಕ್ದ್ರೊ. ಹುಚ್ಚು ಮುಂಡೇವು ಹಂಗೆ ಮಾಡಿದ್ರೂ ಮಾಡ್ಬೊ ಅಂತ ಅವತ್ತು ಹೆಲಿಕಾಪ್ಟರ್‌ಗಳು ಸಿಗದಂತೆ ಮಹಾರಾಷ್ಟ್ರ ಸರ್ಕಾರ ನೋಡಿಕೊಂತು. ಹೇಳಿದ್ದಂತೆ ಆ ದಿವಸ ನೂರಾರು ಹೆಂಗಸರು ಬಸ್ಸುಗಳಲ್ಲಿ ಶನಿಶಿಂಗ್ನಾಪುರಕ್ಕೆ ಹೊರಟರು. ಅಲ್ಲಿನ ಮುಖ್ಯಮಂತ್ರಿ ಫಡ್ನಾವಿಸ್ ಸಾಹೇಬರು ಶಾಂತಿ ಸುವ್ಯವಸ್ಥೆಯನ್ನು ಕಾಪಾಡಬೇಕೂಂತ ಅವರನ್ನೆಲ್ಲ ದೂರದಲ್ಲೇ ತಡೆಹಾಕಿದ್ರು ಅನ್ನಿ. ಆಮೇಲೆ ಜಟಾಪಟಿ, ಶಾಂತಿ ಕಾಪಾಡಲು ಲಾಠಿಚಾರ್ಜು ಇವೆಲ್ಲ ಮಾಮೂಲಾಗಿ ನಡೀತು ಅಷ್ಟೇಯ.

ಅಲ್ಲಾ ಆ ಶನಿಮಹಾತ್ಮ ಅನ್ನೋನು ಹಿಂಗಿಂಗೆ ಒಂದಷ್ಟು ಜನ ಹೆಂಗಸರು ನನ್ನ ಮುಟ್ಟಕ್ಕೆ ಬತ್ತಾ ಅವ್ರೆ ಅಂದದ್ವೇ ದೂರದಲ್ಲೆಲ್ಲೋ ತಡ್ದು ಲಾಠಿಚಾರ್ಜು ಮಾಡಿಸವನಲ್ಲ, ಒಂದುವೇಳೆ ಹೋಗಿ ಮುಟ್ಟೇಬಿಟ್ಟದ್ರೆ ಇನ್ನೇನು ಮಾಡ್ತಿದ್ದನೊ...!

ಈ ಭಯನಾರು ಬ್ಯಾಡವಾ ಹಾಳಾದ ಹೆಂಗಸರಿಗೆ:... ಹಿಂಗೆ ಚಂಡಿಚಾಮುಂಡೀರಂಗೆ ಕುಣೀತಾ ಬಿದ್ದವಲ್ಲಾ...

■ ಎಚ್ಚೆಲ್ಕೆ

ಗಾಂಧಿ ಮತ್ತು ವೇಮುಲನ ಹತ್ಯೆ ಎರಡೂ ದೇಶದ ಆತ್ಮಸಾಕ್ಷಿಯ ಹತ್ಯೆಗಳು

ಮಂಗಳೂರಿನಲ್ಲಿ ನಡೆದ 'ಸಹಬಾಳ್ವೆ ಸಾಗರ' ಸಮಾವೇಶದಲ್ಲಿ ನಾಡೋಜ ಬರಗೂರು ರಾಮಚಂದ್ರಪ್ಪ ಅವರು ಮಾಡಿದ ಉದ್ಘಾಟನಾ ಭಾಷಣ ಮತ್ತು ಹಿರಿಯ ಬರಹಗಾರ ಚಂದ್ರಶೇಖರ ಪಾಟೀಲ ಅವರು ಮಾಡಿದ ಆಶಯ ನುಡಿಗಳನ್ನು ಇಲ್ಲಿ ನಮ್ಮ ಓದುಗರಿಗೆ ಕೊಡುತ್ತಿದ್ದೇವೆ.

ಇದೊಂದು ವಿಶಿಷ್ಟವಾದಂತಹ ರಾಷ್ಟ್ರೀಯ ಸಮಾವೇಶ. ಇದನ್ನು ಐತಿಹಾಸಿಕ ಮತ್ತು ಸಕಾರಾತ್ಮಕ ಸಮಾವೇಶ ಅಂತ ಕರೆಯೋದಕ್ಕೆ ನಾನು ಇಷ್ಟಪಡುತ್ತೇನೆ. ಇದೊಂದು ಕಾಲದ ಗ್ರಹಿಕೆಯನ್ನು ಪೂರೈಸುತ್ತಿರುವಂತಹ ಅದ್ಭುತವಾದ ಮತ್ತು ಅಪೂರ್ವವಾದ ಸಕಾರಾತ್ಮಕ ಐತಿಹಾಸಿಕ ಸಮಾವೇಶ ಅಂತ ಅರ್ಥಮಾಡಿಕೊಂಡು ಇದನ್ನು ಸಂಘಟಿಸಿದ ಎಲ್ಲ ಸಂಗಾತಿಗಳಿಗೂ ಈ ನಾಡಿನ ಸೌಹಾರ್ದಪ್ರಿಯರ ಪರವಾಗಿ ನಾನು ಅಭಿನಂದನೆಗಳನ್ನು, ಧನ್ಯವಾದಗಳನ್ನು ಅರ್ಪಿಸೋದಕ್ಕೆ ಇಷ್ಟಪಡುತ್ತೇನೆ.

ಸಂಘಟಕರೇ ಹೇಳಿಕೊಂಡ ಹಾಗೆ ವಿವಿಧ ಧರ್ಮ, ಜಾತಿ, ಸಂಸ್ಕೃತಿ, ಸಿದ್ಧಾಂತಗಳು ಪರಸ್ಪರ ಸೇರಿರತಕ್ಕಂತಹ ಸಮಾವೇಶ ಇದು. ಸೌಹಾರ್ದ ನಿರ್ಮಾಣ ಮಾಡುವುದಿದೆಯಲ್ಲ ಅದು ಬಹಳ ಸೂಕ್ಷ್ಮವಾದ ಮತ್ತು ಬಹಳ ಕಷ್ಟಕರವಾದ ಸಂಗತಿ. ಆದರೆ ಅಂತಹ ಒಂದು ಅಗತ್ಯ ಇವತ್ತು ಬಿದ್ದಿದೆ ಅನ್ನೋದೇ ನಮ್ಮ ದೇಶ ಯಾವ ದಿಕ್ಕಿನಲ್ಲಿ ಹೋಗ್ತಾ ಇದೆ ಅನ್ನೋದಕ್ಕೆ ಸಾಕ್ಷಿ. ನಮ್ಮ ಜವಾಬ್ದಾರಿಯನ್ನು, ನಮ್ಮ ಕರ್ತವ್ಯವನ್ನು ಸಮಾಜಮುಖಿ ಆಶಯಗಳ ನಿರ್ವಹಣೆಯನ್ನು ಈ ಸಮಾವೇಶ ಮಾಡ್ತಾ ಇದೆ ಅನ್ನೋದು ಕರ್ನಾಟಕದ ಜನ ಅಷ್ಟೇ ಅಲ್ಲ, ಒಟ್ಟು ನಮ್ಮ ನಾಡಿನ ದೇಶದ ಸಮಾಜಮುಖಿ ಆಶಯಗಳನ್ನು ಇಟ್ಟುಕೊಂಡಿರುವವರೆಲ್ಲ ಸಂತೋಷಪಡತಕ್ಕ ಸಂಗತಿ.

ಈ ಕರ್ನಾಟಕ ಕೋಮುಸೌಹಾರ್ದ ವೇದಿಕೆ ಒಂದು ಸೋಷಿಯಲ್ ಆಕ್ಟಿವಿಸ್ಟ್ ಮಾಡಬಹುದಾದಂತಹ ಸೈದ್ಧಾಂತಿಕ ಗ್ರಹಿಕೆಯ ಹಿನ್ನೆಲೆಯಲ್ಲಿ ಇಂಥದ್ದೊಂದು ಅಭೂತಪೂರ್ವ ಸಮಾವೇಶ ಏರ್ಪಡಿಸಿರುವಂಥದ್ದು ನಮ್ಮ ನಾಡಿನ ಸಕಾರಾತ್ಮಕ ಚಿಂತಕರು ಮತ್ತು ಕ್ರಿಯಾಶೀಲರಾಗಿರುವವರೆಲ್ಲರೂ ಅಭಿನಂದಿಸತಕ್ಕಂತಹ ಕೆಲಸ. ಇದೇ ನಿಜವಾದ ಸೈದ್ಧಾಂತಿಕ ಚಲನಶೀಲತೆ.

ಈ ಸಮಾವೇಶಕ್ಕೆ ನಮ್ಮ ಗೆಳೆಯರು ಆಯ್ಕೆ ಮಾಡಿಕೊಂಡಿರೋದು ಕೂಡಾ ಒಂದು ವಿಶೇಷವಾದ ದಿನ. ಇದು ಗಾಂಧಿಹತ್ಯೆಯಾದ ದಿನ. ವೇಮುಲ ರೋಹಿತ್ ಅವರ ಆತ್ಮಹತ್ಯೆ, ಗಾಂಧೀಜಿ ಹತ್ಯೆ ಎರಡಕ್ಕೂ ನಾವು ಶ್ರದ್ಧಾಂಜಲಿ ಅರ್ಪಿಸಿ ಈ ಉದ್ಘಾಟನಾ ಸಮಾರಂಭ ಮಾಡಿದ್ದೇವೆ. ಒಂದು ಹತ್ಯೆ, ಇನ್ನೊಂದು ಆತ್ಮಹತ್ಯೆ. ಆದರೆ ಎರಡೂ ಈ ದೇಶದ ಆತ್ಮಸಾಕ್ಷಿಯ ಹತ್ಯೆ. ಗಾಂಧಿ ಹತ್ಯೆಯನ್ನು ಮಾಡಿದಂತಹ ಗೋಡ್ಸೆ ಕೋರ್ಟಿನಲ್ಲಿ ತಾನು ಯಾಕೆ ಹತ್ಯೆ ಮಾಡಿದೆ ಅಂತ ಒಂದು ಮಾತು ಹೇಳ್ತಾನೆ. 'ಈ ಗಾಂಧಿ ಕೇವಲ ಮುಸ್ಲಿಮರ ಪರವಾಗಿರ್ತಾರೆ, ಇವರು ಆ ಮುಸ್ಲಿಮರನ್ನು ಸಮರ್ಥಿಸುವುದಕ್ಕಾಗಿ ಇಡೀ ಜೀವನ ಅರ್ಪಿಸ್ತಾ ಇದ್ದಾರೆ. ಇವರನ್ನು ಭಾರತದ ರಾಷ್ಟ್ರಪಿತ ಅಂತ ಕರೆಯಲಾಗುತ್ತೆ, ನನ್ನ ದೃಷ್ಟಿಯಲ್ಲಿ ಇವರು ಪಾಕಿಸ್ತಾನದ ರಾಷ್ಟ್ರಪಿತ' ಅಂತ ಹೇಳ್ತಾನೆ. ಅಂದ್ರೆ ಪಾಕಿಸ್ತಾನದ ರಾಷ್ಟ್ರಪಿತ ಅಂತ ಹೇಳೋದರ ಮುಖಾಂತರ ಗಾಂಧಿಯ ಹತ್ಯೆ ಮಾಡಿದ್ದನ್ನು ಸಮರ್ಥನೆ ಮಾಡಿಕೊಂಡಂತಹ ಗೋಡ್ಸೆಯನ್ನು ತಮ್ಮ ನೇತಾರ ಅಂತ ಅಂದುಕೊಂಡು, ಅವನನ್ನು ನಿಜವಾದ ವೀರ ಅಂತ ಅಂದುಕೊಂಡು ಕ್ರೌರ್ಯದ ದಿನವನ್ನು ಶೌರ್ಯದ ದಿನವನ್ನಾಗಿ ಆಚರಿಸಿದಂತಹ ಅಮಾನವೀಯ ವ್ಯಕ್ತಿಗಳು ಅವತಾರ ಎತ್ತಿರುವಂತಹ ದೇಶ ಇದು. ಹೋದವರ್ಷ ಗೋಡ್ಸೆಯನ್ನು ಆರಾಧಿಸುತ್ತಾ ಗೋಡ್ಸೆಯ ಪ್ರತಿಮೆಯನ್ನು ಹಾಕಿ ದೇಗುಲ ಹಾಕ್ತೀವಿ ಅಂತ ಹೇಳಿದರು. ಕ್ರೌರ್ಯದ ದಿನಗಳಿವು. ಹತ್ಯೆಯ ದಿನಗಳು, ಆತ್ಮಹತ್ಯೆ ದಿನಗಳು, ಅತ್ಯಾಚಾರದ ದಿನಗಳು ಯಾವತ್ತೂ ಈ ದೇಶದ ಕ್ರೌರ್ಯದ ದಿನಗಳೇ.

ಇವತ್ತು ನೀವೇನಾದ್ರೂ, ಯಾವುದಾದ್ರೂ ಮೂಲಭೂತವಾದಿಗಳ ವಿರುದ್ಧ ಮಾತನಾಡಿದರೆ ಸಾಕ್ಷಿ ಮಹಾರಾಜ, ಆದಿತ್ಯನಾಥ್, ಸಾಧ್ವಿ ಪ್ರಾಚಿ ಅವರೆಲ್ಲ ಅಣಿಮುತ್ತುಗಳನ್ನು ಉದುರಿಸ್ತಿರ್ತಾರೆ. 'ನೀವು ತಕ್ಷಣ ಪಾಕಿಸ್ತಾನಕ್ಕೆ ಹೋಗಿ' ಅಂತ. ಅಂದರೆ ನೀವು ಆಹಾರಸಂಸ್ಕೃತಿಯ ಬಗ್ಗೆ ಮಾತನಾಡಿದ್ರೆ, ಪಾಕಿಸ್ತಾನಕ್ಕೆ ಕಳಿಸ್ತೀವಿ ಅಂತಾರೆ. ಹಿಂದೂ ಮೂಲಭೂತವಾದಿಗಳನ್ನು ವಿರೋಧಿಸಿದ್ರೆ ಪಾಕಿಸ್ತಾನಕ್ಕೆ ಕಳಿಸ್ತೀವಿ ಅಂತಾರೆ. ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿದ್ರೆ ಪಾಕಿಸ್ತಾನಕ್ಕೆ ಕಳಿಸ್ತೀವಿ ಅಂತಾರೆ. ಇವ್ಯಾರನ್ನೂ ಕಳಿಸೋಕ್ಕಾಗಿಲ್ಲ ಅಂತ ಕಳೆದ ತಿಂಗಳು 25 ನೇ ತಾರೀಖು ಸ್ವತಃ ಮೋದಿಯವರೇ ಪಾಕಿಸ್ತಾನಕ್ಕೆ ಹೋಗಿಬಿಟ್ಟು ಒಂದು ಆದರ್ಶವನ್ನು ನಿರ್ಮಾಣ ಮಾಡಿಬಿಟ್ರು.


ಗಾಂಧಿ ವಿಚಾರಗಳನ್ನೆಲ್ಲ ನಾವು ಒಪ್ಪಿದ್ದೇವಂತಲ್ಲ, ನಮಗೆ ಅನೇಕ ತಾತ್ವಿಕ ತಾಕಲಾಟಗಳಿವೆ ಗಾಂಧಿಯ ಜತೆಯಲ್ಲಿ. ಆದರೆ ಧಾರ್ಮಿಕ ಮೂಲಭೂತವಾದ ಮತ್ತು ಧಾರ್ಮಿಕ ಭಯೋತ್ಪಾದನೆ ವಿಜೃಂಭಿಸುತ್ತಿರುವ ಈ ದಿನಗಳಲ್ಲಿ ನಮ್ಮ ಆದ್ಯತೆ ಏನಂದ್ರೆ, ನಮ್ಮ ಸಿದ್ಧಾಂತಗಳನ್ನ ಅಂತರ್ಗತಮಾಡಿಕೊಂಡೇ, ಇವತ್ತಿನ ದೊಡ್ಡ ಸಮಸ್ಯೆಯಾಗಿ ಮುನ್ನೆಲೆಗೆ ಬಂದಿರತಕ್ಕಂತಹದ್ದನ್ನು ಎದುರಿಸೋದು ಹೇಗೆ ಅಂತ. ಆ ಕಾರಣಕ್ಕಾಗಿಯೇ ನಮಗೆ ಗಾಂಧೀನೂ ಬೇಕಾಗ್ತಾರೆ, ಅಂಬೇಡ್ಕರರೂ ಬೇಕಾಗ್ತಾರೆ, ಲೋಹಿಯಾ ಬೇಕಾಗ್ತಾರೆ, ಹಾಗೆನೇ ಮಾವೋ ಬೇಕಾಗ್ತಾರೆ, ಮಾರ್ಕ್ಸ್ ಬೇಕಾಗ್ತಾರೆ. ದೊಡ್ಡದೊಂದು ಸಾಮಾಜಿಕ ಆರ್ಥಿಕ ಕ್ರಾಂತಿ ಆಗಬೇಕು ಅಂತಹ ಬಯಸುತ್ತಿದ್ದ ಈ ದೇಶದಲ್ಲಿ ನಾವೀಗ ಎಲ್ಲಿಗೆ ಬಂದಿದ್ದೇವೆ ಅಂದರೆ, ಗಾಂಧಿ, ಅಂಬೇಡ್ಕರ್, ಲೋಹಿಯಾ, ಮಾರ್ಕ್ಸ್, ಮಾವೋ ಎಲ್ಲರೂ ಒಂದೆಡೆ ಕುಳಿತು ಸಂವಾದಿಸುವಂತಹ ಸನ್ನಿವೇಶ ಬರಲಿ ಅನ್ನೋ ಸನ್ನಿವೇಶಕ್ಕೆ ಬಂದಿದ್ದೇವೆ. ಅವರೆಲ್ಲ ಒಟ್ಟಿಗೆ ಕೂತು ಮಾತಾಡಬೇಕು. ಅವರೆಲ್ಲ ಒಟ್ಟಿಗೆ ಕೂತು ಮಾತಾಡೋದಷ್ಟೇ ಅಲ್ಲ, ತಮ್ಮ ಎದುರಾಳಿಗಳನ್ನು ಮಾತುಕತೆಗೆ ಕರೆಯಬೇಕಾದಂತಹ ಸನ್ನಿವೇಶ ಇದೆ.

ಗಾಂಧಿ ಜತೆಗಿನ ಭಿನ್ನಾಭಿಪ್ರಾಯ ಇರಬಹುದು ಅಥವಾ ಇನ್ನೊಬ್ಬರ ಜತೆ ಇರುವ ಭಿನ್ನಾಭಿಪ್ರಾಯ ಇರಬಹುದು, ಅವನ್ನು ಹಿನ್ನೆಲೆಗೆ ಸರಿಸುತ್ತಾ ಇವರೆಲ್ಲರ ಒಳಗಡೆ ಇದ್ದಂತಹ ಸೌಹಾರ್ದ ಸಂಸ್ಕೃತಿಯನ್ನು ಒಂದುಗೂಡಿಸಬೇಕು. ಅಂಬೇಡ್ಕರ್ ಒಳಗಡೆ ಒಂದು ಸಮತೆ ಮತ್ತು ಸೌಹಾರ್ದದ ಸಂಸ್ಕೃತಿ ಇತ್ತು ಗಾಂಧೀಜಿಯ ಒಳಗಡೆ ಒಂದು ಸೌಹಾರ್ದದ ಸಂಸ್ಕೃತಿ ಇತ್ತು, ಹಾಗೆಯೇ ಮಾವೋ, ಮಾರ್ಕ್ಸ್, ಲೆನಿನ್ ಇಂಥವರಲ್ಲಿ ಸಮಾನತೆಯ ಸಂಸ್ಕೃತಿ ಇತ್ತು, ಅವನ್ನೆಲ್ಲ ಉಳಿಸಿಕೊಂಡೇ ಒಂದೇ ಕಡೆ ಕೂತು ಮಾತಾಡಬೇಕು, ಸಂವಾದಿಸಬೇಕು.

ಇತ್ತೀಚೆಗೆ ವೇಮುಲ ರೋಹಿತ್ ಅವರ ಆತ್ಮಹತ್ಯೆಯಾಯಿತು. ಅದು ಆತ್ಮಹತ್ಯೆಯೋ, ಆತ್ಮಹತ್ಯೆಗೆ ತಳ್ಳಿದ ಹತ್ಯೆಯೋ ಅದು ಬೇರೆ. ಆದರೆ ವಿಚಿತ್ರ ಏನೂಂತಂದ್ರೆ ವೇಮುಲ ರೋಹಿತ್‌ನ ಜಾತಿ ಯಾವುದು ಅಂತ ಈಗ ಹುಡುಕ್ತಿದ್ದಾರೆ. ನಮ್ಮ ದೇಶದಲ್ಲಿ ಜಾತಿಯನ್ನು ಯಾಕೆ ಹುಡುಕ್ತೀವಿ ಅಂದರೆ, ಸಾಮಾಜಿಕ ನ್ಯಾಯವನ್ನು ಕೊಡುವುದಕ್ಕಾಗಿ, ಶೋಷಣೆ ಮುಕ್ತ ಶ್ರೇಣೀಕರಣ ಮುಕ್ತ ಸಮಾಜವನ್ನು ನಿರ್ಮಾಣ ಮಾಡುವುದಕ್ಕಾಗಿ. ಜಾತಿಯ ಕಾರಣಕ್ಕಾಗಿಯೇ ಶೋಷಣೆಗೊಳಗಾದವರ ಜನ್ಮಮೂಲವನ್ನು ಶೋಧಿಸುವ ಒಂದು ಪ್ರಕ್ರಿಯೆ ನಮ್ಮ ನಡುವೆ ಇದೆ. ಆದರೆ ಇವರು ಜಾತಿ ಹುಡುಕ್ತಿರೋದು ಯಾಕೆ ಅಂದ್ರೆ, ಬಂಡಾರು ದತ್ತಾತ್ರೇಯನನ್ನು ಹೇಗೆ ಪಾರುಮಾಡಬೇಕು ಅಂತ. ಅಂದ್ರೆ ಜಾತಿ ನಿಂದನೆಯ ಕೇಸಿರುತ್ತಲ್ಲಾ, ಅದರಿಂದ ಹೇಗೆ ಪಾರುಮಾಡಬೇಕು ಅಂತ. ಇವನು ದಲಿತ ಅಲ್ಲ, ಅಸ್ಪೃಶ್ಯ ಅಲ್ಲ, ಅದಕ್ಕಾಗಿ ತನ್ನ ಹೆಂಡತಿ ಮಕ್ಕಳನ್ನು ಬಿಟ್ಟು ಎಲ್ಲೋ ದೂರದಲ್ಲಿ ವಾಸವಾಗಿರುವಂತಹ ತಂದೆಯನ್ನು ಕರೆಸಿಕೊಂಡು ಬಂದು ಪತ್ರಿಕಾಗೋಷ್ಠಿ ಮಾಡುವಷ್ಟರಮಟ್ಟಿಗೆ ಅಮಾನವೀಯವಾದ ಕ್ಷುಲ್ಲಕ ರಾಜಕಾರಣ ಈ ದೇಶದಲ್ಲಿ ನಡೀತಾ ಇದೆ.

ರೋಹಿತ್ ಆತ್ಮಹತ್ಯೆ ಇದೆಯಲ್ಲ, ಅದು ಒಬ್ಬನ ಆತ್ಮಹತ್ಯೆಯಲ್ಲ, ರೋಹಿತ್ ಆತ್ಮಹತ್ಯೆ ಒಂದು ವಿಷಾದಕ್ಕೆ ಒಳಗಾಗುವ, ಸಾಮಾಜಿಕ ಖಿನ್ನತೆಗೆ ಒಳಗಾಗುವ, ಶೋಷಣೆಯ ಕಾರಣಕ್ಕಾಗಿಯೇ ತನ್ನೊಳಗಡೇನೇ ಸಂಕಟವನ್ನು ಅನುಭವಿಸುವ ಲಕ್ಷಾಂತರ ಯುವಕರ ಒಳಗಿನ ಆತ್ಮಹತ್ಯೆಯಾಗಿ ಹೋಗ್ತಾ ಇದೆ ಅವನ ಮುಖಾಂತರ. ಇನ್ನೊಂದೆಡೆ ಗಾಂಧಿಯನ್ನು ಕೊಲ್ಲುವುದರ ಮುಖಾಂತರವಾಗಿ ಮೂಲಭೂತವಾದವನ್ನು ವಿಜೃಂಭಿಸಲಾಗಿದೆ.

ನಮ್ಮ ಸಾಮಾಜಿಕ ಸಂರಚನೆಯಲ್ಲಿಯೇ ಒಂದು ಹಿಂಸೆ ಇದೆ. ಆರ್ಥಿಕ ಸಂರಚನೆಯಲ್ಲಿಯೇ ಒಂದು ಹಿಂಸೆಯಿದೆ. ಆದರೆ ಅದನ್ನು ಕುರಿತು ಮಾತಾಡ್ತಿದ್ದಂತಹ ನಾವು ಒಂದುಕ್ಷಣ ವಿರಾಮವನ್ನು ಕೊಟ್ಟು, ಹೊರಗಡೆ ನಡೀತಿರುವಂತಹ ಈ ಧಾರ್ಮಿಕ ಮೂಲಭೂತವಾದ ಮತ್ತು ಧಾರ್ಮಿಕ ಹಿಂಸೆ ಬಗೆಗೆ ಮಾತಾಡುವಂತಹ ಒಂದು ಪಲ್ಲಟ ಈ ಸಂದರ್ಭದಲ್ಲಿ ಆಗಿದೆ. ಇಂಥ ಸಂದರ್ಭದಲ್ಲಿ ನಮಗೆ ಯಾವುದು ಮುಖ್ಯ? ಇವತ್ತು ಯಾಕೆ ಹೀಗೆ ಆಗ್ತಾ ಇದೆ ಅಂದ್ರೆ, ನಾಲಿಗೆಗಳು ನಾಗರವಾಗಿರುವ ಕಾಲದಲ್ಲಿ ನಾವು ಬದುಕುತ್ತಿದ್ದೇವೆ. ಯಾರ್‍ಯಾರು ಎಷ್ಟು ಸೊಗಸಾಗಿ ಮಾತಾಡ್ತಾರೆ ಎನ್ನುವುದನ್ನು ನೀವು ಗಮನಿಸಬೇಕು. ನಮ್ಮ ಹರಕುಬಾಯಿ ರಾಜಕಾರಣಿಗಳು ಸ್ವಚ್ಛಭಾರತ ಅಭಿಯಾನವನ್ನು ಗಾಂಧೀ ಜಯಂತಿಯಂದು ಆರಂಭಿಸಿದ್ರು. ಆದರೆ ಆ ಸ್ವಚ್ಛ ಭಾರತ ಅಭಿಯಾನ ಆರಂಭವಾಗಬೇಕಾಗಿರುವುದು ಇವರ ಹರಕುಬಾಯಿಗಳಿಂದ. ಆಗ ನಾಲಗೆಗಳು ನಾಗರವಾಗುವ ಕಾಲ ಇರೋದಿಲ್ಲ, ಇವತ್ತು ನಾಲಗೆಗಳು ನಾಗರವಾಗುವ ಕಾಲದಲ್ಲಿ ಬದುಕ್ತಿದ್ದೇವೆ. ಬಾಯಿ ಬಂದೂಕವಾಗುವ ಕಾಲದಲ್ಲಿ ಬದುಕುತ್ತಿದ್ದೇವೆ, ಬಂದೂಕವೇ ಬಾಯಿಯಾಗಿರುವ ಕಾಲದಲ್ಲಿಯೂ ನಾವು ಬದುಕುತ್ತಿದ್ದೇವೆ. ಆದರ ಜತೆಗೆ, ಸಹಿಷ್ಣುತೆಯನ್ನು ಶೈತ್ಯಾಗಾರದಲ್ಲಿಟ್ಟಂತಹ ಕಾಲದಲ್ಲಿ ಬದುಕುತ್ತಿದ್ದೇವೆ. ಸಮಾನತೆಯನ್ನು ತೀವ್ರ ನಿಗಾ ಘಟಕದಲ್ಲಿಟ್ಟಂತಹ ಕಾಲದಲ್ಲಿ ಬದುಕುತ್ತಿದ್ದೇವೆ. ಇಂತಹ ವೈರುಧ್ಯಗಳ ನಡುವೆ ವಿರೋಧಾಭಾಸಗಳ ನಡುವೆ ಪ್ರಗತಿಪರರು ಅಂತ ಅನಿಸಿಕೊಂಡಿರುವವರು, ಎಡಪಂಥೀಯರೆನಿಸಿಕೊಂಡಿರುವವರು ಸಿನಿಕತನದಿಂದ ಯೋಚನೆ ಮಾಡ್ತಿಲ್ಲ, ಸಕಾರಾತ್ಮಕವಾಗಿ ಯೋಚನೆ ಮಾಡೋದಕ್ಕೆ ಶುರು ಮಾಡಿದ್ದೇವೆ ಅನ್ನೋದಕ್ಕೆ ಈ ಸಮಾವೇಶವೇ ಸಾಕ್ಷಿ.



ಇವತ್ತು ಧಾರ್ಮಿಕ ಅಸಹಿಷ್ಣುತೆಯ ಪ್ರಶ್ನೆಯಾಗಿ ನಮ್ಮ ಎದುರುಗಡೆ ಇದೆ. ಆದರೆ ಒಂದು ಸಾಮಾಜಿಕ ಸಂರಚನೆಯಲ್ಲಿಯೇ ಈ ಅಸಹಿಷ್ಣುತೆ ಇದೆ. ಆರ್ಥಿಕ ಅಸಮಾನತೆಯಲ್ಲಿಯೂ ಈ ಅಸಹಿಷ್ಣುತೆ ಇದೆ. ಲಿಂಗತಾರತಮ್ಯದ ಒಳಗಡೆಯೂ ಈ ಅಸಹಿಷ್ಣುತೆ ಇದೆ. ಅಸಹಿಷ್ಣುತೆ ಎನ್ನುವುದಕ್ಕೆ ದೊಡ್ಡ ವ್ಯಾಪ್ತಿಯಿದೆ. ಆದರೆ ಇವತ್ತು ಎದುರುಗಡೆ ಬಂದಿರತಕ್ಕಂಥದ್ದು, ಧರ್ಮದ ಹೆಸರಿನಲ್ಲಿ ನಡೆದಿರುವಂತಹ ಅಸಹಿಷ್ಣುತೆ. ಹಾಗಾದ್ರೆ ಇದು ಇವತ್ತು ಮಾತ್ರ ಇದ್ದದ್ದಾ? ನಾವು ಸೊಗಸಾಗಿ ಒಂದು ಮಾತನ್ನು ಹೇಳುತ್ತೇವೆ. ನಮ್ಮದು ಸಹಿಷ್ಣು ಪರಂಪರೆ ಇರುವ ದೇಶ ಅಂತ. ಯಾಕಂದ್ರೆ ಜನಗಳನ್ನು ನಂಬಿಸಬೇಕಾಗಿದೆ. ಭೂತವನ್ನು ನಂಬುವ ಜನ ಜಾಸ್ತಿ ನಮ್ಮಲ್ಲಿ, ಅಂದ್ರೆ ಭೂತಕಾಲದ ವೈಭವಕ್ಕೆ ಮಾರುಹೋಗುವ ಜನ ಜಾಸ್ತಿ. ಅಸಹಿಷ್ಣುತೆ ಎನ್ನುವುದಕ್ಕೆ ಒಂದು ಇತಿಹಾಸ ಇದೆ. ನಮ್ಮಲ್ಲಿ ಬೇರೆ ಬೇರೆ ಕಾಲಘಟ್ಟಗಳಲ್ಲಿ ಈ ದೇಶ ಅಸಹಿಷ್ಣುತೆಯನ್ನು ವಿವಿಧ ಪ್ರಮಾಣಗಳಲ್ಲಿ ಎದುರಿಸಿಕೊಂಡು ಬಂದಿದೆ. ಆದರೆ ಅದನ್ನು ಎದುರಿಸಿ ಮುನ್ನೆಲೆಗೆ ಬಂದುದು ಯಾವುದೆಂದರೆ ಸಹಿಷ್ಣುತೆಯ ಆದರ್ಶದ ಮಾದರಿ. ನಮ್ಮ ಚರಿತ್ರೆಯ ಉದ್ದಕ್ಕೂ ನೀವು ಇಂತಹ ವಾಗ್ವಾದಗಳು ನಡೆದುದನ್ನು ನಾವು ನೋಡಿದ್ದೇವೆ.

12ನೇ ಶತಮಾನದ ಒಂದು ಶಾಸನದಲ್ಲಿ ಜೈನರು ಶಿವಾಲಯವನ್ನು ನಾಶಮಾಡ್ತಾರೆ, ವೀರಶೈವರು ಜಿನಾಲಯವನ್ನು ನಾಶ ಮಾಡಿ ಶಿವಾಲಯ ಮಾಡ್ತಾರೆ. ಇವತ್ತು ಬಾಬ್ರಿ ಮಸೀದಿ ಗಲಾಟೆ ನಡೀತಾ ಇದೆ. ಧಾರ್ಮಿಕ ಘರ್ಷಣೆಯೆನ್ನುವುದು 12 ನೇ ಶತಮಾನದಲ್ಲಿಯೂ ಇತ್ತು ಎನ್ನುವುದನ್ನು ನಾವು ಮರೀಬಾರ್ದು. ಅಷ್ಟೇ ಅಲ್ಲ, ಸೋಮನಾಥ ಚಾರಿತ್ರ ಅಂತ 13 ನೇ ಶತಮಾನದ [illegible] ಒಂದು ಕಾವ್ಯ ಇದೆ. ಸೋಮನಾಥ ಚಾರಿತ್ರದ ನಾಯಕ [illegible] ಜಿನಾಲಯವನ್ನು ಧ್ವಂಸ ಮಾಡಿ ಅಲ್ಲಿ ಒಂದು ಲಿಂಗಸ್ಥಾಪನೆ ಮಾಡುವ ಸನ್ನಿವೇಶ ಬರುತ್ತದೆ. 1354 ರ ಬುಕ್ಕನ [illegible] ಶಾಸನದಲ್ಲಿ ಒಂದು ಘಟನೆ ಬರುತ್ತೆ. ಜೈನರಿಗೂ ವೈಷ್ಣವರಿಗೂ ಗಲಾಟೆ ಆಗುತ್ತೆ, ಇವರಿಬ್ಬರನ್ನೂ [illegible] ಸಾಮರಸ್ಯದಿಂದ ಬದುಕುವ ಹಾಗೆ ಮಾಡಬೇಕು ಅಂತ [illegible] ಹೇಳಿಬಿಟ್ಟು ರಾಜ ಏನು ಮಾಡ್ತಾನೆ, ಜೈನರನ್ನು ಕರೆದು, [illegible] ನೀವು ವೈಷ್ಣವ ದೇವಾಲಯಕ್ಕೆ ಹೋಗಿ ಸುಣ್ಣಬಣ್ಣ ಬಳೀಬೇಕು ಅಂತ ಆದೇಶ ಮಾಡ್ತಾನೆ. ಹಾಗೆನೇ ವೈಷ್ಣವರನ್ನು ಕರೆದು ನೀವು ಜಿನಮಂದಿರಕ್ಕೆ ಹೋಗಿ ಪಂಚವಾದ್ಯಗಳನ್ನು ಬಾರಿಸಬೇಕು ಅಂತ ಆದೇಶ ಮಾಡ್ತಾನೆ. ಅಂದ್ರೆ 14ನೇ ಶತಮಾನದಲ್ಲಿ ಜೈನರು ಮತ್ತು ವೈಷ್ಣವರ ನಡುವೆ ನಡೆದ ಈ ಧಾರ್ಮಿಕ ಘರ್ಷಣೆಯನ್ನು ತಪ್ಪಿಸುವುದಕ್ಕಾಗಿ ಒಂದು ಸೌಹಾರ್ದದ ವಾತಾವರಣವನ್ನು, ಸಹಿಷ್ಣುತೆಯ ವಾತಾವರಣವನ್ನು ನಿರ್ಮಾಣ ಮಾಡುವುದಕ್ಕೆ ಆವತ್ತಿನ ರಾಜ್ಯಾಧಿಕಾರ ಪ್ರಯತ್ನ ಮಾಡಿತು. ಆದರೆ ಇವತ್ತಿನ ರಾಜ್ಯಾಧಿಕಾರ ಅಸಹಿಷ್ಣುತೆಯನ್ನು ಹೆಚ್ಚಿಸುವುದಕ್ಕೆ ಸಾಕಷ್ಟು ಪ್ರಯತ್ನ ಮಾಡುತ್ತಾ ಇದೆ. ಇದೇ ವ್ಯತ್ಯಾಸ. ಆವತ್ತು ರಾಜಶಾಹಿ ಆಡಳಿತ ಇತ್ತು, ಇವತ್ತು ಪ್ರಜಾಪ್ರಭುತ್ವ ಇದೆ. ಪ್ರಜಾಪ್ರಭುತ್ವದ ಒಳಗೆ ಬಹುಮತ ಅನ್ನೋದು ಒಂದು ಮದ ಆಗಿ ಪರಿಣಮಿಸಿಬಿಟ್ಟಿದೆ. ಬಹುಮತದ ಮದ [illegible] ಏಕ ಮತೀಯತೆಯ ಅನುಷ್ಠಾನಕ್ಕೆ ಕೊಟ್ಟ ಪರವಾನಗಿ ಅಲ್ಲ ಅಂತ ನಮ್ಮ ಸರ್ಕಾರಗಳು ಅರ್ಥಮಾಡಿಕೊಳ್ಳಬೇಕಾಗಿದೆ. ಹಾಗಾಗಿ ಬಹುಮತ ಅನ್ನೋದು ಪ್ರಜಾಪ್ರಭುತ್ವದಲ್ಲಿ ಒಂದು ಮದ ಆಗಬಾರದು. ಹಾಗೆನೇ ಅಧಿಕಾರ ಅನ್ನೋದು ಅಹಂಕಾರ ಆಗಬಾರದು. ಅಧಿಕಾರಕ್ಕೆ ಅಂತಃಕರಣ ಇದ್ರೆ ರಾಜ್ಯಾಧಿಕಾರಗಳು ಸಹಿಷ್ಣುತೆಯ ಪರವಾಗಿರುತ್ತವೆ. ಅವತ್ತೊಬ್ಬ ರಾಜ ಸಹಿಷ್ಣುತೆಯ ಪರವಾಗಿ ವೈಷ್ಣವರು ಮತ್ತು ಜೈನರು ನಡುವಿನ ಒಂದು ಘರ್ಷಣೆಯನ್ನು ತಪ್ಪಿಸ್ತಾನೆ, ಆದರೆ ಇವತ್ತು ರಾಜ್ಯಾಧಿಕಾರ ಅಸಹಿಷ್ಣುತೆಗೆ ವಿರುದ್ಧವಾಗಿ ಸಹಿಷ್ಣುತೆಯನ್ನು ಸ್ಥಾಪಿಸುವುದಕ್ಕೆ ಬೇಕಾಗಿರುವ ಏನನ್ನೂ ಮಾಡ್ತಾ ಇಲ್ಲ.

ಜನ ವಯಸ್ಸಾದಾಗ ಹಿಂದೆಯೆಲ್ಲವೂ ಚೆನ್ನಾಗಿತ್ತು, ಈಗ ಮಾತ್ರ ಕೆಟ್ಹೋಗ್ಬಿಟ್ಟಿದ್ದೀವಿ ಅಂತ ಹೇಳೋದಕ್ಕೆ ಶುರುಮಾಡ್ತಾರೆ. ಯಾಕಂದ್ರೆ ಎಲ್ಲರಿಗೂ ಅವರವರ ಬಾಲ್ಯ ಸಮೃದ್ಧವಾಗಿರುತ್ತದೆ. ಆದರೆ ನಮ್ಮ ಕಾಲ ಚೆನ್ನಾಗಿತ್ತು, ಈಗ ಮಾತ್ರ ಕೆಟ್ಹೋಗಿದೆ ಅಂತ ಅಲ್ಲ. ವಿವಿಧ ಪ್ರಮಾಣಗಳಲ್ಲಿ ಈ ದೇಶದಲ್ಲಿ ಅಸಹಿಷ್ಣುತೆಯನ್ನು ಹಬ್ಬಿಸುವ ಧಾರ್ಮಿಕ ಘರ್ಷಣೆಗಳು ನಡೆಯುತ್ತಾ ಬಂದದ್ದುಂಟು. ಆದರೆ ವಿಶೇಷ ಏನೂಂದ್ರೆ, ಇದನ್ನು ಹಿಮ್ಮೆಟ್ಟಿಸಿ ಸಹಿಷ್ಣುತೆಯ ಸಹನೆಯ ಸಾಮರಸ್ಯದ ಸೌಹಾರ್ದದ ಆದರ್ಶದ ಮಾದರಿಗಳು ಮುನ್ನೆಲೆಗೆ ಬಂದದ್ದುಂಟು. ಆದ್ರಿಂದ ನಾವು ಚರಿತ್ರೆಯನ್ನು ಜ್ಞಾಪಿಸಿಕೊಳ್ತೇವೆ. ಇವತ್ತೂ ಆಗಬೇಕಾದ ಕೆಲಸವೂ ಅದೇನೇ.

ಯಾವಾಗ 20ನೇ ಶತಮಾನದ ಕೊನೆಯ ದಶಕದ ಆರಂಭದಲ್ಲಿ ಎರಡು ಕೆಡುಕುಗಳು ಪ್ರವೇಶ ಮಾಡಿದವೋ ಅಲ್ಲಿಂದ ಇವೆಲ್ಲವೂ ಶುರುವಾದವು. ಒಂದು ಜಾಗತೀಕರಣ ಇನ್ನೊಂದು ದೇಗುಲೀಕರಣ. ಜಾಗತೀಕರಣದ ಹೆಸರಿನಲ್ಲಿ ಇವತ್ತು ಎಲ್ಲರೂ ಅಭಿವೃದ್ಧಿ ಅಭಿವೃದ್ಧಿ ಅಂತ ಮಾತಾಡೋರೇ. ಅದು ಯಾರ ಅಭಿವೃದ್ಧಿ ಅಂತ ಜನಕ್ಕಂತೂ ಗೊತ್ತಿದೆ. ಜಾಗತೀಕರಣದ ಹೆಸರಿನಲ್ಲಿ ನಡೆಯುತ್ತಿರುವ ಅಭಿವೃದ್ಧಿಯಲ್ಲಿ ಜನಗಳ ಪಾಲುಗಾರಿಕೆಯೇ ಇಲ್ಲ. ಇಲ್ಲೇನಿದ್ರೂ ಇರೋದು ಬಂಡವಾಳಿಗರ ಪಾಲುಗಾರಿಕೆ. ಕೋಟ್ಯಧೀಶರ ಪಾಲುಗಾರಿಕೆ. ಎಂಥ ವಿಪರ್ಯಾಸ ನೋಡಿ. ಅಭಿವೃದ್ಧಿಯಲ್ಲಿ ಪಾಲ್ಗೊಳ್ಳುವ ಸ್ವಾತಂತ್ರ್ಯವೇ ಈ ದೇಶದ ಜನಸಾಮಾನ್ಯರಿಗೆ ಇಲ್ಲವಾದದ್ದರಿಂದ, ಈ ದೇಶದಲ್ಲಿ ಅಭಿವೃದ್ಧಿ ಸ್ವಾತಂತ್ರ್ಯ ಒಂದು ಜೋಕ್ ಅಂತ ನಾನು ಭಾವಿಸಿಕೊಂಡಿದ್ದೇನೆ.

ಇನ್ನು ದೇಗುಲೀಕರಣದ ಹೆಸರಿನಲ್ಲಿ ಹುಟ್ಟು ಹಾಕಿದಂತಹ ಧಾರ್ಮಿಕ ದ್ವೇಷ ಅಪಾಯಕಾರಿಯಾಗಿ ಬೆಳೆಯುತ್ತಿದೆ. ಅಪವ್ಯಾಖ್ಯಾನಗಳಿಗೆ ಕಾರಣವಾಗ್ತಿರೋದನ್ನ ನಾವು ನೋಡ್ತಿದ್ದೇವೆ. ಬಹಳ ಮುಖ್ಯವಾದ ಮೂರು ಅಪವ್ಯಾಖ್ಯಾನಗಳನ್ನು ಈ ಸಂದರ್ಭದಲ್ಲಿ ಪ್ರಸ್ತಾಪಿಸೋದಕ್ಕೆ ನಾನು ಇಷ್ಟಪಡುತ್ತೇನೆ.

ಇತ್ತೀಚಿನ ವರ್ಷಗಳಲ್ಲಿ ಧರ್ಮವನ್ನೇ ಸಂಸ್ಕೃತಿ ಅಂತ ಬಿಂಬಿಸಲಾಗುತ್ತಿದೆ. ಹಾಗೆಯೇ ಧರ್ಮೀಯತೆ ಮತ್ತು ರಾಷ್ಟ್ರೀಯತೆ ಒಂದೇ ಅನ್ನೋ ರೀತಿಯಲ್ಲಿ ಹೇಳಲಾಗುತ್ತಿದೆ. ಧರ್ಮವೇ ಸಂಸ್ಕೃತಿಯಲ್ಲ, ಸಂಸ್ಕೃತಿಯ ಒಂದು ಭಾಗ ಅಷ್ಟೇನೇ. ನಾವು ಹಿಂದೂ ಸಂಸ್ಕೃತಿ ಅಂತೇವೆ, ಇಸ್ಲಾಂ ಸಂಸ್ಕೃತಿ ಅಂತೇವೆ, ಕ್ರೈಸ್ತ ಸಂಸ್ಕೃತಿ ಅಂತೇವೆ. ಈ ಪರಿಭಾಷೆಯನ್ನು ಬಳಸುವಾಗ ಸಂಸ್ಕೃತಿಗೆ ಧರ್ಮದ ಹೆಸರನ್ನು

ದರ ಮುಖಾಂತರ ಸಂಸ್ಕೃತಿಗೆ ಇರುವ ವ್ಯಾಪ್ತಿಯನ್ನು ವ ಅನೇಕ ಆಯಾಮಗಳನ್ನು ಪಂಚಿಸುತ್ತಿದ್ದೇವೆ. ಅನ್ನೊದು ಒಂದು ಜೀವನವಿಧಾನ. ಇವತ್ತು ಇಲ್ಲಿ ಪ್ರದರ್ಶನ ಮಾಡಿದ್ರು ಅದೊಂದು ದೊಡ್ಡ ನಮ್ಮ ನಡುವಿನ ಸಂಸ್ಕೃತಿ. ಈ ಸಮಾವೇಶದಲ್ಲಿ ಸ್ಕೃತಿಗಳು ಸೇರಿಕೊಂಡಿವೆ, ಸಮ್ಮಿಲನವಾಗಿವೆ. ಅಂದ್ರೆ ಅನ್ನೋದು ಒಂದು ಜೀವನ ವಿಧಾನ, ಕದಲ್ಲಿಯೇ ನೂರೆಂಟು ಜೀವನ ವಿಧಾನಗಳಿವೆ. ವಲ್ಲಿ ಬಹುತ್ವದ ಜೀವನವಿಧಾನಗಳಿವೆ. ಹಾಗಾಗಿ ಸಂಸ್ಕೃತಿಯ ಒಂದು ಭಾಗವಷ್ಟೇ ಎಂದು ಸರಿ ನವನ್ನು ಹೇಳಬೇಕಾಗಿದೆ.

ನ್ನು ಧರ್ಮ ಮತ್ತು ಧಾರ್ಮಿಕತೆ. ಧರ್ಮದ ಬಗ್ಗೆ ಮಾತಾಡ್ತಾರಲ್ಲ ನಮ್ಮ ಜನ ಅವರೆಲ್ಲ ಧಾರ್ಮಿಕರಾ ಯೋಚನೆ ಮಾಡಿ. ವಿವೇಕಾನಂದರಂಥವರು ಧರ್ಮ ಸಂಸ್ಥೆಯಾಗುವುದನ್ನು ವಿರೋಧಿಸಿದರು. ನಂದರನ್ನು ಗುತ್ತಿಗೆ ತೆಗೆದುಕೊಂಡಿರುವವರು ಇವತ್ತು ಯೋಚನೆ ಮಾಡಬೇಕು. ಬೇಡರ ಕಣ್ಣಪ್ಪನಿಗೆ ಧರ್ಮ ಗೊತ್ತಿತ್ತು? ಶಬರಿಗೆ ಯಾವ ಧರ್ಮ ತ್ತು? ಶಬರಿ ದೇವಸ್ಥಾನ ಕಟ್ಟಿಲ್ಲ, ಗುಡಿಸಲು ಂಡಿದ್ದಳು. ನೈವೇದ್ಯ ಕೊಡಲಿಲ್ಲ ಹಣ್ಣು ಹಂಪಲನ್ನು ಎಂಜಲು ಮಾಡಿ ಶ್ರೀರಾಮನಿಗೆ ಕೊಟ್ಟಳು. ಈ ಸಂಸ್ಕೃತಿಯಲ್ಲಿರುವುದು ಧಾರ್ಮಿಕತೆ. ಕತೆಯಲ್ಲಿ ಭಕ್ತಿ ಇರುತ್ತೆ ಭಕ್ತಿಗೆ ಯಾವತ್ತೂ ಬೈಲಾ ದಿಲ್ಲ. ನೀವು ಯಾವ ಕಡೆಯಿಂದ ಬೇಕಾದರೂ ಆರತಿ ಎತ್ತಬಹುದು. ಎತ್ತದೆಯೂ ಇರಬಹುದು. ಮ್ಮ ಬಯಲು ಸೀಮೆಯಲ್ಲಿ ನೇಗಿಲು ಹೂಡೊದಕ್ಕೆ ಹೊಲದಲ್ಲಿ ಬಂದು ಒಂದು ಕಲ್ಲು ಇಟ್ಟುಬಿಡ್ತಾರೆ. ೋ ಕಲ್ಲೇ. ಅದನ್ನು ಇಟ್ಟು ತೊಳೆ ಗರಿಕೆ ಹುಲ್ಲು ಪೂಜೆ ಮಾಡಿ ನೇಗಿಲು ಹೂಡೋದಕ್ಕೆ ಶುರು ರೆ. ಆಮೇಲೆ ಆ ಕಲ್ಲು ಎಲ್ಲಿ ಹೋಯ್ತೂಂತ ೂ ಕೇಳೋದಿಲ್ಲ, ಆದರೆ ಬೆಂಗಳೂರಿನ ಸಿಟಿ ಟ್ನಲ್ಲಿ ಒಂದು ಕಲ್ಲು ಪ್ರತಿಷ್ಠಾಪನೆ ಮಾಡಿ ನೋಡಿ. ಕಣ್ಣಾರೆ ನೋಡಿದ್ದೇನೆ, ಅಲ್ಲಿ ಒಂದು ಕಲ್ಲು ಬಿಟ್ರು, ಇದ್ದಕ್ಕಿದ್ದ ಹಾಗೆ ನಾಲ್ಕು ಗೋಡೆ ಕಟ್ಟಿದ್ರು, ೋಡೆಗಳ ನಡುವೆ ಕಲ್ಲನ್ನು ದೇವರನ್ನಾಗಿ ಮಾಡಿದ್ರು, ಎಸ್ಆರ್‌ಟಿಸಿ, ಬಿಎಂಟಿಸಿ ಬಸ್ ಡ್ರೈವರ್‌ಗಳೆಲ್ಲ ಹೋಗಿ 'ಆಕ್ಸಿಡೆಂಟ್ ಆಗದಿರ್ಲಿ' ಅಂತ ಕೈಮುಗಿದು ಕೊಟ್ಟು ಎರಡು ಹೆಜ್ಜೆ ಮುಂದೆ ಹೋಗ್ತಿದ್ದ ಯಾರಿಗೋ ಡ್ಯಾಶ್ ಹೊಡೆದು ಹೊರಟು ಹೋಗ್ತಾ ಅಂದರೆ ಧರ್ಮ ಎನ್ನುವ ಸಂಸ್ಥೆಯ ಕೈಗೆ ಸಿಗುವ ಬೇರೆ, ಧಾರ್ಮಿಕತೆ ಎನ್ನುವ ಭಕ್ತಿಯ ಕೈಗೆ ಸಿಗುವ ಬೇರೆ. ಧರ್ಮ ಎನ್ನುವುದು ಒಂದು ಸಂಸ್ಥೆ ಆದಾಗ ಭಕ್ತಿ ಇರೋದಿಲ್ಲ, ಅಲ್ಲಿ ಆಸ್ತಿ ಇರುತ್ತದೆ, ಅಧಿಕಾರ ದೆ.

ಇನ್ನು ರಾಷ್ಟ್ರೀಯತೆಯ ವಿಷಯಕ್ಕೆ ಬಂದರೆ ೀಯತೆಯನ್ನೇ ರಾಷ್ಟ್ರೀಯತೆ ಅಂತ ನಮ್ಮೆದುರಿಗೆ ಾಗುತ್ತಿದೆ. ಧರ್ಮೀಯತೆಗೂ ರಾಷ್ಟ್ರೀಯತೆಗೂ ಧ ಇಲ್ಲ, ಸ್ವಾತಂತ್ರ್ಯಪೂರ್ವ ಸಂದರ್ಭದಲ್ಲಿಯೇ ಕ ಮಾದರಿಯ ರಾಷ್ಟ್ರೀಯ ಹೋರಾಟಗಳು ದನ್ನು ನಾವು ನೋಡ್ತೇವೆ. ಗಾಂಧಿ ಪ್ರಣೀತವಾದ ರಾಷ್ಟ್ರೀಯ ಹೋರಾಟ, ತಿಲಕ್ ಪ್ರಣೀತವಾದ ರಾಷ್ಟ್ರೀಯ ಹೋರಾಟ, ಸುಭಾಷ್ ಚಂದ್ರ ಬೋಸ್ ರಾಟ ಒಂದು ಕಡೆ, ಭಗತ್ ಸಿಂಗ್ ಹೋರಾಟ ಕಡೆ, ಅಂದರೆ ಅನೇಕ ರಾಷ್ಟ್ರೀಯತೆಯ ಧಾರೆಗಳು ತ್ರ್ಯಪೂರ್ವದಲ್ಲಿ ಅಸ್ತಿತ್ವದಲ್ಲಿದ್ದುವು, ಇವತ್ತಿಗೂ ದಲ್ಲಿವೆ. ಹಾಗಾಗಿ ಧರ್ಮಕ್ಕೂ ರಾಷ್ಟ್ರೀಯತೆಗೂ ಧ ಇರೋದಿಲ್ಲ, ರಾಷ್ಟ್ರೀಯ ಜೀವನದ ಒಂದು ವಾಗಿ ಧರ್ಮ ಇರಬಹುದೇ ಹೊರತು ೀಯತೆಯೇ ರಾಷ್ಟ್ರೀಯತೆಯಲ್ಲ ಎನ್ನುವುದನ್ನು ನಮ ಹೇಳಬೇಕಾಗಿದೆ.

ಇಷ್ಟು ಮಾತನ್ನು ಹೇಳಿದ್ದು ಯಾಕೆಂದರೆ, ಧರ್ಮದ ನಲ್ಲಿ ನಡೆಯುತ್ತಿರುವಂತಹ ಅಪವ್ಯಾಖ್ಯಾನಗಳನ್ನು ೃತಿಯ ಹೆಸರಿನಲ್ಲಿ ನಡೆಯುತ್ತಿರುವಂತಹ ವ್ಯಾಖ್ಯಾನಗಳನ್ನು ತಪ್ಪಿಸುವ ಹೊಣೆ ಈ ದೇಶದ ಪರ ಚಿಂತಕರ ಮೇಲಿದೆ.

ಇಂಥ ಸನ್ನಿವೇಶದಲ್ಲಿಯೇ ಸಹಬಾಳ್ವೆಯ ಪ್ರಶ್ನೆ ಕ್ಷನಿಷದ್ದು, ಅಂತಹದೊಂದು ಸಹಬಾಳ್ವೆಯ ಪ್ರಶ್ನೆ ಾಗಲೇನೇ ನಮಗೆ ಅನೇಕ ಆದರ್ಶಪುರುಷರು ಸಿಗ್ತಾರೆ. ಧಿಯವರನ್ನೇ ತೆಗೆದುಕೊಳ್ಳಿ, ಅವರ ಯಧಾರೆಯನ್ನು ಯೋಚನೆ ಮಾಡಿ. ತಿಲಕರು ತಮ್ಮ ಯಧಾರೆಗೆ ಗಣೇಶನನ್ನು ಆಯ್ಕೆ ಮಾಡಿಕೊಂಡರು. ಹಿಂದೂ ಧರ್ಮದಲ್ಲಿ ಅಚಲ ನಿಷ್ಠೆಯನ್ನು ದಿದ್ದವರು. ದೇವರನ್ನು ನಂಬುತ್ತಿದ್ದವರು. ಆದರೆ ಧಿ ರಾಷ್ಟ್ರೀಯ ಹೋರಾಟಕ್ಕೆ ದೇವರನ್ನು ಕೊಳ್ಳಲಿಲ್ಲ, ಅವರು ಬಳಸಿಕೊಂಡದ್ದು ಚರಕವನ್ನು, ನ್ನು ಮತ್ತು ಖಾದಿಯನ್ನು, ಚರಕ ಯಾವ ಜಾತಿಗೂ ಕ್ಕೂ ಸೇರಿದ್ದಲ್ಲ, ಉಪ್ಪು ಯಾವ ಜಾತಿಗೂ ಧರ್ಮಕ್ಕೂ ದ್ದಲ್ಲ, ಖಾದಿ ಯಾವ ಜಾತಿಗೂ ಧರ್ಮಕ್ಕೂ ಸೇರಿದ್ದಲ್ಲ, ಯ ರಾಷ್ಟ್ರೀಯ ಸಂಕೇತಗಳು ಚರಕ, ಉಪ್ಪು ಖಾದಿ. ತಿಲಕರಿಗೆ ಗಣೇಶ ಆಗಿತ್ತು, ಬೋಸ್ ಗೆ ಖಾಕಿ ಆಗಿತ್ತು ಸೈನಿಕ ಶಕ್ತಿಯಾಗಿತ್ತು, ಹೀಗೆ ಒಬ್ಬೊಬ್ಬರಿಗೆ ಒಂದೊಂದು ಆಗಿತ್ತು, ಒಬ್ಬ ಆಸ್ತಿಕನಾಗಿದ್ದೂ ಜಾತ್ಯಾತೀತನಾಗುವುದು ಸಾಧ್ಯ ಅಂತ ತೋರಿಸಿಕೊಟ್ಟವರು ಗಾಂಧಿ. ಹಿಂದೂ ಧರ್ಮವನ್ನು ನಂಬದೆಯೂ ಸಹ ಈ ದೇಶ ಸೌಹಾರ್ದತೆಯ ಜಾತ್ಯತೀತತೆಯ ಪರವಾಗಿರಬಹುದು ಎನ್ನುವುದನ್ನು ತೋರಿಸಿಕೊಟ್ಟವರು ಅಂಬೇಡ್ಕರ್. ಇಂಥ ಅನೇಕ ಮಹನೀಯರ ಸೈದ್ಧಾಂತಿಕ ಕೊಡುಗೆಗಳು ನಮ್ಮೆದುರಿಗೆ ಇರುವ ಸಂದರ್ಭದ ಒಳಗಡೆ ಧರ್ಮವನ್ನು ಭಯೋತ್ಪಾದನೆಯ ಭಾಗವಾಗಿ ಬಳಸಲಾಗ್ತಾ ಇದೆ. ಮೂಲಭೂತವಾದದ ಭಾಗವಾಗಿ ಬಳಸಲಾಗ್ತಿದೆ.

ಬಸವಣ್ಣನವರು 'ದಯವೇ ಧರ್ಮದ ಮೂಲವಯ್ಯಾ' ಅಂದ್ರು. ಇವತ್ತು ಏನಾಗಿದೆ? 'ಭಯವೇ ಧರ್ಮದ ಮೂಲವಯ್ಯ' ಅಂತಾಗಿದೆ. 'ನಿಮ್ಮ ದಯೆ ನಮ್ಮನ್ನು ಬಿಟ್ಟುಬಿಡ್ರಪ್ಪ' ಅನ್ನೋ ಸ್ಥಿತಿಗೆ ಬಂದುಬಿಟ್ಟಿದ್ದೇವೆ. ಇದು ಏಕಧರ್ಮದ ದೇಶವಲ್ಲ, ಏಕಸಂಸ್ಕೃತಿಯ ದೇಶವಲ್ಲ, ಏಕ ಕಲಾಪ್ರಕಾರದ ದೇಶವಲ್ಲ, ಇದು ಬಹುತ್ವದ ದೇಶ. ಹಾಗಾಗಿ ನಾವು ಧರ್ಮದ ಹೆಸರಿನಲ್ಲಿ ಜಗಳಾಡಬೇಕಾಗಿಲ್ಲ, ದೇವರ ಹೆಸರಿನಲ್ಲಿ ಜಗಳಾಡಬೇಕಾಗಿಲ್ಲ, ಈ ದೇಶದಲ್ಲಿ ಹೆಚ್ಚು ಶೋಷಣೆಗೊಳಗಾಗಿರುವುದು ದೇವರೇನೇ. ದೇವರನ್ನ ಯಾರು ಬೇಕಾದರೂ ಎಲ್ಲಿಗೆ ಬೇಕಾದರೂ ಎತ್ತಿಕೊಂಡು ಹೋಗಬಹುದು, ಪ್ರತಿಷ್ಠಾಪನೆ ಮಾಡಬಹುದು, ಅವನ ಹೆಸರಿನಲ್ಲಿ ಏನು ಬೇಕಾದರೂ ಮಾಡಬಹುದು ಅನ್ನುವ ಸ್ಥಿತಿಗೆ ಬಂದುಬಿಟ್ಟಿದ್ದೇವೆ. ಏನಾಗಿದೆ ನೋಡಿ, ಒಂದು ಕಡೆ ಧರ್ಮ ಬಳಸ್ತಿದ್ದಾರೆ, ಇನ್ನೊಂದು ಕಡೆ ಅಭಿವೃದ್ಧಿ ಅಂತ ಹೇಳ್ತಿದ್ದಾರೆ. ಅಭಿವೃದ್ಧಿಯಲ್ಲಿ 'ಬಂಡವಾಳವೇ ಭಗವಂತ'. ಧರ್ಮದಲ್ಲಿ 'ಕಲ್ಲುಗಳೇ ಭಗವಂತ'. ಈ ದೇಶಕ್ಕೆ ಬರುವ ಬಂಡವಾಳ ಭಗವಂತನಾಗಿ ಬರಬಾರದು, ಭಕ್ತನಾಗಿ ಬರಬೇಕು. ಆದರೆ ಭಕ್ತನಾಗಿ ಬರುವ ಬಂಡವಾಳ ಇಲ್ಲಿಲ್ಲ.

ಅಂಬೇಡ್ಕರ್ ಅವರು ತಮ್ಮ ಸಂವಿಧಾನದ ಚರ್ಚೆಯ ಸಂದರ್ಭದಲ್ಲಿ ಈ ದೇಶ ಯಾವುದೇ ಒಂದು ಧರ್ಮದ ಪ್ರಾಬಲ್ಯಕ್ಕೆ ಈಡಾಗಬಾರದು ಅಂತ ಪ್ರತಿಪಾದಿಸಿದರು. ಅದಕ್ಕನುಗುಣವಾಗಿ ಸಂವಿಧಾನ ರಚನೆ ಮಾಡಿದ್ರು. ಗಾಂಧೀಜಿಯವರು 'ನನ್ನ ಕನಸಿನ ಭಾರತ ಇದೆಯಲ್ಲ, ಅದು ಹಿಂದೂತ್ವ ಒಂದೇ ಬೆಳೆಯುವ ಭಾರತ ಅಲ್ಲ, ಇಸ್ಲಾಂ ಒಂದೇ ಬೆಳೆಯುವ ಭಾರತವಲ್ಲ, ಎಲ್ಲ ಧರ್ಮಗಳು ಸೌಹಾರ್ದಯುತವಾಗಿ ಬೆಳೆಯುವುದೇ ನನ್ನ ಕನಸಿನ ಭಾರತ' ಅಂತ ಹೇಳಿದ್ರು, ಇವತ್ತು ವಿವೇಕಾನಂದರನ್ನು ಹೈಜಾಕ್ ಮಾಡಿಕೊಂಡಿರುವವರು ಅವತ್ತು ವಿವೇಕಾನಂದರು ಏನು ಹೇಳಿದರು ಎಂಬುದನ್ನು ಗಮನಿಸಬೇಕು. 'ನಾವು ಕ್ರೈಸ್ತರನ್ನಾಗಲಿ, ಮುಸಲ್ಮಾನರನ್ನಾಗಲಿ ಪ್ರೀತಿಯಿಂದ ಗೆಲ್ಲುವವರೆಗೆ ಕ್ರೈಸ್ತರಿಗೆ ಚರ್ಚುಗಳನ್ನು ಮಹಮದೀಯರಿಗೆ ಮಸೀದಿಗಳನ್ನು ಕಟ್ಟುತ್ತಲೇ ಹೋಗಬೇಕು. ಬಾಳಲು ಯೋಗ್ಯವಾದದ್ದು ಪ್ರೀತಿ; ದ್ವೇಷವಲ್ಲ' ಅಂತ ಅವತ್ತು ಹೇಳಿದ್ರು. ಅಷ್ಟೇ ಅಲ್ಲ ವಿವೇಕಾನಂದರು, 'ಧರ್ಮವು ದೇವಸ್ಥಾನ ಕಟ್ಟುವುದರಲ್ಲಿಲ್ಲ, ಧರ್ಮವು ಸಂಸ್ಥೆಗಳಲ್ಲಿ ಇಲ್ಲ, ಧರ್ಮಗಳು ಸಾಮೂಹಿಕ ಪೂಜೆಗಳಿಗೆ ಹೋಗುವುದರಲ್ಲಿ ಇಲ್ಲ; ಧರ್ಮವೆಂದರೆ ಸಾಕ್ಷಾತ್ಕಾರ' ಅಂತ ಹೇಳಿದರು. ಬಸವಣ್ಣನವರು 'ದೇಹವೇ ದೇಗುಲ' ಅಂತ ಹೇಳಿದ್ರು. ಯಾವ ದೇಹವನ್ನು ಕಾಮನೆಗಳ ಆವಾಸಸ್ಥಾನ ಅಂತ ಕರೆಯಲಾಗುತ್ತಿತ್ತೋ, ಯಾವ ದೇಹಗಳನ್ನು ಮಾಯೆ ಅಂತ ಕರೆಯಲಾಗುತ್ತಿತ್ತೋ, ಅಂತಹ ದೇಹವನ್ನು ದೇಗುಲವಾಗಿ ಪರಿವರ್ತನೆಗೊಳಿಸಿದಂತಹ ಒಂದು ಸೈದ್ಧಾಂತಿಕ ಪಲ್ಲಟವನ್ನು ಬಸವಣ್ಣನವರು ಆವತ್ತು ಕೊಟ್ಟರು. ವಿವೇಕಾನಂದರ ಧರ್ಮ ಇಂದು ಒಂದು ಸಂಸ್ಥೆಯಾಗಿಬಿಟ್ಟಿದೆ. ವಿವೇಕಾನಂದರ ಹೆಸರು ಹೇಳಿಕೊಂಡು ಇರೋರೆಲ್ಲ ದೇವಸ್ಥಾನ ಕಟ್ಟೋದಕ್ಕಾಗಿ ರಕ್ತ ಹರಿಸೋದಕ್ಕೆ ಹೊರಟಿರುವ ಸ್ಥಿತಿಯನ್ನು ನಾವು ನೋಡುತ್ತಿದ್ದೇವೆ.

ಅದೇ ವಿವೇಕಾನಂದರು ಬಹಳ ಸೊಗಸಾದ ಒಂದು ಮಾತನ್ನು ಹೇಳುತ್ತಾರೆ, 'ನಾವು ಮಾನವವರ್ಗವನ್ನು ಎಲ್ಲಿ ವೇದ ಬೈಬಲ್ ಕುರಾನ ಇಲ್ಲವೋ ಅಲ್ಲಿಗೆ ಕರೆದೊಯ್ಯಬೇಕು. ಆದರೂ ಕೂಡಾ ವೇದ ಬೈಬಲ್ ಕುರಾನ್‌ಗಳ ಐಕ್ಯತೆಯಿಂದಲೇ ಇದನ್ನು ಸಾಧಿಸಬೇಕಾಗಿದೆ. ನಮ್ಮ ಮಾತೃಭೂಮಿಯಲ್ಲಿ ಹಿಂದೂ ಮತ್ತು ಮುಸಲ್ಮಾನ ಧರ್ಮಗಳೆರಡೂ ಮಿಲನವಾಗಬೇಕು. ವೇದಾಂತದ ಮಿದುಳು, ಇಸ್ಲಾಮಿನ ದೇಹ ಇದೊಂದೇ ನಮ್ಮ ಪುರೋಗಮನಕ್ಕೆ ಹಾದಿ'. ವಿವೇಕಾನಂಧರನ್ನು ಆರಾಧಿಸುವ ಜನ ವಿವೇಕಾನಂದರ ಈ ಮಾತುಗಳನ್ನು ಓದಿಕೊಳ್ಳಬೇಕು, ಅರಗಿಸಿಕೊಳ್ಳಬೇಕು.

ಈ ಸಮಾವೇಶದ ಮುಖಾಂತರ ನನ್ನಂಥವರು ಆಸೆ ಪಡೋದು ಇಷ್ಟೇನೇ. ಅಪವ್ಯಾಖ್ಯಾನಗಳನ್ನು ನಿಲ್ಲಿಸಿ, ಬಾಯಿ ಬಂದೂಕುಗಳಾಗುವುದು ಬೇಡ, ಬಂದೂಕು ಬಾಯಿಯಾಗುವುದು ಬೇಡ. ಇವತ್ತು ತೊಡೆ ತಟ್ಟುವ ಕಾಲವಲ್ಲ, ತೋಳು ಚಾಚುವ ಕಾಲ. ನಾವು ತೋಳು ಚಾಚಿದ್ದೇವೆ. ನೀವು ತೊಡೆ ತಟ್ಟುತ್ತೀರೋ ತೋಳು ಚಾಚು ತ್ತೀರೋ ಅದು ನಿಮಗೆ ಬಿಟ್ಟದ್ದು, ನಾವು ಕಾಲದ ಅಗತ್ಯ ಪೂರೈಸ್ತಾ ಇದ್ದೇವೆ. ನೀವು ತೋಳು ಚಾಚುವ ಕಾಲದಲ್ಲಿ ಬನ್ನಿ, ಆ ತೋಳನ್ನು ಚಾಚಿಕೊಳ್ಳೋಣ, ತಬ್ಬಿಕೊಳ್ಳೋಣ. ಈ ಸಮಾಜದಲ್ಲಿ ಸೌಹಾರ್ದವನ್ನು ಉಳಿಸೋಣ. ನಾವು ಕರೆಕೊಟ್ಟಿದ್ದೇವೆ. ಉತ್ತರ ಕೊಡಬೇಕಾದ ಜವಾಬ್ದಾರಿ ನಿಮಗಿದೆ. ನಿಮ್ಮ ಉತ್ತರ ನಿರೀಕ್ಷೆ ಮಾಡ್ತೇವೆ. ನಮಸ್ಕಾರ.

■ ಬರಗೂರು ರಾಮಚಂದ್ರಪ್ಪ


ಚಳವಳಿಗಳು ನದಿಯ ನೀರಿನ ಹಾಗೆ

ನನಗೆ ಮಾತನಾಡಲು 20 ನಿಮಿಷಗಳ ಸಮಯವನ್ನು ಕೊಟ್ಟಿದ್ದಾರೆ. ನಾವು ಎಡಪಂಥೀಯರು ಇರುವುದೇ ನಿಯಮಗಳನ್ನು ಉಲ್ಲಂಘಿಸಲಿಕ್ಕೆ, ಹಾಗಾಗಿ ಹೆಚ್ಚು ಸಮಯ ತೆಗೆದುಕೊಳ್ಳುತ್ತೇನೆ. ಹೇಳಬೇಕಾದುದ್ದನ್ನೆಲ್ಲ ಹೇಳಲು ಸಾಧ್ಯವಿಲ್ಲ, ಆದರೆ ಹೇಳಲೇಬೇಕಾದುದ್ದನ್ನು ಹೇಳಲು ಪ್ರಯತ್ನಿಸುತ್ತೇನೆ.

ಬರಗೂರುರವರು ಹೇಳಿದ್ದಾರೆ ನಮ್ಮದು ಸಂಘರ್ಷದ ಸಂಸ್ಕೃತಿಯಲ್ಲ, ಬದಲಿಗೆ ಸಂವಾದದ ಸಂಸ್ಕೃತಿ ಎಂದು. ಹಾಗಾಗಿ ಭಿನ್ನಮತೀಯರು, ಕಿನ್ನಮತೀಯರು ಎಲ್ಲರೂ ಬನ್ನಿ ಮಾತಾಡೋಣ, ಚರ್ಚಿಸೋಣ.

ಇಂದು ವೇದಿಕೆಯಲ್ಲಿ ಕ್ರಿಶ್ಚಿಯನ್ ಧರ್ಮದ ಪ್ರತಿನಿಧಿಗಳು, ಮುಸ್ಲಿಂ ಧರ್ಮದ ಪ್ರತಿನಿಧಿಗಳಿದ್ದಾರೆ. ವೈದಿಕ ಧರ್ಮದ ಒಬ್ಬರು ಇದ್ದರೆ ಚರ್ಚೆ ಅರ್ಥಪೂರ್ಣವಾಗಿರುತ್ತಿತ್ತು, ನಾನು ಹಿಂದೂ ಧರ್ಮ ಎಂದು ಹೇಳುತ್ತಿಲ್ಲ ಬದಲಿಗೆ ವೈದಿಕ ಧರ್ಮ ಎಂದು ಹೇಳುತ್ತೇನೆ. ಸುಪ್ರೀಂಕೋರ್ಟ್ ಸಹ ತನ್ನ ಆದೇಶದಲ್ಲಿ ಹೀಗೆಯೇ ತಿಳಿಸಿದೆ. ಇಲ್ಲಿ ಹಿರಿಯರಾದ ಸಾಣೆಹಳ್ಳಿ ಮಠದ ಡಾ|| ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳಿದ್ದಾರೆ. ನಾನು ಅವರನ್ನು ವೈದಿಕ ಧರ್ಮದ ಪ್ರತಿನಿಧಿ ಎಂತಲೋ ಅಥವಾ ಲಿಂಗಾಯತ ಧರ್ಮದ ಪ್ರತಿನಿಧಿ ಎಂತಲೋ ಭಾವಿಸುವುದಿಲ್ಲ, ಬದಲಿಗೆ ಬಸವಧರ್ಮದ, ಮಾನವ ಧರ್ಮದ ಪ್ರತಿನಿಧಿ ಎಂದು ಭಾವಿಸುತ್ತೇನೆ. ಯಾರನ್ನು ಕರೆಯೋಣ? ಪೇಜಾವರ ಸ್ವಾಮಿಗಳನ್ನು ಕರೆಯಬೇಕಿತ್ತು, ಆದರೆ ಅವರು ಪರ್ಯಾಯದಲ್ಲಿದ್ದಾರೆ ಹಾಗಾಗಿ ನಾವು ಪರ್ಯಾಯವನ್ನು ಹುಡುಕಬೇಕಿದೆ.

ಇರಲಿ ಈ ಸಮಾವೇಶಕ್ಕೆ ನೆನಪುಗಳು, ಸವಾಲುಗಳು



ಮತ್ತು ಮುಂದಣ ಹೆಜ್ಜೆಗಳು ಎಂದು ಹೆಸರಿಟ್ಟಿದ್ದಾರೆ. ಇದುವರೆಗೂ ನಡೆದುಬಂದ ನಮ್ಮ ಹಾದಿ, ಇಂದಿನ ಸುಡು ವರ್ತಮಾನದ ಪರಿಸ್ಥಿತಿಯನ್ನು ಅವಲೋಕಿಸಿ ಮುಂದಿನ ಕಾರ್ಯಯೋಜನೆಗಳನ್ನು ರೂಪಿಸಲು ನಾವಿಲ್ಲಿ ಸೇರಿದ್ದೇವೆ. ಶ್ರೀನಿವಾಸ ಕಕ್ಕಿಲಾಯರವರು ಹೇಳಿದ ಹಾಗೆ 70 ಸಾವಿರ ವರ್ಷಗಳ ಇತಿಹಾಸವಿರುವ ನಮ್ಮ ದೇಶದಲ್ಲಿ ದೇವರು ಧರ್ಮಗಳ ಹೆಸರಿನಲ್ಲಿ ಯಾರ ದನಿಯನ್ನು ದಮನ ಮಾಡಿದ್ದಾರೋ ನಾವು ಅವರ ದನಿಗಳಾಗಬೇಕಿದೆ.

12ನೇ ಶತಮಾನದ ಬಸವಣ್ಣನವರ ಕಾಲ ಬಿಟ್ಟರೆ ಮತ್ತೆ ಆ ದನಿಗಳಿಗೆ ಮಾನ್ಯತೆ ಸಿಕ್ಕಿದ್ದು 20ನೇ ಶತಮಾನದ 70-80ರ ದಶಕಗಳಲ್ಲಿ ಮಾತ್ರ. ಆದರೆ ಕೆಲವರು ಇಲ್ಲಿ ಚಳವಳಿಗಳು ಸತ್ತುಹೋಗಿವೆ ಎಂದು ಷರಾ ಬರೆದಿದ್ದರು. ಚಳವಳಿಗಳು ಎಂದಿಗೂ ಸಾಯುವುದಿಲ್ಲ, ದಲಿತ, ಬಂಡಾಯ, ಪ್ರಗತಿಪರ ಚಳವಳಿಗಳು ತಮ್ಮ ಕ್ರಿಯಾಶೀಲತೆಯನ್ನು ಕಡಿಮೆ ಮಾಡಿಕೊಂಡಿದ್ದವು ಅಷ್ಟೆ.

ಚಳವಳಿಗಳು ಹರಿವ ನದಿಯ ನೀರಿನ ಹಾಗೆ. ಕೆಲವೊಮ್ಮೆ ಕಣ್ಣಿಗೆ ಕಾಣುತ್ತವೆ, ಕೆಲವೊಮ್ಮೆ ಕಾಣುವುದಿಲ್ಲ. ಇಂದು ಇಡೀ ಕರ್ನಾಟಕದ ಏಳು ದಿಕ್ಕುಗಳಿಂದ ನದಿಗಳು ಹರಿದುಬಂದು ಕರಾವಳಿ ಸೇರಿವೆ. ಹಿಂದೆ ಜಾತ್ಯತೀತರ ಮೂಲ ವೈರಿಗಳು ಸಾಹಿತ್ಯದ ಮೂಲಕ ಸಮರ ಸಾರಿದ್ದರೆ ಇಂದು ಇಡೀ ಆಳುವ ವರ್ಗವಾಗಿ ದೈತ್ಯಾಕಾರವಾಗಿ ಬೆಳೆದು ನಮ್ಮ ಶತ್ರುಗಳಾಗಿರುವ ಸಂದರ್ಭದಲ್ಲಿ ಹಲವು ದಿಕ್ಕುಗಳಿಂದ ಕಡಲ ತಡಿಗೆ ಹರಿದು ಬಂದಿರುವುದು ಬಹಳ ಐತಿಹಾಸಿಕವಾದುದು. ಹಾಗಾಗಿ ನಮ್ಮ ಹೋರಾಟವನ್ನು ಕ್ರಿಯಾಶೀಲವಾಗಿ ನಿರಂತರವಾಗಿ ಮುಂದುವರೆಸಬೇಕು.

ನದಿಗಳು ಬಂದು ಕಡಲು ಸೇರಿದ ಮೇಲೆ ಅವುಗಳು ಕಾಣೆಯಾಗುತ್ತವೆ.

ಸಾಗರ ಸೇರಿದ ನಂತರ ತಮ್ಮ ಸಿಹಿತನವನ್ನು ಕಳೆದುಕೊಂಡು ಉಪ್ಪು ನೀರಾಗುತ್ತವೆ. ಆದರೆ ಅಷ್ಟಕ್ಕೆ ನಿಲ್ಲುವುದಿಲ್ಲ, ನಂತರ ಮತ್ತೆ ಆವಿಯಾಗಿ, ಮೋಡಗಳಾಗಿ ಮತ್ತು ಮಳೆಯಾಗಿ ಮತ್ತೆ ಮತ್ತೆ ನದಿಗಳಾಗಿ ಹರಿಯುತ್ತವೆ, ಚಳವಳಿಗಳು ಅಷ್ಟೇ.

ಇಂದು ನಾವು ಈ ಸಮಾವೇಶದಿಂದ ಹೊಸ ಸ್ಫೂರ್ತಿಯನ್ನು ಪಡೆದು ಸವಾಲುಗಳನ್ನು ವಸ್ತುನಿಷ್ಠವಾಗಿ ಚರ್ಚಿಸಿ ನಮ್ಮ ಹೋರಾಟಗಳನ್ನು ಗಟ್ಟಿಯಾಗಿ ರೂಪಿಸಿಕೊಂಡು ಮುಂದುವರಿಸೋಣ. ನಾವೆಲ್ಲ ಸಾಹಿತಿಗಳು ಕಥೆ-ಕವನಗಳ ಮೂಲಕ ಮಾತ್ರ ಹೋರಾಟ ಮಾಡಿದವರಲ್ಲ, ಬೀದಿಗಿಳಿದು 50 ವರ್ಷಗಳಾಗಿವೆ. ಹೋರಾಟಕ್ಕೆ ಅಕ್ಷರ ಕಾವ್ಯ ಕೊಟ್ಟಿದ್ದೇವೆ ಅಷ್ಟೆ.

ಬುದ್ಧ ಬಸವಣ್ಣ ಅಂಬೇಡ್ಕರ್, ನಾರಾಯಣಗುರು ಮುಂತಾದ ದಾರ್ಶನಿಕರು ಬಹಳ ಒಳ್ಳೆಯ ಆಶಯಗಳನ್ನು ಕೊಟ್ಟಿದ್ದಾರೆ, ಅದನ್ನು ಮುಂದುವರಿಸೋಣ.

ಇನ್ನು ಎರಡನೆಯ ಭಾಗ.

ಹೋರಾಟ ಮಾಡಲೇಬೇಕು, ಬೇರೆ ಮಾರ್ಗಗಳಿಲ್ಲ. ಹೋರಾಟದ ಮಾರ್ಗವೊಂದೇ ನಮ್ಮ ಮುಂದಿರುವ ಆಯ್ಕೆ. ದೇವರು, ಧರ್ಮದ ಹೆಸರಿನಲ್ಲಿ ಮೋಸ ಮಾಡುತ್ತಿರುವವರು ಯಾರು ಎಂಬುದು ನಮಗೆ ಗೊತ್ತಾಗಿದೆ. ಯಾರು ಮೋಸ ಮಾಡುತ್ತಿದ್ದಾರೆ ಎಂದು ಬಾಬಾ ಸಾಹೇಬರು ಸ್ಪಷ್ಟವಾಗಿ ಬರೆದಿದ್ದಾರೆ.

ಮೋಸ ಮಾಡುವವರು ಒಂದು ಕಡೆ, ಮೋಸ ಹೋಗುವವರು ಒಂದು ಕಡೆ. ನಾವು ಮೋಸ ಹೋಗುವವರಾಗಿದ್ದೇವೆ. ಮೋಸ ಮಾಡುವವರು ಹೇಗಾದರೂ ಮಾಡಿಯೇ ಮಾಡುತ್ತಾರೆ. ಅವರು ಬದಲಾಗುವುದಿಲ್ಲ, ಅವರು ನಂಬಿರುವ ಧರ್ಮಗಳು, ಧರ್ಮಗ್ರಂಥಗಳು, ಭಗವದ್ಗೀತೆಗಳು ನಮಗೆ ಬೇಡವೇ ಬೇಡ. ಆದರ ಬಗ್ಗೆ ನಾವು ಮಾತನಾಡಬಾರದು. ಯಾವ ಧರ್ಮ ನಮಗೆ ಬೇಡ ಆ ಧರ್ಮದ ಉಸಾಬರಿ ಕೂಡ ನಮಗೆ ಬೇಡ.

ಅವರು ಮೋಸ ಮಾಡುತ್ತಿದ್ದರೂ ಸಹ ನಾವ್ಯಾಕೆ ಮೋಸ ಹೋಗಬೇಕು? ನಮಗೆ ಬೇಕಾದ ಬುದ್ಧ ಬಸವಣ್ಣ ಅಂಬೇಡ್ಕರರ ವಿಚಾರಗಳನ್ನು ತಿಳಿಯೋಣ. ಶಿಕ್ಷಣ, ಸಂಘಟನೆಯೊಂದಿಗೆ ಹೋರಾಟ ಮಾಡೋಣ. ಬದಲಿಗೆ ನಮಗೆ ಮೋಸ ಮಾಡುವ ಧರ್ಮದವರ ಬಗ್ಗೆ ಮಾತನಾಡಿ ಸಮಯ ವ್ಯರ್ಥ ಮಾಡಬಾರದು.

ನಾವು ತೋಳು ಚಾಚಿ, ಚಾಚಿ ನೋವು ಮಾಡಿಕೊಳ್ಳಬಾರದು. ಅವರು ಬೇಕಾದರೆ ತೊಡೆ ತಟ್ಟಿ ತಟ್ಟಿ ತೊಡೆ ಮುರಿದುಕೊಳ್ಳಲಿ.. ನಾವು ನಮ್ಮ ತೋಳುಗಳನ್ನು ದೇಶ, ಸಂಸ್ಕೃತಿ ಕಟ್ಟಲು ಬಳಸಿಕೊಳ್ಳೋಣ. ನಾವು ನಮ್ಮ ಬದ್ಧತೆಯಿಂದ ನಮ್ಮ ರಣನೀತಿಯನ್ನು ರೂಪಿಸಿಕೊಳ್ಳಬೇಕು. ಮೋಸ ಮಾಡುವವರು ಬದಲಾಗುವುದಿಲ್ಲ.

ಕೊನೆಯದಾಗಿ ಒಂದು ವಿಷಯ ಹೇಳಿ ನನ್ನ ಮಾತು ಮುಗಿಸುತ್ತೇನೆ, 50 ವರ್ಷದ ನಂತರ ನಮ್ಮ ಭಾರತ ನಾಸ್ತಿಕ ಭಾರತವಾಗಲಿದೆ, ಆದರೆ 50 ವರ್ಷದ ನಂತರ ಅಮೆರಿಕ ಆಸ್ತಿಕ ದೇಶವಾಗುತ್ತದೆ.

ಇಡೀ ಜಗತ್ತು ನಾಸ್ತಿಕ ಮಾರ್ಗವನ್ನು ಅಥವಾ ಬುದ್ಧನ ಮಾರ್ಗವನ್ನು ಹಿಡಿಯುವಾಗ ನಾವು ನಮ್ಮ ಶಕ್ತಿಯನ್ನು ಸರಿಯಾಗಿ ಉಪಯೋಗಿಸಿ ಹಾಳಾಗುವವರು ಹಾಳಾಗಿಹೋಗಲಿ.. ನಾವು ಸರ್ವಜನಾಂಗದ ಸುಂದರ ನಾಡನ್ನು ಕಟ್ಟೋಣ ಎಂದು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

■ ಚಂದ್ರಶೇಖರ ಪಾಟೀಲ

ಸಂಘ ಪರಿವಾರದ ದಲಿತ ಓಲೈಕೆ ಮತ್ತು ವೇಮುಲ ಪ್ರಕರಣ

ಸಂಘ ಪರಿವಾರದಲ್ಲಿ ಸಂಘರ್ಷ, ದಾಂಧಲೆ, ಬೀದಿ ಕಾಳಗ ಮುಂತಾದ ನೇರ ಮುಖಾಮುಖಿ ಹೋರಾಟಗಳಿಗೆಂದೇ ಮೀಸಲಾಗಿರುವ ಕೆಲವು ಅಂಗಸಂಸ್ಥೆಗಳಿರುವುದು ಎಲ್ಲರಿಗೂ ತಿಳಿದಿರುವ ವಿಚಾರ. ಆದರೆ ದೇಶದ ಕೆಲವೊಂದು ಭಟ್ಟಂಗಿ ಮಾಧ್ಯಮಗಳ ಜೊತೆ ಕೈಜೋಡಿಸಿರುವ ಮೋದಿ ಸರ್ಕಾರದ ಪ್ರಚಾರಾಂಗ ಇವೆಲ್ಲ ಅಂಚಿನ ಗುಂಪುಗಳೆಂದು ಪ್ರಚುರಪಡಿಸಲು ಸಾಕಷ್ಟು ಪ್ರಯತ್ನಗಳನ್ನು ನಡೆಸುತ್ತಾ ಇದೆ. ವಾಸ್ತವವಾಗಿ ಸಂಘಪರಿವಾರ ಎಂಬ ಮಹಾವೃಕ್ಷವೊಂದರಲ್ಲಿ ನೂರಾರು ಶಾಖೆಗಳಿದ್ದು ಅವುಗಳನ್ನೆಲ್ಲ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ರಾಜಕೀಯ ಮುಂತಾದ ವಿವಿಧ ಕ್ಷೇತ್ರಗಳಲ್ಲಿ ವಿಭಜಿಸಲಾಗಿದೆ. ಅಂಚಿನದ್ದೆನ್ನಲಾದ ಎಬಿವಿಪಿ, ಬಜರಂಗ ದಳದಂತಹ ಕಾಲಾಳು ಪಡೆಗಳು ಕೂಡಾ ಸಂಘ ಪರಿವಾರದ ಸದಸ್ಯ ಸಂಘಟನೆಗಳು ಎಂಬುದನ್ನು ಪುನಃ ಪುನಃ ಹೇಳಬೇಕಿದೆ. ಮೇ 2014ರ ತರುವಾಯ ಸಂಘ ಪರಿವಾರದ ಚಟುವಟಿಕೆಗಳು ಭಾರಿ ಬಿರುಸು ಪಡೆದುಕೊಂಡಿವೆ. ದಾಳಿ, ದಾಂಧಲೆ, ಹಲ್ಲೆ ಮುಂತಾದವುಗಳಿಗೆಂದೆ ಮೀಸಲಾಗಿರುವ ಕಾಲಾಳು ಪಡೆಗಳ ಆರ್ಭಟವಂತೂ ಮಿತಿಮೀರಿದೆ. ಮೋದಿ ಸರ್ಕಾರದ ಕೃಪಾಛತ್ರದ ನೆರಳಲ್ಲಿ ನಡೆಯುತ್ತಿರುವ ಈ ನಾನಾಬಗೆಯ ಜಾತಿವಾದಿ, ಕೋಮುವಾದಿ ದುಷ್ಕೃತ್ಯಗಳಿಗೆ ಇತ್ತೀಚಿನ ಸೇರ್ಪಡೆಯೆಂದರೆ ಹೈದರಾಬಾದ್ ವಿಶ್ವವಿದ್ಯಾನಿಲಯದ ಸಂಶೋಧನಾ ವಿದ್ಯಾರ್ಥಿಯಾಗಿದ್ದ ದಲಿತ ಯುವಕ ರೋಹಿತ್ ವೇಮುಲನ ಆತ್ಮಹತ್ಯೆ.




ರೋಹಿತ್‌ನ ಆತ್ಮಹತ್ಯೆಗೆ ಆತ ದಲಿತನಾಗಿದ್ದುದೇ ಕಾರಣ ಎಂಬುದನ್ನು ಮತ್ತೆ ಮತ್ತೆ ಒತ್ತಿ ಹೇಳಬೇಕಾಗಿದೆ. ಅದೇರೀತಿ ಮೊಹಮ್ಮದ್ ಅಖ್ಲಾಕ್‌ನ ಹತ್ಯೆಯಾದುದೂ ಆತ ಮುಸ್ಲಿಮನಾಗಿದ್ದ ಎಂಬ ಕಾರಣಕ್ಕೆ. ಇವರಿಬ್ಬರೂ ಅಪ್ಪಟ ಭಾರತೀಯರಾಗಿದ್ದರೂ ಅವರನ್ನು ಹಾಗೆ ಪರಿಗಣಿಸಲಾಗಿಲ್ಲ. ಇವರಿಬ್ಬರ ಸಾವಿಗೆ ಕಾರಣರಾದ ತಿಳಿಗೇಡಿ ರಾಷ್ಟ್ರೀಯವಾದಿ ಗುಂಪುಗಳು ತಾವೇ ಶ್ರೇಷ್ಠರೆಂದು ಭಾವಿಸಿಕೊಂಡು ದಲಿತ, ಅಲ್ಪಸಂಖ್ಯಾತರಿಂದ ರಾಷ್ಟ್ರೀಯತೆಯ ರುಜುವಾತು ಪತ್ರ ಕೇಳುತ್ತಿರುವುದು ದುರಹಂಕಾರದ ಪರಮಾವಧಿ. ರೋಹಿತ್ ವೇಮುಲ ರಾಷ್ಟ್ರೀಯವಾದಿ ದಲಿತನಾಗಲು ಸುತರಾಂ ಒಪ್ಪಿರಲಿಲ್ಲ. ದಲಿತರು ಕಿರುಕುಳ, ಹಿಂಸೆ ಅನುಭವಿಸುತ್ತಿರುವ ಇತರ ಸಮುದಾಯಗಳ ಜೊತೆ ಕೈಜೋಡಿಸಬೇಕು ಎಂದಾತ ಒತ್ತಾಯಿಸುತ್ತಿದ್ದ. ಶೋಷಣೆಗೊಳಗಾದವರೆಲ್ಲರೂ ಒಂದಾಗುವುದರಿಂದಲೇ ಅವರ ಉದ್ಧಾರ ಸಾಧ್ಯ ಎಂದು ಪ್ರತಿಪಾದಿಸಿದ್ದ. ಯಾಕೂಬ್ ಮೆಮನ್‌ಗೆ ಗಲ್ಲು ಶಿಕ್ಷೆ ವಿಧಿಸಿದುದರ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದ. "ಮುಜಾಫರ್‌ನಗರ್ ಬಾಕಿ ಹೈ" ಸಿನಿಮಾ ಪ್ರದರ್ಶನಕ್ಕೆ ತಡೆಯೊಡ್ಡಿದ ಎಬಿವಿಪಿಯ ಗೂಂಡಾಕೃತ್ಯವನ್ನು ಖಂಡಿಸಿದ್ದ. ರೋಹಿತ್‌ನ ಇಂತಹ ಸಮಾಜಮುಖಿ ಚಟುವಟಿಕೆಗಳಿಗೆ ರಾಷ್ಟ್ರವಿರೋಧಿ ಕೃತ್ಯಗಳು ಎಂಬ ಹಣೆಪಟ್ಟಿ ಕಟ್ಟಲಾಯಿತು. ಆರೆಸ್ಸೆಸ್‌ನ ಹಿರಿಯ ಪದಾಧಿಕಾರಿಯೊಬ್ಬನಂತೂ ರೋಹಿತ್ ಬಳಗವನ್ನು ರಾಷ್ಟ್ರವಿರೋಧಿಗಳೆಂದು ಕರೆದು ಇಂಥವರಿಗೆ ಹೈದರಾಬಾದ್ ವಿವಿಯಂತಹ ಶಿಕ್ಷಣಸಂಸ್ಥೆಗಳಲ್ಲಿ ಏನು ಕೆಲಸ ಎಂದು ಕೇಳುತ್ತಾನೆಂದರೆ ಇದಕ್ಕೇನು ಹೇಳಬೇಕು! ರೋಹಿತ್ ಮತ್ತು ಓರ್ವ ಎಬಿವಿಪಿ ನಾಯಕನ ಜೊತೆ ನಡೆದುದೆನ್ನಲಾದ ಕದನ ನಡೆದೇ ಇಲ್ಲವೆಂದು ಪೊಲೀಸರೆ ಹೇಳಿದ್ದಾರೆ. ಸಂಘ ಪರಿವಾರದ ವಿದ್ಯಾರ್ಥಿ ಪದಾತಿದಳ ಆಗಿರುವ ಎಬಿವಿಪಿ ಅದರ ಕಾರ್ಯಗಳಿಗೆ ಅಡ್ಡಿಯಾದ ಸಂದರ್ಭಗಳಲ್ಲಿ ಪರಿವಾರದ ಹಿರಿಯರನ್ನು ಎಳೆತರುತ್ತದೆ. ಈಗಲಂತೂ ಕೇಂದ್ರದಲ್ಲಿ ಅವರದೆ ಸರ್ಕಾರ ಇರುವುದರಿಂದ ಕೇಂದ್ರ ಸರ್ಕಾರದ ಮಂತ್ರಿಗಳನ್ನೆ ಬಳಸಿಕೊಳ್ಳಲಾಗಿದೆ. ರೋಹಿತ್ ಪ್ರಕರಣದಲ್ಲಿ ಸಲ್ಲದ 'ಹಸ್ತಕ್ಷೇಪ ಮಾಡಿ ಅದನ್ನು ರಾಜಕೀಕರಣಗೊಳಿಸಿದವರೆಂದರೆ ಮಂತ್ರಿಗಳಾದ ಬಂಡಾರು ದತ್ತಾತ್ರೇಯ ಮತ್ತು ಸ್ಮೃತಿ ಇರಾನಿ. ಇಂತಹ ದುರುಳರೆಲ್ಲ ಸೇರಿ ಪರೋಕ್ಷವಾಗಿ ರೋಹಿತ್‌ನನ್ನು ಆತ್ಮಹತ್ಯೆಗೆ ದೂಡಿರುವುದರಿಂದ ಒಂದು ವಿಧದಲ್ಲಿ ಅದನ್ನು ಹತ್ಯೆಯೆಂದೆ ಕರೆಯಬೇಕಾಗುತ್ತದೆ. ತಮಾಷೆ ಏನೆಂದರೆ ಈಗ ಅದೇ ಸಂಘ ಪರಿವಾರಕ್ಕೆ ಸೇರಿದ ಮತ್ತೋರ್ವ ಮಂತ್ರಿ ವೆಂಕಯ್ಯ ನಾಯ್ಡು ಈ ಪ್ರಕರಣದಲ್ಲಿ ರಾಜಕೀಯ ಸಲ್ಲದೆಂದು ಹೇಳುತ್ತಿದ್ದಾನೆ! ಇದಕ್ಕಿಂತ ದೊಡ್ಡ ಬೂಟಾಟಿಕೆ ಇನ್ನೊಂದಿರದು.

ಇತ್ತೀಚೆಗೆ ಲಕ್ನೋದಲ್ಲಿ ಸ್ವಯಂಸೇವಕರನ್ನು ಉದ್ದೇಶಿಸಿ ಮಾತನಾಡಿದ ಆರೆಸ್ಸೆಸ್‌ನ ಸಹ ಕಾರ್ಯವಾಹ ದತ್ತಾತ್ರೇಯ ಹೊಸಬಾಳೆ, 'ಮುಂದಿನ ಒಂದು ವರ್ಷವನ್ನು ಸೇವಾವರ್ಷವೆಂದು ಪರಿಗಣಿಸಿ ಪ್ರತಿ ಗುರುವಾರದ ಬದಲು ಪ್ರತಿದಿನವೂ ದಲಿತರ ಸೇವೆ ಮಾಡಬೇಕು' ಎಂದು ಕರೆಕೊಟ್ಟಿದ್ದ. ಸ್ವಯಂಸೇವಕರು ದಲಿತ ಕುಟುಂಬವನ್ನು ದತ್ತಕ್ಕೆ ತೆಗೆದುಕೊಳ್ಳಬೇಕು, ದಲಿತರ ಕೇರಿಗಳಿಗೆ ಹೋಗಿ ದಲಿತರೊಂದಿಗೆ ಸಹಭೋಜನ ಮಾಡಬೇಕೆಂದು ಆರೆಸ್ಸೆಸ್ ಹೇಳಿರುವುದಾಗಿ ವರದಿಯಾಗಿದೆ. ಇದೆಲ್ಲವೂ ದಲಿತರನ್ನು ಓಲೈಸಿ ಆ ಮೂಲಕ ಅವರನ್ನೆಲ್ಲ ತೆಕ್ಕೆಗೆ ಸೆಳೆದುಕೊಳ್ಳುವ ಮತಗಟ್ಟೆ ರಾಜಕಾರಣವಲ್ಲದೆ ಇನ್ನೇನೂ ಅಲ್ಲ. ಬಿಹಾರದ ಹೀನಾಯ ಸೋಲಿನ ನಂತರ ಮುಂಬರುವ ಉತ್ತರ ಪ್ರದೇಶ, ಪಂಜಾಬ್, ಪಶ್ಚಿಮ ಬಂಗಾಳ ಚುನಾವಣೆಗಳನ್ನು ಗುರಿಯಾಗಿಸಿ ಮಾಡಿರುವ ಪ್ಲಾನ್ ಇದಾಗಿದೆ. ಇವರ ಓಲೈಕೆ ಎಷ್ಟು ಢೋಂಗಿ ಎಂದು ತಿಳಿಯಲು ಹೆಚ್ಚು ಕಷ್ಟಪಡಬೇಕಾಗಿಲ್ಲ. ಇವರು ಹೊರತಂದ ಅಂಬೇಡ್ಕರ್ ಕುರಿತ ಹೊತ್ತಗೆಯಲ್ಲಿ ಬಾಬಾಸಾಹೇಬ್ ಹಿಂದೂ ಧರ್ಮವನ್ನು ಕಟುವಾಗಿ ಟೀಕಿಸಿದ ವಿಚಾರಕ್ಕೆ, ತಾನು ಹಿಂದೂ ಆಗಿ ಹುಟ್ಟಿದರೂ ಹಿಂದೂ ಆಗಿ ಸಾಯಲಾರೆ ನೆಂದು ಬೌದ್ಧ ಧರ್ಮಕ್ಕೆ ಮತಾಂತರವಾದ ವಿಚಾರಕ್ಕೆ ಮತ್ತು ಜಾತಿವಿನಾಶಕ್ಕೆ ಯತ್ನಿಸಿದ ವಿಚಾರಕ್ಕೆ ಸಂಬಂಧಿಸಿದ ಅಧ್ಯಾಯಗಳನ್ನು ಕೈಬಿಡಲಾಗಿರುವುದೆ ಇವರ ಢೋಂಗಿತನಕ್ಕೆ ದೊಡ್ಡ ಸಾಕ್ಷಿ!

ಆದರೆ ಇದೆಲ್ಲದರ ಮಧ್ಯದಲ್ಲಿ ಧುತ್ತೆಂದು ಎದ್ದುನಿಂತ ರೋಹಿತ್ ಆತ್ಮಹತ್ಯೆ ಪ್ರಕರಣ ಸಂಘ ಪರಿವಾರದ ದಲಿತ ಓಲೈಕೆ ಕಾರ್ಯಕ್ರಮಕ್ಕೆ ತೀವ್ರ ಹಿನ್ನಡೆಯುಂಟುಮಾಡಿದೆ. ಆದುದರಿಂದಲೆ ರೋಹಿತ್ ದಲಿತನಾಗಿದ್ದರೂ (ರೋಹಿತ್‌ನ ಅಮ್ಮ 'ಮಾಲಾ' ಎಂಬ ದಲಿತ ಪಂಗಡಕ್ಕೆ ಸೇರಿದವಳು; ಆದುದರಿಂದ ಆತ ಖಂಡಿತವಾಗಿಯೂ ದಲಿತ ಎಂದು ರಾಷ್ಟ್ರೀಯ ದಲಿತ ಆಯೋಗದ ಅಧ್ಯಕ್ಷರೆ ಹೇಳಿದ್ದಾರೆ) ಸಂಘ ಪರಿವಾರಿಗರು ಈಗ ರೋಹಿತ್ ದಲಿತನೇ ಅಲ್ಲವೆಂದು ಸುಳ್ಳು ಹೇಳುತ್ತಿದ್ದಾರೆ. ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್‌ಗೆ ರೋಹಿತ್ ದಲಿತನಲ್ಲ ಎಂಬ ರಹಸ್ಯ ವರದಿಗಳು ಬಂದಿವೆಯಂತೆ. ಭಟ್ಟಂಗಿ ಮಾಧ್ಯಮಗಳ ಮೂಲಕ ಇದನ್ನು ದೇಶಾದ್ಯಂತ ಬಿತ್ತರಿಸಲಾಯಿತು. ತದನಂತರ ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ್ ಒಂದು ಹೇಳಿಕೆ ನೀಡಿ ರೋಹಿತ್ ದಲಿತ ಅಲ್ಲ ಎಂದಿದ್ದಾಳೆ. ಬಿಜೆಪಿ ವಕ್ತಾರ ಶಾನವಾಜ್ ಹುಸೇನ್ ಪ್ರಕಾರ ದಲಿತೇತರನನ್ನು ದಲಿತನೆಂದು ಬಿಂಬಿಸುವ ಯತ್ನ ನಡೆಯುತ್ತಿದೆಯಂತೆ! ಅದೇನೇ ಇರಲಿ, ಈ ಪ್ರಕರಣದಲ್ಲಿ ನೇರ ಭಾಗಿಯಾದ ಇಬ್ಬರು ಮಂತ್ರಿಗಳನ್ನು ಬಚಾಯಿಸುವುದಕ್ಕೋಸ್ಕರ ಇಡೀ ಪ್ರಕರಣದ ದಿಕ್ಕು ತಪ್ಪಿಸುವ ಯತ್ನ ಇದಾಗಿದೆ ಎಂದು ನಿಶ್ಚಯವಾಗಿ ಹೇಳಬಹುದು.

ಕೆಲವೊಂದು ವ್ಯಕ್ತಿಗಳು ಸಂದರ್ಭಕ್ಕೆ ಅನುಸಾರವಾಗಿ ಭಾವನೆಗಳನ್ನು ಪ್ರದರ್ಶಿಸುವ ಕಲೆಯನ್ನು ಕರಗತ ಮಾಡಿಕೊಂಡಿರುತ್ತಾರೆ. ಇಂಥವರು ತಮಗೆ ಬೇಕಿದ್ದಾಗ ಕಣ್ಣೀರಿಳಿಸಬಲ್ಲರು. ಸಿನಿಕ ಮೋದಿಯಂತೂ ಸಂದರ್ಭಾನುಸಾರ ತನ್ನ ಭಾವನೆಗಳನ್ನು ಹರಿಯಬಿಡುವುದರಲ್ಲಿ ನಿಷ್ಣಾತ. ಘಟನೆ ಸಂಭವಿಸಿದ ಐದು ದಿನಗಳ ನಂತರ ಸುರಿದ ಮೊಸಳೆ ಕಣ್ಣೀರು ಅದರದೆ ಆದ ಕತೆಯನ್ನು ಹೇಳುತ್ತದೆ. ಅದು ಘಟನೆ ಸಂಭವಿಸಿದಾಕ್ಷಣ ಅಪ್ರಯತ್ನಿತವಾಗಿ ಒತ್ತರಿಸಿ ಬಂದ ದುಃಖ ಆಗಿರಲಿಲ್ಲ. ಆದರೆ ರೋಹಿತ್ ಆತ್ಮಹತ್ಯೆ ಬಗ್ಗೆ ಮೋದಿ ಕಣ್ಣಿಂದ ಬಕೆಟುಗಟ್ಟಲೆ ನೀರು ಸುರಿದರೂ ಅದು ದಲಿತರ ಮೇಲೆ ಯಾವುದೇ ಪರಿಣಾಮ ಬೀರಲಾರದು. ಮೋದಿಯ ಕಣ್ಣೀರು ಬರೀ ಪ್ರಹಸನವೆಂಬುದು ಜನರಿಗೀಗ ಅರ್ಥವಾಗತೊಡಗಿದೆ. ಆತ ರೋಹಿತ್‌ನ ತಾಯಿಯನ್ನು "ಮಾ ಭಾರತಿ" (ಭಾರತ ಮಾತೆ) ಎಂದು ಕರೆದುದು ಆ ಕ್ಷಣದಲ್ಲಿ ತೆಗೆದುಕೊಂಡ ನಿರ್ಧಾರ ಆಗಿರಲಿಲ್ಲ. ಅದು ಪೂರ್ವಯೋಜಿತ ಕೆಲಸ. ಅದರ ಹಿಂದೆ ಒಂದು ಲೆಕ್ಕಾಚಾರ ಅಡಗಿದೆ. ರೋಹಿತ್‌ನನ್ನು "ಮಾ ಭಾರತಿ"ಯ ಪುತ್ರನೆಂದು ಕರೆಯುವುದರ ಹಿಂದೆ ಅವನ ದಲಿತ ಐಡೆಂಟಿಟಿಯನ್ನು ಮರೆಮಾಚುವ ಉದ್ದೇಶವಿದೆ. ಆರೆಸ್ಸೆಸ್‌ನ ಅಂಗಸಂಸ್ಥೆಗಳು ಸಾಮಾನ್ಯವಾಗಿ "ಭಾರತಿ" ಎಂಬ ಹೆಸರಿನಿಂದ ಕೊನೆಗೊಳ್ಳುವ ವಿಷಯವನ್ನು ಗಮನಿಸಿದರೆ ಈ ಉದ್ದೇಶ ಸ್ಪಷ್ಟವಾಗುತ್ತದೆ.

ಇತ್ತೀಚೆಗೆ ಮೋದಿಯಾದಿಯಾಗಿ ಅನೇಕ ಕೇಸರಿ ನಾಯಕರು ಅಂಬೇಡ್ಕರರನ್ನು ಆರಾಧಿಸುವ ನಾಟಕವಾಡತೊಡಗಿದ್ದಾರೆ. ದೇಶಭಕ್ತ ಅಂಬೇಡ್ಕರ್ ಹಿಂದೂ ಧರ್ಮದಲ್ಲಿ ಭಾರಿ ನಿಷ್ಠೆ ಹೊಂದಿದ್ದರೆಂದು ಪ್ರಚಾರ ಮಾಡುತ್ತಿದ್ದಾರೆ. ಅಂಬೇಡ್ಕರ್ ಎಲ್ಲವನ್ನೂ ಸಹಿಸಿಕೊಂಡು ಬದುಕಿದರು; ತಾನು ಅನುಭವಿಸಿದ ಅವಮಾನ ಮತ್ತು ಮೂದಲಿಕೆಗಳ ಬಗ್ಗೆ ಎಂದೂ ಗೊಣಗಾಡಿದವರಲ್ಲ; ತನ್ನ ನೋವನ್ನು ಎಂದೂ ಬಹಿರಂಗವಾಗಿ ಹೇಳಿಕೊಂಡವರಲ್ಲ ಎಂದು ಮೋದಿ ಉದ್ದುದ್ದ ಭಾಷಣ ಬಿಗಿದ. ಅಭದ್ರತೆ



ಕುರಿತು ಆಮೀರ್ ಖಾನ್ ನೀಡಿದ ಹೇಳಿಕೆಗಳನ್ನು ಟೀಕಿಸುವ ಸಂದರ್ಭದಲ್ಲಿ ಗೃಹಸಚಿವ ರಾಜನಾಥ್ ಸಿಂಗ್ ಸಮೇ… ಅಂಬೇಡ್ಕರರನ್ನು ಉಲ್ಲೇಖಿಸಿ ಅವರೆಂದೂ ತಾಯ್ನಾಡನ್ನು ಟೀಕಿಸಲಿಲ್ಲವೆಂದ. ಆದರೆ ಕೇಸರಿ ಪಾಳಯದ ಸುಳ್ಳುಗಳಿ… ದಲಿತರು ಮೋಸಹೋಗಲಾರರು. ಹೋಗಬಾರದು… ಏಕೆಂದರೆ ಜಾತಿಪದ್ಧತಿ ಮತ್ತು ಮನುವಾದವನ್ನು ಎತ್ತಿಹಿಡಿಯುವ ಹಿಂದೂ ಧರ್ಮದ ಮೇಲಿ… ಸಿಟ್ಟಿನಿಂದಾಗಿಯೆ ಅಂಬೇಡ್ಕರ್ ಹಿಂದೂ ಧರ್ಮ ತೊರೆದು ಬೌದ್ಧ ಧರ್ಮವನ್ನು ಅಪ್ಪಿಕೊಂಡರೆಂಬ ಸತ್ಯ ಅವರಿ… ಗೊತ್ತಿದೆ. ಸಮಾಜ ತನ್ನ ನೈಜ ಅಂತಸ್ತು ಸಾಮರ್ಥ್ಯವನ್ನು ತಲುಪಬೇಕಿದ್ದರೆ ಬದಲಾವಣೆ ಅಗತ್ಯವಾಗಿದ್ದು ಅದು ತುರ್ತಾಗಿ ಆಗಬೇಕಿರುವ ಭಾವನೆಯನ್ನು ಜನರ… ಹುಟ್ಟುಹಾಕಲು ಅಸಮರ್ಥವಾದ ಕಾರಣಕ್ಕಾಗಿ ತಾನೆ ರಚಿಸಿದ ಸಂವಿಧಾನವನ್ನು ಟೀಕಿಸಲೂ ಹಿಂಜರಿಯ… ಅಂಬೇಡ್ಕರರಿಗೆ ವಂಚನೆ ಮಾಡಿರುವ ಭಾರತ ಅವ… ನಿರೀಕ್ಷೆಗಳನ್ನು ಹುಸಿಯಾಗಿಸಿದೆ. ಇವತ್ತು ರೋಹಿತ್ ಸಾವಿ… ಕಣ್ಣೀರಿಳಿಸುವ ರಾಜಕೀಯ ಮುಖಂಡರು ಆತ… ನಿರೀಕ್ಷೆಗಳನ್ನು ಹುಸಿಯಾಗಿಸಿರುವಂತೆ.

(ಆಧಾರ: ಅಪೂರ್ವಾನಂದ್ ಅವರ ಲೇಖನ…



ಇನ್ವೆಸ್ಟ್ ಕರ್ನಾಟಕ 2016

ಇನ್ವೆಸ್ಟ್ ಕರ್ನಾಟಕ ನಿನಗೆ
ರತ್ನಗಂಬಳಿಯ ಸ್ವಾಗತ!
ನಮ್ಮ ಬಡಪ್ರಯಾಣಿಕರ ಪರದಾಟ
ನಗರ ಪ್ರವೇಶಕೆ ನಿರ್ಬಂಧ
ನಗರಗಳಿಗೆ ಸುಂದರ ಕಾಣದು
ಬಡವರ ಗುಡಿಸಲುಗಳು.
ಇಂದು ರಸ್ತೆ ನಮ್ಮದಲ್ಲ
ನಾಳೆ ಈ ಗುಡಿಸಲೂ ನಮ್ಮದಲ್ಲ
ಹಾಗಾದರೆ ಬಡತನ ನಿರ್ನಾಮವಾಗುವುದೇ?
ಇಲ್ಲ! ಬಡವ ನಿರ್ನಾಮವಾಗುತ್ತಾನೆ.

ಡಾ.ಕೆ.ಷರೀಫಾ



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಶೂದ್ರ ತಪಸ್ವಿಗಳು

ಶಬರಿ ಎಂಬ ಬೇಡ್ತಿ

ವೇದಗಳಲ್ಲಿರಲು ಸಾಧ್ಯವಿಲ್ಲದ ಅಯ್ಯಪ್ಪನಿಗೆ ಆಗಮ ಕ ಪ್ರಕಾರ ದೇವಾಲಯಗಳನ್ನು ಕಟ್ಟುವುದಾಗಲಿ ಅಥವಾ ೀಕ ವಿಧಿಯಲ್ಲಿ ಅಥವಾ ಅದರೊಡನೆ ತ್ರಿಕವಿಧಿಯನ್ನೂ ಸಮರ್ಪಕವಾಗಿ ಬೆರೆಸಿ ವುದನ್ನಾಗಲಿ ಅಚ್ಚರಿ ಎಂದುಕೊಳ್ಳುವುದೋ ಅಥವಾ ಷ ಎಂದುಕೊಳ್ಳುವುದೋ ಅಗತ್ಯವಿಲ್ಲ. ಆದರೆ ಪ್ಪನ ಬೆನ್ನಿಗೆ ಬ್ರಾಹ್ಮಣತ್ವ ಬಿದ್ದಿದ್ದು ಮಾತ್ರ ಆಶ್ಚರ್ಯ. ಶಬರಿಗೆ ಮೋಕ್ಷ ನೀಡುವ ಅಯ್ಯಪ್ಪನೆಂದರೆ ರಿಯಾಗಬೇಕಾಗಿಲ್ಲ. ಶಬರಿ ಎಂದರೆ ರಾಮಾಯಣದ ಯೇ ಎಂದೇನಿಲ್ಲ. ಯಾವುದೇ ಬೇಡ ಹೆಂಗಸೂ ಯಾಗುತ್ತಾಳೆ. ಅಂತೆಯೇ ಬೇಡ ಶಬರನಾಗುತ್ತಾನೆ. ಪ್ಪನ್ ಅವನ ಸಮಕಾಲೀನ ಶಬರಿಯೊಂದಿಗೆ ಒಡನಾಟ ದಿದ್ದರೆ ಅಚ್ಚರಿಯೇನಿಲ್ಲ.


ಬ್ರಾಹ್ಮಣ್ಯಾಧಿಕಾರದ ಕನಸು

ಪಂದಳರಾಜ ತನ್ನ ಹಿಂದಿನ ಜನ್ಮದಲ್ಲಿ ಒಬ್ಬ ನಿಷ್ಠಾವಂತ ್ಮಣನಾಗಿದ್ದು ಅವನ ಹೆಸರು ವಿಜಯನ್ ಎಂದಾಗಿತ್ತಂತೆ. ಪೂರ್ವ ಜನ್ಮದ ಪುಣ್ಯದಿಂದ ಅವನು ರಾಜಶೇಖರನಾಗಿ ್ಟಿದ್ದು ಮಾತ್ರವಲ್ಲದೇ ಅಯ್ಯಪ್ಪನ್ ಎಂಬ ದೈವೀ ಪನ ಸಾಕುತಂದೆಯಾಗುವ ಭಾಗ್ಯ ಕೂಡ ಲಭಿಸಿತ್ತು. ಐತಿಹ್ಯದಲ್ಲಿ ಪ್ರಮಾದವಶಾತ್ ಒಂದು ತಪ್ಪಾಗಿದೆ. ್ಮಣ್ಯವು ಸರ್ವಶ್ರೇಷ್ಠವೆಂದೂ, ಶ್ರೇಣಿಯಲ್ಲಿ ಪ್ರಥಮವೂ ರುವುದಂತದ್ದು, ನಿಷ್ಠಾವಂತನಾಗಿದ್ದೂ ಶ್ರೇಣೀಕೃತ ದಲ್ಲಿ ಎರಡನೆಯ ದರ್ಜೆಯ ಕ್ಷತ್ರಿಯನಾಗಿ ಹುಟ್ಟಿದ್ದು. ಒಂದು ತಪ್ಪಾಗಿ ವಿವೇಚಿಸಿರುವುದಲ್ಲ. ಬ್ರಾಹ್ಮಣನು ವವರನ್ನು ತಮ್ಮ ಕೈಯಲ್ಲಿರಿಸಿಕೊಂಡಿರುವುದು ತ್ರವಲ್ಲದೆ ತಾವೇ ಆಳ್ವಿಕೆ ಮಾಡಬೇಕು. ಬ್ರಾಹ್ಮಣರ ನೇರ ಅಧಿಕಾರ ಇರಬೇಕು. ಇಲ್ಲವಾದರೆ ಕೆಲವು ತಲೆಕೆಟ್ಟ ರಾಜರುಗಳು ಇವರು ಹೇಳಿದ ಮಾತು ತ್ತಿರಲಿಲ್ಲ. ಬದಲಾಗಿ ಇವರ ವಿರುದ್ಧವೂ ತಿರುಗಿ ಳುತ್ತಿದ್ದರು. ಜಮದಗ್ನಿ ಋಷಿಯ ವಿಷಯದಲ್ಲಿ ವೀರ್ಯಾರ್ಜುನ ನಡೆದುಕೊಂಡ ಹಾಗೆ. ಅದಕ್ಕಾಗಿ ಶುರಾಮ ನೇರವಾಗಿ ಇಡೀ ಆಳ್ವಿಕೆಯ ಸೂತ್ರವನ್ನು ೇ ಹಿಡಿಯಲು ಹೊರಟ. ಅದಕ್ಕಾಗಿಯೇ ಇಪ್ಪತ್ತೊಂದು ಭೂಪ್ರದಕ್ಷಿಣೆ ಹಾಕಿ ವಿಫಲ ಕ್ರಾಂತಿ ಮಾಡಿದ. ೇ ಭೂಮಂಡಲವೆಂದರೆ ಇಂಗ್ಲೆಂಡ್, ಆಫ್ರಿಕಾ, ಅಮೆರಿಕ, ರ್ಮನ್‌ಗೆಲ್ಲಾ ಹೋಗಿಬಿಟ್ಟಿದ್ದನೆಂದು ಕೊಳ್ಳಬೇಡಿ. ಅವೆಲ್ಲಾ ೇಚ್ಛರ ದೇಶ. ಆರ್ಯರ ದೇಶವಲ್ಲ. ಆಗ ಮಂಡಲವೆಂದರೆ ಆರ್ಯಾವರ್ತ, ಬ್ರಹ್ಮಾವರ್ತಗಳಷ್ಟೇ. ್ನ ಚೆಂದವಾಗಿ ಹೇಳಬೇಕೆಂದರೆ, ಜಂಭೂದ್ವೀಪೇ, ತವರ್ಷೇ ಭರತಖಂಡೇ ಎಂದು ಮಂತ್ರಗಳಲ್ಲಿ ಳುತ್ತಾರಲ್ಲಾ, ಅವಷ್ಟೇ ಭೂಮಂಡಲ.

ಇರಲಿ, ಪರಶುರಾಮನ ಬ್ರಾಹ್ಮಣ ಪ್ರಭುತ್ವದ ಕನಸು ರಾಜಶೇಖರನ ಬ್ರಾಹ್ಮಣ ಪೂರ್ವಜನ್ಮದಲ್ಲಿ ಧ್ವನಿಸಿದೆ. ದೇ, ಅಯ್ಯಪ್ಪನ ವಿಗ್ರಹವನ್ನು ಪರಶುರಾಮನೇ ಸಿರುವುದು ಎಂಬುದನ್ನೂ ಇಲ್ಲಿ ನೆನೆಸಿಕೊಳ್ಳಬಹುದು. ಯಾವುದೇ ತಮ್ಮ ಸ್ಥಳೀಯ ನಾಯಕರ ವರ್ಚಸ್ಸಿನ ರ್ಶನಕ್ಕೆ ಅವನಿಗಿಂತ ವರ್ಚಸ್ಸುಳ್ಳ ಹಿರಿಯರ ಯಿಗಳನ್ನು ಬಳಸಿಕೊಳ್ಳುವುದಿಲ್ಲವೇ? ಉದಾಹರಣೆಗೆ ಯ ಕಾಂಗ್ರೆಸ್ ಕಾರ್ಯಕರ್ತ, ತನ್ನ ಫೋಟೋ, ಅದರ ತೆಗೆ ಕಾಂಗ್ರೆಸ್ ಶಾಸಕ, ಕಾಂಗ್ರೆಸ್ ಸಚಿವರು, ಖ್ಯಮಂತ್ರಿ, ಹೈಕಮಾಂಡ್, ಸ್ವರ್ಗಸ್ಥರಾಗಿರುವ ಯಕರು- ಹೀಗೆ ಎಲ್ಲರ ಫೋಟೋಗಳನ್ನು ಕಡ್ಡಾಯವಾಗಿ ಸಿಕೊಳ್ಳುವಂತೆ; ಆ ಬಗೆಯ ರಾಜಕೀಯ ಉದ್ದೇಶವಿರುವ ಗಿಯೇ ಧಾರ್ಮಿಕ ಉದ್ದೇಶವಾಗಲಿ, ಅದರ ಒಳಗಿನ ಜಕೀಯ ಉದ್ದೇಶವಾಗಲಿ; ಪುರಾಣದ ಕಥೆಗಳಲ್ಲೂ ಕೆಯಾಗುತ್ತದೆ. ಅಷ್ಟೇ ಅಲ್ಲ, ಆ ವರ್ಚಸ್ಸಿನ ಯರೊಂದಿಗೆ ಸಮೀಕರಿಸಿಕೊಳ್ಳಲಾಗುತ್ತದೆ ಕೂಡ.

ಅರವನಪಾಯಸಂ

ಅಯ್ಯಪ್ಪನ ಬೆನ್ನಿಗಿರುವ ಕಥೆಗಳಲ್ಲಿ ಅರವನಪಾಯಸಂ ಯೂ ಒಂದು. ಅದೇನೆಂದರೆ, ಹರಿಹರ ಇವರಿಬ್ಬರ ಯೋಗವೇನೂ ಇಲ್ಲದೇ, ನೇರ ರಾಜಶೇಖರನಿಗೇ ್ಟಿದ ಮಗನಂತೆ. ಆಗ ಬೌದ್ಧರಾಜನಾದ ಉದಯನ್ ದಳ ಪ್ರಾಂತ್ಯದಲ್ಲಿ ಬಹಳ ಪ್ರಭಾವಶಾಲಿಯಾಗಿದ್ದು ತನ್ನ ಯಿಂದ ರಾಜಶೇಖರನನ್ನು ಮಣಿಸಿದ್ದನಂತೆ. ಅವನನ್ನು ನಾಯಕನನ್ನಾಗಿಯೂ ಬಿಂಬಿಸುತ್ತಾರೆ, ಅವನು ಪ್ರಜೆಗಳಿಗೆ ್ಸ ಕೊಡುತ್ತಿದ್ದ ದುಷ್ಟನಾಗಿದ್ದ ಎಂದು ಹೇಳುವುದರ ಲಕ. ಸರಿ, ಈ ರಾಜಶೇಖರ, ತನ್ನ ಮಗ ಪ್ರಾಪ್ತವಯಸ್ಕ ಾಗ ಕಲರಿಯೇ ಮೊದಲಾದ ಸಮರಕಲೆಗಳನ್ನು, ಕಲಿಯಲು ಚೀರಪ್ಪನ್‌ಚಿರ ಎಂಬ ಗುರುವಿನ ಬಳಿಗೆ ಕಳುಹಿಸುತ್ತಾನೆ. ಮುಹಮ್ಮ ಎಂದು ಕರೆಸಿಕೊಳ್ಳಲ್ಪಡುವ ಆ ಜಾಗವನ್ನು ಇಂದು ಆಳಪುಳ ಜಿಲ್ಲೆಯಲ್ಲಿ ಗುರುತಿಸುತ್ತಾರೆ.



ಪಣಿಕ್ಕರ್, ಅಂದರೆ ಸಮರ ಕಲೆಗಳ ಗುರು, ಅಯ್ಯಪ್ಪನ್‌ಗೆ ಸಮರಕಲೆ ಕಲಿಸುತ್ತಾನೆ. ಆ ಗುರುವಿನ ಮಗಳು ನೀಲಾ ಎಂಬಾಕೆ ಇವನನ್ನು ಪ್ರೀತಿಸುತ್ತಾಳೆ. ಅವಳು ಅದನ್ನು ಇವನ ಬಳಿ ಅಭಿವ್ಯಕ್ತಗೊಳಿಸಿದಾದ ನಮ್ಮ ಅಯ್ಯಪ್ಪನ್ ಒಲ್ಲೆ ಒಲ್ಲೆ ಎಂದು ನಿರಾಕರಿಸುವುದಲ್ಲದೇ ತಾನು ಜನ್ಮಪೂರ್ತಿ ತಾಪಸಿಯಾಗಿರುವಂತಹ ಬ್ರಹ್ಮಚಾರಿ ಎಂದು ಹೇಳುತ್ತಾನೆ. ಹಾಗೆಯೇ ಅಲ್ಲಿನ ಒಂದು ಸಮಾರಂಭದಲ್ಲಿ ಆಕೆ ಅವನಿಗಾಗಿಯೇ ವಿಶೇಷವಾಗಿ ಒಂದು ಪಾಯಸವನ್ನು ಮಾಡುತ್ತಾಳೆ. ಅದನ್ನು ಅರ್ಪಿಸುತ್ತಾಳೆ. ಅವನಿಗೂ ಅದು ಇಷ್ಟವಾಗುತ್ತದೆ. ಅದೇ ಅರವನಪಾಯಸಂ ಇಂದು.

ಆರಾಧನಾ ವೈವಿಧ್ಯ

ಅಯ್ಯಪ್ಪನ ಆರಾಧನೆಯಲ್ಲಿ ಹಲವು ಸಿದ್ಧಾಂತಗಳ ಪ್ರಭಾವಗಳನ್ನು ಗುರುತಿಸಬಹುದು. ಶೈವ, ಶಾಕ್ತ ವೈಷ್ಣವ, ಬೌದ್ಧ ಮತ್ತು ಜೈನ ಪದ್ಧತಿಗಳನ್ನು ಗುರುತಿಸುತ್ತಾರೆ. ಪ್ರಾರಂಭದಲ್ಲಿ ಮದ್ಯ ಮಾಂಸಾದಿಗಳನ್ನು ಅರ್ಪಿಸುತ್ತಿದ್ದು ಕ್ರಮೇಣ ಸಂಪೂರ್ಣ ಶಾಖಾಹಾರಕ್ಕೆ ಬದಲಾಯಿತು. ಇದು ಬಹುಶಃ ಅಲ್ಲಿ ಆಳ್ವಿಕೆಯವರ ಧರ್ಮದ ಪ್ರಕಾರವೂ ಇದ್ದಿರಬಹುದು.


ಅದೇನೇ ಆಗಲಿ, ಮದ್ಯ ಮಾಂಸಗಳನ್ನು ಅರ್ಪಿಸುವ ಶಾಕ್ತ ಸಂಪ್ರದಾಯವೂ, ರುದ್ರಾಕ್ಷಿ, ಭಸ್ಮಗಳನ್ನು ಧರಿಸುವ ಶೈವ ಸಂಪ್ರದಾಯವೂ, ತಂಬಾಕನ್ನು ಅರ್ಪಿಸುತ್ತಾ ಕಡುತಸ್ವಾಮಿ ಎಂಬುದ್ದರ ದಾಖಲೆಗಳೂ ಇವೆ.

ಬ್ರಹ್ಮಚಾರಿತ್ವಕ್ಕೆ ಮಹತ್ವ ಬಂದದ್ದು ಮಾತ್ರ ನಂತರ ತರುಣ ತಾಪಸಿಗಳ ಆಧ್ಯಾತ್ಮಿಕ ಪ್ರಭಾವಗಳಿಂದ.

ಅಯ್ಯಪ್ಪನ್ ಸ್ವಯಂ ಬ್ರಹ್ಮಚಾರಿಯಾಗಿರುವುದರಿಂದ ಅವನ ವ್ರತ ಮಾಡುವವರೂ ಕೂಡ ಕಟ್ಟುನಿಟ್ಟಾಗಿ ಬ್ರಹ್ಮಚರ್ಯವನ್ನು ಪಾಲಿಸಬೇಕಾಗುತ್ತದೆ. ಮದುವೆಯಾಗಿರುವವರೂ ತಮ್ಮ ಹೆಂಡತಿಯೊಡನೆ ವ್ರತಪಾಲನೆ ಮಾಡುವಾಗ ಸೇರುವಂತಿಲ್ಲ. ಅದೇನೇ ಇರಲಿ, ಆ ವ್ರತದಲ್ಲಿ ಬಹಳ ಸುಂದರವಾದ ವಿಷಯವೆಂದರೆ, ವ್ರತದೀಕ್ಷೆ ತೆಗೆದುಕೊಂಡವರನ್ನು ಸ್ವಾಮಿ ಎಂದು ಸಂಬೋಧಿಸುತ್ತಾ ಗೌರವಿಸುವುದು. ಹಾಗೆಯೇ ಅವರೂ ಇತರರನ್ನು ಸ್ವಾಮಿ ಎಂದು ಗೌರವಿಸುವುದು.

ಕೇರಳ, ತಮಿಳುನಾಡು ಮತ್ತು ಮಡಿಕೇರಿ ಹಾಗೂ ಚಿಕ್ಕಮಗಳೂರಿನ ಕಾಫಿ ಮತ್ತು ಟೀ ಎಸ್ಟೇಟುಗಳಲ್ಲಿ ಬಹಳಷ್ಟು ಕೆಲಸಗಾರರು ಅಯ್ಯಪ್ಪ ಸ್ವಾಮಿಯ ಮಾಲೆಯನ್ನು ಹಾಕಿಕೊಂಡು ವ್ರತದೀಕ್ಷೆ ತೆಗೆದುಕೊಳ್ಳುತ್ತಿದ್ದದ್ದು ಅಯ್ಯಪ್ಪನಿಗಾಗಿ ಅಲ್ಲ. ಹಾಗೆ ಮಾಲೆ ಹಾಕಿಕೊಂಡಾಗ ಮಾಲಿಕ ಬೈಯುತ್ತಿರಲಿಲ್ಲ, ಒದೆಯುತ್ತಿರಲಿಲ್ಲ. ಅಷ್ಟು ದಿನಗಳೂ ಗೌರವದಿಂದ ನಡೆಸಿಕೊಳ್ಳುತ್ತಿದ್ದ. ಏಕೆಂದರೆ ಹಾಗೆ ಮಾಡಿ ದೈವದ ಆಗ್ರಹಕ್ಕೆ ತುತ್ತಾಗಲು ಯಜಮಾನನಿಗೆ ಇಷ್ಟವಿರಲಿಲ್ಲ. ಅಲ್ಲದೇ ಅಸ್ಪೃಶ್ಯತೆಯ ಆಚರಣೆ ಅಯ್ಯಪ್ಪನಲ್ಲಿ ಇಲ್ಲ. ಸಾಮಾಜಿಕವಾಗಿ ತುಳಿತಕ್ಕೆ ಒಳಗಾದವನೂ ಅಯ್ಯಪ್ಪನ ಮಾಲೆಯನ್ನು ಹಾಕಿಕೊಂಡು ನಮಸ್ಕಾರಕ್ಕೆ ಒಳಗಾಗುತ್ತಿದ್ದ. ಗೌರವವನ್ನು ಪಡೆದುಕೊಳ್ಳುತ್ತಿದ್ದ. ಇಂಥಾ ಗೌರವಕ್ಕೆ ಪಾತ್ರರಾಗುತ್ತಿದ್ದ ತಳವರ್ಗದವರು ಮತ್ತು ಇತರ ಹೆಚ್ಚಿನ ಸಂಖ್ಯೆಯ ಶೂದ್ರರು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ವ್ರತಗಳನ್ನು ಸ್ವೀಕರಿಸುತ್ತಿದ್ದರು. ಹೀಗೆ ಮಧ್ಯಮ ಮತ್ತು ತಳವರ್ಗದ ಹೆಚ್ಚು ಹೆಚ್ಚು ಜನ ಹೋಗಲಾರಂಭಿಸುತ್ತಿದ್ದರು. ಅವರೇ ಸಿನಿಮಾದ ಪ್ರೇಕ್ಷಕವರ್ಗವೂ ಆಗಿದ್ದರಿಂದ ಅವರನ್ನು ಒಲಿಸಿಕೊಳ್ಳಲು ಮತ್ತು ಸಾಮಾನ್ಯ ಭಕ್ತಿಯಿಂದಲೂ ನಟರು ಕೂಡ ವ್ರತಗಳನ್ನು ಸ್ವೀಕರಿಸಲು ಪ್ರಾರಂಭಿಸಿದ್ದರಿಂದ ವ್ರತಕ್ಕೊಂದು ಸ್ಟಾರ್ ವ್ಯಾಲ್ಯೂ ಕೂಡ ಬರಲಾರಂಭಿಸಿತು. ಒಟ್ಟಾರೆ ಅಯ್ಯಪ್ಪನ ವ್ರತವನ್ನು ನಾನಾಕಾರಣಗಳಿಂದ ಸ್ವೀಕರಿಸತೊಡಗಿದ ಮಂದಿ ಅದರ ವ್ಯಾಪ್ತಿಯನ್ನು ಹಿರಿದಾಗಿಸಿದರು.

ಪುರಾಣ, ಇತಿಹಾಸ ಅದೇನೇ ಇರಲಿ. ಗೌರವಾದರಗಳಿಂದ ಒಬ್ಬರನ್ನೊಬ್ಬರು ನೋಡುವ ಮೌಲ್ಯವು ಗಮನೀಯವಾದಂತೆ, ಮತ್ತೊಂದು ಮಹತ್ವದ ಅಂಶವೆಂದರೆ, ಯಾವುದಾದರೂ ಚಟಕ್ಕೆ ಒಳಗಾಗಿರುವಂತವರು ಒಂದಷ್ಟು ದಿನಗಳ ಕಾಲ ಕಟ್ಟುನಿಟ್ಟಾಗಿ ವ್ರತಗಳನ್ನು ಪಾಲಿಸುವುದರಿಂದ ಆ ಚಟಗಳಿಗೆ ಕಡಿವಾಣ ಹಾಕುವುದು ಮತ್ತು ಅದನ್ನು ಬಿಡುವ ಅಭ್ಯಾಸವಾಗಿ ಬಿಟ್ಟೇಬಿಡುವುದು ಇತ್ಯಾದಿಗಳೂ ಆಗುತ್ತಿದ್ದವು. ಕೆಲವರು ಮತ್ತೆ ಚಟಗಳಿಗೆ ಮರಳುವುದು ಸಾಮಾನ್ಯವೇ ಆಗಿದ್ದರೂ ಎಷ್ಟೋ ಹೆಂಗಸರು, ತಮ್ಮ



ಕುಡುಕ ಮತ್ತು ಚಟಗಳ ದಾಸ್ಯದಲ್ಲಿರುವ ಗಂಡಸರು ಅಯ್ಯಪ್ಪನ ಮಾಲೆ ಹಾಕಿದಾಗ ಒಳ್ಳೆಯ ಸೀಸನ್ ಕಂಡುಕೊಳ್ಳುತ್ತಾರೆ. ಕುಡಿದು ಬಂದು ಗಂಡ ಬೈಯುವುದಿಲ್ಲ, ಹೊಡೆಯುವುದಿಲ್ಲ, ಜೊತೆಗೆ ಸಂಪಾದನೆ ಉಳಿತಾಯವಾಗುತ್ತದೆ. ಟಿವಿ, ಫ್ರಿಡ್ಜ್ ರೀತಿಯವು ಮನೆಗೊಂದಷ್ಟು ಸಾಮಾನುಗಳು ಬಂದುಬೀಳುವವು ಎಂಬುದು ಸುಳ್ಳಲ್ಲ.

ಉಪವಾಸ, ಬರಿಗಾಲಿನಲ್ಲಿ ಓಡಾಡುವುದು, ಹಾಸಿಗೆ ಇಲ್ಲದೇ ಮಲಗುವುದು, ಬೆಳಗ್ಗೆಯೇ ತಣ್ಣೀರಿನಲ್ಲಿ ಸ್ನಾನ ಮಾಡುವುದು, ಬರಿಯ ಸಾತ್ವಿಕ ಆಹಾರವನ್ನು ಸೇವಿಸುವುದು; ಇತ್ಯಾದಿಗಳ ಮೂಲಕ ಆಧ್ಯಾತ್ಮಿಕ ಅನುಭವವನ್ನು ಕೆಲವೇ ಅನುಗ್ರಹಿತ ಜನರು ಮಾಡುವುದು ಎಂಬ ಸಿದ್ಧಾಂತವನ್ನು ಸುಳ್ಳಾಗಿ ಸಾಮಾನ್ಯ ಜನರೂ ಕೂಡ ಇಂತಹ ತಾಪಸೀ ಜೀವನ ನಡೆಸತೊಡಗಿದ್ದು ಶೂದ್ರರೂ ತಪಸ್ವಿಗಳಾದರು ಎಂಬ ಸಂತೋಷವಾಗುತ್ತದೆ. ಬ್ರಾಹ್ಮಣರೋ ಅಥವಾ ಚೋಸನ್ ಪೀಪಲ್ ಎಂಬುದೇನೂ ಇಲ್ಲದೇ ತಪಸ್ಸು ಮತ್ತು ಸಾಧನೆ ಎಂಬುದು ಎಲ್ಲರಿಗೂ ಸಾಧ್ಯವಾಗಿದ್ದು ಈ ಅಯ್ಯಪ್ಪನ ವ್ರತದಿಂದ.

ಅಯ್ಯಪ್ಪನ್ ಬೌದ್ಧನೇ?

ಅಯ್ಯಪ್ಪನ ದೇಗುಲವು ಬೌದ್ಧಾಲಯವೆಂಬ ಮಾತೂ ಕೂಡ ಕೇಳಿಬರುತ್ತಿದೆ. ಆದರೆ ಇದು ಒಂದು ಹೈಪ್ರೋಥಿಸಿಸ್ ಹೊರತು,. ಆ ಮಾತಿಗೆ ಅಥವಾ ವಾದಕ್ಕೆ ಸ್ಪಷ್ಟವಾದ ದಾಖಲೆಗಳನ್ನೇನೂ ಒದಗಿಸುವುದಿಲ್ಲ.

ಈ ಮಾತಿಗೆ ಪುಷ್ಟಿ ನೀಡುವಂತಹ ಕೆಲವು ಕುರುಹುಗಳನ್ನಾದರೂ ಕೊಡಬಹುದು.

1. ಕುಡಿಯದೇ ಇರುವುದು, ಕದಿಯದೇ ಇರುವುದು ಇತ್ಯಾದಿ ಸದ್ಗುಣಗಳನ್ನು ವ್ರತದಂತೆ ಪಾಲಿಸುವ ಅಯ್ಯಪ್ಪನ ಭಕ್ತರು ಮಾಡುವಂತಹ ವ್ರತದಲ್ಲಿ ಬೌದ್ಧರ ಪಂಚ ಶೀಲ(ಅಷ್ಟ ಶೀಲ)ಗಳನ್ನು ಗುರುತಿಸಬಹುದು.
2. ಪಂದಳ ರಾಜನೆಂದು ಆ ಪ್ರಾಂತ್ಯದ ಯಾವ ನಾಯಕನೆಂದು ಗುರುತಿಸುತ್ತಾರೋ (ಉದಯನ್) ಅವನು ಬೌದ್ಧನಾಗಿದ್ದ. ಅವರು ಹರಿಹರನಿಂದ ಹುಟ್ಟಿದ್ದು ಎಂಬುದೇನೂ ಗಮನಿಸಿದವರಲ್ಲ. ಆದರೆ, ಕೆಲವೇ ಶತಮಾನಗಳ ಹಿಂದಿನಿಂದ ವಾಸಿಸುತ್ತಿರುವ ಮುಸ್ಲಿಮರ ಸಹಯೋಗವನ್ನು ಅವರು ಒಳಮಾಡಿಕೊಂಡಿದ್ದರು.
3. ಸ್ವಾಮಿಯೇ ಶರಣಂ ಅಯ್ಯಪ್ಪ, ಅಂದರೆ ನಾನು ಸ್ವಾಮಿ ಅಯ್ಯಪ್ಪನಲ್ಲಿ ಆಶ್ರಯವನ್ನು ಹೊಂದುತ್ತೇನೆ ಎಂದು ಹೇಳುವುದು ಬುದ್ಧಂ ಶರಣಂ ಗಚ್ಛಾಮಿ ಎಂಬುದರ ಮಾದರಿಯನ್ನೇ ಅನುಸರಿಸುತ್ತದೆ.
4. ಮಕರಜ್ಯೋತಿ ಎಂದು ಶಬರಿಮಲೆಯ ಕಾಡುಗಳಲ್ಲಿ ತೋರುವ ಜ್ಯೋತಿಯನ್ನು ಸಂಕ್ರಾಂತಿಯಂದು ಪೋತಾಲಕ ಎಂದು ಕರೆಯುತ್ತಾರೆ. ಲ್ಹಾಸಾದಲ್ಲಿರುವ ದಲೈ ಲಾಮರ ವಿಹಾರವನ್ನು ಪೋತಲ ಎಂದು ಕರೆಯುತ್ತಾರೆ.
5. ಹ್ಯೂಯೆನ್ ತ್ಸಾಂಗ್ (ಚೀನೀ ಯಾತ್ರಿಕ) ಉಲ್ಲೇಖಿಸುವ ಪೋತಲದ ಅವಲೋಕಿತೇಶ್ವರದ ಜೊತೆಗೆ, ದಕ್ಷಿಣದ ಸಮುದ್ರದ ಸಮೀಪ ಮೊ ಲೊ ಯ (ಮಲಯ) ಬೆಟ್ಟದಲ್ಲಿ, ಆಳವಾದ ಕಣಿವೆಗಳಿಂದ, ಗಂಧ, ಕರ್ಪೂರವೇ ಮೊದಲಾದ ಮರಗಳಿಂದ ಕೂಡಿದ ಆರಣ್ಯದ ಪೂರ್ವಭಾಗದಲ್ಲಿ ಪು ತ ಲೊ ಕ (ಪೋತಲಕ) ಎಂದು ಉದ್ಧರಿಸುತ್ತಾನೆ.
6. ಶಾಸ್ತ ಎಂಬುದ ಶಬ್ದವು ನೇರ ಬುದ್ಧನ ಹೆಸರೇ ಆಗಿದೆ.
7. ಅಯ್ಯಪ್ಪನ ಬಳಿ ವಜ್ರದಂಡವಿದೆ. ಬಲಗೈಯಲ್ಲಿ ಅಷ್ಟೇನೂ ನೇರವಲ್ಲದ ದಂಡ. ಅದು ಬೋಧಿಸತ್ವನ ಒಂದು ಸಾಂಕೇತಿಕ ಆಯುಧವೆಂದು ಹೇಳುತ್ತಾರೆ.
8. ಆದರೆ ಇವೆಲ್ಲದ್ದಕ್ಕಿಂತ ನನಗೆ ಮುಖ್ಯವೆನಿಸುವುದು ಬುದ್ಧನ ಮೈತ್ರಿಭಾವವು ಅಯ್ಯಪ್ಪನಲ್ಲಿ, ಅಯ್ಯಪ್ಪನ ಕಥೆಗಳಲ್ಲಿ ಕಾಣುವುದು. ಆದು ಹುಲಿಯಂತಹ ವನ್ಯಮೃಗದೊಡನೆ ಸಾಮರಸ್ಯದಿಂದ ನಡೆದುಕೊಳ್ಳುವುದು. ಅವುಗಳನ್ನು ತಮ್ಮ ಪ್ರೇಮದಿಂದ ಮೈತ್ರಿಯನ್ನು ಕಾಣುವುದು.

ಆದರೆ ಇಷ್ಟಕ್ಕೆ ನಾವು ಬುದನ್ನು ಜನರ ಸಂಸ್ಕೃತಿಯನ್ನು ಬುದಮೇಲು ಮಾಡಿ ಅಯ್ಯಪ್ಪನ ಬೌದ್ಧನನ್ನಾಗಿಸಲು ಆಗದು. ಆದರೆ ಇಂತಹ ವಿಷಯಗಳು ಮತ್ತಷ್ಟು ಪುರಾತಂಶಗಳೊಡನೆ ದೊರಕಿದರೆ ಚರಿತ್ರೆಯನ್ನು ಬಿದಕುವ ಕೆಲಸವಾಗ ಬಹುದೇನೋ. ಸತ್ಯ ಹೊರಬರಬಹುದೇನೋ. ■



ಕರಾವಳಿಯ ಕರಟಕ-ದಮನಕ ಭಟ್ಟ-ಶೆಟ್ಟಿಗಳು


ಈಗ ಕರಾವಳಿಯಲ್ಲಿ ಎಲ್ಲಿ ನೋಡಿದರೂ ಅಷ್ಟಬಂಧ ಬ್ರಹ್ಮಕಲಶ ನಾಗಮಂಡಲ ಎಂಬ ಧಾರ್ಮಿಕ ಆಚರಣೆಗಳ ಭರಾಟೆ. ತುಳುನಾಡಿನ ಭೂತ-ದೈವಗಳಿಗೆ ನಿಜವಾಗಿ ಬ್ರಹ್ಮಕಲಶ ಇಲ್ಲವೇ ಇಲ್ಲ. ಆದರೂ ವೈದಿಕರ ಕೈಯಲ್ಲಿ ಈ ನಮ್ಮ ತುಳುವರ ಭೂತಗಳು ಸಿಕ್ಕಿಕೊಂಡ ಮೇಲೆ ಅವುಗಳ ಹೆಸರು ಸಂಸ್ಕೃತೀಕರಣಗೊಂಡಿದ್ದಲ್ಲದೇ ಭೂತಗಳಿಗೆ ವೈದಿಕ ಪದ್ಧತಿಯಲ್ಲಿ ಪೂಜೆ ಹೋಮ ಹವನಗಳೂ ಶುರುವಾದವು. ಭೂತಗಳೆಲ್ಲಾ ಶುದ್ಧ ತುಳುವ ಮಾತ್ರ ಭಾಷೆಯುಳ್ಳ ಆದಿ ದೈವಿಶಕ್ತಿಗಳು. ಇವುಗಳಿಗೆ ತುಳು ಬಿಟ್ಟು ಬೇರೆ ಭಾಷೆ ಗೊತ್ತಿರಲಿಲ್ಲ, ಆದರೂ ಈ ತುಳುವ ದೈವಿಶಕ್ತಿಗಳಿಗೆ ಅರ್ಥವಾಗದ ಸಂಸ್ಕೃತ ಭಾಷೆಯಲ್ಲಿ ಮಂತ್ರ ಹೇಳುವುದು ವ್ಯರ್ಥ ಅಲ್ಲವೇ?

ಮುಸ್ಲಿಂ ಭೂತಗಳಾದ ಬಬ್ಬರ್ಯ ಮತ್ತು ಅಲಿ ಭೂತಗಳಿಗೂ ವೈದಿಕ ವಿಧಿಯಲ್ಲಿ ಬ್ರಹ್ಮಕಲಶ ಮಾಡುವ ವಿಚಿತ್ರಗಳೂ ನಡೆಯುತ್ತಿವೆ. ಆದಿಯಿಂದ ಮಾಂಸಾಹಾರಿಗಳಾಗಿದ್ದ ಭೂತಗಳನ್ನು ಈಗೀಗ ಸಸ್ಯಾಹಾರಿಗಳಾಗಿ ವೈದಿಕರು ಪರಿವರ್ತಿಸುತ್ತಿದ್ದಾರೆ. ಯಾವುದೇ ಸಂಸ್ಕೃತಿಯ ಜ್ಞಾನ ಇಲ್ಲದ ಈಗಿನ ಧನಿಕ ಶೂದ್ರ ಪೀಳಿಗೆಯು ಸ್ವಂತ ಬುದ್ಧಿ ಉಪಯೋಗಿಸದೇ ಪುರೋಹಿತರು ಹೇಳಿದಂತೆ ಕುಣಿಯುತ್ತಿದೆ.

ಇತರ ಜಾತಿಯವರು ಹೇಳುತ್ತಿರುವಂತೆ ತುಳುನಾಡಿನಲ್ಲಿ ಭಟ್ಟ-ಶೆಟ್ಟಿಗಳ ಕಪಿಮುಷ್ಟಿಯಲ್ಲಿ ಸಿಲುಕಿದ ಹಿಂದೂ ಧರ್ಮವು ಸಂಪೂರ್ಣ ವಾಣಿಜ್ಯಕರಣ ಗೊಂಡಿದೆ. ದೇವಸ್ಥಾನಗಳೆಲ್ಲ ಲಾಭಬಡುಕ ವ್ಯಾಪಾರಿ ಕೇಂದ್ರಗಳಾಗಿವೆ. ಯಾವುದೋ ಒಂದು ಪ್ರಕೃತಿ ವೈಶಿಷ್ಟ್ಯವುಳ್ಳ ಸ್ಥಳವನ್ನು ತೋರಿಸಿ ಒಬ್ಬ ಋಷಿ ಇಲ್ಲಿಯೇ ಕುಳಿತು ತಪಸ್ಸು ಮಾಡಿ ಹೂಸು ಬಿಟ್ಟದ್ದರಿಂದ ಈ ಜಾಗ ಭಾರಿ ಪವಿತ್ರವಾಗಿ ಬಿಟ್ಟಿದೆ ಎಂದು ಅಷ್ಟಮಂಗಲ ಪ್ರಶ್ನೆಯಲ್ಲಿ ಕಂಡುಬಂದಿದೆ ಎಂಬ ಹಸಿ ಸುಳ್ಳು ಅರ್ಚಕರು ಹೇಳಿದರೂ ಎಲ್ಲರೂ ನಂಬಿಬಿಡುತ್ತಾರೆ. ಮುಂಬೈಯಲ್ಲಿ ಡ್ಯಾನ್ಸ್ ಬಾರ್ ಎಂಬ ವೇಶ್ಯಾವಾಟಿಕೆ ನಡೆಸುವ ಬಂಟರು ತಮ್ಮ ಕೋಟಿ-ಕೋಟಿ ಅಪವಿತ್ರ ಗಳಿಕೆಯ ಹಣ ಭಟ್ಟರ ಕಾಲಿಗೆ ಸುರಿದು ಕ್ಷೇತ್ರ ನಿರ್ಮಿಸುತ್ತಾರೆ. ರಾಕ್ಷಸ-ಅಸುರ-ದಾನವ ಎಂಬ ಜನಾಂಗವೇ ಈ ಜಗತ್ತಿನಲ್ಲಿ ಎಂದೂ ಇರಲಿಲ್ಲ, ಹಾಗಿರುವಾಗ ಅಸ್ತಿತ್ವದಲ್ಲೇ ಇರದ ರಾಕ್ಷಸನನ್ನು ಕೊಲ್ಲಲು ದುರ್ಗಾದೇವಿಯೇಕೆ ಕೀಟ ರೂಪದಲ್ಲಿ ಅವತರಿಸುತ್ತಾಳೆ ಎಂದು ಕೇಳುವಷ್ಟು ಕನಿಷ್ಠ ತರ್ಕಶಕ್ತಿಯೂ ಶೂದ್ರರಿಗೆ ಇಲ್ಲ.

ಈ ಧಾರ್ಮಿಕ ಸೀಜನ್ನಿನಲ್ಲಿ ಪತ್ರಿಕೆಗಳಲ್ಲಿ ದಿನಾಲೂ ರಾರಾಜಿಸುವ ಬ್ರಹ್ಮಕಲಶಗಳ ಜಾಹೀರಾತು ಓದುವಾಗ ಎಲ್ಲದರಲ್ಲೂ ಒಂದು ಸಾಮಾನ್ಯ ಸಂಗತಿ ಗಮನಿಸುತ್ತಿದ್ದೇನೆ. ಅವೇನೆಂದರೆ ವಟು-ಆರಾಧನೆ, ಬ್ರಾಹ್ಮಣ-ಆರಾಧನೆ, ಕನ್ನಿಕಾ-ಆರಾಧನೆ, ಸುಮಂಗಲಿ-ಆರಾಧನೆ ಹಾಗೂ ಬ್ರಾಹ್ಮಣ ಭೋಜನ ಎಂಬ ಕಾರ್ಯಕ್ರಮಗಳ ಪಟ್ಟಿ. ವಟು-ಕನ್ನಿಕಾ-ಸುಮಂಗಲಿ ಆರಾಧನೆ ಎಂದರೆ ಬ್ರಾಹ್ಮಣ ಹುಡುಗ-ಹುಡುಗಿ- ಮುತ್ತೈದೆಯರ ಪೂಜೆ ಮತ್ತು ಕಾಣಿಕೆ ತಾನೇ? (ಪೂಜೆಗಿಂತ ಕಾಣಿಕೆಗೆ ಹೆಚ್ಚು ಮಹತ್ವ). ಬ್ರಾಹ್ಮಣ ಆರಾಧನೆ ಎಂದರೆ ಪುರೋಹಿತರ ಕುಟುಂಬದ ಹಿರಿಯ ವ್ಯಕ್ತಿಗಳ ಪಾದಪೂಜೆ ಮತ್ತು ಕಾಣಿಕೆ ಅಲ್ಲವೇ? ಪವಿತ್ರ ದೇವರ ಪೂಜೆಯ ನಡುವೆ ಯಃಕಶ್ಚಿತ್ ಮಾನವರಿಗೆ ಆರಾಧನೆ ಯಾಕೆ ಮತ್ತು ಇದು ಯಾವಾಗಿನಿಂದ ಶುರುವಾಯಿತು? ದೇವರಿಗೆ ನಿಜವಾಗಿ ಪ್ರಿಯರಾದ ಕೆಳ ಜಾತಿಯ ಬಡವರಿಗೆ ದಾನ ಕಾಣಿಕೆ ಯಾಕಿಲ್ಲ?

ಕೊನೆಗೆ ಬ್ರಾಹ್ಮಣ ಭೋಜನ ಎಂದರೆ ಬ್ರಾಹ್ಮಣ ಹೆಂಗಸು ಗಂಡಸು ಮತ್ತು ಮಕ್ಕಳಿಗೆ ಪ್ರತ್ಯೇಕ ಪಂಕ್ತಿಯಲ್ಲಿ ಇತರರಿಗಿಂತ ಒಂದು ಗಂಟೆ ಮೊದಲೇ ಊಟ ಹಾಕುವುದು. ಇದು ಪಂಕ್ತಿ ಭೇದದ ಇನ್ನೊಂದು ರೂಪ ಅಷ್ಟೇ. ತುಳುನಾಡಿನ ಹೆಚ್ಚಿನ ಎಲ್ಲ ದೇವಸ್ಥಾನಗಳ ಮೊಕ್ತೇಸರರು ಬಂಟರಾದುದರಿಂದ ಇದೆಲ್ಲ ನಡೆಯುವುದು ಬಂಟರ ಮೇಲ್ವಿಚಾರಣೆಯಲ್ಲಿಯೇ. ಅಂದರೆ ಪಂಕ್ತಿ ಭೇದಕ್ಕೆ ಪ್ರೋತ್ಸಾಹ ಹಾಗೂ ರಕ್ಷಣೆ ಕೊಡುತ್ತಿರುವವರು ಬಂಟರೇ ಎಂದಾಯಿತಲ್ಲವೇ. ಸಂಜೆ ಮೂರು ಗಂಟೆಯಾದರೂ ದೇವಸ್ಥಾನದ ಪ್ರಸಾದ ಊಟ ಸಿಗದೇ ಅಲ್ಲಿ ಹಸಿದು ಮುಖ ಒಣಗಿಸಿ ಕಾದು ಕುಳಿತಿರುವ ಬಡ ಕೊರಗರ ಮಕ್ಕಳಿಗೆ ಮೊದಲು ಊಟ ಹಾಕಿದರೆ ದೇವರು ನಿಜವಾಗಿ ಒಲಿಯುತ್ತಾನೆ ಎಂದು ಪ್ರಜ್ಞಾವಂತರು ಹೇಳಿದರೆ ಅದನ್ನು ಅರ್ಥಮಾಡಿಕೊಳ್ಳುವಷ್ಟು ವಿವೇಕ ಯಾವುದೇ ದೇವಸ್ಥಾನದ ಬಂಟ ಮೊಕ್ತೇಸರರಿಗೆ ಇಲ್ಲ. ಒಟ್ಟಾರೆ ತುಳುನಾಡಿನಲ್ಲಿ ಭಟ್ಟ-ಶೆಟ್ಟಿಗಳೆಂಬ ಕರಟಕ-ದಮನಕರ ಮುಷ್ಟಿಯಲ್ಲಿ



ಸಿಲುಕಿದ ಹಿಂದೂ ಧರ್ಮ ಎಕ್ಕುಟ್ಟಿ ಹೋಗುತ್ತಿದೆ ಎಂದು ಇತರ ಜಾತಿಯವರು ಹೇಳುತ್ತಿರುವುದು ಶೆಟ್ಟಿಯಾದ ನನಗೂ ನಿಜ ಅನಿಸುತ್ತಿದೆ.

ಕೇವಲ 130 ವರ್ಷಗಳ ಹಿಂದೆ ಕಟೀಲಿನಲ್ಲಿ ಪಾಳು ಬಿದ್ದಿದ್ದ ಜೈನರ ಬಸದಿಯನ್ನು ಅಲ್ಲಿಯ ಎರಡು ಬಂಟ ಜಮೀನ್ದಾರರು ವಶಪಡಿಸಿಕೊಂಡು ದುರ್ಗಾ ದೇಗುಲವಾಗಿ ಪರಿವರ್ತಿಸಿ ದೂರದ ಕುಕ್ಕೆ ಸುಬ್ರಹ್ಮಣ್ಯ ಕಡೆಯಿಂದ ವೈಷ್ಣವ ಅರ್ಚಕ ಕುಟುಂಬವನ್ನು ತಂದು ಇಲ್ಲಿ ನೆಲೆಗೊಳಿಸಿದ ಬಗ್ಗೆ ಐತಿಹ್ಯ ಇದೆ. (ನಂತರ ಇದೇ ಅರ್ಚಕರು ಬಂಟರನ್ನು ಆಡಳಿತದಿಂದ ನಯವಾಗಿ ಹೊರದೂಡಿ ದೇವಳವನ್ನು ತಾವೇ ಕೈವಶ ಮಾಡಿಕೊಂಡದ್ದು ವಿಪರ್ಯಾಸ.) ಕಟೀಲುದೇವಿಯ ಮೂರ್ತಿ ಕುಳಿತಿರುವ ಭಂಗಿ ನೋಡಿದರೇನೇ ಅದು ದುರ್ಗೆಯಲ್ಲ ಜೈನರ ಪದ್ಮಾವತಿ ಎಂದು ಸ್ಪಷ್ಟವಾಗುತ್ತದೆ. ಆಗ ಜೈನ ಬಸದಿಯನ್ನು ಹಿಂದೂ ದೇವಳವಾಗಿ ಪರಿವರ್ತಿಸುವುದನ್ನು ವಿರೋಧಿಸಿದ ಜೈನ ಗೃಹಸ್ಥ ಅರುಣೇಶ್ ಎಂಬವನನ್ನೇ ನಂತರ ಅರುಣಾಸುರ ರಾಕ್ಷಸ ಎಂದು ಕರೆದು ಶಿಮಂತೂರು ನಾರಾಯಣ ಶೆಟ್ಟರು ಕಾಲ್ಪನಿಕ ಯಕ್ಷಗಾನ ಪ್ರಸಂಗ ಬರೆದು ಕೃತಾರ್ಥರಾದರು. ವಿಪರೀತವೆಂದರೆ ಪದ್ಮಾವತಿ (ದುರ್ಗಾದೇವಿಯ) ಮೂರ್ತಿಯ ಮೇಲೆಯೂ ಈಗಿನ ಒಬ್ಬ ಹಿಂದೂ ಅರ್ಚಕ ಕಾಪಿರೈಟ್ ಹೊಂದಿದ್ದಾನೆ! ದೇವರ ಮೇಲೆಯೇ ಮನುಷ್ಯನ ಕಾಪಿರೈಟ್!? ಇಂತಹ ಘೋರ ಅಪವಿತ್ರ ಸಂಗತಿ ತುಳುನಾಡು ಬಿಟ್ಟು ಜಗತ್ತಿನಲ್ಲಿ ಬೇರೆಲ್ಲಿಯೂ ಇಲ್ಲ, ಇದು ಹಿಂದೂ ಧರ್ಮಕ್ಕೆ ಭಟ್ಟ-ಶೆಟ್ಟರಗಳ ಕೊಡುಗೆ.


ಉಡುಪಿಯ ಹತ್ತಿರ ಪಡುಬಿದ್ರಿ ಎಂಬಲ್ಲಿ ಮೊಗವೀರ ಮತ್ತು ಬಿಲ್ಲವ ಹಿಂದುಳಿದ ವರ್ಗದವರು ಪೂಜಿಸುತ್ತಿದ್ದ ಉಲ್ಲಾಯ ಎಂಬ ದೈವವನ್ನು ಖಡ್ಗೇಶ್ವರಿ ಎಂದು ಹೆಸರು ಬದಲಿಸಿ ವೈದಿಕಕರಣಗೊಳಿಸಿ ಭಟ್ಟ-ಶೆಟ್ಟಿಗಳು ಬಿಲ್ಲವ ಮೊಗವೀರರನ್ನು ಹೊರದೂಡಿದ್ದಾರೆ. ಉಡುಪಿ ತಾಲೂಕಿನಲ್ಲಿ ಒಂದೆಡೆ ಹಿಂದಿನ ಕಾಲದಲ್ಲಿ ವೀರಮರಣ ಹೊಂದಿದ್ದ ಯೋಧನ ವಿಧವೆ ಸುಟ್ಟು ಸತ್ತ ಸ್ಮಶಾನದ ಮಾಸ್ತಿಕಲ್ಲನ್ನೂ ಸತ್ಯದೇವತೆ ಎಂದು ಹೆಸರಿಸಿ ಆ ಗೋರಿಯ ಕಲ್ಲನ್ನು ಈಗ ದೊಡ್ಡ ಕ್ಷೇತ್ರವನ್ನಾಗಿ ಪರಿವರ್ತಿಸಿದ್ದಾರೆ. ಭಟ್ಟರು ಎಲ್ಲದರ ಅರ್ಥ ಗೊತ್ತಿದ್ದೇ ಜೀವನೋಪಾಯಕ್ಕಾಗಿ ಕುಯುಕ್ತಿ ಮಾಡಿದರೆ, ಭಂಡ ಶೆಟ್ಟಿಗಳದ್ದು ಮಾತ್ರ ಅರ್ಥವೇ ಗೊತ್ತಿಲ್ಲದೆ ಮಾಡುವ ಕುರುಡು ಅನುಕರಣೆ ಅಷ್ಟೇ. ಕರಾವಳಿಯ ಸಹಬಾಳ್ವೆಗೆ ಈ ಕರಟಕ-ದಮನಕರೇ ದೊಡ್ಡ ಕಂಟಕ.

- ವಿ. ಶಿವರಾಮ್ ಶೆಟ್ಟಿ, ಮುಲ್ಕಿ

ಅನುಪಮಾ ಶೆಣೈ ಮತ್ತು ಆರೆಸ್ಸೆಸ್

ಬಳ್ಳಾರಿ ಜಿಲ್ಲೆಯಲ್ಲಿ ಡಿವೈಎಸ್‌ಪಿ ಅನುಪಮಾ ಶೆಣೈ ಅವರನ್ನು ಅವಮಾನ ಮಾಡಿ ದುರ್ವರ್ತನೆ ಹಾಗೂ ಅಹಂಕಾರ ತೋರಿದ ಸಚಿವ ಪರಮೇಶ್ವರ ನಾಯ್ಕ್ ಅವರನ್ನು ಸಚಿವ ಸಂಪುಟದಿಂದ ಕೈಬಿಡಬೇಕೆಂದು ಕರಾವಳಿಯ ಗೌಡ ಸಾರಸ್ವತ ಬ್ರಾಹ್ಮಣ (ಜಿಎಸ್‌ಬಿ) ಸಮಾಜವಿಡಿ ಸರಕಾರವನ್ನು ಒತ್ತಾಯಿಸುತ್ತಿದೆ. ಪರಮೇಶ್ವರ ನಾಯ್ಕ್ ಮಾಡಿದ್ದು ದೊಡ್ಡ ತಪ್ಪು ಎಂದು ಎಲ್ಲರೂ ಒಪ್ಪುತ್ತಾರೆ. ಅನುಪಮಾ ಶೆಣೈ ತುಂಬಾ ಪ್ರಾಮಾಣಿಕ ಹಾಗೂ ದಕ್ಷ ಅಧಿಕಾರಿ ಎಂಬುದೂ ನಿಜ. ಆದರೆ ಒಂದು ವೇಳೆ ಯಡಿಯೂರಪ್ಪ, ಸದಾನಂದ ಗೌಡರು ಅಥವಾ ಕಲ್ಲಡ್ಕ ಭಟ್ಟ ಅನುಪಮಾರಿಗೆ ಫೋನ್ ಮಾಡಿದ್ದರೆ ಅದನ್ನು ನಿರ್ಲಕ್ಷಿಸಿ ಅದಕ್ಕೆ ಮರು ಉತ್ತರಿಸಲು ಅವರು ಇಷ್ಟು ವಿಳಂಬ ಮಾಡುತ್ತಿದ್ದರೆ? ಎಂದು ಅನೇಕರು ಕೇಳುತ್ತಿದ್ದಾರೆ.

ಮೂಲತಃ ಮಂಗಳೂರು-ಉಡುಪಿಯ ಜಿಲ್ಲೆಗಳ ಕೊಂಕಣಿ ಸಾರಸ್ವತ ಬ್ರಾಹ್ಮಣರಲ್ಲಿ ನೂರಕ್ಕೆ ನೂರು ಕುಟುಂಬಗಳು ಆರೆಸ್ಸೆಸ್ ಸದಸ್ಯರಾಗಿರುವುದು ನಿಜ. ಅನುಪಮ ಶೆಣೈ ಉಡುಪಿ ಜಿಲ್ಲೆಯ ಪಡುಬಿದ್ರಿ-ಉಚ್ಚಿಲ ಗ್ರಾಮದ ಕೆಳ ಮಧ್ಯಮ ವರ್ಗದಿಂದ ಬಂದು ಅತಿ ಕಷ್ಟಪಟ್ಟು ಕಲಿತು ಮೇಲೆ ಬಂದಿದ್ದು ನಿಜವಾದರೂ ಇತರ ಸಾರಸ್ವತ ಬ್ರಾಹ್ಮಣರಂತೆ ಅವರ ಸಂಪೂರ್ಣ ಕುಟುಂಬ ಆರೆಸ್ಸೆಸ್ ಸದಸ್ಯರಾಗಿರುವುದು ನಿಜ. ನಾನು ಬ್ಯಾಂಕಿನ ಉದ್ಯೋಗದಲ್ಲಿರುವಾಗ ಕಂಡಿದ್ದೇನೆಂದರೆ ಬ್ಯಾಂಕಿನ



ಶಾಖೆಯಲ್ಲಿ ಮೇಲ್ಜಾತಿಯವರು ಮ್ಯಾನೇಜರ್ ಆಗಿದ್ದ... ಎಲ್ಲಾ ಮೇಲ್ಜಾತಿ ಗುಮಾಸ್ತರು ಅವರ ಆದೇಶಗಳನ್ನು... ಶಿರಸಾವಹಿಸಿ ಮಾಡುತ್ತಿದ್ದರು. ಆದರೆ ದಲಿತ ಅಥವಾ... ತೀರಾ ಹಿಂದುಳಿದ ವರ್ಗದ ವ್ಯಕ್ತಿಯೊಬ್ಬ ಮ್ಯಾನೇಜರ... ಆಗಿ ಅದೇ ಬ್ಯಾಂಕ್ ಶಾಖೆಗೆ ಬಂದರೆ ಆತನ ಆದೇಶಗಳನ್ನು... ಗುಮಾಸ್ತರು ಮಾತ್ರವಲ್ಲ ಚಪರಾಸಿಗಳೂ ಹಗುರವಾ... ತೆಗೆದುಕೊಳ್ಳುತ್ತಿದ್ದರು ಅಥವಾ ನಿರ್ಲಕ್ಷಿಸುತ್ತಿದ್ದರು. ಅಷ್ಟೇ... ಅಲ್ಲದೆ ಆತನನ್ನು ಹಿಂದಿನಿಂದ ಏಕವಚನದಲ್ಲಿ ಸಂಬೋಧಿಸು... ತ್ತಿದ್ದರು. ಬ್ಯಾಂಕಿನವರಲ್ಲಿ ಇರುವ ಈ ಮನುವಾದಿ ಮನಸ್ಥಿ... ನಮ್ಮ ರಾಜ್ಯ ಸರಕಾರದ ನೌಕರರಲ್ಲಿ ಹಾಗೂ ಅನುಪಮಾರ... ಇಲ್ಲವೆಂದು ಹೇಳಲು ಸಾಧ್ಯವೇ?

- ಜೆ. ರವಿಕಿರಣ್ ರೈ, ಮಂಗಳೂರು

ಪೇಜಾವರರಿಗೆ ತಪ್ಪಿದ ಪದ್ಮ ಪ್ರಶಸ್ತಿ

ಜನವರಿ 17ಕ್ಕೆ ಭಾರತದೆಲ್ಲೆಡೆ ಸಣ್ಣ ಮಕ್ಕಳಿಗೆ ಪಲ್ಸ್... ಪೋಲಿಯೋ ಡ್ರಾಪ್ ಕೊಡುವ ದಿನವಾಗಿತ್ತು. ಉಡುಪಿ... ಜಿಲ್ಲೆಯಲ್ಲಿಯೂ ಗ್ರಾಮಾಂತರದಲ್ಲಿ ಎಲ್ಲೆಡೆ ಮಕ್ಕಳಿಗೆ... ಪೋಲಿಯೋ ಮದ್ದು ಕೊಡಲಾಯಿತು. ಆದರೆ ಕೇವಲ... ಉಡುಪಿ ನಗರದಲ್ಲಿ ಮಾತ್ರ ಪೇಜಾವರರ... ಪರ್ಯಾಯದಿಂದಾಗಿ ಅನಧಿಕೃತ ಕರ್ಫ್ಯೂ ಜಾರಿಯಾ... ವಾಹನ ಸಂಚಾರ ಪೂರ್ಣ ನಿಷೇಧವಿದ್ದುದರಿಂದ ಅನೇಕರಿ... ತಮ್ಮ ಮಕ್ಕಳನ್ನು ಪೋಲಿಯೋ ಡ್ರಾಪ್ಸ್ ಕೊಡುವ ಕೇಂದ್ರ... ಕರೆದುಕೊಂಡು ಹೋಗುವುದಕ್ಕೆ ಆಗಲಿಲ್ಲ. ಯಾವುದೋ... ತಥಾಕಥಿತ ನಡೆದಾಡುವ ದೇವರ ಮುದಿ ಭ್ರಾಂತಿ ಮತ್ತು... ಸ್ವ-ವೈಭವದ ತೆವಲಿಗಾಗಿ ಇನ್ನೂ ಜಗತ್ತನ್ನು ಸರಿಯಾ... ನೋಡಿರದ ಸಾಮಾನ್ಯ ಜನರ ಮಕ್ಕಳು ಪೋಲಿಯೋ... ಬಲಿಯಾಗಬೇಕೇ? ಉದುರಲು ತಯಾರಾಗಿರು... ಹಣ್ಣೆಲೆಗಾಗಿ ಹೊಸ ಚಿಗುರನ್ನು ಚಿವುಟಿ ಹಾಕಬೇಕೆ?

ಮುಂದಿನ ವರ್ಷ ಪೇಜಾವರರಿಗೆ ಪದ್ಮವಿಭೂಷಣ... ಸಿಗುವುದು ಗ್ಯಾರಂಟಿ ಎನ್ನಲಾಗಿದೆ. ಈ ವರ್ಷವೇ ಅವರಿ... ಪದ್ಮಭೂಷಣ ಕೊಡುವ ಪ್ರಸ್ತಾಪ ಇತ್ತಂತೆ. ಆದರೆ ಈ... ವರ್ಷ ಕರ್ನಾಟಕದ್ದೇ ಎರಡೆರಡು ಧಾರ್ಮಿಕ ವ್ಯಕ್ತಿಗಳಾದ... ರವಿಶಂಕರ ಗುರೂಜಿ ಮತ್ತು ಹರೇಕೃಷ್ಣದ ಮಧುಪಂಡಿತ್... ದಾಸ್ ಇವರಿಬ್ಬರಿಗೂ "ಹಿಂದೂತ್ವ ಪ್ರಚಾರದ ಕೋಟಾದಲ್ಲಿ... ಪದ್ಮ ಪ್ರಶಸ್ತಿ ಕೊಟ್ಟಿದ್ದರಿಂದ ಪೇಜಾವರರಿಗೆ ಇದು... ತಪ್ಪಿಹೋಯಿತಂತೆ. ಇದನ್ನು ಪೇಜಾವರರಿಗೆ ತಿಳಿಸಿ ಅವರ... ಸಮಾಧಾನ ಮಾಡಲು ಸ್ವತಃ ರವಿಶಂಕರ ಗುರೂಜಿ ಮೊ... ಶನಿವಾರ ಉಡುಪಿಗೆ ಬಂದು ಪೇಜಾವರರನ್ನು ಸನ್ಮಾನಿಸು... ನೆಪದಲ್ಲಿ ಮುಖತಃ ಭೇಟಿಯಾಗಿದ್ದಂತೆ. ಅದೇನೇ ಇರ... ಬಡ ಶಾಲಾಮಕ್ಕಳ ಮಧ್ಯಾಹ್ನದ ಬಿಸಿಯೂಟದ ಆಡಿಯ... ಕೋಟ್ಯಾಂತರ ರೂಪಾಯಿಯ ಲಾಭದಾಯಕ ಕೇಟರಿಂಗ್... ವ್ಯಾಪಾರ ಮಾಡುವ ಇಸ್ಕಾನಿನ ಮಧುಪಂಡಿತ್ ಹಾಗೂ... ಸುದರ್ಶನ ಕ್ರಿಯೆ ಕಲಿಸುವ ನೆಪದಲ್ಲಿ ಒಬ್ಬೊಬ್ಬ ಅಭ್ಯರ್ಥಿ...


ದರಿದ್ರದಲ್ಲಿ ನಾವು ಗುಗ್ಗುರುಗಳಾಗಿದ್ದೇವೆ

"ಭಾರತ ವಿಶ್ವಗುರು ಆಗುತ್ತಿದೆ, ಇಡೀ ಜಗತ್ತೇ ಭಾರತದತ್ತ ಬೆರಗುಗಣ್ಣಿಂದ ನೋಡುತ್ತಿದೆ, ಜಗತ್ತಿನವರೆಲ್ಲಾ ಭಾರತದ ಸನಾತನ ಸಂಸ್ಕೃತಿಯಿಂದ ಆಕರ್ಷಿತರಾಗಿದ್ದಾರೆ. ಜಗತ್ತಿನ ಎಲ್ಲಾ ಜ್ಞಾನ-ವಿಜ್ಞಾನಗಳಿಗೆ ಭಾರತವೇ ಮೂಲ!" -ಈ ಎಲ್ಲಾ ಉದ್ಗಾರವಾಚಕಗಳು ಇತ್ತೀಚಿನ ಒಂದೂವರೆ ವರ್ಷದಿಂದ ವಿಪರೀತವಾಗಿ ಕೇಳಿಬರುತ್ತಿವೆ. ಈ ಉದ್ಘೋಷಗಳ ಮೂಲ ಎಲ್ಲಿದೆ ಗೊತ್ತೇ? ಹೆಚ್ಚಿನ ಜನರಿಗೆ ಗೊತ್ತಿಲ್ಲದ ವಿಷಯವೆಂದರೆ ಈ ಎಲ್ಲಾ ಸ್ವ-ಪ್ರಶಂಸೆಯ ವಾಕ್ಯಗಳನ್ನು ಹೆಣೆದು ಎಲ್ಲಾ ಭಾಷೆಗೆ ಅನುವಾದಿಸಿ ಭಾರತದೆಲ್ಲೆಡೆಯ ತಮ್ಮ ಶಾಖೆಗಳಿಗೆ ಕಳುಹಿಸಿ ಕೊಟ್ಟು ಇವೇ ವಾಕ್ಯಗಳನ್ನು ಎಲ್ಲಾ ಸಭೆಸಮಾರಂಭಗಳಲ್ಲಿ ಭಾಷಣಕಾರರು ತಮ್ಮ ತಮ್ಮ ಭಾಷೆಗಳಲ್ಲಿ ಅಡಿಗಡಿಗೆ ಉರು ಹೊಡೆಯುವಂತೆ ನೋಡಿಕೊಳ್ಳಬೇಕು ಎಂಬುದಾಗಿ ಆದೇಶ ಕೊಟ್ಟಿದ್ದು ಆರೆಸ್ಸೆಸ್‌ನ ನಾಗಪುರ ಹೆಡ್ ಆಫೀಸ್!

ಭಾರತ ಈ ಕೆಳಗಿನ ವಿಷಯಗಳಲ್ಲಿ ಮಾತ್ರ ವಿಶ್ವಗುರು ಆಗಿರಲು ಸಾಧ್ಯ ಎಂಬುದು ಹೆಚ್ಚಿನ ಜನರ ಅಭಿಪ್ರಾಯ. ಜಗತ್ತಿನಲ್ಲಿ ಎಲ್ಲಿಯೂ ಇಲ್ಲದ ಹೀನ ಜಾತಿ ವ್ಯವಸ್ಥೆಯಲ್ಲಿ ನಾವು ವಿಶ್ವದ ಏಕಮೇವ ಗುರು ನಿಜ, ಅತೀ ಕೀಳುಜಾತಿ ಶೋಷಣೆಯಲ್ಲಿ ಭಾರತವೇ ವಿಶ್ವಗುರು ನಿಜ. ಕೋಮುವಾದದಲ್ಲಿ ನಾವು ವಿಶ್ವಗುರು, ರೈತರ ಶೋಷಣೆಯಲ್ಲಿ ನಾವು ವಿಶ್ವಗುರು. ಮಹಿಳೆಯರ ಮೇಲಿನ ಅತ್ಯಾಚಾರ ಹಾಗೂ ಸ್ತ್ರೀ-ಶೋಷಣೆಯಲ್ಲಿ ನಾವು ವಿಶ್ವಗುರು, ಹೆಣ್ಣು ಭ್ರೂಣಹತ್ಯೆಯಲ್ಲೂ ನಾವೇ ಇಡೀ ಭೂಮಂಡಲಕ್ಕೆ ಗುರು. ಚಿತ್ರವಿಚಿತ್ರ ದೇವರನ್ನು ನೂರಾರು ವಿಚಿತ್ರ ರೀತಿಯಲ್ಲಿ ಪೂಜಿಸುವುದರಲ್ಲಿ ನಾವು ವಿಶ್ವಗುರು. ಜನರ ಆಹಾರ ಪದ್ಧತಿಯ ವಿಷಯದಲ್ಲಿ ವೈಷಮ್ಯ ಹರಡುವುದರಲ್ಲಿ ನಾವು ವಿಶ್ವದ ಏಕೈಕ "ಗುಗ್ಗುರು" ಎಂಬುದೂ ನಿಜ. ಲೋಕ-ಕಲ್ಯಾಣ ಲೋಕ-ಶಾಂತಿಗಾಗಿ ಪೂಜೆ ಹೋಮ ನಾಗಮಂಡಲ ಎಂದು ನಾಟಕವಾಡಿ ಜನರನ್ನು ಮಂಗ ಮಾಡಿ ಕೋಟಿಗಟ್ಟಲೆ ಹಣ ಸುಲಿಯುವುದರಲ್ಲೂ ನಾವು ವಿಶ್ವಗುರು ನಿಜ. ನೂರಾರು ಹಬ್ಬಹರಿದಿನಗಳ ಹೆಸರಲ್ಲಿ ವರ್ಷಕ್ಕೆ ನೂರೈವತ್ತು ದಿನ ಕೆಲಸಗಳ್ಳರಾಗಿ ಮೆರೆಯುವುದರಲ್ಲೂ ನಾವು ವಿಶ್ವಗುರು. ಘೋರ ಮೂಢನಂಬಿಕೆಗಳ ವಿಷಯದಲ್ಲಂತೂ ನಮ್ಮ ಭಾರತೀಯ ಮಹಿಳೆಯರೇ ವಿಶ್ವಗುರುಅಮ್ಮಗಳು. ಭ್ರಷ್ಟಾಚಾರದಲ್ಲಂತೂ ನಮಗೆ ನಾವೇ ಸಾಟಿಯಾದ ವಿಶ್ವ ಗುರುಗುರು. ಕಾವಿ ಉಟ್ಟ ಮುದಿಯರಿಗೆಲ್ಲಾ ಜಗದ್ಗುರು ಎಂದು ಕರೆಯುತ್ತಾ ಸ್ವಾಮೀಜಿ-ಸನ್ಯಾಸಿಗಳ ವೈಭವೀಕರಣ ಹಾಗೂ ಒಣ ಆಡಂಬರದಲ್ಲೂ ನಾವು ವಿಶ್ವಗುರುಗಳಿಗೇ ಜಗದ್ಗುರುಗಳು. ಹಾಗಾಗಿ ನಾವು ಸನಾತನಕಾಲದಿಂದ ವಿಶ್ವ ಗುಗ್ಗುರು ಆಗಿದ್ದೇವೆ ಎಂಬುದಂತೂ ಅಪ್ಪಟ ಸತ್ಯ.

ಇತ್ತೀಚೆಗೆ ನಡೆದ ಒಂದು ಸಮೀಕ್ಷೆಯಲ್ಲಿ ಭಾರತದಲ್ಲಿ ಸುಮಾರು ಐದು ಕೋಟಿ ಜನ ಸೋಮಾರಿಗಳು ಯಾವೊಂದು ಕೆಲಸ ಮಾಡದೇ ಕೇವಲ ದೇವರು-ಧರ್ಮದ ಹೆಸರಲ್ಲಿ ಹೊಟ್ಟೆ ಹೊರೆದುಕೊಳ್ಳುತ್ತಿದ್ದಾರಂತೆ (ಇದರಲ್ಲಿ ಅರ್ಚಕರು, ಅವರ ಅವಲಂಬಿತರು, ಜತೆಗೆ ಸ್ವಾಮೀಜಿಗಳು, ಬಾಬಾ-ಅಮ್ಮ-ಗುರೂಜಿಗಳು, ಜ್ಯೋತಿಷಿ, ವಾಸ್ತು ಪಂಡಿತ, ದೇವಮಾನವರು ಮತ್ತು ಅವರ ಶಿಷ್ಯರೂ ಸೇರಿದ್ದಾರೆ). ಜಗತ್ತಿನಲ್ಲಿ ಬೇರೆಲ್ಲಿಯೂ ಇಷ್ಟೊಂದು ಬೃಹತ್ ಸಂಖ್ಯೆಯ... ಜನರು ಕೆಲಸ ಮಾಡದೇ ಅನುತ್ಪಾದಕವಾಗಿ ಕುಳಿತು... ತಿನ್ನುವ ಸಮಾಜ ಸೃಷ್ಟಿಯಾಗಿಲ್ಲ, ದಿನಾಲೂ ಏನಾದರೊಂದು... ನೆಪದಲ್ಲಿ ಈ ಐದು ಕೋಟಿ ಆಲಸಿಗಳು ಭಾರತ ವಿಶ್ವಗುರು... ಆಗಿದೆ, ಜಗತ್ತೆಲ್ಲಾ ಭಾರತದತ್ತ ಬೆರಗುಗಣ್ಣಿಂದ ನೋಡುತ್ತಿದೆ... ಎಂದು ಬಡಬಡಿಸುತ್ತಾ ಇರುತ್ತಾರೆ. ಸೋಮಾರಿಗಳು ಹೀಗೆ... ಬಡಾಯಿ ಕೊಚ್ಚಿದ ಮಾತ್ರಕ್ಕೆ ಯಾರಾದರೂ ನಿಜವಾಗಿ... ವಿಶ್ವಗುರು ಆಗಲು ಸಾಧ್ಯವೇ? ನಡುಬೀದಿಯಲ್ಲಿ... ಬೆತ್ತಲೆಯಾಗಿ ನಿಂತಿರುವ ಮೂರ್ಖನನ್ನು ದಾರಿ ಹೋಕರು... ಪರಿಹಾಸ್ಯದಿಂದ ನೋಡಿದರೆ ಅದಕ್ಕೆ ಬೆರಗು ಕಣ್ಣಿಂದ... ಹೊಗಳಿಕೆಯಿಂದ ನೋಡುವುದು ಎನ್ನಲಾದೀತೇ?

ಮೊನ್ನೆ ಪೇಜಾವರರ ಪರ್ಯಾಯಕ್ಕೆ ಬಂದಿದ್ದವರ... ಪಟ್ಟಿ ನೋಡಿದರೆ ಅದು ಒಬ್ಬ ಸರ್ವಸಂಗ ಪರಿತ್ಯಾಗಿ... ಸನ್ಯಾಸಿಯ ಕಾರ್ಯಕ್ರಮವಾಗಿರದೇ ಬಿಜೆಪಿ ಪಕ್ಷದ... ಮುಖಂಡನ ಮದುವೆ ಸಮಾರಂಭದಂತೆ ಇತ್ತು. ಈ... ಸಮಾರಂಭಕ್ಕೆ ಇತರ ಬಿಜೆಪಿ ರಾಜ್ಯಗಳ ಮುಖ್ಯಮಂತ್ರಿಗಳಾದ... ರಾಜಸ್ಥಾನದ ವಸುಂಧರ ರಾಜೆ, ಗುಜರಾತಿನ ಆನಂದಿಬೆನ್... ಮಹಾರಾಷ್ಟ್ರದ ಫಡ್ನವಿಸ್, ಮಧ್ಯ ಪ್ರದೇಶದ ಚೌಹಾನ್... ಜಾರ್ಖಂಡಿನ ರಘುಬೀರ್‌ದಾಸ್, ಛತ್ತೀಸಗಡದ ರಮಣ್... ಸಿಂಗ್, ಗೋವಾದ ಪಾರ್ಸೆಕರ್ ಇವರನ್ನೆಲ್ಲಾ ಪೇಜಾವರರು... ವೈಯಕ್ತಿಕವಾಗಿ ಆಹ್ವಾನಿಸಿದ್ದರು. ತಾನು ಕರೆದಕೂಡಲೇ... ಇವರೆಲ್ಲಾ ಓಡೋಡಿಬರುತ್ತಾರೆ ಎಂದು ಪೇಜಾವರರು... ಈ ಮುದಿ ವಯಸ್ಸಿನಲ್ಲಿ ನಿರೀಕ್ಷಿಸಿದ್ದು ಭ್ರಾಂತಿಯಾಯಿತು... ಪಾಪ. ಅಷ್ಟೇ ಅಲ್ಲ ಬೇರೆ ಪಕ್ಷಗಳ ಆಡಳಿತವಿರುವ...



...ಯಿಂದ ಇಪ್ಪತ್ತೈದು ಸಾವಿರ ಕಮಾಯಿಸಿ ಕೋಟ್ಯಾಧೀಶನಾದ ಆರ್ಟ್ ಆಫ್ ಲಿವಿಂಗ್‌ನ ರವಿಶಂಕರ್, ಇವರಿಬ್ಬರಿಗೂ ಮೋದಿ ಸರಕಾರ ಪದ್ಮ ಪ್ರಶಸ್ತಿ ಕೊಟ್ಟದ್ದು ಎಷ್ಟು ಸಮಂಜಸ ಎಂದು ಜನಸಾಮಾನ್ಯರ ಪ್ರಶ್ನೆಗಳಿಗೆ ಉತ್ತರ ಸಿಗಲಾರದು.

- ಆರ್.ಬಿ. ಶೇಣವ. ಮಂಗಳೂರು

ಸಹಬಾಳ್ವೆ ಸಾಗರದ ಸಂಭ್ರಮ

ಕಳೆದ ವರ್ಷ ಅಕ್ಟೋಬರ್ ತಿಂಗಳಲ್ಲಿ ವಿಚಾರವಾದಿ ಕೆ.ಎಸ್.ಭಗವಾನರು ಮಂಗಳೂರಿಗೆ ಬಂದಿದ್ದಾಗ ಲೆಡಿಹಿಲ್‌ನಲ್ಲಿರುವ ಪತ್ರಿಕಾಭವನದ ಎದುರು ಕೆಲವು ಕಿಡಿಗೇಡಿಗಳು ದಾಂಧಲೆ ಮಾಡಿದ್ದರು. ಆಗ ಪೊಲೀಸರು ಅಲ್ಲಿ ಸಕಾಲದಲ್ಲಿ ಹಾಜರಿದ್ದುದರಿಂದ ಏನೂ ಅನಾಹುತವಾಗಿರಲಿಲ್ಲ. ಆದರೆ ಕಳೆದ ಡಿಸಂಬರ್‌ನಲ್ಲಿ 'ದಿಲ್ವಾಲೆ' ಚಲನಚಿತ್ರದ ವಿರುದ್ಧ ಕೆಲವು ಕಿಡಿಗೇಡಿಗಳು ದಾಂಧಲೆ ಮಾಡಿ ಚಿತ್ರವನ್ನು ನಿಲ್ಲಿಸಿದಾಗ ಅಲ್ಲಿಯೇ ಇದ್ದ ಪೊಲೀಸರು ಮೂಕಪ್ರೇಕ್ಷಕರಾಗಿ ಕಿಡಿಗೇಡಿಗಳಿಗೆ ಪರೋಕ್ಷ ಸಹಾಯ ಮಾಡಿದ ಆರೋಪ ಹೊರಬೇಕಾಗಿ ಬಂದಿತ್ತು.

ಪುರಾಣದ ರೂಪಕಗಳು-ಒಗಟುಗಳು ಎಂಬ ಪುಸ್ತಕ ಬರೆದು ಹಿಂದೂತ್ವವಾದಿಗಳ ಕೆಂಗಣ್ಣಿಗೆ ಗುರಿಯಾಗಿರುವ ಯೋಗೇಶ್ ಮಾಸ್ಟರ್ ಮತ್ತು ಪ್ರಖರ ಚಿಂತಕರಾದ ಗೌರಿ ಲಂಕೇಶ್, ಚಂದ್ರಶೇಖರ್ ಪಾಟೀಲ್, ದಿನೇಶ್ ಅಮೀನ್ ಮಟ್ಟು ಇವರಲ್ಲದೇ ರಾಷ್ಟ್ರೀಯ ಮಾನವ ಹಕ್ಕು ಹೋರಾಟಗಾರ್ತಿ ತೀಸ್ತಾ ಸೆಟಲ್ವಾಡ್ ಹಾಗೂ ಯೋಗೇಂದ್ರ ಯಾದವ್, ಜತೆಗೆ ಅನೇಕ ಪ್ರಗತಿಪರರು, ಎಡಪಂಥೀಯರು 'ಸಹಬಾಳ್ವೆ ಸಾಗರ' ಎಂಬ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ರಾಷ್ಟ್ರೀಯ ಸಮಾವೇಶದಲ್ಲಿ ಭಾಗವಹಿಸಲು ಬರಲಿದ್ದಾರೆ ಎಂಬ ಸುದ್ದಿ ಇಡೀ ದಕ್ಷಿಣ ಕರಾವಳಿಯಲ್ಲಿ ಸಂಚಲನ ಮೂಡಿಸಿತ್ತು. ಇದರಲ್ಲಿ ಯೋಗೇಶ್ ಮಾಸ್ಟರ್ ಮತ್ತು ಇತರ ವಿಚಾರವಾದಿಗಳು ಬರೆದಿರುವ ವಿಚಾರ ಪ್ರಚೋದಕ ಹಾಗೂ ಹಿಂದೂ ಪುರಾಣಗಳ ಒಳಸುಳಿಗಳನ್ನು ತೆರೆದಿಡುವಂತಹ ಅನೇಕ ಪುಸ್ತಕಗಳೂ ಪ್ರದರ್ಶಿತವಾಗಲಿವೆ ಎಂಬ ಸುದ್ದಿ ಮೊದಲೇ ಇದ್ದುದರಿಂದ ಕೆಲವು ಹಿಂದೂತ್ವವಾದಿ ಪಡ್ಡೆಗಳು ಕಿಡಿಗೇಡಿತನಕ್ಕೆ ಪ್ರಯತ್ನಿಸಬಹುದು ಎಂಬ ಶಂಕೆ ಕೆಲವರು ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಈ ಸಮಾವೇಶಕ್ಕೆ ಪೊಲೀಸರು ಅತ್ಯುತ್ತಮ ಭದ್ರತೆ ಕೊಟ್ಟಿದ್ದರಿಂದ ಈ ಸಮಾವೇಶ ಸುಸೂತ್ರವಾಗಿ ನೆರವೇರಿತು. ಇದಕ್ಕಾಗಿ ಮಂಗಳೂರು ಪೊಲೀಸರು ಅಭಿನಂದನಾರ್ಹರು.

ಈ ಸಮಾವೇಶದಲ್ಲಿ ನಮ್ಮ ರಾಜ್ಯದ ವಿವಿಧೆಡೆಯಿಂದ ಬಂದ ಎರಡು ಸಾವಿರಕ್ಕೂ ಹೆಚ್ಚು ಕೊ.ಸೌ.ವೇ ಸದಸ್ಯರು ನಿರ್ಭಯವಾಗಿ ಉತ್ಸಾಹದಿಂದ ಭಾಗವಹಿಸಿದ್ದು ಅದರ ಅಭೂತಪೂರ್ವ ಯಶಸ್ಸಿಗೆ ಕಾರಣವಾಯಿತು. ಕೇಸರಿ ಪಡೆಗಳ ಹಲವು ಕೊಂಕಣಿ ಗೂಢಾಚಾರಿಗಳು ಸಮಾವೇಶದ ಉದ್ದಕ್ಕೂ ಹಾಜರಿದ್ದು ಮಾಹಿತಿ ಸಂಗ್ರಹಿಸುತ್ತಾ ತಮ್ಮ ಕಲ್ಲಡ್ಕ ಹೆಡ್ ಆಫೀಸಿಗೆ ಫೋನಿನಲ್ಲಿ ವರದಿ ಕಳುಹಿಸುತ್ತಿದ್ದುದನ್ನು ನಮ್ಮಲ್ಲಿ ಹಲವರು ಗಮನಿಸಿದ್ದರು.

ಯೋಗೇಶ್ ಮಾಸ್ಟರ್ ತನ್ನ ಹೊಸ ಪುಸ್ತಕದಲ್ಲಿ ಬರೆದಿರುವಂತೆ ಬ್ರಹ್ಮದೇವ ತನ್ನ ಮಗಳಾದ ಶತರೂಪಿಯನ್ನೆ ಮೋಹಿಸಿ ಅವಳನ್ನೇ ನೋಡುತ್ತಾ ಇರಲು ಅನುಕೂಲವಾಗಲೆಂದು ಎಡಕ್ಕೆ ಬಲಕ್ಕೆ ಹಿಂದಕ್ಕೆ ಮಾತ್ರವಲ್ಲ ಮೇಲ್ಮುಖವಾಗಿಯೂ ಒಂದೊಂದಾಗಿ ಹೆಚ್ಚುವರಿ ತಲೆಗಳನ್ನ ಬೆಳೆಸಿಕೊಂಡಿದ್ದು ನಿಜವೆನ್ನುವುದು ಹಿಂದೂ ಪುರಾಣವೇ ಹೇಳುತ್ತವೆ. ಪ್ರೀತಿಗೆ ಒಂದು ಮುಖವಾದರೆ ಕಾಮಕ್ಕೆ ನೂರಾರು ಮುಖ ಸಾವಿರಾರು ಕಣ್ಣುಗಳು ಎನ್ನುವುದನ್ನು ಸೃಷ್ಟಿಕರ್ತ ಬ್ರಹ್ಮನೇ ಸತ್ಯವಾಗಿಸಿದ್ದನು. ಶ್ರೀಕೃಷ್ಣ ಮಾತೃಪ್ರಧಾನ ದ್ರಾವಿಡ ಜನಾಂಗಕ್ಕೆ ಸೇರಿದ್ದರಿಂದ ಅವನು ಕಪ್ಪು ವರ್ಣದವನಾಗಿದ್ದು ದ್ರಾವಿಡ ಜನಾಂಗದ ಕಟ್ಟಲೆಯಂತೆ ಅವನ ಸೋದರ ಮಾವನ ರಾಜ್ಯಕ್ಕೆ ಕೃಷ್ಣ ವಾರಸುದಾರನಾಗಿದ್ದು ನಿಜ. ಕಂಸ ಅಸುರನಾಗಿದ್ದರಿಂದ ಅವನ ತಂಗಿ ದೇವಕಿ ಸಹ ಅಸುರ ಜಾತಿಯವಳಾಗಿದ್ದು ಅವಳಿಗೆ ಹುಟ್ಟಿದ ಮಗ ಕೃಷ್ಣ ಸಹ ಅಸುರ ರಕ್ತ ಹೊಂದಿರುವುದು ಸ್ವಾಭಾವಿಕ. ಯೋಗೇಶ್ ಮಾಸ್ಟರ್ ಈ ಸತ್ಯವನ್ನು ತರ್ಕಪೂರ್ಣವಾಗಿ ಮಂಡಿಸಿದರು ಎಂದ ಮಾತ್ರಕ್ಕೆ ಅವರನ್ನು ಹಿಂದೂತ್ವವಾದಿಗಳು ದ್ವೇಷಿಸುವುದರಲ್ಲಿ ಅರ್ಥವಿಲ್ಲ. ರಾಮ ಹಾಗೂ ಲಕ್ಷ್ಮಣ ಕೊನೆಗೆ ಸರಯೂ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡೇ ತಮ್ಮ ಅವತಾರ ಸಮಾಪ್ತಿ ಮಾಡಿಕೊಂಡರು ಎಂದು ಮೂಲ ವಾಲ್ಮೀಕಿ ರಾಮಾಯಣದಲ್ಲಿಯೇ ನಮೂದಿತವಾಗಿದೆ. ಸೀತೆಯೂ ಕೊನೆಗೆ ಭೂಮಿಯಡಿ ಸೇರಿಹೋದಳು ಎಂದರೆ ಗುಡ್ಡದ ಮೇಲಿಂದ ಕಂದರಕ್ಕೆ ಹಾರಿ ಜೀವ ತ್ಯಜಿಸಿದಳು ಎನ್ನುವ ತರ್ಕವೂ ಸರಿ ಹೊಂದುತ್ತದೆ. ಹೀಗೆ ಎಲ್ಲಾ ಹಿಂದೂ ಪುರಾಣ ಪ್ರಸಂಗಗಳು ಹಲವಾರು ಒಳಾರ್ಥ ಹಾಗೂ ಸಂಕೇತಗಳನ್ನು ಹೊಂದಿರುತ್ತವೆ ಎಂದು ಯೋಗೇಶ್ ಮಾಸ್ಟರ್ ಮಾತ್ರವಲ್ಲ ಅನೇಕ ಸಂಶೋಧಕರು ನಿರೂಪಿಸಿದ್ದಾರೆ.

ಅದರಂತೆ ಗುಜರಾತಿ ವೈಶ್ಯ ಜಾತಿಗೆ ಸೇರಿದ್ದ ಮಹಾತ್ಮ ಗಾಂಧಿಯವರು ಎಲ್ಲ ವೈಶ್ಯರಂತೆ ಕಟ್ಟರ್ ವೈಷ್ಣವರಾಗಿದ್ದರು ಎಂಬುದು ಸಹ ಎಲ್ಲರೂ ಒಪ್ಪುತ್ತಾರೆ. ಈ ವಿಷಯವನ್ನು ಯೋಗೇಶ್ ಮಾಸ್ಟರ್ ಹೊಸದಾಗಿ ಹೇಳುತ್ತಿಲ್ಲ, ಇನ್ನೂ ಅನೇಕರು ಇದನ್ನೇ ಹೇಳಿದ್ದಾರೆ. ಹಾಗಾಗಿ ಯೋಗೇಶ್ ಮಾಸ್ಟರರಂತೆ ಪುರಾಣ ಹಾಗೂ ಇತಿಹಾಸದ ಹೂರಣ ಹೊರ ತೆಗೆಯುವವರ ವಿರುದ್ಧ ಹಿಂದೂತ್ವವಾದಿಗಳು ಹಗೆ ಸಾಧಿಸುವುದನ್ನು ಬಿಟ್ಟು ಅವರದೇ ಮಾರ್ಗದರ್ಶನ ಪಡೆದು ಹಿಂದೂ ಧರ್ಮದೊಳಗೆ ನಿಜವಾಗಿ ಇರುವ ದೌರ್ಬಲ್ಯಗಳನ್ನು ಹೋಗಲಾಡಿಸಲು ಶ್ರಮಿಸಿದರೆ ನಮ್ಮ ಸಮಾಜದಲ್ಲಿ ಸೌಹಾರ್ದತೆ ಮೂಡಿ ರೋಹಿತ್ ವೇಮುಲನಂತಹವರ ಆತ್ಮಕ್ಕೆ ಶಾಂತಿ ಸಿಗಬಹುದು.

- ಅಭಿಷೇಕ್. ಪಿ. ಸುಳ್ಯ

ಪೇಜಾವರ ಆಡಳಿತ

ಪ್ರತಿ ಎರಡು ವರ್ಷಗಳಿಗೊಮ್ಮೆ ಉಡುಪಿ ಪರ್ಯಾಯವು ಅತ್ಯಂತ ವಿಜೃಂಭಣೆಯಿಂದ ಆಚರಿಸಲ್ಪಡುತ್ತದೆ, ಆದರೂ ಕೃಷ್ಣ ಮಠ ಇನ್ನೂ ಅಭಿವೃದ್ಧಿ ಆಗಿಲ್ಲ. ಇದುವರೆಗೂ ನಾನು ಪೇಜಾವರ ಆಡಳಿತವನ್ನು ನೋಡಿರಲಿಲ್ಲ. ಕೆಲವು ವರ್ಷದ ಹಿಂದೆ ಕೃಷ್ಣ ಮಠಕ್ಕೆ ಭೇಟಿ ನೀಡಿದ್ದೆ. ಆವಾಗ ಹೇಗೆ ಇತ್ತೋ ಈಗಲೂ ಹಾಗೇ ಇದೆ. ಯಾರೂ ಬದಲಾವಣೆಯನ್ನು ತಂದಿರುವಂತೆ ಕಾಣುವುದಿಲ್ಲ. ನಮ್ಮ ಯಾವುದೇ ಹಿಂದೂ ದೇವಸ್ಥಾನಗಳಿಗೆ ಹೋಲಿಸಿ ನೋಡಿದರೂ ಅತಿ ಗಲೀಜಾದ ದೇವಸ್ಥಾನವೆಂದರೆ ಉಡುಪಿ ಕೃಷ್ಣ ಮಠ ಎನ್ನಬಹುದು.

ಅಲ್ಲಿ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಸಾರ್ವಜನಿಕರು ಕೆರೆಯ ನೀರು ಮುಟ್ಟುವ ಹಾಗಿಲ್ಲ. ಕಳೆದ ಮೂರು ವರ್ಷಗಳಿಂದ ಕೃಷ್ಣ ಮಠದಲ್ಲಿ ನಲ್ಲಿ ವ್ಯವಸ್ಥೆ ಇದೆ. ಅದೂ ಒಂದೇ ಒಂದು ನಲ್ಲಿ. ಅದರಿಂದ ಕೂಡ ಕೆಲವೊಮ್ಮೆ ನೀರೇ ಬರುವುದಿಲ್ಲ. ಸಾಮಾನ್ಯವಾಗಿ ದೇವಸ್ಥಾನಗಳು ತುಂಬಾ ಸ್ವಚ್ಛವಾಗಿದ್ದು, ಭಕ್ತರಿಗೆ ಅನುಕೂಲವಾಗುವಂತೆ ನಲ್ಲಿ ವ್ಯವಸ್ಥೆಗಳಿರುತ್ತವೆ. ಆದರೆ ಕೃಷ್ಣ ಮಠದಲ್ಲಿ ಅದನ್ನೆಲ್ಲ ನಿರೀಕ್ಷಿಸುವಂತಿಲ್ಲ.

- ಜಯಂತಿ ಹೆಜಮಾಡಿ. ಈ ಮೇಲ್ ಮೂಲಕ

ಸೊಗಸಾದ ಸೆರೆನಾ ವಿಲಿಯಮ್ಸ್

ಜನವರಿ 30ರಂದು ನಡೆದ ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯ ಫೈನಲ್‌ನಲ್ಲಿ ಅಮೆರಿಕದ ಸೆರೆನಾ ವಿಲಿಯಮ್ಸ್, ಜರ್ಮನಿಯ ಏಂಜಲಿಕ್ ಕೆರ್ಬರ್ ಕೈಲಿ ಸೋಲನ್ನು ಅನುಭವಿಸಬೇಕಾಯ್ತು. ಆಕೆ ಈಗ್ಗೆ ಅನೇಕ ವರ್ಷಗಳಿಂದ, ಜಗತ್ತಿನ ಎಲ್ಲಾ ಪ್ರಮುಖ ಟೂರ್ನಿಗಳನ್ನು ಸತತವಾಗಿ ಗೆಲ್ಲುತ್ತಾ, ಸೋಲಿಲ್ಲದ ಸರದಾರಿಣಿಯಂತಿದ್ದವಳು.... ಆಗ ಆಕೆಗೆ ತುಂಬ ಕಹಿ ಅನುಭವ ಆಗಿರಬೇಕು!?!?!?... ಆದರೆ.. ಆದರೆ ಆಗ ಆಕೆ ಎದುರಾಳಿಯನ್ನು ಅಭಿನಂದಿಸಿದ ರೀತಿ ಎಂತಹವರನ್ನೂ ಬೆರಗುಗೊಳಿಸುವಂತದ್ದು! ಎದುರಾಳಿಗೆ ಅಭಿನಂದಿಸುತ್ತಾ ಮೆಚ್ಚಿಕೆ ವ್ಯಕ್ತಪಡಿಸಿದ ನಂತರ ಪತ್ರಕರ್ತರ ಮುಂದೆ "ಕೆರ್ಬರ್‌ಗೆ ಅಭಿನಂದನೆಗಳು. ಅವರ ಆಟ ಸೊಗಸಾಗಿತ್ತು. ಪ್ರತಿ ಬಾರಿ ಜಯ ಗಳಿಸಲು ನಾನು ರೋಬೋಟ್ ಅಲ್ಲ. ಗೆಲುವಿಗಾಗಿ ಶಕ್ತಿಮೀರಿ ಪ್ರಯತ್ನಿಸಿದೆ. ಆದರೆ ಅದೃಷ್ಟ ನನ್ನ ಕೈ ಹಿಡಿಯಲಿಲ್ಲ" ಎಂದಳು.... ಅಬ್ಬಾ, ಎಷ್ಟು ದೊಡ್ಡತನ!!!... ಇದು ಚಾಂಪಿಯನ್ ಶಿಪ್‌ಗಿಂತ ದೊಡ್ಡ ಸಾಧನೆ ಎನಿಸುತ್ತದೆ. ಅಲ್ಲವೇ?

- ವೀರಖ್ಯಾತಯ್ಯ. ಬೆಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.


ಕೇರಳದ ಉಮ್ಮನ್ ಸೋಲಾರ್ ಚಾಂಡಿ, ತೆಲಂಗಾಣದ ಚಂದ್ರಶೇಖರ್ ಹೋಮಯಜ್ಞ ರಾವ್ ಹಾಗೂ ತಮಿಳುನಾಡಿನ ಜಯಲಲಿತಾ ಇವರನ್ನೂ ಪೇಜಾವರರು ಸ್ವತಃ ಆಹ್ವಾನಿಸಿದ್ದರು. ಪುಣ್ಯಕ್ಕೆ ಅವರೆಲ್ಲ ಇಲ್ಲಿ ಬಂದು ಪೊಲೀಸರಿಗೆ ಭದ್ರತೆಯ ಸಮಸ್ಯೆ ಹುಟ್ಟುಹಾಕಲಿಲ್ಲ ಸಧ್ಯ!

ಪರ್ಯಾಯಕ್ಕೆ ಮಧ್ಯ ಪ್ರದೇಶದ ಉಮಾ ಭಾರತಿ ಎಂಬ ಬಿಜೆಪಿಯ ಬಿರು ನಾಲಿಗೆಯ ಕೇಂದ್ರ ಸಚಿವೆ ಬಂದು ಪೇಜಾವರರಿಗೆ ಅರ್ಥವಾಗದ ಹಿಂದಿಯಲ್ಲಿ ಮಾತನಾಡಿ ಅವರಿಗೆ ಸಹಸ್ರಮಾನದ ಸಂತ ಎಂಬ ವಿಚಿತ್ರ ಬಿರುದು ಕೊಟ್ಟು ಹಿಂದಿನ ಒಂದು ಸಾವಿರ ವರ್ಷದಿಂದ ಭಾರತದಲ್ಲಿ ಆಗಿಹೋದ ನಿಜವಾದ ಸಂತರನ್ನೆಲ್ಲಾ ಅವಮಾನಿಸಿಬಿಟ್ಟಳು. ಅಷ್ಟೇ ಅಲ್ಲ ದೇವಮಾನವ ಪುಟ್ಟಪರ್ತಿ ಸಾಯಿಬಾಬರೇ ಪೇಜಾವರರು ತನಗಿಂತ ಉನ್ನತ ಗುಣವುಳ್ಳವರು ಎಂದು ಹೇಳಿದ್ದರು ಎಂದು ಉಮಾಭಾರತಿ ನುಡಿದರು. ನಿಜವಾಗಿ ಜಾದೂಗಾರ ಸರ್ಕಾರ್ ಅವರಂತೆ ಸತ್ಯ ಸಾಯಿಬಾಬಾರೂ ಒಬ್ಬ ಕೈ ಚಳಕ ತೋರಿಸುವ ಜಾದೂಗಾರನೇ ಹೊರತು ಪವಾಡಪುರುಷ ಅಲ್ಲವೇ ಅಲ್ಲ ಎಂದು ಅವರು ಜೀವಿತವಾಗಿರುವಾಗಲೇ ಸಾಬೀತಾಗಿತ್ತು. ಇಂತಹ ಢೋಂಗಿ ಬಾಬಾ ಪೇಜಾವರರಿಗೆ ಕೊಟ್ಟ ಸರ್ಟಿಫಿಕೇಟ್ ಎಷ್ಟು ಸಾಚಾ ಆಗಿರಬಹುದು ಊಹಿಸಿ. ಒಟ್ಟಾರೆ ಒಬ್ಬ ಮುದಿ ಆಷಾಢಭೂತಿಗೆ ಇನ್ನೊಬ್ಬ ವಿಭೂತಿ ಜಾದೂಗಾರನ ಸಾಕ್ಷಿ. ಸಮಾಜದಲ್ಲಿ ಬಲಿಷ್ಠರಾಗಿರುವವರು ತಮ್ಮತಮ್ಮಲ್ಲೇ ಒಬ್ಬರಿಗೊಬ್ಬರು ಬಿರುದು ಬಾವಲಿಗಳನ್ನು ಕೊಟ್ಟುಕೊಂಡು ಜನರ ಕಣ್ಣಲ್ಲಿ ತಾವು ಇನ್ನೂ ಎತ್ತರಕ್ಕೆ ಏರಿ ದೇವರಾಗುವ ಈ ಸುಲಭದ ಉಪಾಯ ಹಿಂದಿನ ಕಾಲದಿಂದಲೇ ನಡೆದು ಬಂದಿರುವ ಸನಾತನ ಪದ್ಧತಿ. ಇದುವೇ ವಿಶ್ವಗುರು ಆಗುವ ಪರಿ.

- ಹರೀಶ್ ಎಮ್.ಆರ್. ಉಡುಪಿ

ಕಾಲ ಬದಲಾದರೂ ಸೂಕ್ಷ್ಮತೆ ಬದಲಾಗಲ್ಲ

'ರೆ' ಅನ್ನುವ ಸಿನಿಮಾದ ಮೂಲಕ ಮತ್ತೆ ಸ್ಯಾಂಡಲ್‌ವುಡ್‌ಗೆ ಪ್ರವೇಶ ಮಾಡಿದ್ದಾರೆ ಹೆಸರಾಂತ ನಿರ್ದೇಶಕ ಸುನೀಲ್ ಕುಮಾರ್ ದೇಸಾಯಿ. ಈ ತಿಂಗಳು ತೆರೆ ಕಾಣುತ್ತಿರುವ ಈ ಸಿನಿಮಾದ ಕುರಿತು ದೇಸಾಯಿ ಹಂಚಿಕೊಂಡಿದ್ದಾರೆ.



ನಿರ್ದೇಶಕ ಸುನೀಲ್ ಕುಮಾರ್ ದೇಸಾಯಿ ಅವರ ಸಿನಿಮಾಗಳೇ ಹಾಗೆ. ಅವರು ಏನು ಬೇಕಾದರೂ ಮ್ಯಾಜಿಕ್ ಮಾಡಬಲ್ಲರು. ಯಾವುದನ್ನು ಹೇಗೆ ಪ್ರೇಕ್ಷಕರಿಗೆ ಮುಟ್ಟಿಸಬಹುದು ಅನ್ನುವ ಜಾಣ್ಮೆ ಅವರಿಗಿದೆ. ಹೀಗಾಗಿಯೇ 'ಬೆಳದಿಂಗಳ ಬಾಲೆ' ಚಿತ್ರದಲ್ಲಿ ನಾಯಕಿಯನ್ನು ತೋರಿಸದೇ ಅವಳ ಧ್ವನಿಯಲ್ಲೇ ಸಿನಿಮಾ ಗೆಲ್ಲಿಸಿದವರು. ದೇಸಾಯಿ ಸಿನಿಮಾಗಳಿಗೆ ಈಗಲೂ ಮಾರ್ಕೆಟ್ ಇದೆ. ನೋಡುಗರ ಒತ್ತಾಸೆಗೆ ಮಣಿದು ಮತ್ತೆ ಸಿನಿಮಾರಂಗಕ್ಕೆ ಬಂದಿದ್ದಾರೆ.

** ಸಿನಿಮಾದ ಶೀರ್ಷಿಕೆಯೇ ವಿಭಿನ್ನವಾಗಿದೆ. 'ರೆ' ಅಂತ ಟೈಟಲ್ ಇಟ್ಟಿದ್ದು ಯಾಕೆ?*

ನಾನು ಏನೇ ಮಾಡಿದರು ಅದರ ಹಿಂದೆ ವಿಶಾಲವಾದ ಅರ್ಥ ಇರುತ್ತದೆ. 'ರೆ' ಹಿಂದೆಯೂ ಅಂಥದ್ದೊಂದು ಅರ್ಥ ಇದೆ. ಸಾಮಾನ್ಯವಾಗಿ ಎಲ್ಲರೂ ಈ ಅಕ್ಷರವನ್ನು ಹೆಚ್ಚಾಗಿ ಬಳಸುತ್ತಾರೆ. ಅದರಲ್ಲೂ.... ಹೋದರೆ... ಮಾಡಿದರೆ.... ತಿಂದರೆ.... ಮಲಗಿದರೆ..... ಹೀಗೆ ರೆ ಬಳಕೆ ಆಗುತ್ತದೆ. ಇದೇ ಹಿನ್ನೆಲೆಯಲ್ಲಿಯೇ ಸಿನಿಮಾ ಮೂಡಿಬಂದಿದೆ. ಹೀಗಾಗಿ ಇಂಥದ್ದೊಂದು ಶೀರ್ಷಿಕೆ ಇಡಬೇಕಾಯಿತು.

** ನಿಮ್ಮ ಹಿಂದಿನ ಬಹುತೇಕ ಸಿನಿಮಾಗಳಂತೆಯೇ ಈ ಚಿತ್ರವೂ ಸಸ್ಪೆನ್ಸ್ ಕತೆ ಹೊಂದಿದೆಯಾ?*

ಹೊಂದಿದೆ ಅಂದರೆ, ಹೊಂದಿದೆ. ಇಲ್ಲ ಅಂದರೆ ಇಲ್ಲ. ಯಾಕೆಂದರೆ, ಯಾವುದನ್ನೂ ಇಲ್ಲಿ ನಿಖರವಾಗಿ ಹೇಳಿಲ್ಲ. ಕೊಂಚ ಸಸ್ಪೆನ್ಸ್, ಲವ್, ಫಿಲಾಸಫಿ ಹೀಗೆ ಎಲ್ಲವೂ ಇದೆ. ಹೀಗಾಗಿ ಈ ಸಿನಿಮಾವನ್ನು ಇಂಥದ್ದೇ ಅಂತ ಹೇಳುವುದು ಕಷ್ಟ. ಎಲ್ಲವನ್ನೂ ಹೇಳುವ ಚಿತ್ರವಿದು.

** ಪ್ರೇಕ್ಷಕರ ಮನಸ್ಥಿತಿಯೇ ಇಂದು ಬದಲಾಗಿದೆ. ಹೀಗಾಗಿಯೇ ಹೆಚ್ಚಿನ ನಿರ್ದೇಶಕರು ಯೂತ್ಸ್‌ಗೆ ಬೇಕಾದ ಕತೆ ಆಯ್ಕೆ ಮಾಡಿಕೊಳ್ಳುತ್ತಾರೆ. ನಿಮ್ಮ ಸಿನಿಮಾ?*

ಯೂತ್ಸ್ ನೋಡುವ ಅಂಶಗಳು ಸಿನಿಮಾದಲ್ಲಿವೆ. ಹಾಗಂತ ಕೇವಲ ಇದನ್ನು ಯುವಕರೇ ನೋಡಬೇಕು ಅಂತ ನಾನು ಹೇಳುವುದಿಲ್ಲ. ಎಲ್ಲ ವಯಸ್ಸಿನವರು ನೋಡುವಂಥ ಚಿತ್ರವಿದು. ನಮ್ಮ ಕಾಲದ ಚಿತ್ರವನ್ನು ನೋಡುತ್ತಿದ್ದ ಪ್ರೇಕ್ಷಕರು ಇಂದು ಥಿಯೇಟರ್‌ನಿಂದ ದೂರ ಆಗಿದ್ದಾರೆ ಅನ್ನುವ ಮಾತಿದೆ. ಅವರೂ ಕೂಡ ಈ ಚಿತ್ರಕ್ಕೆ ವಾಪಸ್ಸು ಬರುತ್ತಾರೆ. ಆ ನಂಬಿಕೆ ನನಗಿದೆ.

** ಇಪ್ಪತ್ತು ವರ್ಷಗಳ ನಂತರ ರಮೇಶ್ ಅರವಿಂದ್ ಜತೆ ಕೆಲಸ ಮಾಡುತ್ತಿದ್ದೀರಿ? ಅವರನ್ನೇ ಆಯ್ಕೆ ಮಾಡಿಕೊಂಡಿದ್ದು ಏಕೆ?*

ಈ ಚಿತ್ರದಲ್ಲಿ ಮೂವತ್ತಕ್ಕೂ ಹೆಚ್ಚು ಜನಪ್ರಿಯ ಕಲಾವಿದರು ಇದ್ದಾರೆ. ಅದರಲ್ಲೂ ಅನಂತ್ ನಾಗ್, ಮಾಸ್ಟರ್ ಹಿರಣ್ಣಯ್ಯ, ಲೋಕನಾಥ್, ಸುಮನ್ ನಗರಕರ್ ಪಾತ್ರ ಮಾಡಿದ್ದಾರೆ. ಇಂತಹ ಅನುಭವಿ ಕಲಾವಿದರ ಜತೆ ನಟಿಸಲು ನನಗೆ ಅಂತಹ ನಟನೇ ಬೇಕಿತ್ತು. ಅಲ್ಲದೇ ಅವರ ಜತೆ ನಾನು ಈಗಾಗಲೇ ಕೆಲಸ ಮಾಡಿದ್ದೇನೆ. ಅವರ ಬಗ್ಗೆ ನನಗೆ ಚೆನ್ನಾಗಿ ಗೊತ್ತು. ಹೀಗಾಗಿಯೇ ರಮೇಶ್ ಅರವಿಂದ್ ಅವರನ್ನು ಆಯ್ಕೆ ಮಾಡಿಕೊಂಡೆ. ನಾನು ಏನು ಅಂದುಕೊಂಡಿದ್ದೇನೋ ಹಾಗೆಯೇ ಅವರು ಪಾತ್ರವನ್ನು ನಿರ್ವಹಿಸಿದ್ದಾರೆ.

** ರಮೇಶ್ ಅರವಿಂದ್ ನಿರ್ವಹಿಸಿದ ಪಾತ್ರ ಎಂಥದ್ದು?*

ಪಾತ್ರದ ಬಗ್ಗೆ ಹೇಳಿದರೆ, ಕತೆಯನ್ನೇ ಹೇಳಿದ ಹಾಗೆ ಆಗುತ್ತದೆ. ಹೀಗಾಗಿ ಈ ಪಾತ್ರದ ಬಗ್ಗೆ ಏನೂ ಹೇಳಲಾರೆ. ಈವರೆಗೂ ಮಾಡದೇ ಇರುವ ಪಾತ್ರವನ್ನು ಅವರು ಇಲ್ಲಿ ನಿರ್ವಹಿಸಿದ್ದಾರೆ.

** ಅನಂತ್ ನಾಗ್ ಜತೆ ಮತ್ತೆ ಕೆಲಸ ಮಾಡುತ್ತಿದ್ದೀರಿ. ಈ ಅನುಭವ ಹೇಗಿದೆ?*

ಎಂತಹ ಪಾತ್ರ ಕೊಟ್ಟರೂ ಅವರು ನಿಭಾಯಿಸಬಲ್ಲರು. ಇನ್ನೂ ಅದೇ ಉತ್ಸಾಹ ಅವರಲ್ಲಿದೆ. ಇಲ್ಲಿ ಅವರು ತಮಾಷೆ ಅನಿಸಿದರೂ, ತೀರಾ ಗಂಭೀರವಾದ ಪಾತ್ರ ಮಾಡಿದ್ದಾರೆ. ಅವರ ಡೈಲಾಗ್‌ನಲ್ಲಿ ಚೇಷ್ಟೇ ಕಂಡರೂ ಅದರ ಹಿಂದೆ ಅಗಾಧ ಅನುಭವ ಇರುತ್ತದೆ. ಈ ಸೂಕ್ಷ್ಮವನ್ನು ಇಡೀ ಸಿನಿಮಾದುದ್ದಕ್ಕೂ ಕಟ್ಟಿಕೊಟ್ಟಿದ್ದೇನೆ. ಅವರಿಗಾಗಿಯೇ ವಿಭಿನ್ನವಾದ ಡೈಲಾಗ್ ಕೂಡ ಇದೆ. ಈ ಪಾತ್ರದ ಮೂಲಕ ಅತ್ಯುತ್ತಮ ಸಂದೇಶ ಕೂಡ ಕೊಟ್ಟಿದ್ದೇನೆ.

** ಒಂದೂವರೆ ವರ್ಷದ ಹಿಂದೆ ಒಂದು ಸಿನಿಮಾ ಕೈಗೆತ್ತಿಕೊಂಡು ಅದನ್ನು ಅರ್ಧಕ್ಕೆ ನಿಲ್ಲಿಸಿದ್ದು ಯಾಕೆ?*


ಸಿನಿಮಾ ಮಾಡುವುದೆಂದರೆ ಅದು ಸುಲಭವಾದದ್ದು ಅಲ್ಲ. ಏನೇನೋ ತೊಂದರೆಗಳು ಬರುತ್ತದೆ. ಕೆಲವು ದಿನ ಶೂಟಿಂಗ್ ಮಾಡಿ ಆಮೇಲೆ ನಿಲ್ಲಿಸಬೇಕಾಯಿತು. ಆನಂತರ ಅದೇ ಕತೆಯಲ್ಲೇ ಒಂದಿಷ್ಟು ಬದಲಾವಣೆ ಮಾಡಿಕೊಂಡು 'ರೇ' ಸಿನಿಮಾ ಮಾಡಿದೆ.

** ಈ ಹೊತ್ತಿನ ಇಂಡಸ್ಟ್ರಿ ಬಗ್ಗೆ ಏನು ಹೇಳುತ್ತೀರಿ?*

ಕಾಲ ಬದಲಾದಂತೆ ಸಿನಿಮಾ ಇಂಡಸ್ಟ್ರಿ ಕೂಡ ಬದಲಾಗಿದೆ. ಅದಕ್ಕೆ ತಕ್ಕಂತೆ ನಾವೂ ಬದಲಾಗಬೇಕು. ಆದರೆ ನಮ್ಮ ಉದ್ದೇಶ ಚೇಂಜ್ ಆಗಬಾರದು. ನಾನು ಏನೇ ಯೋಚನೆ ಮಾಡಿದರೂ ಅದು ಇಂದಿನ ಕಾಲಕ್ಕೆ ತಕ್ಕಂತೆ ಇರಬೇಕು. 'ರೆ' ಸಿನಿಮಾ ಮಾಡುವಾಗ ಎಲ್ಲವನ್ನೂ ಅರ್ಥ ಮಾಡಿಕೊಂಡೇ ಸಿನಿಮಾ ಮಾಡಿದೆ.

** ಸದ್ಯದ ರೆಸ್ಪಾನ್ಸ್ ಹೇಗಿದೆ?*

ಈಗಾಗಲೇ ಹಾಡುಗಳು ರಿಲೀಸ್ ಆಗಿವೆ. ಟ್ರೈಲರ್ ಕೂಡ ಬಿಡುಗಡೆ ಆಗಿದೆ. ಪ್ರತಿಯೊಬ್ಬರೂ ಖುಷಿ ಹಂಚಿಕೊಂಡಿದ್ದಾರೆ. ಇಂತಹ ಸಿನಿಮಾಗಳು ಮಿಸ್ ಆಗಿದ್ದವು ಎಂದು ಹೇಳಿದ್ದಾರೆ. ಸದ್ಯದಲ್ಲೇ ಸಿನಿಮಾ ರಿಲೀಸ್ ಆಗುತ್ತಿದೆ. ಜನರು ಸ್ವೀಕರಿಸುತ್ತಾರೆ ಅನ್ನುವ ನಂಬಿಕೆ ನನ್ನದು.




Registered No.RNP/KA/BGS/2036/2014-16 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 17-02-2016 RNI No. KARKAN2005



ಬೇಸರ ಮಾಡಿಕೊಂಡ ರಾಧಿಕಾ

ಯಶ್ ಮೇಲೆ ರಾಧಿಕಾ ಪಂಡಿತ್ ಬೇಸರಗೊಂಡಿದ್ದಾರೆ. ಕಾರಣ, ರಾಧಿಕಾ ನಟಿಸಬೇಕಿದ್ದ ಹಲವು ಚಿತ್ರಗಳನ್ನು ಯಶ್ ತಪ್ಪಿಸಿದ್ದಾರಂತೆ. ಹೌದು, 'ಮಾಸ್ಟರ್‌ಪೀಸ್' ಸಿನಿಮಾದ ಶೂಟಿಂಗ್ ಮುಗಿಯುತ್ತಿದ್ದಂತೆಯೇ ಯಶ್ ಅವರ ಹೊಸ ಸಿನಿಮಾ ಶುರುವಾಗಬೇಕಿತ್ತು, ಹೀಗಾಗಿ ಕಳೆದ ನವೆಂಬರ್‌ನಿಂದ ರಾಧಿಕಾ ಅವರ ಡೇಟ್ ತೆಗೆದುಕೊಂಡಿದ್ದರು ನಿರ್ದೇಶಕ ಮಹೇಶ್ ರಾವ್. ಅದಕ್ಕಾಗಿಯೆ ಉಪೇಂದ್ರ ಸೇರಿದಂತೆ ಹಲವು ಸ್ಟಾರ್ ನಟರಿಗೆ ರಾಧಿಕಾ ಡೇಟ್ ಕೊಟ್ಟಿರಲಿಲ್ಲ, ಎರಡು ತಿಂಗಳು ಕಳೆದರೂ ಇನ್ನೂ ಹೊಸ ಸಿನಿಮಾದ ಶೂಟಿಂಗ್ ಶುರುವಾಗಿಲ್ಲ, ಹೀಗಾಗಿಯೇ ಸಹಜವಾಗಿ ರಾಧಿಕಾಗೆ ಕೋಪ ಬಂದಿದೆ.

ಆದರೆ ಗಾಂಧಿನಗರ ಬೇರೆಯದ್ದೇ ಮಾತಾಡಿಕೊಳ್ಳುತ್ತಿದೆ. ಹಲವರ ಜತೆ ರಾಧಿಕಾ ನಟಿಸುವುದು ಯಶ್‌ಗೆ ಇಷ್ಟವಿಲ್ಲ, ಹೀಗಾಗಿಯೇ ಮೊದಲೇ ಡೇಟ್ ಬುಕ್ ಮಾಡಿಟ್ಟುಕೊಳ್ಳುತ್ತಾರಂತೆ ಯಶ್. ಯಾವುದು ನಿಜವೋ, ಯಾವುದು ಸುಳ್ಳೋ ಅವರೇ ಉತ್ತರಿಸಬೇಕು.



ಯೋಗಿಗೆ ಗೆಲ್ಲುವ ವಿಶ್ವಾಸ

ಲೂಸ್‌ಮಾದ ಯೋಗೀಶ್ ನಿಜಕ್ಕೂ ಬಳಲಿದ್ದಾರೆ. ಐದಾರು ಚಿತ್ರಗಳು ಸೆಟ್ಟೇರಿದ್ದರೂ ಒಂದೂ ಕೂಡ ಬಿಡುಗಡೆ ಆಗುತ್ತಿಲ್ಲ, ಅಲ್ಲದೆ ತಮಿಳಿನ ಪ್ರಾಜೆಕ್ಟ್ ಕೂಡ ಕೈಕೊಟ್ಟಿದೆ. ಅವರೇ ನಿರ್ದೇಶನ ಮಾಡಬೇಕೆಂದಿದ್ದ ಚಿತ್ರ ಕೂಡ ಹಣಕಾಸಿನ ದುಸ್ಥಿತಿಯಿಂದಾಗಿ ನರಳುತ್ತಿದೆ. ಹೀಗಾಗಿ ಯೋಗಿ ನಾಟ್‌ರೀಚಬಲ್.

ಮೊನ್ನೆಯಷ್ಟೇ ಸಹೋದರನ ಚಿತ್ರದ ಪತ್ರಿಕಾಗೋಷ್ಠಿಯಲ್ಲಿ ಸಿಕ್ಕರು. "ಯಾಕೆ ಚಿತ್ರ ಬಿಡುಗಡೆ ಆಗುತ್ತಿಲ್ಲ, ಸಿನಿಮಾರಂಗದಿಂದಲೇ ಹಿಂದೆ ಸರಿದಿದ್ದೀರಾ?" ಎಂದು ತೂರಿಬಂದ ಪ್ರಶ್ನೆಗಳಿಗೆ ಯೋಗೀಶ್ ಅಷ್ಟೇ ದುಗುಡದಿಂದಲೇ ಉತ್ತರಿಸಿದರು. ಸಿನಿಮಾ ಇಂಡಸ್ಟ್ರಿ ಬಗ್ಗೆ ಅಸಮಾಧಾನವನ್ನು ವ್ಯಕ್ತಪಡಿಸಿದರು. "ಸದ್ಯ ನನ್ನ ಟೈಮ್ ಸರಿ ಇಲ್ಲ, ಏನು ಬೇಕಾದರೂ ಅಂದುಕೊಳ್ಳಲಿ. ನಂತರ ಖಂಡಿತಾ ನನಗೂ ಒಂದು ಒಳ್ಳೇ ಟೈಮ್ ಬರುತ್ತದೆ. ಆಗ ಎದ್ದು ಬರುತ್ತೇನೆ" ಎಂದರು. ಇವರ ತಂದೆ ಸಿನಿಮಾ ಮಾಡಿ ಕೈಸುಟ್ಟುಕೊಂಡಿದ್ದಾರೆ. ಅಲ್ಲದೆ ಸಹೋದರ ಮಹೇಶ್ ಸಿನಿಮಾ ಸದ್ಯ ಬಿಡುಗಡೆ ಆಗುತ್ತಿದೆ. ಈ ಎಲ್ಲಾ ಜವಾಬ್ದಾರಿ ಯೋಗೀಶ್ ಮೇಲಿದೆ. ಈ ಕಾರಣಕ್ಕೆ ದುಡ್ಡಿಗಾಗಿ ಹಲವು ಚಿತ್ರಗಳನ್ನು ಒಪ್ಪಿಕೊಂಡಿದ್ದಾರೆ. ಆ ಚಿತ್ರಗಳೇ ಇಂದು ಯೋಗಿಗೆ ಕೈಕೊಟ್ಟಿವೆ.

ಕಿರುತೆರೆಗೆ ಮರಳಿದ ಗೋಲ್ಡನ್ ಸ್ಟಾರ್



ಗಣೇಶ್ ಸಖತ್ ಬಿಜಿ ಇದ್ದಾರೆ. 'ಜೂಮ್', 'ಸ್ಟೈಲ್‌ಕಿಂಗ್', 'ಪಟಾಕಿ' ಚಿತ್ರಗಳು ಬಿಡುಗಡೆಗೆ ಸಿದ್ಧವಾಗಿವೆ. 'ಮುಂಗಾರು ಮಳೆ-2' ಚಿತ್ರದ ಹಾಡಿನ ಶೂಟಿಂಗ್ ಬಾಕಿ ಇದೆ. ರಮೇಶ್ ಅರವಿಂದ್ ನಿರ್ದೇಶನದ ಹೊಸ ಸಿನಿಮಾ ಕೂಡ ಮಾರ್ಚ್ ಮೊದಲನೇ ವಾರದಿಂದ ಚಿತ್ರೀಕರಣ ಆರಂಭಿಸುತ್ತಿದೆ. ಈ ಮಧ್ಯೆ ಗಣೇಶ್ ಕಿರುತೆರೆಗೆ ಹಾರಿದ್ದಾರೆ. 'ಕಲರ್ಸ್ ಕನ್ನಡ' ವಾಹಿನಿಗಾಗಿ ರಿಯಾಲಿಟಿ ಶೋವೊಂದನ್ನು ನಡೆಸಿಕೊಡುತ್ತಿದ್ದಾರೆ.

ಕಳೆದ ಸೀಸನ್‌ನಲ್ಲೂ ಈ ಕಾರ್ಯಕ್ರಮವನ್ನು ಗಣೇಶ್ ಅವರೇ ನಡೆಸಿಕೊಟ್ಟಿದ್ದರು. ಅಷ್ಟೇನೂ ಶೋ ಸಕ್ಸಸ್ ಕಂಡಿರಲಿಲ್ಲ, ಈ ಬಾರಿ ಗೆಲ್ಲುವ ವಿಶ್ವಾಸ ಅವರದ್ದು. ಗಣೇಶ್, ರವಿಚಂದ್ರನ್, ಸುದೀಪ್, ರಮೇಶ್- ಹೀಗೆ ಅನೇಕ ಕಲಾವಿದರು ಕಿರುತೆರೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಹೀಗಾಗಿ ಮತ್ತೆ ನಿರ್ಮಾಪಕರ ಕಣ್ಣು ಕೆಂಪಗಾಗಿದೆ. ಮತ್ತೊಂದು ಸುತ್ತಿನ ಜಟಾಪಟಿಯೂ ನಡೆಯುವ ಸಾಧ್ಯತೆ ಇದೆ. ಫಿಲ್ಮ್‌ಫೆಸ್ಟಿವಲ್ ಮುಗಿಯುತ್ತಿದ್ದಂತೆಯೇ ಹೋರಾಟವನ್ನು ಪ್ರಾರಂಭಿಸುವುದಾಗಿ ಹಲವು ನಿರ್ಮಾಪಕರು ಹೇಳಿದ್ದಾರೆ. ಇದು ಕೇವಲ ಪ್ರಚಾರದ ತಂತ್ರ ಎನ್ನುವ ಮಾತೂ ಇದೆ. ಏನೇ ಆಗಲಿ, ಮತ್ತೆ ಗಣೇಶ್ ಕಿರುತೆರೆಗೆ ಬಂದಿದ್ದಾರೆ. ಅವರ ಅಭಿಮಾನಿಗಳೂ ಖುಷಿಗೊಂಡಿದ್ದಾರೆ.

ಪ್ರೀತಿಗೆ ಶಿವಲಿಂಗ ಅ




ಪ್ರೇಮಿಗಳ ದಿನಕ್ಕೆ ಮೂರ್ನಾಲ್ಕು ಚಿತ್ರಗಳು ರಿಲೀಸ್ ಆಗುತ್ತಿವೆ. ಅದರಲ್ಲೂ ಶಿವರಾಜ್‌ಕುಮಾರ್ ನಟನೆಯ 'ಶಿವಲಿಂಗ' ಮತ್ತು ರತ್ನಜ ನಿರ್ದೇಶನದ 'ಪ್ರೀತಿಯಲ್ಲಿ ಸಹಜ' ಚಿತ್ರಗಳೂ ತೆರೆ ಕಾಣುತ್ತಿವೆ. ಈ ಎರಡು ಚಿತ್ರಗಳ ಮಧ್ಯೆ ತೀವ್ರ ಪೈಪೋಟಿ ಎದುರಾಗಿದೆ.

ಅಂದುಕೊಂಡಂತೆ ಆಗಿದ್ದರೆ ಈ ಎರಡೂ ಚಿತ್ರಗಳು ನಾಲ್ಕು ತಿಂಗಳ ಹಿಂದೆಯೇ ತೆರೆಕಾಣಬೇಕಿತ್ತು. ಥಿಯೇಟರ್ ಸಮಸ್ಯೆಯಿಂದಾಗಿ ರತ್ನಜ ನಾಲ್ಕು ತಿಂಗಳಿಂದ ವೇಟ್ ಮಾಡಿಕೊಂಡು ಬಂದರು. 'ಶಿವಲಿಂಗ' ಸಿನಿಮಾದ ನಿರ್ಮಾಪಕರು ಶಿವರಾಜ್‌ರ ಮತ್ತೊಂದು ಚಿತ್ರ ಕಿಲ್ಲಿಂಗ್ ವೀರಪ್ಪನ್‌ಗಾಗಿ ತಡಮಾಡಿದರು. ಪ್ರೇಮಿಗಳ ದಿನಕ್ಕೆ ತಮ್ಮ ಚಿತ್ರ ಸೂಕ್ತವೆನಿಸಿ ಕಷ್ಟಪ[…] ಥಿಯೇಟರ್ ಹೊಂದಿಸಿದ್ದರು ರತ್ನಜ. ಆದರೆ 'ಶಿವಲಿಂಗ' ಚಿತ್ರದಿಂದಾ[…] ಮತ್ತೆ ಅವರಿಗೆ ಥಿಯೇಟರ್ ಸಮಸ್ಯೆ ಎದುರಾಗಿದೆ. 'ಶಿವಲಿಂಗ' ಸ್ಟಾ[…] ಸಿನಿಮಾ ಅನ್ನುವ ಕಾರಣಕ್ಕೆ 'ಪ್ರೀತಿಯಲ್ಲಿ ಸಹಜ' ಚಿತ್ರ ಬಿಡುಗಡೆ ಆಗಬೇಕಿದ್ದ ಹಲವು ಚಿತ್ರಮಂದಿರಗಳನ್ನು ಕಿತ್ತು 'ಶಿವಲಿಂಗ'ನಿಗೆ ಅರ್ಪಿಸಿದ್ದಾರೆ. ಹೀಗಾಗಿ ರತ್ನಜ ಸಹಜವಾಗಿಯೇ ನೊಂದಿದ್ದಾರೆ. "ನನ್ನ[…] ಸಿನಿಮಾ ಗಟ್ಟಿಯಾಗಿದೆ. ಸಿಗುವ ಥಿಯೇಟರ್‌ನಲ್ಲಿ ಜನರು ನನ್ನ ಸಿನಿಮಾ ಗೆಲ್ಲಿಸುತ್ತಾರೆ" ಅನ್ನುವ ನಂಬಿಕೆ ಅವರದ್ದು.

ಹೆಬ್ಬುಲಿಗಾಗಿ ಸುದೀಪ್ ವರ್ಕೌಟ್

'ಬಿಗ್‌ಬಾಸ್' ಮುಗಿಸಿ ಸದ್ಯ ಸಿಸಿಎಲ್‌ನಲ್ಲಿ ಬಿಜಿ ಆಗಿದ್ದಾರೆ ಕಿಚ್ಚ ಸುದೀ[…] ಸಿಸಿಎಲ್ ಟೆನ್‌ಷನ್‌ನಿಂದ ಕೊಂಚ ಆಚೆ ಬಂದು 'ಹೆಬ್ಬುಲಿ'ಗಾಗಿ ವರ್ಕೌಟ್ ಮಾಡುತ್ತಿ[…] 'ಮುಂಗಾರು ಮಳೆ' ಸಿನಿಮಾಟೋಗ್ರಾಫರ್ ಕೃಷ್ಣ ನಿರ್ದೇಶನದಲ್ಲಿ ಈ ಚಿತ್ರ ಮೂಡಿಬರು[…] ಇದರಲ್ಲಿ ಸುದೀಪ್ ಖಡಕ್ ಪಾತ್ರ ಮಾಡಿದ್ದಾರೆ. ಅಲ್ಲದೇ ಹೆಸರಾಂತ ಮ[…] ಖಳನಟರ ಜತೆ ಈ ಬಾರಿ ಕಾಣಿಸಿಕೊಳ್ಳುತ್ತಿದ್ದಾರೆ. ಹೀಗಾಗಿ ದೇಹದಂಡಿಸುವ[…] ಅನಿವಾರ್ಯವಾಗಿದೆ.



ಸಾಹಸ ಸನ್ನಿವೇಶಗಳಲ್ಲಿ ಸುದೀಪ್ ನಟಿಸಿದ್ದರೂ ಪಕ್ಕಾ ಆ್ಯಕ್ಷನ್ ಸಿನಿಮಾಗಳಲ್ಲಿ ಇವರು ಈವರೆಗೂ ಕಾಣಿಸಿಕೊಂಡಿಲ್ಲ, ಹೀಗಾಗಿ 'ಹೆಬ್ಬುಲಿ' ಅವರಿಗೆ ಚಾಲೆಂಜ್ ನೀಡಿದೆ. ಸಿನಿಮಾದ ಕತೆಯೇ ರೋಚಕವಾಗಿದೆ. ಹೀಗಾಗಿ ಪಕ್ಕಾ ತಯಾರಿ ಮಾಡಿಕೊಂಡೇ ಕ್ಯಾಮೆರಾ ಮುಂದೆ ನಿಲ್ಲುತ್ತಿದ್ದಾರೆ. ಈಗಾಗಲೇ ಶೂಟಿಂಗ್ ಶುರು ಆಗಬೇಕಿತ್ತು. ಸುದೀಪ್ ತಯಾರಾಗಿಲ್ಲ ಅನ್ನುವ ಕಾರಣಕ್ಕೆ ಚಿತ್ರೀಕರಣವನ್ನು ಮುಂದೂಡಿದ್ದಾರೆ ನಿರ್ದೇಶಕರು.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com